ಮಂಗಳವಾರ, ಆಗಸ್ಟ್ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 240 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ದಣಿದು ಬಂದವರ ಆಯಾಸವನ್ನು ನಮ್ಮ ಸಾಂತ್ವನದ ಮಾತುಗಳು ತಣಿಸಬಲ್ಲವು

ಆಳ-ಅಗಲ
ಇಲ್ಲಿ ಕೇಳಿ ಹಕ್ಕಿಗಳ ಸಂಖ್ಯೆ ಕ್ಷೀಣಿಸುತ್ತಿದೆ...

'ವಕೀಲರ ಎದುರು ನಡೆಯುವ ವಿವಾಹಕ್ಕೂ ಮನ್ನಣೆ' 11

ಏಳು ತಾಸು ಸಭೆ ನಡೆಸಿದ ಸಿ.ಎಂ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,996 ▲	19,306 ▲	₹60,510 (ಬೆಂಗಳೂರು)	₹75,700 (ಬೆಂಗಳೂರು)	82.63 ▲

ತೆಂಗಿನಗರಿಯಲ್ಲಿ 'ಪರಿಸರ ಸ್ನೇಹಿ ಸ್ಟ್ರಾ': ವಿದೇಶಗಳಲ್ಲಿಯೂ ಭಾರಿ ಬೇಡಿಕೆ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದ 'ಸನ್‌ಬರ್ಡ್' ಸಂಸ್ಥೆಯು ತೆಂಗಿನಗರಿಯಿಂದ ತಯಾರಿಸುತ್ತಿರುವ ಪರಿಸರಸ್ನೇಹಿ ಸ್ಟ್ರಾಗಳಿಗೆ 10 ದೇಶಗಳಿಂದ ಬೇಡಿಕೆ ಬಂದಿದ್ದು, 15 ದೇಶಗಳಿಗೆ ಮಾದರಿ ಕಳುಹಿಸಲಾಗಿದೆ.

ಬೆಂಗಳೂರು, ಗೋವಾದ ಸ್ಟಾರ್ ಹೋಟೆಲ್‌ಗಳು ಪೇಪರ್ ಸ್ಟ್ರಾ ಬಳಕೆ ಕೈಬಿಟ್ಟಿದ್ದು, ತೆಂಗಿನಗರಿಯ ಸ್ಟ್ರಾಗಳನ್ನೇ ಹೆಚ್ಚು ಬಳಸುತ್ತಿವೆ. ಈ ಹೋಟೆಲ್‌ಗಳಿಗೆ 'ಸನ್‌ಬರ್ಡ್' ಸಂಸ್ಥೆಯು ತಿಂಗಳಿಗೆ 10 ರಿಂದ 15 ಲಕ್ಷ ಸ್ಟ್ರಾಗಳನ್ನು ಪೂರೈಸುತ್ತಿದೆ. ಬೆಲ್ಜಿಯಂ, ನೆದರ್ಲೆಂಡ್ಸ್, ಕೆನಡಾ, ಫಿಲಿಪ್ಪೀನ್ಸ್, ಜರ್ಮನಿ, ಸ್ಪೇನ್ ದೇಶಗಳಿಂದಲೂ ಬೇಡಿಕೆ ಬಂದಿದೆ.

'ಮೂರು ತಿಂಗಳಿಗೆ 60 ಲಕ್ಷ ಸ್ಟ್ರಾ ಪೂರೈಸುವಂತೆ ವಿದೇಶಗಳಿಂದ ಬೇಡಿಕೆ ಬರುತ್ತಿದೆ. ಸದ್ಯಕ್ಕೆ ಅಷ್ಟೊಂದು ಪ್ರಮಾಣದಲ್ಲಿ ಸ್ಟ್ರಾ ಪೂರೈಸುವ ಸಾಮರ್ಥ್ಯ ನಮಗೆ ಇಲ್ಲ. ಮೈಸೂರು ಜಿಲ್ಲೆಯ ಬನ್ನೂರಿನಲ್ಲಿರುವ ಘಟಕದಲ್ಲಿ ಹೊಸ ಯಂತ್ರ ಅಳವಡಿಸಲಾಗಿದ್ದು ಅಲ್ಲಿ ಒಂದು ನಿಮಿಷದಲ್ಲಿ 60 ಸ್ಟ್ರಾಗಳು ತಯಾರಾಗುತ್ತಿವೆ. ಈ ಘಟಕವು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಿದರೆ ಹೆಚ್ಚಿನ ಪ್ರಮಾಣದಲ್ಲಿ ಸ್ಟ್ರಾಗಳನ್ನು ಪೂರೈಸಲು ಸಾಧ್ಯವಾಗಲಿದೆ' ಎಂದು ಕಂಪನಿಯ ಸಹ ಸಂಸ್ಥಾಪಕ ಚಿರಾಗ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿದೇಶದಲ್ಲಿ ಬೇಡಿಕೆ ಸೃಷ್ಟಿಸಿದ 'ಸನ್‌ಬರ್ಡ್' ಸ್ಟ್ರಾ.

ರೈತರ ತೋಟಗಳಿಂದ ಗರಿ ಖರೀದಿ

'ಮಂಡ್ಯ, ತುಮಕೂರು, ಹಾಸನ ಜಿಲ್ಲೆಗಳ ರೈತರಿಂದ ತೆಂಗಿನಗರಿಗಳನ್ನು ಖರೀದಿಸುತ್ತೇವೆ. ಒಂದು ಗರಿಯಿಂದ 200ರ ವರೆಗೆ ಸ್ಟ್ರಾ ತಯಾರಿಸಬಹುದು. ಅದು ಆರು ತಿಂಗಳು ಬಾಳಿಕೆ ಬರುತ್ತದೆ. ಬಳಸಿದ ಮೇಲೆ ಪರಿಸರಕ್ಕೂ ಹಾನಿ ಇಲ್ಲ' ಎಂದು ಚಿರಾಗ್ ಹೇಳಿದರು.

'ಬೆಂಗಳೂರಿನ ಡೇರಿ ವೃತ್ತದ ಬಳಿಯಿರುವ ಕ್ರೈಸ್ಟ್ ವಿ.ವಿಯ ಇಂಗ್ಲಿಷ್ ಪ್ರಾಧ್ಯಾಪಕ ಸಾಜಿ ವರ್ಗೀಸ್ ಅವರು ಕ್ಯಾಂಪಸ್‌ನಲ್ಲಿ ಬಿದ್ದಿದ್ದ ತೆಂಗಿನಗರಿಯನ್ನು ಗಮನಿಸಿ ಅದರಿಂದ ಸ್ಟ್ರಾ ತಯಾರಿಕೆಗೆ 2017ರಲ್ಲಿ ಯೋಜನೆ ರೂಪಿಸಿದ್ದರು. ಈಗ ಉತ್ಪನ್ನ ಹಾಗೂ ಯಂತ್ರಕ್ಕೆ ಪೇಟೆಂಟ್ ಲಭಿಸಿದೆ. ಅವರ ನೇತೃತ್ವದಲ್ಲಿ ಸಿಎಸ್‌ಆರ್ ನಿಧಿ ಬಳಸಿಕೊಂಡು ಸ್ಟ್ರಾ ತಯಾರಿಸು ತ್ತಿದ್ದೇವೆ. ಮೂರು ವರ್ಷಗಳಿಂದ ಸಂಶೋಧನೆ ನಡೆಯುತ್ತಲೇ ಇತ್ತು. ಆರಂಭದಲ್ಲಿ ಒಂದು ಪದರದ ಸ್ಟ್ರಾ ತಯಾರಿಸಿದ್ದೆವು. ಸದ್ಯ ನಾಲ್ಕು ಪದರಗಳ ಸ್ಟ್ರಾ ತಯಾರಿಸಿ ಮಾರುಕಟ್ಟೆಗೆ ಪರಿಚಯಿಸಿದ್ದೇವೆ' ಎಂದು ವಿವರ ನೀಡಿದರು.

ಪ್ರಜಾವಾಣಿ ವಿಶೇಷ

ಬನ್ನೂರು, ಕಾಸರಗೋಡು, ತಮಿಳು ನಾಡಿನ ಎರಡು ಸ್ಥಳಗಳಲ್ಲಿ ತಯಾರಿಕೆ ಘಟಕ ಸ್ಥಾಪಿಸಲಾಗಿದೆ. ಪ್ರತಿ ಸ್ಟ್ರಾದ ಬೆಲೆ ₹1.20ರಿಂದ ₹2.50ರ ವರೆಗೆ ಇದೆ.

'ಪ್ರತಿವರ್ಷ ತೆಂಗಿನಮರ ನೈಸರ್ಗಿಕವಾಗಿ ಗರಿಯನ್ನು ಕಳಚಿಕೊಳ್ಳುತ್ತದೆ. ಅವುಗಳನ್ನು ವಿಲೇವಾರಿ ಮಾಡುವುದು ರೈತರಿಗೆ ಕಷ್ಟ. ಗ್ರಾಮೀಣ ಪ್ರದೇಶದಲ್ಲಿ ಕಡ್ಡಿ ತೆಗೆದು ಪೊರಕೆ ತಯಾರಿಸುತ್ತಾರೆ. ಉಳಿದಿರುವುದನ್ನು ಬೆಂಕಿಗೆ ಹಾಕಿ ಸುಡುತ್ತಾರೆ. ನಾವು ಆ ಗರಿಗಳನ್ನೇ ಖರೀದಿಸಿ ಸ್ಟ್ರಾ ತಯಾರಿಸು ತ್ತಿದ್ದೇವೆ' ಎಂದು ಸಾಜಿ ವರ್ಗೀಸ್ ಹೇಳಿದರು.

'ಸ್ಟ್ರಾವನ್ನು ಮೂರು ಗಂಟೆವರೆಗೆ ಯಾವುದೇ ಪಾನೀಯದಲ್ಲಿ ಬಳಸಬಹುದು. ಒಂದು ಬಿದಿರಿನ ಸ್ಟ್ರಾ ತಯಾರಿಸಲು ₹30 ವೆಚ್ಚವಾಗಲಿದ್ದು ದುಬಾರಿ ಎನಿಸಿದೆ. ಈ ಸ್ಟ್ರಾ ತಯಾರಿಕೆ ಸುಲಭ' ಎಂದರು.

> **ಹಿಂದೆ 45 ಸೆಕೆಂಡ್‌ಗೆ ಒಂದು ಸ್ಟ್ರಾ ತಯಾರಿಕೆ ಸಾಧ್ಯವಾಗುತ್ತಿತ್ತು. ಈಗ ಒಂದು ನಿಮಿಷದಲ್ಲಿಯೇ 60 ಸ್ಟ್ರಾ ತಯಾರಿಸಲಾಗುತ್ತಿದೆ**
> **ಸಾಜಿ ವರ್ಗೀಸ್,** ಮುಖ್ಯಸ್ಥ, 'ಸನ್‌ಬರ್ಡ್'

> **ರಾಸಾಯನಿಕ ಮುಕ್ತ ಪ್ರಕ್ರಿಯೆಯಲ್ಲಿ ತಯಾರಿಸಲಾಗುತ್ತಿದೆ. ನಾಲ್ಕು ಘಟಕಗಳಲ್ಲಿ ಒಟ್ಟು 86 ಮಹಿಳೆಯರಿಗೆ ಕೆಲಸ ನೀಡಿದ್ದೇವೆ**
> **ಚಿರಾಗ್,** ಸಹ ಸಂಸ್ಥಾಪಕ

ಸೆ. 2ರಂದು ರವಿಯತ್ತ 'ಆದಿತ್ಯ'

ಇದೇ ಮೊದಲ ಪ್ರಯತ್ನ: ಸೂರ್ಯನ ಸುತ್ತಲಿನ ವಾತಾವರಣ ಅಧ್ಯಯನಕ್ಕೆ ಸಿದ್ಧವಾದ ಇಸ್ರೊ

ಬೆಂಗಳೂರು (ಪಿಟಿಐ): ಚಂದ್ರಯಾನ–3 ಯಶಸ್ಸಿನ ಬೆನ್ನಲ್ಲೇ ಸೂರ್ಯನ ಬಾಹ್ಯ ವಾತಾವರಣದ ಅಧ್ಯಯನಕ್ಕಾಗಿ ಇಸ್ರೊ 'ಆದಿತ್ಯ–ಎಲ್ 1' ಬಾಹ್ಯಾಕಾಶ ನೌಕೆಯನ್ನು ಸೆಪ್ಟೆಂಬರ್ 2ರಂದು ಉಡಾವಣೆ ಮಾಡಲಿದೆ.

ಸೂರ್ಯನ ಅಧ್ಯಯನಕ್ಕಾಗಿ ಭಾರತ ಕಳುಹಿಸಲಿರುವ ಚೊಚ್ಚಲ ಯೋಜನೆ ಆದಿತ್ಯ–ಎಲ್1 ಅಂದು ಬೆಳಿಗ್ಗೆ 11.50ಕ್ಕೆ ಶ್ರೀಹರಿಕೋಟಾದಿಂದ ಉಡ್ಡಯನವಾಗಲಿದೆ ಎಂದು ಇಸ್ರೊ ಸೋಮವಾರ ತಿಳಿಸಿದೆ.

ಸೂರ್ಯನ ಬಾಹ್ಯ ವಾತಾವರಣದ ಅಧ್ಯಯನ ನಡೆಸುವುದಕ್ಕೆ ಬೇಕಾದ ರೀತಿಯಲ್ಲಿ ಆದಿತ್ಯ ಎಲ್1 ಅನ್ನು ವಿನ್ಯಾಸಗೊಳಿಸಲಾಗಿದೆ. ಈ (ಎಲ್ 1) ಪ್ರದೇಶದಲ್ಲಿ ಉಪಗ್ರಹವನ್ನು ಇರಿಸಿ ಸೌರ ಮಾರುತದ ಅಧ್ಯಯನ ನಡೆಸಲಾಗುವುದು. ಎಲ್ ಎಂದರೆ, ಲಾಗ್ರೇಂಜ್ ಬಿಂದು. ಇದು ಸೂರ್ಯ ಮತ್ತು ಭೂಮಿಯ ಗುರುತ್ವಾಕರ್ಷಣ ಬಲ ಸಮಾನವಾಗಿರುವ ಪ್ರದೇಶ. ಇಲ್ಲಿ ವೀಕ್ಷಣಾ ಉಪಗ್ರಹವನ್ನು ನಿಯೋಜಿಸಿದರೆ ಅದು ಅತ್ಯಂತ ಕಡಿಮೆ ಇಂಧನದಲ್ಲಿ ನೆಲೆ ನಿಲ್ಲಲು ಸಾಧ್ಯ. ಈ ಪ್ರದೇಶವು ಭೂಮಿಯಿಂದ 15 ಲಕ್ಷ ಕಿಲೋಮೀಟರ್ ದೂರದಲ್ಲಿದೆ.

ತೇಜೋಮಂಡಲದ ಅಧ್ಯಯನಕ್ಕಾಗಿ ವಿಸಿಬಲ್ ಎಮಿಶನ್ ಲೈನ್ ಕೊರೊನಾಗ್ರಾಫ್ (ವಿಇಎಲ್‌ಸಿ) ಎಂಬ ಉಪಕರಣವನ್ನು ಬೆಂಗಳೂರಿನ ಭಾರತೀಯ ಖಭೌತವಿಜ್ಞಾನ ಸಂಸ್ಥೆಯು ಅಭಿವೃದ್ಧಿಪಡಿಸಿದೆ. ಸೂರ್ಯನ ಅತಿನೇರಳೆ ಕಿರಣಗಳ ಅಧ್ಯಯನ ನಡೆಸುವ ಉಪಕರಣವನ್ನು ಪುಣೆಯ ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರೊನಮಿ ಆ್ಯಂಡ್ ಆಸ್ಟ್ರೊಫಿಸಿಕ್ಸ್ ಅಭಿವೃದ್ಧಿಪಡಿಸಿದೆ.

ಸೂರ್ಯನ ಮೇಲ್ಮೈಯ ತಾಪಮಾನವು 6,000 ಡಿಗ್ರಿ ಸೆಲ್ಸಿಯಸ್ ಇದ್ದರೂ ತೇಜೋಮಂಡಲದ ತಾಪಮಾನವು 10 ಲಕ್ಷ ಡಿಗ್ರಿ ಸೆಲ್ಸಿಯಸ್ ವರೆಗೆ ತಲುಪಲು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ವಿಇಎಲ್‌ಸಿ ಉತ್ತರ ಕಂಡುಕೊಳ್ಳಲಿದೆ ಎಂದು ಇಸ್ರೊ ಹೇಳಿದೆ.

ಎಲ್1 ಬಿಂದುವಿನ ಕಕ್ಷೆಯಲ್ಲಿ ಆದಿತ್ಯ ಉಪಗ್ರಹವನ್ನು ಇರಿಸಲಾಗುವುದು. ಕಕ್ಷೆಯಲ್ಲೇ ಸುತ್ತುತ್ತಲೇ ಸೂರ್ಯನ ವಿದ್ಯಮಾನಗಳ ಮೇಲೆ ನಿಗಾ ಇರಿಸಲಿದೆ. ಈ ಉಪಗ್ರಹವನ್ನು ಯು.ಆರ್. ರಾವ್ ಉಪಗ್ರಹ ಕೇಂದ್ರ ಅಭಿವೃದ್ಧಿಪಡಿಸಿದ್ದು ಶ್ರೀಹರಿಕೋಟಾದ ಇಸ್ರೊ ಬಾಹ್ಯಾಕಾಶ ಕೇಂದ್ರಕ್ಕೆ ಈ ತಿಂಗಳ ಆರಂಭದಲ್ಲಿ ತರಲಾಗಿದೆ.



'ಪ್ರಜ್ಞಾನ್'ಗೆ ಎದುರಾದ ಕುಳಿ ಮತ್ತು ಕುಳಿಯನ್ನು ತಪ್ಪಿಸಿಕೊಂಡು ಪ್ರಜ್ಞಾನ್ ಸಾಗಿದ ಹೊಸ ಹಾದಿ –ಪಿಟಿಐ ಚಿತ್ರ

ಆದಿತ್ಯ ಅಂತರಂಗ

- ಪಿಎಸ್‌ಎಲ್‌ವಿ–ಸಿ57 ರಾಕೆಟ್ ಬಳಸಿ ಉಡ್ಡಯನ ನಡೆಯಲಿದೆ
- ತೇಜೋಮಂಡಲ, ಪ್ರಭಾ ಮಂಡಲದ ಹೊರಭಾಗ ಮತ್ತು ಸೂರ್ಯನ ವಾತಾವರಣದ ಅತ್ಯಂತ ಹೊರಭಾಗವನ್ನು ವಿವಿಧ ತರಂಗಾಂತರಗಳಲ್ಲಿ ಆದಿತ್ಯ ಎಲ್1 ಅಧ್ಯಯನ ನಡೆಸಲಿದೆ
- ಒಟ್ಟು ಏಳು ಉಪಕರಣಗಳು ಇದರಲ್ಲಿ ಇರಲಿವೆ
- ಆದಿತ್ಯ ಎಲ್1 ಯೋಜನೆಯು ಸಂಪೂರ್ಣ ದೇಶೀಯವಾಗಿದ್ದು, ದೇಶದ ವಿವಿಧ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳು ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ಕೈಜೋಡಿಸಿವೆ

ಗಂಡಾಂತರದಿಂದ ಪಾರಾದ ಪ್ರಜ್ಞಾನ್

ಚಂದ್ರಯಾನ–3ರ ಪ್ರಜ್ಞಾನ್ ರೋವರ್ ದೊಡ್ಡ ಗಂಡಾಂತರವೊಂದರಿಂದ ಪಾರಾಗಿದೆ ಎಂದು ಇಸ್ರೊ ತಿಳಿಸಿದೆ. ಪ್ರಜ್ಞಾನ್ ಸಾಗಬೇಕಿದ್ದ ಹಾದಿಯಲ್ಲಿ ನಾಲ್ಕು ಮೀಟರ್ ಆಳದ ಕುಳಿಯೊಂದು ಇತ್ತು. ಪ್ರಜ್ಞಾನ್ ಭಾನುವಾರ ಮುಂದಕ್ಕೆ ಸಾಗುತ್ತಿದ್ದಾಗ ಮೂರು ಮೀಟರ್ ದೂರದಲ್ಲಿ ಈ ಕುಳಿ ಇರುವುದು ತಿಳಿಯಿತು. ಸರಿಯಾದ ಮಾರ್ಗದ ಕಮಾಂಡ್ ಸಿಗುತ್ತಿದ್ದಂತೆ ಪಥವನ್ನು ಬದಲಿಸಿಕೊಂಡಿತು.

ವಿಕ್ರಮ್ ಲ್ಯಾಂಡರ್‌ನಲ್ಲಿರುವ ಚೇಸ್ಟ್ ಎಂಬ ಉಪಕರಣವು ಚಂದ್ರನ ದಕ್ಷಿಣ ಧ್ರುವದ ತಾಪಮಾನದ ನಕ್ಷೆಯನ್ನು ಭಾನುವಾರ ಇಸ್ರೊ ನಿಯಂತ್ರಣ ಕೇಂದ್ರಕ್ಕೆ ಕಳುಹಿಸಿದೆ. ಚಂದ್ರಯಾನ–3ರ ಎರಡು ಗುರಿಗಳು ಈಡೇರಿವೆ. ಚಂದ್ರನ ಮೇಲ್ಮೈಯಲ್ಲಿ ವೈಜ್ಞಾನಿಕ ಪ್ರಯೋಗ ನಡೆಸುವ ಮೂರನೇ ಗುರಿಯು ಇನ್ನಷ್ಟೇ ಸಾಕಾರಗೊಳ್ಳಬೇಕಿದೆ ಎಂದು ಇಸ್ರೊ ಹೇಳಿಕೊಂಡಿದೆ.

ದತ್ತಾಂಶ ಸಂಗ್ರಹಕ್ಕೆ ಒತ್ತು

ಚಂದ್ರನ ದಕ್ಷಿಣ ಧ್ರುವದಲ್ಲಿ ರೋವರ್ 'ಪ್ರಜ್ಞಾನ್' ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿದ್ದರೂ ದತ್ತಾಂಶ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಚಂದ್ರನ ದಕ್ಷಿಣ ಧ್ರುವದಲ್ಲಿ ಕಂಡುಕೊಂಡ ಅಂಶಗಳ ಕುರಿತ ಸಮಗ್ರ ವಿಶ್ಲೇಷಣೆಯನ್ನು ಮುಂದೆ ನಡೆಸಲಾಗುವುದು ಎಂದು ಇಸ್ರೊ ವಿಜ್ಞಾನಿ ಮತ್ತು ಯು.ಆರ್. ರಾವ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಎಂ. ಶಂಕರನ್ ಹೇಳಿದ್ದಾರೆ. ಚಂದ್ರಯಾನ–3ರ ಉಪಕರಣಗಳ ಜೋಡಣೆ ಮತ್ತು ಹಲವು ವ್ಯವಸ್ಥೆಗಳ ಅಭಿವೃದ್ಧಿಯನ್ನು ಯು.ಆರ್. ರಾವ್ ಬಾಹ್ಯಾಕಾಶ ಕೇಂದ್ರವು ನಡೆಸಿದೆ. ಚಂದ್ರಯಾನ–2 ಸುರಕ್ಷಿತ ಇಳಿಕೆಯಲ್ಲಿ 2019ರಲ್ಲಿ ವಿಫಲವಾಗಿತ್ತು. ಚಂದ್ರಯಾನ–3ರ ಸುರಕ್ಷಿತ ಇಳಿಕೆಯಲ್ಲಿ ಈ ಹಿಂದಿನ ವೈಫಲ್ಯವು ಕಲಿಸಿದ ಪಾಠಗಳು ನೆರವಾದವು ಎಂದು ಶಂಕರನ್ ಹೇಳಿದ್ದಾರೆ.

> **ಈಗ ದತ್ತಾಂಶ ಸಂಗ್ರಹ ನಡೆಯುತ್ತಿದೆ. ಫಲಿತಾಂಶ ತಕ್ಷಣ ದೊರೆಯದು. ನಮಗೆ 12 ದಿನಗಳಷ್ಟೇ ಇವೆ. ಹಾಗಾಗಿ, ಸಾಧ್ಯವಾದಷ್ಟು ದತ್ತಾಂಶ ಸಂಗ್ರಹಿಸಬೇಕಿದೆ**
> **ಎಂ. ಶಂಕರನ್,** ಯು.ಆರ್. ರಾವ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ

ಪ್ಲಾಸ್ಟಿಕ್ ಗಂಡಾಂತರ
ಕೇರಳದ ತಿರುವನಂತಪುರದಲ್ಲಿ ಓಣಂ ಹಬ್ಬದ ಪ್ರಯುಕ್ತ ಶುಚಿತ್ವ ಅಭಿಯಾನದ ಅಂಗವಾಗಿ ಸೋಮವಾರ ಯುವ ಜನರ ತಂಡ 20,000 ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸಿ ಹಾವಿನ ಪ್ರತಿಕೃತಿಯನ್ನು ರಚಿಸಿತು –ಪಿಟಿಐ ಚಿತ್ರ

ಮೋಡ ಬಿತ್ತನೆ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: 'ಮೋಡ ಬಿತ್ತನೆ ಎಲ್ಲೂ ಯಶಸ್ವಿಯಾಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ನಿಮಗೆ ಗೊತ್ತಾ? ಮೋಡ ಬಿತ್ತನೆ ಎಲ್ಲೂ ಯಶಸ್ವಿಯಾಗಿಲ್ಲ ಕಣ್ರೀ' ಎನ್ನುವ ಮೂಲಕ ಮೋಡ ಬಿತ್ತನೆಗೆ ರಾಜ್ಯ ಸರ್ಕಾರ ಯತ್ನಿಸುವುದಿಲ್ಲ ಎಂಬ ಸಂದೇಶ ನೀಡಿದರು.

'ರಾಜ್ಯದಲ್ಲಿ ಬರದ ಛಾಯೆ ಇರುವ ಬಗ್ಗೆ ಚರ್ಚಿಸಿರುವ ಸಚಿವ ಸಂಪುಟ ಉಪಸಮಿತಿಯು ಶೀಘ್ರದಲ್ಲೇ ವರದಿ ಸಲ್ಲಿಸಲಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಾಲೋಚನೆ ನಡೆಸಿ ಬರಗಾಲ ಘೋಷಣೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ನಾವು ಬರಗಾಲ ಪರಿಸ್ಥಿತಿ ಘೋಷಿಸಿದ ಮೇಲೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು. ಅವರು ಇಲ್ಲಿಗೆ ಬಂದು ಪರಿಸ್ಥಿತಿ ಅವಲೋಕಿಸುತ್ತಾರೆ. ಎನ್‌ಡಿಆರ್‌ಎಫ್ ಮಾನದಂಡದ ಅನ್ವಯವಾಗಿ ಪರಿಹಾರ ಕೊಡಬೇಕಾಗುತ್ತದೆ. ನಂತರ ಬರಪೀಡಿತ ತಾಲ್ಲೂಕುಗಳಲ್ಲಿ ಜನರಿಗೆ ಕೆಲಸ ಕೊಡುವುದು ಸೇರಿದಂತೆ ಪರಿಹಾರ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಕಟ್ಟು ಪದ್ಧತಿ ಬೇಡ': ಕೆಡಿಪಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, 'ಕೆಆರ್‌ಎಸ್ ಸೇರಿದಂತೆ ಈ ಭಾಗದ ಜಲಾಶಯಗಳಿಂದ ಕಟ್ಟು ಪದ್ಧತಿಯಲ್ಲಿ ನೀರು (ತಿಂಗಳಲ್ಲಿ 15 ದಿನ ನೀರು ಹರಿಸುವುದು, 15 ದಿನ ನಿಲ್ಲಿಸುವುದು) ಹರಿಸುವುದನ್ನು ಬಿಟ್ಟು ರೈತರ ಬೆಳೆಗಳಿಗೆ ಅಗತ್ಯವಾದ ನೀರನ್ನು ಕೊಡಬೇಕು. ಬೆಳೆಗಳನ್ನು ರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದರು.

ಸುರಪುರದ ಚಿಕ್ಕನಳ್ಳಿ: ಕಲುಷಿತ ಆಹಾರ, ನೀರಿನಿಂದ 37 ಜನ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಸುರಪುರ (ಯಾದಗಿರಿ ಜಿಲ್ಲೆ): ಎರಡು ಪ್ರತ್ಯೇಕ ಘಟನೆಗಳಲ್ಲಿ ಕಲುಷಿತ ನೀರು, ಆಹಾರದಿಂದಾಗಿ ಸುರಪುರ ತಾಲ್ಲೂಕಿನ ಚಿಕ್ಕನಳ್ಳಿಯಲ್ಲಿ 37 ಜನ ಅಸ್ವಸ್ಥರಾಗಿದ್ದಾರೆ.

ಕಲುಷಿತ ನೀರು ಕುಡಿದು 24 ಜನರು ವಾಂತಿಭೇದಿಯಿಂದ ಬಳಲಿದ ಘಟನೆ ಭಾನುವಾರ ರಾತ್ರಿ ಸಂಭವಿಸಿದೆ. ಅವರಲ್ಲಿ 22 ಶಾಲಾ ಮಕ್ಕಳು ಇದ್ದಾರೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ತಾತ್ಕಾಲಿಕ ಆಸ್ಪತ್ರೆಯನ್ನಾಗಿ ಮಾಡಿ ಅಲ್ಲಿ 4 ಮಕ್ಕಳು ಸೇರಿದಂತೆ 5 ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದವರಿಗೆ ಮಾತ್ರೆಗಳನ್ನು ಕೊಟ್ಟು ಮನೆಗೆ ಕಳಿಸಲಾಗಿದೆ.

ಎರಡು ದಿನಗಳಿಂದ ಮಳೆ ಸುರಿದ ಕಾರಣ ಗ್ರಾಮದಲ್ಲಿ ಕೆಸರು, ಕೊಳಚೆ ಇದೆ. ಕಿರು ನೀರು ಸರಬರಾಜು ಯೋಜನೆ ಇಲ್ಲ. ಶುದ್ಧ ಕುಡಿಯುವ ನೀರಿನ ಘಟಕ ಬಂದಾಗಿದೆ. ಗ್ರಾಮದ ಜನ ಕೊಳವೆಬಾವಿ ನೀರನ್ನೇ ಅವಲಂಬಿಸಿದ್ದಾರೆ. ಶಾಲೆಯ ಎದುರಿನ ಕೊಳವೆಬಾವಿಯ ನೀರು ಕುಡಿಯಬಾರದು ಎಂದು ಗ್ರಾಮ ಪಂಚಾಯಿತಿ ಸಿಬ್ಬಂದಿಯು ಗ್ರಾಮಸ್ಥರಿಗೆ ಮೊದಲೇ ತಿಳಿಸಿದ್ದರು.

ಕಲುಷಿತ ಆಹಾರ ಸೇವನೆಯಿಂದ ಅಸ್ವಸ್ಥ: ಭತ್ತದ ನಾಟಿ ಮಾಡಲು ಬಂದಿರುವ ಬಂಗಾಳದ ಕೃಷಿ ಕಾರ್ಮಿಕರು ಕಲುಷಿತ ಆಹಾರ ತಿಂದು ಅಸ್ವಸ್ಥಗೊಂಡಿದ್ದಾರೆ. ವಾಂತಿಭೇದಿಗೆ ಒಳಗಾದ 13 ಕಾರ್ಮಿಕರನ್ನು ಸುರಪುರ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಇಬ್ಬರನ್ನು ರಾಯಚೂರು ಮತ್ತು ಒಬ್ಬರನ್ನು ಯಾದಗಿರಿ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕಳಿಸಲಾಗಿದೆ.

'ಎಲ್ಲರ ಆರೋಗ್ಯವೂ ಸ್ಥಿರವಾಗಿದೆ. ಘಟನೆಗೆ ಕಲುಷಿತ ಆಹಾರ ತಿಂದಿರುವುದು ಕಾರಣ ಎಂದು ಪರೀಕ್ಷೆಯಿಂದ ತಿಳಿದುಬಂದಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ರಾಜಾ ವೆಂಕಪ್ಪನಾಯಕ ತಿಳಿಸಿದರು.

ಬೋಧಕನ ಅಮಾನತು ಏಕೆ: 'ಸುಪ್ರೀಂ'

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವ ಕ್ರಮವನ್ನು ಪ್ರಶ್ನಿಸಿ, ವಾದ ಮಂಡಿಸಿದ್ದ ಅದೇ ರಾಜ್ಯದ ಬೋಧಕರೊಬ್ಬರನ್ನು ಉದ್ಯೋಗದಿಂದ ಏಕೆ ಅಮಾನತುಗೊಳಿಸಲಾಗಿದೆ ಎಂದು ಸೋಮವಾರ ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ಈ ಕುರಿತು ಪರಿಶೀಲನೆ ನಡೆಸಬೇಕು ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿದೆ. 11

ತಮಿಳುನಾಡಿಗೆ ನೀರು: ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು

ನಿತ್ಯ ಅರ್ಧ ಟಿಎಂಸಿ ಕಾವೇರಿ ನೀರು

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಪ್ರತಿನಿತ್ಯ ಅರ್ಧ ಟಿಎಂಸಿ ಅಡಿ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಸೋಮವಾರ ಶಿಫಾರಸು ಮಾಡಿದೆ.

ಕರ್ನಾಟಕದಿಂದ ಎಷ್ಟು ನೀರನ್ನು ತಮಿಳುನಾಡಿಗೆ ಹರಿಸಲಾಗಿದೆ ಎಂಬುದನ್ನು ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಮಾಪನ ಮಾಡಲಾಗುತ್ತದೆ. ಈ ಕೇಂದ್ರಕ್ಕೆ ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ (ಅಂದಾಜು ಅರ್ಧ ಟಿಎಂಸಿ ಅಡಿ ನೀರು) ತಲುಪುವಂತೆ ಕರ್ನಾಟಕ ನೋಡಿಕೊಳ್ಳಬೇಕು. ಮಂಗಳವಾರದಿಂದ 15 ದಿನಗಳವರೆಗೆ (ಸೆಪ್ಟೆಂಬರ್ 9) ನೀರು ಹರಿಸಬೇಕು ಎಂದು ಸಮಿತಿ ಸಲಹೆ ನೀಡಿದೆ.

ಸಮಿತಿಯ ಅಧ್ಯಕ್ಷ ವಿನಿತ್ ಗುಪ್ತ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಕಾವೇರಿ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್, ತಮಿಳುನಾಡಿನ ನೀರಾವರಿ ಪ್ರಾಧಿಕಾರದ ಮುಖ್ಯ ಎಂಜಿನಿಯರ್ ಸೇರಿದಂತೆ ಹಲವು ಅಧಿಕಾರಿಗಳು ಭಾಗಿಯಾಗಿದ್ದರು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಮಂಗಳವಾರ ನಡೆಯಲಿದೆ.

ಮಳೆಯ ಕೊರತೆಯನ್ನು ಮಾನದಂಡವಾಗಿ ಪರಿಗಣಿಸಿ ಶೇ 22ರಷ್ಟು ಸಂಕಷ್ಟದ ಅಂಶವನ್ನು ಅನುಸರಿಸಬೇಕು ಎಂದು ತಮಿಳುನಾಡಿನ ಅಧಿಕಾರಿಗಳು, ಒತ್ತಾಯಿಸಿದರು. ಕರ್ನಾಟಕದ ಪ್ರತಿನಿಧಿಗಳು, ಸಂಕಷ್ಟದ ಲೆಕ್ಕಾಚಾರವು ಜಲಾಶಯಗಳ ಒಳಹರಿವನ್ನು ಅವಲಂಬಿಸಿರುತ್ತದೆ ಎಂದು ಪ್ರತಿಪಾದಿಸಿದರು.

ಕರ್ನಾಟಕ ಸರ್ಕಾರವು ನೀರು ಹರಿಸದೆ ಸುಪ್ರೀಂ ಕೋರ್ಟ್ ಹಾಗೂ ಕಾವೇರಿ ನ್ಯಾಯಮಂಡಳಿಯ ಆದೇಶಗಳನ್ನು ಉಲ್ಲಂಘಿಸಿದೆ. ಬಿಳಿಗುಂಡ್ಲು ಮಾಪನ ಕೇಂದ್ರಕ್ಕೆ ಪ್ರತಿನಿತ್ಯ 24 ಸಾವಿರ ಕ್ಯೂಸೆಕ್ (2 ಟಿಎಂಸಿ ಅಡಿ) ನೀರು ತಲುಪುವಂತೆ ಕ್ರಮ ಕೈಗೊಳ್ಳಬೇಕು. ಹತ್ತು ದಿನ ನೀರು ಹರಿಸಲೇಬೇಕು ಎಂದು ತಮಿಳುನಾಡಿನ ಪ್ರತಿನಿಧಿಗಳು ಪಟ್ಟು ಹಿಡಿದರು. ಇದಕ್ಕೆ ಕರ್ನಾಟಕದ ಪ್ರತಿನಿಧಿಗಳು ಒಪ್ಪಲಿಲ್ಲ. ಕರ್ನಾಟಕವು ಪ್ರತಿದಿನ 7 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಬೇಕು ಎಂದು ಸಮಿತಿಯ ಅಧ್ಯಕ್ಷರು ಹೇಳಿದರು.

ಪ್ರತಿನಿತ್ಯ 24 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಪ್ರಕರಣದ ವಿಚಾರಣೆ ನಡೆಸಿದ ಬಿ.ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ, ಈ ಸಂಬಂಧ ಯಾವುದೇ ಆದೇಶ ನೀಡಲು ನಿರಾಕರಿಸಿತ್ತು. ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಬಿಡುಗಡೆ ಮಾಡಿರುವ ಕಾವೇರಿ ನೀರಿನ ಪ್ರಮಾಣದ ವರದಿ ಸಲ್ಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಸೆ. 1ಕ್ಕೆ ಮುಂದೂಡಿತ್ತು.

ಮುಖ್ಯಾಂಶಗಳು

- 24 ಸಾವಿರ ಕ್ಯೂಸೆಕ್ ನೀರು ಬಿಡುಗಡೆಗೆ ಬೇಡಿಕೆ
- ತಮಿಳುನಾಡಿನ ಬೇಡಿಕೆ ಒಪ್ಪದ ರಾಜ್ಯದ ಪ್ರತಿನಿಧಿಗಳು
- ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಇಂದು
- ಸೆಪ್ಟೆಂಬರ್ 1ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ

ಆನೆ ಕಾರಿಡಾರ್, ಪ್ರಾಣಿಗಳು ಓಡಾಡುವ ಜಾಗದಲ್ಲಿ ಬೇಲಿ • ರೈತರ ಜಮೀನಿಗೆ ಪ್ರಾಣಿಗಳ ಲಗ್ಗೆ

ಸೂಕ್ಷ್ಮವಲಯದಲ್ಲಿ ಅಕ್ರಮ ಕಟ್ಟಡ: ತೆರವಿಗೆ ಕೂಗು

• ಸೂರ್ಯನಾರಾಯಣ ವಿ.

ಚಾಮರಾಜನಗರ/ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸೂಕ್ಷ್ಮ ವಲಯದಲ್ಲಿ ನಟ ಗಣೇಶ್ ಶಾಶ್ವತ ಕಟ್ಟಡ ನಿರ್ಮಿಸಲು ಅರಣ್ಯ ಇಲಾಖೆ ತಡೆಯೊಡ್ಡಿದ ಬೆನ್ನಲ್ಲೇ, 'ಸಂರಕ್ಷಿತ ಪ್ರದೇಶದ ಇತರ ಕಡೆಗಳಲ್ಲಿರುವ ಅಕ್ರಮ ಕಟ್ಟಡಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂಬ ಕೂಗು ಪರಿಸರವಾದಿಗಳು ಹಾಗೂ ಸ್ಥಳೀಯರಿಂದ ಕೇಳಿ ಬಂದಿದೆ.

'ಬಂಡೀಪುರದ ಕುಂದುಕೆರೆ ವಲಯದ ಬಾಚಹಳ್ಳಿ, ಎಲಚೆಟ್ಟಿ, ಚಿಕ್ಕ ಎಲಚೆಟ್ಟಿ, ಗೋಪಾಲಸ್ವಾಮಿ ಬೆಟ್ಟ ವಲಯದ ಮೇಲುಕಾಮನಹಳ್ಳಿ, ಮಂಗಲ ಸೇರಿದಂತೆ ಪರಿಸರ ಸೂಕ್ಷ್ಮ ವಲಯದಲ್ಲಿರುವ ಗ್ರಾಮಗಳಲ್ಲಿ ಬೆಂಗಳೂರು ಸೇರಿದಂತೆ ರಾಜ್ಯ, ಹೊರರಾಜ್ಯದವರು, ಉದ್ಯಮಿಗಳು ರೈತರಿಂದ ಎಕರೆಗಟ್ಟಲೆ ಜಮೀನು ಖರೀದಿಸಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಸುತ್ತಲೂ ಬೇಲಿ ಹಾಕುತ್ತಿದ್ದಾರೆ. ಅದರಿಂದ ಕಾಡು ಪ್ರಾಣಿಗಳು ಕೃಷಿ ಭೂಮಿಗಳಿಗೆ ನುಗ್ಗುತ್ತಿವೆ' ಎಂಬುದು ಸ್ಥಳೀಯ ರೈತರ ಆರೋಪ.

'ಕುಂದುಕೆರೆ ವಲಯದಲ್ಲಿ ಕಣಿಯನಪುರ ಆನೆ ಕಾರಿಡಾರ್‌ಗೆ ಹೊಂದಿಕೊಂಡಂತೆ ಹಲವರು ಜಮೀನು ಖರೀದಿಸಿ, ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಜಮೀನಿಗೆ ಬೇಲಿ ಹಾಕುತ್ತಿರುವುದರಿಂದ ಪ್ರಾಣಿಗಳ ಓಡಾಟಕ್ಕೆ ಧಕ್ಕೆಯಾಗುತ್ತಿದೆ' ಎಂದು ಪರಿಸರವಾದಿ ಜೋಸೆಫ್ ಹೂವರ್ ದೂರಿದರು.

5ನೇ ಪುಟ ನೋಡಿ

ಬಂಡೀಪುರ ಹುಲಿಸಂರಕ್ಷಿತ ಪ್ರದೇಶದ ಕುಂದುಕೆರೆ ವಲಯದಲ್ಲಿ ಕಣಿಯನಪುರ ಕಾರಿಡಾರ್ ಇದ್ದು, ಆನೆಗಳ ಓಡಾಟ ಹೆಚ್ಚಿದೆ

ಸಂಜಯ ಗುಬ್ಬಿ ಮನೆಗೆ ಆಕ್ಷೇಪ

ಕುಂದುಕೆರೆ ವಲಯ ಬಾಚಹಳ್ಳಿಯಲ್ಲಿ ವನ್ಯಜೀವಿ ತಜ್ಞ ಸಂಜಯ ಗುಬ್ಬಿ ಅವರು ಮನೆ ನಿರ್ಮಿಸಿರುವುದಕ್ಕೆ ಪರಿಸರವಾದಿ ಜೋಸೆಫ್ ಹೂವರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಮೇಲ್ವಿಚಾರಣಾ ಸಮಿತಿಯ ಅನುಮತಿ ಪಡೆಯದೆ ದೊಡ್ಡ ಕಟ್ಟಡ ನಿರ್ಮಿಸಿದ್ದಾರೆ. ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ ಪಡೆದಿಲ್ಲ. ಅವರ ಮನೆ ಆನೆ ಕಾರಿಡಾರ್‌ನಿಂದ ಕೇವಲ 300 ಮೀಟರ್ ದೂರದಲ್ಲಿದೆ. ಗುಬ್ಬಿಯವರಷ್ಟೇ ಅಲ್ಲ, ಈ ಭಾಗದಲ್ಲಿ ಹಲವರು ಎಕರೆಗಟ್ಟಲೆ ಜಾಗ ಖರೀದಿಸಿ ಕಟ್ಟಡ ನಿರ್ಮಿಸುತ್ತಿದ್ದಾರೆ' ಎಂದು ದೂರಿದರು.

ಆರೋಪವನ್ನು ನಿರಾಕರಿಸಿರುವ ಸಂಜಯ ಗುಬ್ಬಿ, 'ಎಲ್ಲವೂ ಕಾನೂನು ಬದ್ಧವಾಗಿದೆ. ವಾಸದ ಉದ್ದೇಶಕ್ಕೆ ಮನೆ ಕಟ್ಟಿದ್ದೇವೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964, 2015ರ ತಿದ್ದುಪಡಿ ಪ್ರಕಾರ, ಪಟ್ಟಾ ಜಮೀನಿನಲ್ಲಿ ಭೂಮಿಯ ಶೇ10 ಭಾಗದಲ್ಲಿ ಮನೆ ಕಟ್ಟಲು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯುವ ಅವಶ್ಯಕತೆಯಿಲ್ಲ. ಈ ವಿಚಾರವಾಗಿ ಹೈಕೋರ್ಟ್ 2016ರಲ್ಲಿ ಆದೇಶ ನೀಡಿದೆ' ಎಂದು ಹೇಳಿದ್ದಾರೆ. 'ಹೂವರ್ ಬಂಡೀಪುರದಲ್ಲಿ ಓಡಾಡಲು ಅರಣ್ಯ ಇಲಾಖೆಯ ವಾಹನ ಬಳಸಿದ್ದಾರೆ. ಸರ್ಕಾರಿ ವಾಹನ ಬಳಸಲು ಅರಣ್ಯ ಇಲಾಖೆ ಅನುಮತಿ ನೀಡಿದೆಯೇ' ಎಂದು ಪ್ರಶ್ನಿಸಿದ್ದಾರೆ. 'ಹಿಂದೆ ಇದ್ದ ನಿರ್ದೇಶಕರು ಸಂಜಯಗುಬ್ಬಿ ಅವರಿಗೆ ಕಟ್ಟಡ ನಿರ್ಮಿಸಲು ಅನು ಮತಿ ನೀಡಿದ್ದಾರೆ' ಎಂದು ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್ ಕುಮಾರ್ ಹೇಳಿದರು.

ಸೆ.19ರಿಂದ ರಿಲಯನ್ಸ್ ಜಿಯೊ ಏರ್‌ಫೈಬರ್ ಸೇವೆ

ನವದೆಹಲಿ (ಪಿಟಿಐ): ರಿಲಯನ್ಸ್ ಜಿಯೊ ಕಂಪನಿಯು 'ಜಿಯೊ ಏರ್ ಫೈಬರ್' ಸೇವೆಗಳನ್ನು ಸೆಪ್ಟೆಂಬರ್ 19ರಿಂದ ಆರಂಭಿಸಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಸೋಮವಾರ ಘೋಷಿಸಿದ್ದಾರೆ.

ಆರ್‌ಐಎಲ್‌ನ 46ನೆಯ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದ ಅವರು ಈ ಘೋಷಣೆ ಮಾಡಿದ್ದಾರೆ. 'ಜಿಯೊ ಏರ್‌ಫೈಬರ್ ಸೇವೆಯು ದೇಶದಾದ್ಯಂತ ಇರುವ 5ಜಿ ಜಾಲವನ್ನು ಬಳಸಿಕೊಳ್ಳಲಿದೆ. ವಯರ್‌ಲೆಸ್ ತಂತ್ರಜ್ಞಾನದ ಮೂಲಕ ಮನೆಮನೆಗಳಿಗೆ ಬ್ರಾಡ್‌ಬ್ಯಾಂಡ್ ಸೇವೆ ಸಿಗಲಿದೆ' ಎಂದು ಅಂಬಾನಿ ಹೇಳಿದ್ದಾರೆ.

ಕಂಪನಿಯು ಈಗಾಗಲೇ ಹೊಂದಿರುವ ಆಪ್ಟಿಕಲ್ ಫೈಬರ್ ಆಧಾರಿತ ಬ್ರಾಡ್‌ಬ್ಯಾಂಡ್ ಸೇವೆಯು ಪ್ರತಿದಿನ 15 ಸಾವಿರ ಸಂಪರ್ಕವನ್ನು ಕಲ್ಪಿಸುವ ಸಾಮರ್ಥ್ಯ ಹೊಂದಿದೆ.

ಆದರೆ ಜಿಯೊ ಏರ್‌ಫೈಬರ್ ಸೇವೆಯ ಮೂಲಕ ಬ್ರಾಡ್‌ಬ್ಯಾಂಡ್ ಸಂಪರ್ಕದ ವಿಸ್ತರಣೆಯು ವೇಗ ಪಡೆಯಲಿದ್ದು, ಪ್ರತಿದಿನ 1.50 ಲಕ್ಷ ಸಂಪರ್ಕ ನೀಡಲು ಸಾಧ್ಯವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಹೊಸ ಸೇವೆಯ ಕಾರಣದಿಂದಾಗಿ, ಮನೆ ಮನೆಗಳಿಗೆ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸಲು ಕೇಬಲ್ ಜಾಲವನ್ನು ವಿಸ್ತರಿಸುವ ಅಗತ್ಯ ಇರುವುದಿಲ್ಲ. 'ನಮ್ಮ ಆಪ್ಟಿಕಲ್ ಫೈಬರ್ ಜಾಲವು 20 ಕೋಟಿಗೂ ಹೆಚ್ಚಿನ ಮನೆ, ಕಚೇರಿಗಳ ಸನಿಹಕ್ಕೆ ಬಂದಿದೆ. ಆದರೂ, ಆಪ್ಟಿಕಲ್ ಫೈಬರ್ ಕೇಬಲ್ ಜಾಲವನ್ನು ಎಲ್ಲ ಕಡೆಗಳಿಗೂ ವಿಸ್ತರಿಸುವುದು ಕಷ್ಟದ ಕೆಲಸ. ಹೀಗಾಗಿ, ಲಕ್ಷಾಂತರ ಗ್ರಾಹಕರ ಮನೆಗಳು ಬ್ರಾಡ್‌ಬ್ಯಾಂಡ್ ಸೇವೆ ಪಡೆಯುವುದು ಅಸಾಧ್ಯವಾಗಿದೆ' ಎಂದು ಅಂಬಾನಿ ವಿವರಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಐದು ತಿಂಗಳು ಕಳೆದರೂ ಪೂರ್ಣ ಹಣ ಬಿಡುಗಡೆ ಮಾಡದ ಕನ್ನಡ ಸಾಹಿತ್ಯ ಪರಿಷತ್

ಜಿಲ್ಲಾ ಸಾಹಿತ್ಯ ಸಮ್ಮೇಳನದ ಅನುದಾನ ಬಾಕಿ

• ವರುಣ ಹೆಗಡೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು 16ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿ ಐದು ತಿಂಗಳು ಕಳೆದರೂ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಇದರಿಂದಾಗಿ ಸಮ್ಮೇಳನದ ಖರ್ಚು ವೆಚ್ಚ ಭರಿಸುವುದು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಸವಾಲಾಗಿ ಪರಿಣಮಿಸಿದೆ.

ಈಶಾನ್ಯ ಬೆಂಗಳೂರಿನಲ್ಲಿ ಕಳೆದ ಮಾರ್ಚ್ 11, 12ರಂದು ಸಮ್ಮೇಳನ ನಡೆಸಲಾಗಿತ್ತು. 15ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2021ರ ಮಾರ್ಚ್ ತಿಂಗಳು ಹೆಬ್ಬಾಳದಲ್ಲಿ ನಡೆಸಲಾಗಿತ್ತು. ಕೋವಿಡ್ ಕಾರಣ 2022ರಲ್ಲಿ ಸಮ್ಮೇಳನ ನಡೆದಿರಲಿಲ್ಲ. 16ನೇ ಸಾಹಿತ್ಯ ಸಮ್ಮೇಳನವನ್ನು ವಸಂತನಗರದಲ್ಲಿರುವ ಅಂಬೇಡ್ಕರ್ ಭವನದಲ್ಲಿ ನಡೆಸಲಾಗಿತ್ತು. ಲೇಖಕಿ ಎಚ್.ಎಸ್. ಶ್ರೀಮತಿ ಅವರು ಸಮ್ಮೇಳನಾಧ್ಯಕರಾಗಿದ್ದರು. ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಕಸಾಪ ರಾಜ್ಯ ಘಟಕವು ₹ 4 ಲಕ್ಷ ಅನುದಾನವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯಪರಿಷತ್ತಿಗೆ ಬಿಡುಗಡೆ ಮಾಡಿದ್ದು, ₹ 1 ಲಕ್ಷ ಬಾಕಿ ಉಳಿಸಿಕೊಂಡಿದೆ. ಇದು ಪದಾಧಿಕಾರಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಮೊದಲಿನಿಂದಲೂ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತಲಾ ₹ 5 ಲಕ್ಷ ಅನುದಾನವನ್ನು ಸರ್ಕಾರಗಳು ಕಸಾಪ ರಾಜ್ಯ ಘಟಕದ ಮೂಲಕ ಒದಗಿಸುತ್ತಿವೆ. ಸಭಾಂಗಣಗಳ ಬಾಡಿಗೆ ಸೇರಿ ವಿವಿಧ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿರುವುದರಿಂದ ಹೆಚ್ಚುವರಿ ಅನುದಾನವನ್ನು ಜಿಲ್ಲಾ ಘಟಕಗಳು ದಾನಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಸಂಗ್ರಹಿಸುತ್ತಿವೆ.

₹ 10 ಲಕ್ಷ ವೆಚ್ಚ: ಹೊಸ ಕಾರ್ಯಕಾರಿ ಸಮಿತಿಯ ಮೊದಲ ಸಮ್ಮೇಳನ ಇದಾಗಿತ್ತು. ವಿಧಾನಸೌಧದ ಮುಂಭಾಗದಲ್ಲಿರುವ ಶಾಂತವೇರಿ ಗೋಪಾಲ ಗೌಡ ವೃತ್ತದಿಂದ ವಸಂತನಗರದಲ್ಲಿರುವ ಅಂಬೇಡ್ಕರ್ ಭವನದವರೆಗೆ ಸಾರೋಟ್‌ನಲ್ಲಿ ಕನ್ನಡ ಮಾತೆಯ ಪ್ರತಿಮೆ ಇರಿಸಿ, ಕನ್ನಡ ಜಾಗೃತಿ ಮೆರವಣಿಗೆ ನಡೆಸಲಾಗಿತ್ತು. ಬೆಂಗಳೂರಿನಲ್ಲಿ ಕನ್ನಡದ ವಾತಾವರಣ ಸೇರಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಎರಡು ದಿನಗಳ ಈ ಸಮ್ಮೇಳನಕ್ಕೆ ಸುಮಾರು ₹ 10 ಲಕ್ಷ ವೆಚ್ಚವಾಗಿದೆ. ಸುಮಾರು ₹ 2.5 ಲಕ್ಷವನ್ನು ದಾನಿಗಳಿಂದ ನಗರ ಜಿಲ್ಲಾ ಘಟಕ ಸಂಗ್ರಹಿಸಿದೆ. ಇನ್ನೂ ₹ 3.5 ಲಕ್ಷ ಹೊಂದಿಸುವುದು ಕಷ್ಟಸಾಧ್ಯವಾಗಿದೆ.

‘ಬೆಂಗಳೂರಿನಲ್ಲಿ ಕನ್ನಡ ಉಳಿಸಿ, ಬೆಳೆಸಬೇಕಾದ ಜವಾಬ್ದಾರಿ ಜಿಲ್ಲಾ ಘಟಕಕ್ಕಿಂತ ಹೆಚ್ಚು ರಾಜ್ಯ ಘಟಕದ ಮೇಲಿದೆ. ಯಾರೇ ಕನ್ನಡ ನಾಡು–ನುಡಿಗೆ ಪೂರಕವಾದ ಕಾರ್ಯಕ್ರಮಗಳು ನಡೆಸಿದಾಗ ಅದನ್ನು ಪ್ರೋತ್ಸಾಹಿಸುವ ಕೆಲಸವನ್ನು ಕಸಾಪ ರಾಜ್ಯ ಘಟಕ ಮಾಡಬೇಕು. ಆದರೆ, ಅದರದೇ ಜಿಲ್ಲಾ ಘಟಕ ನಡೆಸಿದ ಸಮ್ಮೇಳನದ ಅನುದಾನ ಬಾಕಿ ಇರಿಸಿಕೊಳ್ಳುವುದು ಸರಿಯಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಾಹಿತಿಯೊಬ್ಬರು ತಿಳಿಸಿದರು.

ತಾಲ್ಲೂಕು ಸಮ್ಮೇಳನಕ್ಕೂ ಖಚಿತತೆ ಇಲ್ಲ

ಕಸಾಪ ಜಿಲ್ಲಾ ಘಟಕಗಳು ತಾಲ್ಲೂಕು ಮಟ್ಟದಲ್ಲಿಯೂ ಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿವೆ. ಪ್ರತಿ ತಾಲ್ಲೂಕಿನಲ್ಲಿ ನಡೆಸಲಾಗುವ ಸಮ್ಮೇಳನಕ್ಕೆ ರಾಜ್ಯ ಘಟಕವು ತಲಾ ₹ 1 ಲಕ್ಷ ಅನುದಾನ ಒದಗಿಸುತ್ತದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನಸಭೆ ಕ್ಷೇತ್ರವಾರು ಘಟಕಗಳನ್ನು ನಿರ್ಮಿಸಲಾಗಿದ್ದು, ರಾಜ್ಯ ಘಟಕ ತಲಾ ₹ 1 ಲಕ್ಷ ಅನುದಾನ ನೀಡಬೇಕಿದೆ. ಮಾರ್ಚ್ ತಿಂಗಳಲ್ಲಿಯೇ ರಾಜರಾಜೇಶ್ವರಿ ನಗರ, ಆನೇಕಲ್, ಬ್ಯಾಟರಾಯನಪುರ ಹಾಗೂ ಯಶವಂತಪುರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲಾಗಿದೆ. ಈ ಸಮ್ಮೇಳನಗಳ ಅನುದಾನವೂ ಬಿಡುಗಡೆಯಾಗಿಲ್ಲ.

ಸಲ್ಲಿಕೆಯಾದ ಬಿಲ್ಲುಗಳಿಗೆ ಅನುಗುಣವಾಗಿ ಹಣಕಾಸು ವಿಭಾಗದವರು ಅನುದಾನವನ್ನು ಬಿಡುಗಡೆ ಮಾಡುತ್ತಾರೆ. ನಿಗದಿತ ಅನುದಾನವನ್ನು ನಿರಂತರ ನೀಡಲಾಗುತ್ತದೆ

ಮಹೇಶ ಜೋಶಿ
ಕಸಾಪ ರಾಜ್ಯ ಘಟಕದ ಅಧ್ಯಕ್ಷ

ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ರಾಜ್ಯ ಘಟಕವು ಪೂರ್ಣ ಅನುದಾನವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಸಮ್ಮೇಳನದ ವೆಚ್ಚ ಭರಿಸಲು ದಾನಿಗಳಿಂದಲೂ ಹಣ ಸಂಗ್ರಹಿಸಿದ್ದೇವೆ

ಎಂ. ಪ್ರಕಾಶಮೂರ್ತಿ
ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ



ರಾಖಿ ಮ್ಯಾಲೆ ಕಣ್ಣು...

ರಕ್ಷಾ ಬಂಧನ ನಿಮಿತ್ತ ಅತ್ತಿಬೆಲೆ ಮುಖ್ಯರಸ್ತೆಯಲ್ಲಿ ಮಹಿಳೆಯರು ಸೋಮವಾರ ಉತ್ಸಾಹದಿಂದ ರಾಖಿಗಳನ್ನು ಆಯ್ಕೆ ಮಾಡಿದ್ದು ಕಂಡುಬಂತು – ಪ್ರಜಾವಾಣಿ ಚಿತ್ರ/ರಂಜು ಪಿ.

ಸಂಸ್ಥೆಗಳಿಗೆ ಸಂಬಂಧಿಸಿದ ವಿವರ ಘೋಷಣೆ: ಸೆಬಿ ತನಿಖೆಯಿಂದ ಪತ್ತೆ

ನಿಯಮ ಉಲ್ಲಂಘಿಸಿದ ಅದಾನಿ ಸಮೂಹ

ನವದೆಹಲಿ (ರಾಯಿಟರ್ಸ್): ಷೇರುಪಟ್ಟಿಗೆ ಸೇರಿರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿದೇಶಗಳಲ್ಲಿರುವ ನಿಧಿ ಮತ್ತು ಮಿತಿಯ ವಿವರಗಳ ಘೋಷಣೆಯಲ್ಲಿ ಅದಾನಿ ಸಮೂಹ ನಿಯಮಗಳನ್ನು ಉಲ್ಲಂಘಿಸಿರುವುದು ಸೆಬಿ ತನಿಖೆಯಿಂದ ಪತ್ತೆಯಾಗಿದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮೂಲಗಳು ಇದನ್ನು ದೃಢಪಡಿಸಿವೆ. ಅದಾನಿ ಸಮೂಹವು ಷೇರುಮೌಲ್ಯಗಳ ಏರಿಳಿತದಲ್ಲಿ ತೊಡಗಿದೆ ಎಂಬ ಅಮೆರಿಕದ ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆ ವರದಿ ಬಳಿಕ ಸೆಬಿ ತನಿಖೆ ಆರಂಭಿಸಿತ್ತು.

ಬಂದರು ವಹಿವಾಟಿನಿಂದ ವಿದ್ಯುತ್ ಉತ್ಪಾದನೆಯವರೆಗೂ ವಿವಿಧ ಉದ್ಯಮಗಳನ್ನು ಹೊಂದಿರುವ ಅದಾನಿ ಸಮೂಹವು ತನ್ನಿಂದ ಯಾವುದೇ ಲೋಪವಾಗಿಲ್ಲ ಎಂದು ಇದೇ ವರ್ಷದ ಜನವರಿ ತಿಂಗಳಲ್ಲಿ ಪ್ರತಿಪಾದಿಸಿತ್ತು.

ಹೆಸರು ಬಹಿರಂಗಪಡಿಸಲು ಬಯಸದ ಸೆಬಿ ಮೂಲಗಳು, ‘ಸಮೂಹದಿಂದ ಆಗಿರುವ ಲೋಪ ತಾಂತ್ರಿಕ ಸ್ವರೂಪದ್ದಾಗಿದೆ. ತನಿಖೆಯು ಒಮ್ಮೆ ಪೂರ್ಣಗೊಂಡ ಬಳಿಕ ಈ ಕುರಿತಂತೆ ದಂಡವನ್ನು ವಿಧಿಸಬಹುದಾಗಿದೆ’ ಎಂದು ತಿಳಿಸಿವೆ.

ಸುಪ್ರೀಂ ಕೋರ್ಟ್ ಸೆಬಿ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿದ್ದು, ಮಂಗಳವಾರ ಪ್ರಕರಣದ ವಿಚಾರಣೆ ಕೈಗೆತ್ತಿಕೊಳ್ಳುತ್ತಿದೆ. ತನಿಖೆ ಪೂರ್ಣಗೊಳ್ಳುವವರೆಗೆ, ಈ ಕುರಿತ ವರದಿ ಬಹಿರಂಗಪಡಿಸುವ ಚಿಂತನೆ ಸೆಬಿಯ ಮುಂದಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಬೆಳವಣಿಗೆ ಕುರಿತಂತೆ ಸೆಬಿ ಅಥವಾ ಅದಾನಿ ಸಮೂಹ ಪ್ರತಿಕ್ರಿಯಿಸಲು ನಿರಾಕರಿಸಿದೆ. ಪ್ರಕರಣದ ತನಿಖೆಯು ಬಹುತೇಕ ಪೂರ್ಣಗೊಂಡಿದೆ ಎಂದು ಸೆಬಿ ಕಳೆದ ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು.

ಸುದ್ದಿ 2 ನಿಮಿಷ

ಶುದ್ಧ ನೀರು: ಮತ್ತಷ್ಟು ಕಡೆ ದುಬಾರಿ

ಬೆಂಗಳೂರು: ನಗರದ ಹಲವು ಶುದ್ಧ ನೀರಿನ ಘಟಕಗಳಲ್ಲಿ ನೀರಿನ ಬೆಲೆಯನ್ನು ₹ 5ರಿಂದ ₹ 10ಕ್ಕೆ ಏರಿಕೆ ಮಾಡಲಾಗಿದೆ. ಶುದ್ಧ ನೀರು ಖರೀದಿಸುವವರು ದುಪ್ಪಟ್ಟು ದರ ನೀಡಬೇಕಾಗಿದೆ.

ರಾಜಾಜಿನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿರುವ ಹಲವು ಶುದ್ಧ ನೀರಿನ ಘಟಕಗಳಲ್ಲಿ ಜುಲೈನಲ್ಲಿಯೇ ಏರಿಸಲಾಗಿತ್ತು. ಇದೀಗ ಆರ್‌ಟಿ ನಗರ, ಹೆಬ್ಬಾಳ ಸುತ್ತಮುತ್ತ ಖಾಸಗಿ ಏಜೆನ್ಸಿ ಘಟಕಗಳಲ್ಲಿ ಬೆಲೆ ದುಪ್ಪಟ್ಟಾಗಿದೆ.

‘ವಿದ್ಯುತ್ ದರ ಏರಿಕೆಯಾಗಿದ್ದು ಘಟಕಗಳ ನಿರ್ವಹಣೆಗೆ ಹೆಚ್ಚಿನ ಹೊರೆ ಬಿದ್ದಿದೆ. ಅಲ್ಲದೇ ಫಿಲ್ಟರ್, ಕೆಮಿಕಲ್ ಸಹ ದುಬಾರಿ ಆಗಿರುವ ಕಾರಣಕ್ಕೆ 20 ಲೀಟರ್ ನೀರಿನ ಬೆಲೆಯನ್ನು ₹ 10ಕ್ಕೆ ಏರಿಕೆ ಮಾಡಲಾಗಿದೆ. ಆರ್‌ಟಿ ನಗರ ವ್ಯಾಪ್ತಿಯ ಘಟಕಗಳಲ್ಲಿ ಸೆ.1ರಿಂದ ಹೊಸ ದರ ಜಾರಿಗೆ ಬರಲಿದೆ’ ಎಂಬ ಫಲಕವನ್ನು ಘಟಕಗಳ ಎದುರು ಅಳವಡಿಸಲಾಗಿದೆ.

ಕುಡಿಯುವ ನೀರಿಗಾಗಿ ಘಟಕಗಳನ್ನು ಅವಲಂಬಿಸಿರುವ ಜನರು ನಿತ್ಯವೂ ₹ 5 ನಾಣ್ಯ ಬಳಸಿ 20 ಲೀಟರ್ ನೀರು ಪಡೆಯುತ್ತಿದ್ದರು. ಇದೀಗ ₹ 5 ಎರಡು ನಾಣ್ಯಗಳನ್ನು ಬಳಸಿ 20 ಲೀಟರ್ ನೀರು ಪಡೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಮಧ್ಯಮ ವರ್ಗದ ಜನರು, ಹೋಟೆಲ್ ಸಿಬ್ಬಂದಿ ಇದೇ ನೀರನ್ನು ಕೊಂಡೊಯ್ಯುತ್ತಿದ್ದರು. ಇದೀಗ ಅವರೂ ದುಪ್ಪಟ್ಟು ಹಣ ಪಾವತಿಸಬೇಕಾದ ಸ್ಥಿತಿ ಬಂದಿದೆ ಎಂದು ಗ್ರಾಹಕರು ಅಳಲು ತೋಡಿಕೊಂಡರು. ಮೊದಲಿದಷ್ಟೇ ದರ ನಿಗದಿಪಡಿಸಬೇಕು ಎಂದು ಕೋರಿದ್ದಾರೆ.

ಪರಿಶೀಲನೆ: ‘ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಕೆಲವನ್ನು ಸಂಘ–ಸಂಸ್ಥೆಗಳು ಅಳವಡಿಸಿವೆ. ಅವು ಬೆಲೆ ಹೆಚ್ಚಿಸಿರಬಹುದು. ಬಿಬಿಎಂಪಿಯಿಂದ ನಿರ್ವಹಣೆ ಮಾಡುವ ಘಟಕಗಳಲ್ಲಿ ನೀರಿನ ಬೆಲೆ ಹೆಚ್ಚಳವಾಗಿಲ್ಲ. ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ಕಾವೇರಿ ವಿವಾದ: ಹೋರಾಟದ ಎಚ್ಚರಿಕೆ

ಬೆಂಗಳೂರು: ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಏಕಾಏಕಿ ನಿರ್ಧಾರ ಕೈಗೊಂಡರೆ ಬೃಹತ್ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಷ್ಟ್ರ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ವೆಂಕಟೇಶ್ ಗೌಡ, ‘ಕಾವೇರಿ ವಿಚಾರವಾಗಿ ಸರ್ಕಾರವು ಕನ್ನಡ ಪರ ಸಂಘಟನೆಗಳು, ರೈತರ ಜತೆಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರನ್ನು ಹರಿಸಬಾರದು. ಒಂದು ವೇಳೆ ನೀರು ಹರಿಸಿದರೆ ಬೆಂಗಳೂರಿನಿಂದ ಮಂಡ್ಯದವರೆಗೆ ಬೃಹತ್ ರ‍್ಯಾಲಿ ನಡೆಸಿ, ಅಲ್ಲಿಂದ ಪಾದಯಾತ್ರೆಯ ಮೂಲಕ ಕೆ.ಆರ್.ಎಸ್. ಜಲಾಶಯಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಟಿಕೆಟ್ ಇಲ್ಲದೆ ಪ್ರಯಾಣ: ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಜುಲೈ ತಿಂಗಳಲ್ಲಿ ಟಿಕೆಟ್ ಇಲ್ಲದೇ ಪ್ರಯಾಣಿಸಿದ 2,832 ಪ್ರಯಾಣಿಕರಿಂದ ₹ 4.46 ಲಕ್ಷ ದಂಡ ವಸೂಲಿ ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ತನಿಖಾ ತಂಡಗಳು ಒಂದು ತಿಂಗಳಲ್ಲಿ 43,698 ಬಸ್‌ಗಳನ್ನು ತನಿಖೆಗೆ ಒಳಪಡಿಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆ.5 ರಿಂದ ಸಂವಿಧಾನ ಓದು

ಧಾರವಾಡ: ‘ಸಂವಿಧಾನದ ಪೀಠಿಕೆಯನ್ನು ಪ್ರತಿ ದಿನ ಕಡ್ಡಾಯವಾಗಿ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿಗಳು ಓದುವ ಕಾರ್ಯಕ್ರಮ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಸೆ.5ರಂದು ಶಿಕ್ಷಕರ ದಿನ ಈ ಕಾರ್ಯಕ್ರಮ ಅನುಷ್ಠಾನವಾಗಲಿದೆ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದಲ್ಲಿ ಸೋಮವಾರ ನಡೆದ ಮಕ್ಕಳ ನಡಿಗೆ ಹಸಿರಿನ ಕಡೆಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕನಕಪುರಕ್ಕೆ ಪ್ರತ್ಯೇಕ ಕಾಲೇಜು ಮಂಜೂರು ಮಾಡಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಲ್ಲಾ ಕೇಂದ್ರವಾದ ರಾಮನಗರದಲ್ಲಿ ವೈದ್ಯಕೀಯ ಕಾಲೇಜು ಆರಂಭಿಸುವ ವಿಚಾರದಲ್ಲಿ ರಾಜಕೀಯ ಮಾಡಬಾರದು. ಕನಕಪುರಕ್ಕೆ ಇನ್ನೊಂದು ವೈದ್ಯಕೀಯ ಕಾಲೇಜು ಮಂಜೂರು ಮಾಡಿಸಲಿ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದೆ ರಾಮನಗರ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಆಗಿದ್ದು ಎಲ್ಲಿಗೆ? ಯಾವ ಸ್ಥಳದಲ್ಲಿ ಜಮೀನು ಮಂಜೂರು ಮಾಡಲಾಗಿತ್ತು? ಈಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರದ್ದೇ ಸರ್ಕಾರವಿದೆ. ಬೇಕಿದ್ದರೆ ಕನಕಪುರಕ್ಕೂ ಒಂದು ಕಾಲೇಜು ಮಂಜೂರು ಮಾಡಿಸಲಿ’ ಎಂದರು.

‘ಮಾಯಗೊಂಡನ ಹಳ್ಳಿಯಲ್ಲಿ 9 ಎಕರೆ ಜಮೀನನ್ನು ಕೈಬಿಟ್ಟು ಕೆಲಸ ಆರಂಭಿಸಬೇಕೆಂಬ ಬೇಡಿಕೆಯಿಂದ ಗೊಂದಲ ಆರಂಭವಾಗಿತ್ತು. ರಾಮನಗರ ವೈದ್ಯಕೀಯ ಕಾಲೇಜಿಗೆ ತೊಂದರೆ ಮಾಡಬೇಡಿ ಎಂದು ಎಚ್.ಡಿ. ಕುಮಾರಸ್ವಾಮಿ ಕೇಳುತ್ತಿದ್ದಾರೆ. ಅವರೇನೂ ದ್ವೇಷದ ರಾಜಕಾರಣ ಮಾಡುತ್ತಿಲ್ಲ. ನನಗೆ ಚನ್ನಪಟ್ಟಣ, ರಾಮನಗರ, ಕನಕಪುರ, ಮಾಗಡಿ ಎಲ್ಲವೂ ಒಂದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

NEED 25 Employees, for a Reputed Pvt Ltd. who has completed degree, age limit 35 years. Attractive Salary ESI, PF.Contact HR person: 8951916165.

Part-Time Jobs

TOP MNC Com. Licensed By Central Govt. Restart Your 2nd Career Opporty with Flexible Timings Age Limit 45yrs & Above: 7019215243/ 9886641282

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

NEED Investors for one of the Leading Pvt Ltd.Very Attractive and Confirmed RETURNS. Those interested, Please Contact: 8951916165.

Business For Sale

RUNNING RESTAURANT for sale in Mysore at a Prime location. Interested buyers may contact 9036866770

CONNECT ಕ್ಲಾಸಿಫೈಡ್ಸ್

CONGRATULATIONS

KARNATAKA HYBRID MICRO DEVICES LTD.

KARNATAKA HYBRID MICRO DEVICES LTD. (KHMDL) congratulates TEAM ISRO on success of Chandrayaan-3 propelling ISRO and the nation to the pinnacle of glory!

KHMDL is proud and privileged to be associated in all Spacecraft programs of ISRO for more than two decades, supplying Thick film hybrid micro electronics packages, including the highly complex large hybrid circuit for the ILSA (Instrument for Lunar Seismic Activity studies) housing the Seismometer MEMS Sensors and front-end electronics for Chandrayaan-3.

Thank you ISRO for choosing KHMDL as a partner for this historic mission!



EVERY INDIAN SPACECRAFT, MOST OF THE AIRCRAFT BUILT IN INDIA AND EVERY THIRD AUTOMOBILE ON ROAD INCORPORATE A KHMDL PRODUCT OR ITS SERVICES.

DH Classifieds More value, more impact ಪ್ರಜಾವಾಣಿ JOB HUNT

Get your HIRING NEEDS answered

JOB

Get the right people for your company...
Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

PERSONAL

Announcements

ANNOUNCEMENT
I, **M K SREENEVAS** alias **PERUMALU,** R/at. 49, 3rd Cross, Chairman Layout, Near Srinidhi Hotel, Doddabanasawadi, Bengaluru -43, declare that both the names belongs to me only. Vide affidavit dt. 28/08/2023 before Notary Udaykumar K, Bangalore.

Change of Name

I, KALPANA W/O C.M.Shashidhar Aged about 40years, Residing at Ward No 01, New KEB Colony, Vapasandra,Chikkaballapur Town & District, Have Changed My Name to *N.KALPANA* Vide Affidavit Dated 26.08.2023 Before Notary K.H.Venkatappa Chikkaballapur. Henceforth I shall be called as *N.KALPANA* Only.

I VIJAYASARASWATHI W/o.Seetharama Bhat aged 60 years 3 months residing at flat #202, First floor, Shaswathi Vilas Apartments 17th cross 15th main JPNagar 5th phase Bengaluru 560078, declare that my name is mentioned in my passport as Vijayasaraswathi Nekkare. Nekkare was mentioned as my surname. Henceforth my name is Vijayasaraswathi only for all purposes as per affidavit dated 26.8.2023 sworn before notary S.Jayanna Bangalore.

I, SEETHAL A, SEETHAL DINESH JAIN W/o DINESH P. JAIN R/at No.24, DS Lane Chickpet Bangalore- 560053, have changed my name to SHEETAL vide affidavit dated: 23/8/2023 Before Notary K.C.Shashikala Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

I, MAHESHA, residing at No. 2, Kallipalya, Madigondanahalli Post, Kudur Hobli, Magadi Taluk, Ramanagara District-562127, today in Bangalore, have changed my name form MAHESHA to MAHESH, vide affidavit dated 24/08/2023, sworn before Kundan Babu M., Notary, Bangalore.

Lost

DOCUMENT LOST
I, **SUJATHA** W/o Vijaya Raghavan, R/at # 1, Vaddarapalya, Kalyan Nagar, Bangalore - 560043, have lost my original **property document No. / Identification No. & sale registration No: BNS-1-04723-2011-12 dt.19-08-2011**
Finders please Contact: **9738698336**

DOCUMENT LOST
I, Rajesh B, S/o Late Beerappa C R/a No. 4, 15th Cross, 29th Main, BTM 2nd Stage, Bangalore-560 076 document have lost in the name of Beerappa C, Sale Deed, Site No.4, Katha No. 77/1, BBMP. Registration No. BAS-1-18488-2005-06, CD No. Basd224 Registered at Bangalore South Tq
Finders please contact: 98860 31150 or inform near by Police Station

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/18/2023
ದಿನಾಂಕ : 25–05–2023 ಗೆ ತಿದ್ದುಪಡಿ – 2

ಕೆಲಸದ ಹೆಸರು : ಮಾರಿಕುಪ್ಪಂ – ಕುಪ್ಪಂ ಹೊಸ ಮಾರ್ಗ ಯೋಜನೆಯ ಮಿಡ್ ಸೆಕ್ಷನ್ (ಕಿ.ಮೀ.5.72) ಮತ್ತು ಕುಪ್ಪಂ (ಕಿ.ಮೀ.23.7) ನಡುವೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವೆ ಕಾಮಗಾರಿಗಳನ್ನು ಒಳಗೊಂಡು ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಡಬ್ಲ್ಯು.496/ಎಂಕೆಎಂ–ಕೆಪಿಎನ್–ಇಪಿಸಿ–ಫೇಸ್–2)

ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
08–09–2023 (11:00 ಗಂಟೆಗಳು)	09–10–2023 (11:00 ಗಂಟೆಗಳು)

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/324/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

ಐಸಿಎಆರ್ – ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು – 560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ
ದಿನಾಂಕ:28–08–2023

ಎನ್‌ಐಎಎನ್‌ಪಿ/ಎಡಿವಿ–2–ಎಸ್ಟ್/2023

ಐಸಿಎಆರ್ – ನ್ಯಾಷನಲ್ ಫೆಲೋ ಪ್ರೊಜೆಕ್ಟ್ “ಡೆವಲಪ್‌ಮೆಂಟ್ ಆಫ್ ಬಫೆಲೊ ಬುಲ್ ಫರ್ಟಿಲಿಟಿ ಡಯಾಗ್ನೋಸ್ಟಿಕ್ ಚಿಪ್ ಬೇಸ್ಡ್ ಆನ್ ಸ್ಪರ್ಮ್ ಟ್ರಾನ್ಸ್‌ಕ್ರಿಪ್ಟ್ಸ್ ಸಿಗ್ನೇಚರ್ಸ್” ಎಂಬ ಶೀರ್ಷಿಕೆಯನ್ನು ಯೋಜನೆ ಅಡಿಯಲ್ಲಿ ಒಂದು ಟೈಮ್ ಬೌಂಡ್ ಆಧಾರಿತ ರಿಸರ್ಚ್ ಅಸೋಸಿಯೇಟ್ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ ಇತ್ಯಾದಿ ಕುರಿತಾದ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು, ಸದರಿ ಯೋಜನೆಯ ಉಸ್ತುವಾರಿ "Selvaraju.S@icar.gov.in" ಇವರಿಗೆ ತಮ್ಮ ವೈಯಕ್ತಿಕ ವಿವರಗಳನ್ನು ಕಳುಹಿಸಬಹುದು.

ಆಡಳಿತಾಧಿಕಾರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058
EMail ID: eerdwsd.ckb2@gmail.com,
ಸಂಖ್ಯೆ:ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2023–24
ದಿನಾಂಕ: 19.08.2023

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಪ್ರಕಟಣೆ ಸಂಖ್ಯೆ: 05/2023–24 ದಿನಾಂಕ: 19.08.2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2022–23ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ 86 ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **KW- I & KW- II KW- III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (**Credit Card/Direct Debit/NEFT & OTC** ಮುಖೇನ) ಅಥವಾ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ **2** ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 04.09.2023 ರಂದು ಸಂಜೆ 5.30 ಗಂಟೆವರೆಗೆ,** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 06.09.2023 ರಂದು ಸಂಜೆ 5.30 ಗಂಟೆವರೆಗೆ,** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 08.09.2023 ಬೆಳಗ್ಗೆ 11.00 ಗಂಟೆಗೆ,** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 11.09.2023 ಬೆಳಗ್ಗೆ 11.00 ಗಂಟೆಗೆ,** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:58/ಕೆಎಸ್‌ಎಂ.ಸಿ.ಎ/2023–24

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ನಗರಸಭಾ ಕಾರ್ಯಾಲಯ, ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562162
ದೂರವಾಣಿ: 08023718487, E-Mail: itstaff_ulb_mnhalli@yahoo.com
ಸಂಖ್ಯೆ:ಮಾ.ನ.ಕಾ/ಆ.ಶಾ/ಸಿ.ಆರ್/24/2023–24 ದಿನಾಂಕ: 21.08.2023

"ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಮಾದನಾಯಕನಹಳ್ಳಿ, ಬೆಂಗಳೂರು ನಗರಜಿಲ್ಲೆ ಇವರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ **ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು** ಏಕ/ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಅರ್ಹ ಸರಬರಾಜುದಾರರು/ಏಜೆನ್ಸಿ/ ಇತರೆ ಭಾಗವಹಿಸಬಹುದಾಗಿದೆ. ವಿವರಗಳು ಈ ಕೆಳಕಂಡಂತ್ತಿರುತ್ತದೆ.

ಕ್ರ ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ರೂ. ಗಳಲ್ಲಿ
1	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ನಿಸ್ಸತ್ವ ಘನ ತ್ಯಾಜ್ಯವನ್ನು ಅಂಗೀಕೃತ ಆರ್.ಡಿ.ಎಫ್ ಘಟಕಕ್ಕೆ ಸರಬರಾಜು ಮಾಡುವ ಕೆಲಸ.	9.5 ಲಕ್ಷ	23,750/–
2	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಆಯ್ದ 4 ಬಡಾವಣೆ/ಜಾಗದಲ್ಲಿ ಕಮ್ಯುನಿಟಿ ಕಾಂಪೋಸ್ಟರ್ ಮಿಷಿನ್ನನ್ನು ಸರಬರಾಜು ಮಾಡಿ ಅಳವಡಿಸುವ ಕೆಲಸ.	1.89 ಲಕ್ಷ	4,725/–
3	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಘನ ತ್ಯಾಜ್ಯ ವಸ್ತು ವಿಲೇವಾರಿಗಾಗಿ ಟ್ರಾಕ್ಟರ್ ಟ್ರೈಲರ್ ಸರಬರಾಜು ಮಾಡುವ ಕೆಲಸ.	20.12 ಲಕ್ಷ	50,000/–
4	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ವೆಹಿಕಲ್ ಮೌಂಟೆಡ್ ಫಾಗಿಂಗ್ ಮೆಷಿನ್ ಸರಬರಾಜು ಮಾಡುವ ಕೆಲಸ.	7.0 ಲಕ್ಷ	17,500/–

1. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2.** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 12–09–2023 ಮತ್ತು ಸಮಯ: 17:00 ಘಂಟೆಯವರೆಗೆ.** ಟೆಂಡರ್‌ನ ಬಿಡ್ ತೆರೆಯುವ **ದಿನಾಂಕ: 13–09–2023 ಮತ್ತು ಸಮಯ: 17:30 ಘಂಟೆಗೆ. 3.** ಹೆಚ್ಚಿನ ವಿವರಗಳನ್ನು ಕಛೇರಿಯ ಆರೋಗ್ಯ ಮತ್ತು ತಾಂತ್ರಿಕ ಶಾಖೆಯಿಂದ ಅಥವಾ ವೆಬ್‌ಸೈಟ್ https://kppp.karnataka.gov.inನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾ.ಪ್ರ/1061/ಶಿರಡಿ ಸಾಯಿ/2023–24

ಶಾಲೆ ಜಾಗದಲ್ಲಿ ಸಿಮೆಂಟ್ ಟ್ರಕ್‌ಗಳು

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಯ 6ನೇ ಬ್ಲಾಕ್ ಸಿ.ಎ. ನಿವೇಶನದಲ್ಲಿ ವಾಣಿಜ್ಯ ಚಟುವಟಿಕೆ

• ಆರ್. ಮಂಜುನಾಥ್

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ ಶಾಲೆ-ಕಾಲೇಜು ಕಟ್ಟಡ ನಿರ್ಮಾಣ ಮಾಡಲು ಹಂಚಿಕೆಯಾಗಿರುವ ನಾಗರಿಕ ಸೌಲಭ್ಯ ನಿವೇಶನದಲ್ಲಿ ವಾಣಿಜ್ಯ ಚಟುವಟಿಕೆ ನಡೆಯುತ್ತಿದ್ದು, ಈ ಬಗ್ಗೆ ತನಿಖೆ ನಡೆಸಲು ಬಿಡಿಎ ಮುಂದಾಗಿದೆ.

6ನೇ ಬ್ಲಾಕ್‌ನಲ್ಲಿ ನಂ.5/ಎ ಸಿ.ಎ ನಿವೇಶನವನ್ನು 'ಪಾಲಿ ಎಜುಕೇಷನ್ ಸೊಸೈಟಿಗೆ' ಬಿಡಿಎ ಮಂಜೂರು ಮಾಡಿದೆ. 'ಪಾಲಿ ವಿದ್ಯಾಸಂಸ್ಥೆ ಸ್ವತ್ತು' ಎಂದು ಕಾಂಪೌಂಡ್ ಮೇಲೆ ದೊಡ್ಡದಾಗಿ ಬರೆಯಲಾಗಿದೆ. ಆದರೆ, ಈ ನಿವೇಶನದಲ್ಲಿ ಸಿಮೆಂಟ್ ದಾಸ್ತಾನು ಮಾಡುತ್ತಿದ್ದು, ಹತ್ತಾರು ದೊಡ್ಡ ಟ್ರಕ್‌ಗಳು ಇಲ್ಲಿ ನಿಲುಗಡೆ ಆಗುತ್ತಿವೆ. ಟ್ರಕ್‌ಗಳಿಂದ ನೂರಾರು ಚಿಕ್ಕ ಲಾರಿ, ಟೆಂಪೊಗಳಿಗೆ ಸಿಮೆಂಟ್ ವರ್ಗಾಯಿಸುವ ಚಟುವಟಿಕೆ ಕೆಲವು ತಿಂಗಳಿಂದ ಇಲ್ಲಿ ನಡೆಯುತ್ತಿದೆ.

'ಸಾಮಾಜಿಕ ಮತ್ತು ಶೈಕ್ಷಣಿಕ ಉದ್ದೇಶಕ್ಕಾಗಿ ನಾಗರಿಕ ಸೌಲಭ್ಯ (ಸಿ.ಎ) ನಿವೇಶನವನ್ನು ಹಂಚಿಕೆ ಮಾಡಿಸಿಕೊಂಡಿರುವ ಪಾಲಿ ಎಜುಕೇಷನ್ ಸೊಸೈಟಿ, ನಿವೇಶನವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ 'ಪಾಲಿ ವಿದ್ಯಾಸಂಸ್ಥೆ' ನಿವೇಶನದಲ್ಲಿ ಸಿಮೆಂಟ್ ಟ್ರಕ್‌ಗಳ ಕಾರ್ಯಾಚರಣೆ ನಡೆಯುತ್ತಿರುವುದು

ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಚಟುವಟಿಕೆ ಇಲ್ಲಿ ನಡೆಯುತ್ತಿದೆ' ಎಂದು ನುಗ್ಗಿಪಾಳ್ಯದ ನಿವಾಸಿಗಳು ದೂರು ನೀಡಿದ್ದಾರೆ.

ಬಿಡಿಎ ಆಯುಕ್ತರಿಗೆ ಪತ್ರ ಬರೆದಿರುವ ನಿವಾಸಿಗಳು, 'ವಿದ್ಯಾಸಂಸ್ಥೆಯ ಸಿ.ಎ ನಿವೇಶನದಲ್ಲಿ ನಿತ್ಯವೂ ನೂರಾರು ಬೃಹತ್ ಗಾತ್ರದ ಸಿಮೆಂಟ್ ಟ್ರಕ್‌ಗಳನ್ನು ನಿಂತಿರುತ್ತವೆ. ಸಿಮೆಂಟ್ ಮೂಟೆಗಳನ್ನು ಬದಲಿಸುತ್ತಾರೆ. ಇದರಿಂದ ಸಿಮೆಂಟ್ ದೂಳು ಸ್ಥಳೀಯ ನಿವಾಸಿಗಳ ಮನೆಗಳಿಗೆ ನುಗ್ಗುತ್ತಿದೆ. ವಯೋವೃದ್ಧರಿಗೆ ಉಸಿರಾಟ ಸೇರಿದಂತೆ ಹಲವು ರೀತಿಯ ತೊಂದರೆಗಳಾಗಿವೆ' ಎಂದು ಗ್ರಾಮಸ್ಥರಾದ ಅನಿಲ್‌ಕುಮಾರ್, ವೆಂಕಟೇಶ, ಆನಂದ, ಚೈತ್ರ, ಅಶ್ವತ್ಥ್ ದೂರಿದ್ದಾರೆ.

ಹಗಲು-ರಾತ್ರಿ ಕೂಗಾಟ: 'ಈ ನಿವೇಶನದಲ್ಲಿ ಹಗಲು-ರಾತ್ರಿ ಎನ್ನದೆ ಯಾವಾಗಲೂ ಲಾರಿಗಳು ಬರುತ್ತವೆ, ಹೋಗುತ್ತವೆ. ಸುತ್ತಲೂ ದೂಳು ಆವರಿಸಿಕೊಂಡಿರುತ್ತದೆ. ಅಲ್ಲದೆ, ನೂರಾರು ಕೂಲಿಗಾರರು ಇಲ್ಲಿ ವಾಸವಿದ್ದು, ರಾತ್ರಿಯಿಡೀ ಇವರು ಕೂಗಾಡುತ್ತಲೇ ಇರುತ್ತಾರೆ. ಪಾಲಿ ಎಜುಕೇಷನ್ ಸೊಸೈಟಿಯವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ನಿವೇಶನ ಹಂಚಿಕೆಯನ್ನು ರದ್ದು ಮಾಡಬೇಕು' ಎಂದು ಬಿಡಿಎಗೆ ಬರೆದಿರುವ ಪತ್ರದಲ್ಲಿ ಚಂದ್ರವ್ವ, ವೆಂಕಟೇಶ್, ರಾಮಕೃಷ್ಣಯ್ಯ, ಸಂಪಂಗಯ್ಯ, ಕಮಲಮ್ಮ ಆಗ್ರಹಿಸಿದ್ದಾರೆ.

1600 ಸಿ.ಎ ನಿವೇಶನಗಳ ತನಿಖೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ಎಲ್ಲ ಬಡಾವಣೆಗಳಲ್ಲಿ ಸುಮಾರು 1,600 ಸಿ.ಎ ನಿವೇಶನಗಳನ್ನು ಹಂಚಿದೆ. ಇಂತಹ ನಿವೇಶನಗಳನ್ನು ಯಾವ ಉದ್ದೇಶಕ್ಕೆ ಹಂಚಿಕೆ ಮಾಡಲಾಗಿದೆಯೋ ಅದಕ್ಕೇ ಬಳಕೆ ಮಾಡಿಕೊಳ್ಳಬೇಕು. ಆ ಉದ್ದೇಶದ ಜೊತೆಗೆ ವಾಣಿಜ್ಯ ಚಟುವಟಿಕೆ ನಡೆಸುವುದು ಅಂದರೆ, ಮಳಿಗೆ ನಿರ್ಮಿಸಿ ಅದರಿಂದ ಬಾಡಿಗೆ ಪಡೆಯುವುದು, ಶೆಡ್ ಇತ್ಯಾದಿಗಳಿಂದ ಬಾಡಿಗೆ ತೆಗೆದುಕೊಳ್ಳುವುದು ಅಕ್ರಮವಾಗಿದೆ. ಈ ಬಗ್ಗೆ ತನಿಖೆ ನಡೆಸಲು ಬಿಡಿಎ ನಿರ್ಧರಿಸಿದೆ.

'ಇತ್ತೀಚಿನ ದಿನಗಳಲ್ಲಿ ಸಿ.ಎ ನಿವೇಶನಗಳಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವುದು ಬಿಡಿಎ ಗಮನಕ್ಕೆ ಬಂದಿದೆ. ಹಂತ ಹಂತವಾಗಿ ಇವುಗಳನ್ನು ಪರಿಶೀಲನೆ ಮಾಡಲು ನಿರ್ಧರಿಸಲಾಗಿದೆ. ನಾಗರಿಕರು ನೀಡುವ ದೂರಿನನ್ವಯವೂ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಕ್ರಮಕ್ಕೆ ಸೂಚನೆ

'ಬಿಡಿಎ ಆಯುಕ್ತರು ದೂರಿನ ಬಗ್ಗೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ. ಪಾಲಿ ಎಜುಕೇಷನ್ ಸೊಸೈಟಿಯವರು ಕಟ್ಟಡ ನಕ್ಷೆಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅದರ ಸಂಪೂರ್ಣ ಕಡತ ಎಂಜಿನಿಯರಿಂಗ್ ವಿಭಾಗದಲ್ಲಿದ್ದು ಅವರು ಕ್ರಮ ಕೈಗೊಳ್ಳಬೇಕಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಅಜಯ್ ಹಿಲೊರಿ ವರ್ಗಾವಣೆ

ಬೆಂಗಳೂರು: ಐಪಿಎಸ್ ಅಧಿಕಾರಿ ಅಜಯ್ ಹಿಲೊರಿ ಅವರನ್ನು ಈಶಾನ್ಯ ವಲಯದ (ಕಲಬುರಗಿ) ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಹಿಲೊರಿ ಅವರಿಗೆ ಆಯ್ಕೆ ಶ್ರೇಣಿಗೆ ಬಡ್ತಿ ನೀಡಿ ಹೊಸ ಹೊಣೆ ನೀಡಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.



ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ ನಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ!

ಸೌಜನ್ಯಾ ಪ್ರಕರಣ: ಮರು ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು ಮರು ತನಿಖೆ ನಡಸಬೇಕು. ಇಲ್ಲದಿದ್ದರೆ ದೆಹಲಿ ಚಲೋ ಹಮ್ಮಿಕೊಳ್ಳಲಾಗುವುದು' ಎಂದು ತ್ರಿಶೂಲ್ ಸೇನೆ ರಾಜ್ಯ ಅಧ್ಯಕ್ಷ ಗಂಗಾಧರ್ ಎಚ್ಚರಿಸಿದರು.

ಸೌಜನ್ಯಾಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಉಜಿರೆಯ ಅವರ ಮನೆಯಿಂದ ವಿಧಾನಸೌಧದವರೆಗೆ ತ್ರಿಶೂಲ್ ಸೇನೆ ಬೃಹತ್ ಪಾದಯಾತ್ರೆ ಹಮ್ಮಿಕೊಂಡಿದ್ದು ನಾಗಸಂದ್ರದ ಮೆಟ್ರೊ ನಿಲ್ದಾಣ ಬಳಿ ಅವರು ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದರು.

'ಸೌಜನ್ಯಾ ಪ್ರಕರಣ ಜೊತೆಗೆ ಸಮಾಜದಲ್ಲಿ ನಡೆಯುತ್ತಿರುವ ಹೆಣ್ಣಿನ ಶೋಷಣೆ, ಜೂಜು ,ಇಸ್ಪೀಟ್, ಮೀಟರ್ ಬಡ್ಡಿ ಹಾಗೂ ಎಲ್ಲಾತರಹದ ಶೋಷಣೆ ನಿಲ್ಲಬೇಕು ಎನ್ನುವ ಉದ್ದೇಶದಿಂದ ಮುಖ್ಯಮಂತ್ರಿಗೆ ಪತ್ರದ ಮೂಲಕ ಮನವಿ ಸಲ್ಲಿಸಲಾಗುವುದು' ಎಂದರು.

'ಸೌಜನ್ಯಾ ವಿಚಾರ ಇಟ್ಟುಕೊಂಡು ತ್ರಿಶೂಲ್ ಸೇನೆ ಕ್ರಾಂತಿ ಮಾಡಲು ಶುರುಮಾಡಿದೆ. ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಜನರು ಜೊತೆಯಾಗಿ ನಿಂತರೆ ಸೌಜನ್ಯಾಗೆ ನ್ಯಾಯ ದೊರೆಯಲು ಸಾಧ್ಯ, ಸೇನೆ ವತಿಯಿಂದ ಸೌಜನ್ಯಾ ತಾಯಿ ಸೇರಿ ಕರ್ನಾಟಕದ ಜನರ ಪರವಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದೇವೆ' ಎಂದರು.

ಅಭಯ ಶೀಲಾ, ಅಭಯ ಕೃಷ್ಣಯ್ಯ, ರೇಖಾ ಶಿವಪಟೇಲ್ ಇದ್ದರು.

ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಮರು ತನಿಖೆ ನಡೆಸಬೇಕು ಎಂದು ಆಗ್ರಹಿಸಿ ತ್ರಿಶೂಲ್ ಸೇನೆಯಿಂದ ಜನಜಾಗೃತಿ ಯಾತ್ರೆ ನಡೆಯಿತು.

'ನ್ಯಾಯಾಂಗ ತನಿಖೆ ಆಗಲಿ'

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರನ್ನು ಶಿಕ್ಷಿಸಲು ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ದಲಿತ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿಯ ವೆಂಕಟೇಶ್, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು. ಈ ಬಗ್ಗೆ ಸೌಜನ್ಯಾ ತಾಯಿ ಕುಸುಮಾವತಿ ಅವರು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಬೇಕು. ಸೆ.5ರಂದು ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಅವರ ನೇತೃತ್ವದಲ್ಲಿ ವಿವಿಧ ಮಠಾಧೀಶರೊಂದಿಗೆ ನೂರಕ್ಕೂ ಹೆಚ್ಚು ಮುಖಂಡರು ವಿವಿಧ ಜಿಲ್ಲೆಗಳಿಂದ ಉಜಿರೆಗೆ ತೆರಳಲಿದ್ದೇವೆ' ಎಂದು ಹೇಳಿದರು.

'ಬಂಗಾರಪೇಟೆಯ ಬೋಡುಗುರ್ಕಿಯಲ್ಲಿ ಮರ್ಯಾದೆಗೇಡು ಹತ್ಯೆ ಪ್ರಕರಣ ನಡೆದ ಎರಡು ತಿಂಗಳಲ್ಲಿ ಮತ್ತೊಂದು ಪ್ರಕರಣ ಕೋಲಾರದಲ್ಲಿ ನಡೆದಿರುವುದು ಖಂಡನೀಯ. ತೊಟ್ಲಿ ಗ್ರಾಮದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಶಿಕ್ಷಿಸಿ, ಕಾನೂನು ಕ್ರಮ ಕೈಗೊಳ್ಳಬೇಕು. ಕಾವಾಡಿಗರ ಹಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆಯೂ ಸೂಕ್ತ ತನಿಖೆ ನಡೆಸಬೇಕು. ಸೆ.4ರಂದು ಒಕ್ಕೂಟದ ಮುಖಂಡರು ಅಲ್ಲಿಗೆ ಭೇಟಿ ನೀಡುತ್ತಾರೆ' ಎಂದು ತಿಳಿಸಿದರು.

ನಂಜೇಗೌಡ ಆಯ್ಕೆ ಅನೂರ್ಜಿತ ಕೋರಿ ಅರ್ಜಿ: ಸಮನ್ಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ ಕೋಲಾರ ಜಿಲ್ಲೆಯ ಮಾಲೂರು ಕ್ಷೇತ್ರದಿಂದ ಗೆದ್ದಿರುವ ಕಾಂಗ್ರೆಸ್ ಪಕ್ಷದ ಕೆ.ವೈ.ನಂಜೇಗೌಡ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಹ್ಯಾಂಡ್ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಅನುಮತಿ ನೀಡಿದೆ.

ಈ ಸಂಬಂಧ ಬಿಜೆಪಿಯ ಪರಾಜಿತ ಅಭ್ಯರ್ಥಿ ಕೆ.ಎಸ್. ಮಂಜುನಾಥ್ ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರ ಪರ ಹಿರಿಯ ವಕೀಲರು, 'ಅರ್ಜಿಯಲ್ಲಿ ಕೆ.ವೈ.ನಂಜೇಗೌಡ ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ ಒಟ್ಟು 13 ಮಂದಿ ಪ್ರತಿವಾದಿಗಳಿದ್ದಾರೆ. ಇವರ ಪೈಕಿ ಕೆಲ ಪ್ರತಿವಾದಿಗಳಿಗೆ ಹೈಕೋರ್ಟ್ ಈ ಹಿಂದೆ ಜಾರಿಗೊಳಿಸಿದ್ದ ಸಮನ್ಸ್ ತಲುಪಿಲ್ಲ. ಹಾಗಾಗಿ, ಹ್ಯಾಂಡ್ ಸಮನ್ಸ್ ಜಾರಿಗೊಳಿಸಲು ಅನುಮತಿ ನೀಡಬೇಕು' ಎಂದು ಕೋರಿದರು.

ಇದನ್ನು ಪುರಸ್ಕರಿಸಿದ ನ್ಯಾಯಪೀಠ, 'ಈತನಕ ಸಮನ್ಸ್ ಜಾರಿಯಾಗದ ಪ್ರತಿವಾದಿಗಳಿಗೆ ಹ್ಯಾಂಡ್ ಸಮನ್ಸ್ ಜಾರಿ ಮಾಡಲು ಅರ್ಜಿದಾರರ ಪರ ವಕೀಲರು ಒಂದು ವಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರತಿವಾದಿಗಳು ಸಮನ್ಸ್ ಜಾರಿಯಾದ ಒಂದು ವಾರದಲ್ಲಿ ಅರ್ಜಿಗೆ ಸಂಬಂಧಿಸಿದಂತೆ ಉತ್ತರ ನೀಡಬೇಕು. ಅಂತೆಯೇ, ಮೊದಲನೆ ಪ್ರತಿವಾದಿಯಾದ ಶಾಸಕ ಕೆ.ವೈ. ನಂಜೇಗೌಡ ಆಕ್ಷೇಪಣೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 11ಕ್ಕೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?

'ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲಾ 15 ಸ್ಪರ್ಧಿಗಳ ಏಜೆಂಟರುಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಮತಗಳ ಎಣಿಕೆ ಒಂದೇ ಕೊಠಡಿಯಲ್ಲಿ ನಡೆಯಬೇಕಿತ್ತು. ಆದರೆ, ಎರಡು ಪ್ರತ್ಯೇಕ ಕೊಠಡಿಗಳಲ್ಲಿ ನಡೆದಿದೆ. ಈ ಮೂಲಕ ಜನಪ್ರತಿನಿಧಿಗಳ ಕಾಯ್ದೆ ಮತ್ತು ಚುನಾವಣಾ ಆಯೋಗ ಪ್ರಕಟಿಸಿದ್ದ ನಿಯಮಗಳನ್ನು ಉಲ್ಲಂಘಿಸಲಾಗಿದೆ.

ಆದ್ದರಿಂದ, ನಂಜೇಗೌಡ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಚುನಾವಣಾ ಆಯೋಗದ ಕ್ರಮವನ್ನು ರದ್ದುಪಡಿಸಬೇಕು. ಮತಗಳ ಮರು ಎಣಿಕೆಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ನ್ಯಾಯಾಲಯದ ಆದೇಶದಂತೆ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದಿದ್ದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆಗೆ ಆದೇಶಿಸಬೇಕೆಂಬ ಒತ್ತಡ ಹೆಚ್ಚುತ್ತಿದೆ. ಆದರೆ, ಸರ್ಕಾರವು ನ್ಯಾಯಾಲಯದ ಆದೇಶದಂತೆಯೇ ನಿರ್ಧಾರ ಕೈಗೊಳ್ಳಬೇಕಾಗುತ್ತದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಸೌಜನ್ಯಾ ಪ್ರಕರಣದಲ್ಲಿ ಪರ– ವಿರೋಧ ಪ್ರತಿಭಟನೆಗಳು ನಡೆಯುತ್ತಿವೆ. ನಾವು ಕೂಡ ಅದನ್ನು ಗಮನಿಸುತ್ತಿದ್ದೇವೆ. ಕೆಲವರು ನ್ಯಾಯಾಲಯಕ್ಕೂ ಹೋಗಿದ್ದಾರೆ. ಅಂತಿಮವಾಗಿ ನ್ಯಾಯ ದೊರಕಬೇಕು ಎಂಬ ಕೂಗು ಹೆಚ್ಚುತ್ತಿದೆ. ನ್ಯಾಯಾಲಯ ಏನು ಆದೇಶ ನೀಡುತ್ತದೆ ನೋಡೋಣ. ನ್ಯಾಯಾಲಯದ ಆದೇಶದ ಹೊರತಾಗಿ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ' ಎಂದರು.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮದ ಪ್ರಕರಣದಲ್ಲಿ ಮರು ಪರೀಕ್ಷೆ ನಡೆಸಲು ಹಿಂದಿನ ಸರ್ಕಾರ ನಿರ್ಧರಿಸಿತ್ತು. ಕೆಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ಪಡೆದಿದ್ದಾರೆ. ಈ ಪ್ರಕರಣದಲ್ಲಿ ನ್ಯಾಯಾಲಯ ಯಾವ ರೀತಿ ಅಂತಿಮ ಆದೇಶ ನೀಡುತ್ತದೆ ಎಂಬುದನ್ನು ಸರ್ಕಾರ ಕಾಯುತ್ತಿದೆ. ಆ ಪ್ರಕಾರವಾಗಿ ಕ್ರಮ ಜರುಗಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಚರ್ಚೆ ನಡೆಯುತ್ತಿದೆ': ತುಮಕೂರು ಜಿಲ್ಲೆಯಲ್ಲಿ ಬಿಜೆಪಿ, ಜೆಡಿಎಸ್ ಮುಖಂಡರು ಕಾಂಗ್ರೆಸ್ ಸೇರಲು ಸಜ್ಜಾಗಿದ್ದಾರೆ ಎಂಬ ಸುದ್ದಿ ಕುರಿತು ಪ್ರತಿಕ್ರಿಯಿಸಿದ ಅವರು, 'ಚರ್ಚೆ ನಡೆಯುತ್ತಿದೆ. ನಮ್ಮ ಸ್ಥಳೀಯ ಮುಖಂಡರ ಜತೆ ಚರ್ಚಿಸಿ ಕೆಪಿಸಿಸಿ ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ. ಯಾರೆಲ್ಲ ಪಕ್ಷ ಸೇರುತ್ತಾರೆ ನೋಡೋಣ' ಎಂದರು.

ಮೇವು ಹಗರಣ: 89 ಮಂದಿ ದೋಷಿ

ರಾಂಚಿ (ಪಿಟಿಐ): ಮೇವು ಹಗರಣ ಪ್ರಕರಣದಲ್ಲಿ ಇಲ್ಲಿನ ಸಿಬಿಐ ವಿಶೇಷ ನ್ಯಾಯಾಲಯವು 89 ಮಂದಿಯನ್ನು ದೋಷಿಗಳು ಎಂದು ಘೋಷಿಸಿದ್ದು, 53 ಜನರಿಗೆ ವಿವಿಧ ಪ್ರಕರಣಗಳಲ್ಲಿ ಗರಿಷ್ಠ 3 ವರ್ಷದವರೆಗೂ ಸಜೆ ವಿಧಿಸಿದೆ. ಉಳಿದವರಿಗೆ ಶಿಕ್ಷೆ ನಿರ್ಧರಿಸುವ ಬಗ್ಗೆ ಸೆ. 1ರಂದು ವಿಚಾರಣೆ ನಡೆಯಲಿದೆ.

ಸೋಮವಾರ ಪ್ರಕರಣದ ತೀರ್ಪು ಪ್ರಕಟಿಸಿದ ಸಿಬಿಐ ವಿಶೇಷ ನ್ಯಾಯಾಧೀಶರಾದ ವಿಶಾಲ್ ಶ್ರೀವಾತ್ಸವ್ ಅವರು, ಇತರೆ 35 ಜನರನ್ನು ಆರೋಪದಿಂದ ಖುಲಾಸೆಗೊಳಿಸಿದರು. ಅವಿಭಜಿತ ಬಿಹಾರದ ಡೊರಾಂಡಾ ಖಜಾನೆಯಿಂದ ಒಟ್ಟು ₹ 36.59 ಕೋಟಿ ಹಿಂಪಡೆದು ವಂಚನೆ ನಡೆಸಿದ್ದ ಪ್ರಕರಣದಲ್ಲಿ ಒಟ್ಟು 124 ಜನರ ವಿರುದ್ಧ ಪ್ರಕರಣ ದಾಖಲಾಗಿತ್ತು. 1990ರಿಂದ 1995ರ ನಡುವೆ ಈ ಹಣವನ್ನು ಖಜಾನೆಯಿಂದ ಪಡೆಯಲಾಗಿತ್ತು.

ಪಾರಂಪರಿಕ ಕಟ್ಟಡ: ಹೈಕೋರ್ಟ್‌ನಲ್ಲಿ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರಾತನ ಕಟ್ಟಡಗಳೆನಿಸಿದ ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್ ಡೌನ್ ಕಟ್ಟಡಗಳ ನೆಲಸಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ಪುರಾತನ ಕಟ್ಟಡಗಳನ್ನು ಉಳಿಸುವಂತೆ ನಿರ್ದೇಶಿಸಬೇಕು' ಎಂದು ಕೋರಿ ಮೈಸೂರಿನ ಕುವೆಂಪು ನಗರದ ಡಿ. ಶ್ರೀಜಯ ದೇವರಾಜ ಅರಸ್, ಚಾಮರಾಜ ಮೊಹಲ್ಲಾದ ಜಿ.ಸತ್ಯನಾರಾಯಣ, (ಗೌರಿ ಸತ್ಯ), ವಿಜಯನಗರ ಮೂರನೇ ಹಂತದ ಎಂ.ನಿರಂಜನ ನಿಕ್ಕಂ ಮತ್ತು ಬೆಂಗಳೂರಿನ ಆರ್‌ಎಂ.ವಿ ಬಡಾವಣೆಯ ಆರ್.ರಾಜಚಂದ್ರ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಮೈಸೂರು ಜಿಲ್ಲಾಧಿಕಾರಿ ರಚಿಸಿರುವ ಟಾಸ್ಕ್ ಫೋರ್ಸ್ ಮತ್ತು ವಿಶೇಷ ಪುರಾತನ ಕಟ್ಟಡಗಳ ಪರಿಶೀಲನಾ ಸಮಿತಿಯು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ತೆರವು ಮಾಡುವಂತೆ ಶಿಫಾರಸು ಮಾಡಿದೆ. ಇದರನ್ವಯ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್ ಡೌನ್ ಕಟ್ಟಡಗಳನ್ನು ನವೀಕರಣ ಮಾಡುವ ಬದಲಿಗೆ ತೆರವುಗೊಳಿಸುವುದೇ ಉತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ರೀತಿಯ ವಿಚಾರಗಳಲ್ಲಿ ನ್ಯಾಯಾಲಯಗಳು ಪರಿಣತಿ ಹೊಂದಿರುವುದಿಲ್ಲ. ಹೀಗಾಗಿ, ತಜ್ಞರು ನೀಡಿರುವ ಶಿಫಾರಸು ಬದಿಗಿರಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಅರ್ಜಿ ವಜಾಕ್ಕೆ ಕಾರಣ ನೀಡಿದೆ.

ಹಿಜಾಬ್–ಗೋಡೆ ಬರಹ: ಪ್ರಕರಣ ರದ್ದು

ಬೆಂಗಳೂರು: ವಿಜಯನಗರ ಜಿಲ್ಲೆ ಹೊಸಪೇಟೆಯ ಸಿಎಂಸಿ ಸರ್ಕಾರಿ ಪ್ರೌಢಶಾಲೆ ಆವರಣದ ಗೋಡೆಯ ಮೇಲೆ 'ಹಿಜಾಬ್ ನಮ್ಮ ಘನತೆ' ಎಂದು ಬರೆದಿದ್ದ ಆರೋಪದಡಿ ಇಬ್ಬರು ಮುಸ್ಲಿಂ ಯುವಕರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಗೊಳಿಸುವಂತೆ ಕೋರಿ ವಿಜಯನಗರದ ಮುಝಮ್ಮಿಲ್ ಮತ್ತು ಮೊಹಮ್ಮದ್ ಜಾಮೌಲ್ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಕಾನೂನಿನ ಅನ್ವಯ ವಿಜಯನಗರ ಜಿಲ್ಲೆಯು ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಿಲ್ಲ. ಆದ್ದರಿಂದ, ಕರ್ನಾಟಕ ಸಾರ್ವಜನಿಕ ಸ್ಥಳಗಳ ವಿರೂಪ ನಿಷೇಧ ಕಾಯ್ದೆ–1982ರ ಕಲಂ 3 ಅನ್ವಯ ಆಗುವುದಿಲ್ಲ' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಮಾನ್ಯ ಮಾಡಿದೆ.

'ಹೊಸಪೇಟೆಗೆ ಕಾಯ್ದೆಯ ಕಲಂ 3 ಅನ್ನು ಅನ್ವಯಿಸಬೇಕಾದರೆ ಕಲಂ 1 ಅನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಕಲಂ 1ರ ಪ್ರಕಾರ ನಿರ್ದಿಷ್ಟ ಸ್ಥಳ ಅಥವಾ ಸ್ಥಳೀಯ ಪ್ರದೇಶವನ್ನು ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಬೇಕು. ಈ ಸಂಬಂಧ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸುವುದು ಕಡ್ಡಾಯ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಸರ್ಕಾರದ ವಕೀಲ ವಿ. ಎಸ್. ಕಳಸೂರಮಠ ವಾದ ಮಂಡಿಸಿದ್ದರು.

ಪ್ರಕರಣವೇನು?: 'ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಮುಸ್ಲಿಂ ವಿದ್ಯಾರ್ಥಿನಿಯರು ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾ ಮಾಡಿತ್ತು. ಈ ತೀರ್ಪು ಹೊರಬಿದ್ದ ಮರುದಿನ ಅಂದರೆ 2022ರ ಮಾರ್ಚ್ 16ರಂದು ಶಾಲೆಯ ಗೋಡೆಯ ಮೇಲೆ ಕಪ್ಪು ಬಣ್ಣದಲ್ಲಿ 'ಹಿಜಾಬ್ ನಮ್ಮ ಘನತೆ' ಎಂದು ಬರೆದಿರುವುದು ಕಂಡು ಬಂದಿತ್ತು' ಎಂದು ಶಾಲೆಯ ಮುಖ್ಯ ಶಿಕ್ಷಕ ದೂರು ನೀಡಿದ್ದರು. ದೂರನ್ನು ಆಧರಿಸಿ ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಮದರಸಾಗಳಲ್ಲಿ ಕನ್ನಡ, ಇಂಗ್ಲಿಷ್ ಶಿಕ್ಷಣ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದರಸಾಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಸೇರಿದಂತೆ ವಿಜ್ಞಾನ, ಗಣಿತ ವಿಷಯಗಳನ್ನು ಕಲಿಸುವಂತೆ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಸೂಚಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಸಭಾಂಗಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, 'ಮದರಸಾಗಳಲ್ಲಿ ಕನ್ನಡ ಕಡ್ಡಾಯವಾಗಿ ಕಲಿಸಲೇಬೇಕು. ಇಂಗ್ಲಿಷ್ ಸೇರಿ ಇತರೆ ಭಾಷೆ ಕಲಿಸಲು ಕ್ರಮ ಕೈಗೊಳ್ಳಿ' ಎಂದು ಅವರು ನಿರ್ದೇಶಿಸಿದರು.

'ರಾಜ್ಯದ ವಕ್ಫ್ ಮಂಡಳಿಯಲ್ಲಿ 1,265 ನೋಂದಣಿಯಾದ ಮದರಸಗಳಿವೆ. 100 ಮದರಸಾಗಳಲ್ಲಿ ಈ ವರ್ಷದಿಂದ ಕನ್ನಡ, ಇಂಗ್ಲಿಷ್, ವಿಜ್ಞಾನ, ಗಣಿತ ಕಲಿಕೆ ಆರಂಭಿಸಬೇಕು. ಮುಂದಿನ ವರ್ಷದಿಂದ ಎಲ್ಲ ಮದರಸಾಗಳಲ್ಲಿ ಕಲಿಸಲು ಪ್ರಸ್ತಾವನೆ ಸಿದ್ದಪಡಿಸಿ' ಎಂದೂ ಸೂಚಿಸಿದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು ಮತ್ತು ಮೌಲಾನಾ ಅಜಾದ್ ಮಾದರಿ ಶಾಲೆಗಳ 9, 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಸುಧಾರಣೆಗೆ ಸಿದ್ಧಪಡಿಸಿರುವ ವಿಜ್ಞಾನ, ಗಣಿತ ಸೇರಿದಂತೆ ವಿವಿಧ ವಿಷಯಗಳ ಕೈಪಿಡಿ ಬಿಡುಗಡೆ ಮಾಡಿದರು.

ಹಾಲು ಒಕ್ಕೂಟಗಳ ಹೊರಗುತ್ತಿಗೆ ನೇಮಕದಲ್ಲೂ ಮೀಸಲಾತಿ ಕಲ್ಪಿಸಲು ತಾಕೀತು

ಏಳು ತಾಸು ಸಭೆ ನಡೆಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಲ್ಲಿ ಹೊರಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳುವಾಗ ಮೀಸಲಾತಿ ಅನುಸರಿಸಬೇಕು. ಅಗತ್ಯಕ್ಕಿಂತ ಹೆಚ್ಚು ಮಂದಿಯನ್ನು ನೇಮಿಸಿಕೊಳ್ಳಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು ಮಾಡಿದರು.

ಜಿಲ್ಲಾ ಪಂಚಾಯಿತಿಯಲ್ಲಿ ಸೋಮವಾರ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೆಳಿಗ್ಗೆ 11.45ಕ್ಕೆ ಆರಂಭವಾದ ಸಭೆ ಮುಗಿದಾಗ ರಾತ್ರಿ 7.45 ಆಗಿತ್ತು. ಮಧ್ಯೆ ಒಂದು ತಾಸು ಬಿಡುವು ತೆಗೆದುಕೊಂಡಿದ್ದರು.

'ಒಕ್ಕೂಟಗಳಲ್ಲಿ ಅನಗತ್ಯವಾಗಿ ಬಹಳಷ್ಟು ಮಂದಿಯನ್ನು ನೇಮಿಸಿಕೊಂಡಿರುವುದರಿಂದ ನಿಮಗೇ ನಷ್ಟವಾಗುತ್ತಿದೆ. ಒಕ್ಕೂಟದ ನಿರ್ದೇಶಕರೋ, ಶಾಸಕರೋ ಹೇಳಿದರೆಂದು ತೆಗೆದುಕೊಳ್ಳುತ್ತೀರಿ, ತೊಂದರೆ ಅನುಭವಿಸುತ್ತಿದ್ದೀರಿ. ಮಂಜೂರಾತಿಯನ್ನೇ ಜಾಸ್ತಿ ಮಾಡಿಕೊಳ್ಳುತ್ತೀರಿ. ಹೀಗೇಕೆ ಮಾಡುತ್ತೀರಿ?' ಎಂದು ತರಾಟೆಗೆ ತೆಗೆದುಕೊಂಡರು.

'ಅಗತ್ಯವಾದಷ್ಟು ಮಂದಿಯನ್ನು ಮಾತ್ರವೇ ಉಳಿಸಿಕೊಂಡು ಉಳಿದವರನ್ನು ತೆಗೆದು ಹಾಕುವಂತೆ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ' ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

'ಒಕ್ಕೂಟಗಳು ಸರ್ಕಾರದ ಗಮನಕ್ಕೆ ತಾರದೇ ಹಾಲಿನ ದರ ಹೆಚ್ಚಿಸುವುದು ಅಥವಾ ಇಳಿಸುವುದನ್ನು ಮಾಡಲೇಬಾರದು' ಎಂದು ಸಿದ್ದರಾಮಯ್ಯ ಹಾಗೂ ಸಚಿವ ವೆಂಕಟೇಶ್ ತಾಕೀತು ಮಾಡಿದರು.

'ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ಕೊಡುತ್ತಿಲ್ಲ. ಒಂದೇ ಜಾತಿಯವರನ್ನು ನೇಮಿಸಿಕೊಳ್ಳುತ್ತೀರಿ. ಯಾವುದೇ ನೇಮಕಾತಿಗೆ ಮುನ್ನ ಸರ್ಕಾರದ ಅನುಮತಿ ಪಡೆದುಕೊಳ್ಳಬೇಕು. ಏಜೆನ್ಸಿಯವರು ಸಾವಿರ ರೂಪಾಯಿಯಲ್ಲಿ ₹ 200 ಕಡಿತ ಮಾಡಿಕೊಳ್ಳುತ್ತಾರೆ. ಇದೆಲ್ಲವನ್ನೂ ತಡೆಯಬೇಕು' ಎಂದು ಸಿ.ಎಂ. ಸೂಚಿಸಿದರು.

'ಹೊರಗುತ್ತಿಗೆ ಎನ್ನುವುದೇ ದೊಡ್ಡ ದಂಧೆಯಾಗಿದೆ. ನಿವೃತ್ತ ಕೆಎಎಸ್, ಐಎಎಸ್ ಅಧಿಕಾರಿಗಳೋ ಅಥವಾ ಅವರ ಕಡೆಯವರೋ ಏಜೆನ್ಸಿ ಪಡೆದುಕೊಂಡಿರುತ್ತಾರೆ' ಎಂದು ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ದೂರಿದರು.

ಅದಕ್ಕೆ ಮುಖ್ಯಮಂತ್ರಿ ಸಹಮತ ವ್ಯಕ್ತಪಡಿಸಿದರು.

'ಪ್ರತಿ ಲೀಟರ್ ಹಾಲಿಗೆ ಸರ್ಕಾರದಿಂದ ಕೊಡುವ ಹಣವನ್ನು ರೈತರಿಗೆ ಕಡ್ಡಾಯವಾಗಿ ತಲುಪಿಸಬೇಕು. ಐದು ಪೈಸೆಯನ್ನೂ ಒಕ್ಕೂಟಕ್ಕೆ ಇಟ್ಟುಕೊಳ್ಳಬಾರದು. ರೈತರಿಂದ ಖರೀದಿಸುವ ಲೀಟರ್ ಹಾಲಿಗೆ ₹ 3 ಹೆಚ್ಚಿಸಲಾಗಿದೆ. ಅದಷ್ಟನ್ನೂ ರೈತರಿಗೇ ತಲುಪಿಸಬೇಕು. ಒಕ್ಕೂಟಗಳನ್ನು ಮಾಡಿರುವುದು ಲಾಭ ಮಾಡುವುದಕ್ಕಲ್ಲ. ಹಾಗೆಂದು ನಷ್ಟವನ್ನೂ ಮಾಡಿಕೊಳ್ಳದಂತೆ ನಿರ್ವಹಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

ಮೈಸೂರಿನಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಅವರು ಅಧಿಕಾರಿಗಳು ಹಳೆಯ ಮಾದರಿಯಲ್ಲೇ ಮಾಹಿತಿ ನೀಡುತ್ತಿರುವ ಬಗ್ಗೆ ಚರ್ಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮತ್ತು ಶಾಸಕ ತನ್ವೀರ್ ಸೇಠ್ ಇದ್ದಾರೆ —ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಬಿಜೆಪಿ ದಿವಾಳಿ: ಟೀಕೆ

ಮೈಸೂರು: 'ಕರ್ನಾಟಕದಲ್ಲಿ ಬಿಜೆಪಿ ಎಲ್ಲಿದೆ? ಆ ಪಕ್ಷ ದಿವಾಳಿಯಾಗಿ ಹೋಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

'ಸರ್ಕಾರ ರಚನೆಯಾಗಿ ನೂರು ದಿನಗಳಾಗಿವೆ. ಆದರೆ ಇನ್ನೂ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಿಲ್ಲ. ರಾಜ್ಯದ ಇತಿಹಾಸದಲ್ಲೇ ವಿರೋಧ ಪಕ್ಷಕ್ಕೆ ಇಂತಹ ಪರಿಸ್ಥಿತಿ ಬಂದಿರಲಿಲ್ಲ' ಎಂದು ವ್ಯಂಗ್ಯವಾಡಿದರು.

'ಪ್ರತಿಯೊಂದು ಕುಟುಂಬಕ್ಕೂ ಪರಿಹಾರ ನೀಡಿ'

'ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬಕ್ಕೂ ಪರಿಹಾರ ಒದಗಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

'ಈ ವಿಷಯದಲ್ಲಿ ಅಧಿಕಾರಿಗಳು ಉದಾರವಾಗಿರಬೇಕು. ₹ 5 ಲಕ್ಷವನ್ನು ತಕ್ಷಣ ಕೊಡಬೇಕು. ಯಾರಿಗೂ ತಪ್ಪಿಸಬಾರದು' ಎಂದು ತಾಕೀತು ಮಾಡಿದರು.

ಸುದ್ದಿ 2 ನಿಮಿಷ

'ನಮ್ಮ ದರ ಕೊಟ್ಟರೆ ಪೂರೈಕೆ'

ಬಳ್ಳಾರಿ: 'ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ (ಕೆಎಂಎಫ್) ನಷ್ಟ ಮಾಡಿಕೊಂಡು ತಿರುಪತಿ ಲಡ್ಡುಗೆ ನಂದಿನಿ ತುಪ್ಪ ಪೂರೈಸುವ ಪ್ರಶ್ನೆಯೇ ಇಲ್ಲ' ಎಂದು ಒಕ್ಕೂಟದ ಅಧ್ಯಕ್ಷ ಭೀಮ ನಾಯ್ಕ ಸ್ಪಷ್ಟಪಡಿಸಿದರು.

'ಇದು ರೈತರ ಒಕ್ಕೂಟ. ನಷ್ಟ ಮಾಡಿಕೊಂಡು ತಿರುಪತಿಗೆ ತುಪ್ಪ ಕಳಿಸಲು ಸಾಧ್ಯವೇ? ಮಾರುಕಟ್ಟೆಯಲ್ಲಿ ನಂದಿನಿ ತುಪ್ಪಕ್ಕೆ ವಿಪರೀತ ಬೇಡಿಕೆ ಇದೆ. ಗ್ರಾಹಕರೇ ಕೆ.ಜಿಗೆ ₹ 610 ಕೊಟ್ಟು ಖರೀದಿಸುತ್ತಾರೆ' ಎಂದು ಅವರು ಹೇಳಿದರು.

ಇಲ್ಲಿನ ಬಸವ ಭವನದಲ್ಲಿ ಸೋಮವಾರ ನಡೆದ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಒಕ್ಕೂಟದ ವಾರ್ಷಿಕ ಮಹಾಸಭೆ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಂದಿನಿ ತುಪ್ಪದ ಹೆಸರಿನಲ್ಲಿ ರಾಜಕೀಯ ನಡೆದಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಯಾವ ಸರ್ಕಾರವಿತ್ತು? ತಿರುಪತಿಗೆ ಎಷ್ಟು ಲೀಟರ್ ತುಪ್ಪ ಪೂರೈಸಲಾಯಿತು? ಬಿಜೆಪಿ ಸರ್ಕಾರದ 4 ವರ್ಷದ ಅವಧಿಯಲ್ಲಿ ಒಂದೇ ಒಂದು ಲೀಟರ್ ತುಪ್ಪ ಕಳಿಸಲಿಲ್ಲ' ಎಂದು ಲೇವಡಿ ಮಾಡಿದರು.

48 ಸೆಂ.ಮೀ ಉದ್ದದ ಬಂಗುಡೆ

ಕಾರವಾರ: ಮುರುಡೇಶ್ವರದ ನೇತ್ರಾಣಿ ದ್ವೀಪದ ಬಳಿ 48 ಸೆಂ.ಮೀ ಉದ್ದ ಮತ್ತು 1.2 ಕೆ.ಜಿ ತೂಕದ ಬಂಗುಡೆ ಮೀನು ಭಾನುವಾರ ನವೀನ್ ಹರಿಕಂತ್ರ ಎಂಬವರು ಮೀನುಗಾರಿಕೆ ಮಾಡುವಾಗ ಸಿಕ್ಕಿದೆ.

'ಬಂಗುಡೆ ತಳಿಯಲ್ಲಿ ಈವರೆಗೆ ಇಷ್ಟು ದೊಡ್ಡ ಗಾತ್ರ ಮತ್ತು ತೂಕದ ಮೀನು ಸಿಕ್ಕಿರಲಿಲ್ಲ. ಸಾಮಾನ್ಯವಾಗಿ ಬಂಗುಡೆ ತಳಿಯ ಹೆಣ್ಣು ಮೀನು ಗರಿಷ್ಠ 38 ಸೆಂ.ಮೀ ಮತ್ತು ಗಂಡು ಮೀನು 36 ಸೆಂ.ಮೀ ಉದ್ದವಿರುತ್ತವೆ. ಈ ಹಿಂದೆ 42 ಸೆಂ.ಮೀ ಉದ್ದದ ಹೆಣ್ಣು ಮೀನು ಪತ್ತೆಯಾಗಿತ್ತು' ಎಂದು ಇಲ್ಲಿನ ಕಡಲಜೀವಶಾಸ್ತ್ರ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಶಿವಕುಮಾರ ಹರಗಿ ತಿಳಿಸಿದ್ದಾರೆ.

'ಇಲ್ಲಿನ ಕೇಂದ್ರೀಯ ಸಾಗರ ಮತ್ಸ್ಯ ಸಂಶೋಧನಾ ಸಂಸ್ಥೆಯ (ಸಿಎಂಎಫ್ಆರ್ಐ) ವಿಜ್ಞಾನಿಗಳು ಮೀನಿನ ಅಧ್ಯಯನ ನಡೆಸಿದ್ದಾರೆ. ಮೀನು ಅತಿದೊಡ್ಡ ಗಾತ್ರದ್ದು ಎಂಬುದು ಸಾಬೀತಾದರೆ ಕೊಚ್ಚಿನ್‌ನಲ್ಲಿರುವ ರಾಷ್ಟ್ರೀಯ ಮೀನು ಸಂಗ್ರಹಾಲಯದಲ್ಲಿ ಇರಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಬಸ್–ಕಾರು ಡಿಕ್ಕಿ: ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ತಾಲ್ಲೂಕಿನ ಸಾತನೂರು ಸಮೀಪದ ಕೆಮ್ಮಾಳೆ ಗೇಟ್ ಬಳಿ ಸೋಮವಾರ ಸಂಜೆ ಕೆಎಸ್ಆರ್‌ಟಿಸಿ ಬಸ್ ಮತ್ತು ಕಾರಿನ ಮಧ್ಯೆ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ ಆರು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರನ್ನು ಬೆಂಗಳೂರಿನ ನಾಗೇಶ್, ಪುಟ್ಟರಾಜು, ಕಾರು ಮಾಲೀಕ ಜ್ಯೋತಿರ್ಲಿಂಗಪ್ಪ, ಗೋವಿಂದ, ಕುಮಾರ್ ಎಂದು ಗುರುತಿಸಲಾಗಿದ್ದು, ಮತ್ತೊಬ್ಬರ ಗುರುತು ಪತ್ತೆಯಾಗಿಲ್ಲ. ಎಲ್ಲರೂ ಮಾರತ್ತಹಳ್ಳಿ ಮತ್ತು ಚಂದಾಪುರದ ನಿವಾಸಿಗಳಾಗಿದ್ದಾರೆ.

ಈ ಪೈಕಿ ಒಬ್ಬರು ವಿಧಾನಸೌಧದ ಶಾಸಕರ ಭವನದಲ್ಲಿ ಕ್ಯಾಂಟೀನ್ ನಡೆಸುತ್ತಿದ್ದರು. ಉಳಿದವರು ವಿಧಾನಸೌಧದಲ್ಲೇ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಶವಗಳನ್ನು ಬೆಂಗಳೂರು ಹೊರವಲಯದಲ್ಲಿರುವ ದಯಾನಂದ ಸಾಗರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಘಟನೆಯಲ್ಲಿ ಕನಕಪುರ ಡಿಪೊದ ಬಸ್ ಚಾಲಕ ಬಿ.ಟಿ. ನಾಗರಾಜ್ ಗಂಭೀರವಾಗಿ ಗಾಯಗೊಂಡಿದ್ದು, ಪ್ರಜ್ಞೆ ಕಳೆದುಕೊಂಡಿದ್ದಾರೆ. ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಸ್ಸಿನಲ್ಲಿದ್ದ ವಿದ್ಯಾರ್ಥಿಗಳು ಸೇರಿದಂತೆ 20 ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮೂವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ, ಇಬ್ಬರನ್ನು ನಿಮ್ಹಾನ್ಸ್‌ಗೆ ಹಾಗೂ ಒಬ್ಬರನ್ನು ಮಿಂಟೊ ಆಸ್ಪತ್ರೆಗೆ ಕಳಿಸಲಾಗಿದೆ. ಇತರ ಗಾಯಾಳುಗಳಿಗೆ ಸಾತನೂರು ಮತ್ತು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಾತನೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಪಘಾತ ಸಂಭವಿಸಿದ್ದು ಹೇಗೆ?: ಕಾರಿನಲ್ಲಿದ್ದವರು ಮಹದೇಶ್ವರ ಬೆಟ್ಟಕ್ಕೆ ಹೋಗಿ ದರ್ಶನ ಪಡೆದು ಹಲಗೂರು ಮಾರ್ಗವಾಗಿ ಸಂಜೆ 5.10ರ ಸುಮಾರಿಗೆ ಕನಕಪುರ ಕಡೆಯಿಂದ ವಾಪಸ್ಸಾಗುತ್ತಿದ್ದರು. ಬಸ್ ಕನಕಪುರದಿಂದ ಮಳವಳ್ಳಿ ಕಡೆಗೆ ಹೊರಟಿತ್ತು.

ಮುಂದೆ ಹೊರಟಿದ್ದ ಎರಡು ವಾಹನಗಳನ್ನು ಹಿಂದಿಕ್ಕುವ ಭರದಲ್ಲಿ ಚಾಲಕ, ಬಸ್ ಅನ್ನು ರಸ್ತೆಯ ಬಲ ಭಾಗಕ್ಕೆ ತೆಗೆದುಕೊಂಡಾಗ ಎದುರಿನಿಂದ ಬಂದ ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರಿನಲ್ಲಿದ್ದ ಎಲ್ಲರೂ ಸ್ಥಳದಲ್ಲೇ ಕೊನೆಯುಸಿರೆಳೆದರು.

ಸಂಪೂರ್ಣ ನಜ್ಜುಗುಜ್ಜಾಗಿದ್ದ ಕಾರಿನೊಳಗೆ ಸಿಲುಕಿದ್ದ ರಕ್ತಸಿಕ್ತ ಮೃತದೇಹಗಳನ್ನು ಸ್ಥಳೀಯರ ನೆರವಿನಿಂದ ಹೊರತೆಗೆಯಲು ಯತ್ನಿಸಿದರೂ ಆಗಲಿಲ್ಲ. ಬಳಿಕ, ಯಂತ್ರಗಳನ್ನು ತಂದು ಕಾರಿನ ಮೇಲ್ಭಾಗ ತೆಗೆದು ಶವಗಳನ್ನು ಹೊರಗೆ ತೆಗೆಯಲಾಯಿತು ಎಂದು ಪೊಲೀಸರು ಹೇಳಿದರು.

ಕನಕಪುರ ತಾಲ್ಲೂಕಿನ ಸಾತನೂರು ಬಳಿಯ ಕೆಮ್ಮಾಳೆ ಗೇಟ್ ಬಳಿ ಸೋಮವಾರ ಸಂಭವಿಸಿದ ಅಪಘಾತದಲ್ಲಿ ನಜ್ಜುಗುಜ್ಜಾಗಿದ್ದ ಕಾರನ್ನು ಜೆಸಿಬಿಯಿಂದ ತೆರವುಗೊಳಿಸಲಾಯಿತು

ಮಹಾರಾಷ್ಟ್ರದ ನಾಲ್ವರ ದುರ್ಮರಣ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ಚಂಡಕಾಪುರ ಹತ್ತಿರದ ರಾಜ್ಯದ ಸೀಮೆಯಲ್ಲಿ ರಾಷ್ಟ್ರೀಯ ಹೆದ್ದಾರಿ-65ರಲ್ಲಿ ಸೋಮವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಹಾರಾಷ್ಟ್ರದ ಉಮರ್ಗಾ ತಾಲ್ಲೂಕಿನ ನಾಲ್ವರು ಮೃತಪಟ್ಟಿದ್ದಾರೆ.

ಚಲಿಸುತ್ತಿದ್ದ ಆಟೊಗೆ ಹಿಂದಿನಿಂದ ವೇಗವಾಗಿ ಬಂದು ಲಾರಿ ಡಿಕ್ಕಿ ಹೊಡೆದಿದ್ದರಿಂದ ಅಪಘಾತ ಸಂಭವಿಸಿದೆ. ಮೃತರಲ್ಲಿ ಮೂವರು ಒಂದೇ ಕುಟುಂಬದವರಿದ್ದಾರೆ. ಆಟೊ ಚಾಲಕ ಸುನೀಲ್ ಜಗದಾಳೆ (40), ಚಾಲಕನ ಪತ್ನಿ ಪ್ರಮೀಳಾ (35), ಚಾಲಕನ ತಾಯಿ ಅನಸೂಯಾ ಮಹಾದೇವ (70) ಹಾಗೂ ಪೂಜಾ ವಿಜಯ ಜಾಧವ (35) ಮೃತರು. ಗೀತಾ ಎಂಬುವವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಮಹಾರಾಷ್ಟ್ರದ ಲಾತೂರ್ ಆಸ್ಪತ್ರೆಗೆ ಸಾಗಿಸಲಾಗಿದೆ. ಅಸ್ಮಿತಾ, ಲಕ್ಷ್ಮಿ ಇವರಿಗೂ ಗಾಯಗಳಾಗಿವೆ. ಆಟೊದಲ್ಲಿ ಒಂದೇ ಕುಟುಂಬದ 8 ಜನರು ಇದ್ದರು. ಉಮರ್ಗಾ ತಾಲ್ಲೂಕಿನ ಮುರೂಮ್ ಸಮೀಪದ ಸುಂದರವಾಡಿ ಭಾಗದವರು ಎಂದು ಗೊತ್ತಾಗಿದೆ.

ಶ್ರಾವಣ ಸೋಮವಾರದ ಕಾರಣ ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪುರದ ಅಮೃತಕುಂಡ ರಾಮಲಿಂಗೇಶ್ವರ ದೇವಸ್ಥಾನಕ್ಕೆ ದರ್ಶನಕ್ಕೆ ಬಂದಿದ್ದರು. ಹಿಂದಿರುಗಿ ಹೋಗುವಾಗ ಹೈದರಾಬಾದ್ ಕಡೆಯಿಂದ ವೇಗವಾಗಿ ಬಂದ ಲಾರಿ ಹಿಂದಿನಿಂದ ಡಿಕ್ಕಿ ಹೊಡೆದು ಕೆಳಗೆ ಬಿದ್ದವರ ಮೇಲಿನಿಂದ ಹೋಗಿದೆ. ಹೀಗಾಗಿ ಕೆಲವರ ಕೈ ಕಾಲು ತುಂಡುತುಂಡಾಗಿ ರಸ್ತೆ ಮೇಲೆಬಿದ್ದಿದ್ದವು. ಎಲ್ಲೆಡೆ ರಕ್ತ ಮಾಂಸ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಸುದ್ದಿ ತಿಳಿದು ಶಾಸಕ ಶರಣು ಸಲಗರ ಸ್ಥಳಕ್ಕೆ ಭೇಟಿ ನೀಡಿ ಮೃತರನ್ನು ಹಾಗೂ ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸುವುದಕ್ಕೆ ನೆರವಾದರು.

ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೂ 'ಗೃಹಲಕ್ಷ್ಮಿ'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೂ ಗೃಹಲಕ್ಷ್ಮಿ ಯೋಜನೆ ಅನ್ವಯವಾಗುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸೋಮವಾರ ಸ್ಪಷ್ಟಪಡಿಸಿದರು.

ನಗರದಲ್ಲಿ ನಡೆದ ಗೃಹಲಕ್ಷ್ಮಿ ಯೋಜನೆ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, 'ಅಂಗನವಾಡಿ, ಆಶಾ ಕಾರ್ಯಕರ್ತೆಯರು ಯೋಜನೆಯ ವ್ಯಾಪ್ತಿಗೆ ಬರುತ್ತಾರೆಯೇ ಇಲ್ಲವೇ ಎಂಬ ಗೊಂದಲ ನಿವಾರಣೆಯಾಗಿದೆ' ಎಂದರು. 'ಯೋಜನೆಗೆ ನೋಂದಣಿ ಮಾಡಲು ಗಡುವು ನಿಗದಿಪಡಿಸಿಲ್ಲ. ಸರ್ಕಾರ ಇರುವವರೆಗೆ ಮತ್ತು ಮುಂದೆ ಮತ್ತೆ ಜನ ನಮಗೆ ಆಶೀರ್ವಾದ ಮಾಡಿದರೆ ಯೋಜನೆ ಮುಂದುವರಿಯಲಿದೆ' ಎಂದರು.

ಅವರ ಹೇಳಿಕೆ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅಂಗನವಾಡಿ ನೌಕರರ ಸಂಘಧ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ನಾಗಮಣಿ, 'ಪಡಿತರ ಚೀಟಿಯಲ್ಲಿ ಮನೆಯ ಯಜಮಾನಿ ಎಂದು ಗುರುತಿಸಿಕೊಂಡಿದ್ದ ಕಾರ್ಯಕರ್ತೆಯರು, ಯೋಜನೆ ಬಗ್ಗೆ ಗೊಂದಲವಿದ್ದುದರಿಂದ ಅರ್ಜಿ ಹಾಕಿರಲಿಲ್ಲ' ಎಂದರು.

ಜನಸಾಮಾನ್ಯರ ಪಕ್ಷದ ರಾಜ್ಯಾಧ್ಯಕ್ಷ

ಯಲ್ಲಪ್ಪ ಹೆಗಡೆ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಮುಧೋಳ ರಿಂಗ್ ರಸ್ತೆಯಲ್ಲಿ ಸೋಮವಾರ 'ಜನಸಾಮಾನ್ಯರ ಪಕ್ಷ'ದ ರಾಜ್ಯ ಘಟಕದ ಅಧ್ಯಕ್ಷ ಯಲ್ಲಪ್ಪ ಹೆಗಡೆ ತಲೆಗೆ ಮುಸುಕುಧಾರಿಗಳ ಐವರ ಗುಂಪು ಆಯುಧದಿಂದ ಹಲ್ಲೆ ಮಾಡಿ, ಪರಾರಿಯಾಗಿದೆ.

ಕಾರಿನಲ್ಲಿ ಬೀಳಗಿಗೆ ಹೊರಟಿದ್ದ ವೇಳೆ ಬಂದ ದುಷ್ಕರ್ಮಿಗಳು ಕಣ್ಣಿಗೆ ಕಾರದ ಪುಡಿ ಎರಚಿ, ತಲೆಗೆ ಹೊಡೆದಿದ್ದಾರೆ. ಗಾಯಗೊಂಡಿದ್ದ ಅವರು ಮುಧೋಳದ ಖಾಸಗಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು, ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬೀಳಗಿ ಬಂದ್: ಯಲ್ಲಪ್ಪ ಮೇಲೆ ನಡೆದಿರುವ ಹಲ್ಲೆ ಖಂಡಿಸಿ ಮುಧೋಳದಲ್ಲಿ ರೈತರು ಕೆಲ ಹೊತ್ತು ರಸ್ತೆ ತಡೆ ಮಾಡಿದರು. ಅಪರಾಧಿಗಳ ಬಂಧನಕ್ಕೆ ಆಗ್ರಹಿಸಿ ರಾಯಣ್ಣ ಸೇನೆ, ಸಿಂಧೂರ ಲಕ್ಷ್ಮಣ ಯುವ ಘಟಕದಿಂದ ಮಂಗಳವಾರ ಬೀಳಗಿ ಬಂದ್‌ಗೆ ಕರೆ ನೀಡಲಾಗಿದೆ.

ಬೀಳಗಿ ವಿಧಾನಸಭಾ ಕ್ಷೇತ್ರದಿಂದ ರೈತ ಸಂಘ ಬೆಂಬಲದೊಂದಿಗೆ ಪಕ್ಷೇತರ ಅಭ್ಯರ್ಥಿಯಾಗಿ ಯಲ್ಲಪ್ಪ ಸ್ಪರ್ಧಿಸಿದ್ದರು. ಆಗ, 'ಯಲ್ಲಪ್ಪ ಮಾಡಿದ ಆರೋಪದಿಂದ ಮಾನಹಾನಿಯಾಗಿದೆ' ಎಂದು ಮಾಜಿ ಸಚಿವ ಮುರುಗೇಶ ನಿರಾಣಿ, ಯಲ್ಲಪ್ಪ ವಿರುದ್ಧ ₹5 ಕೋಟಿ ಪರಿಹಾರದ ಮಾನಹಾನಿ ನೋಟಿಸ್ ನೀಡಿದ್ದರು. ಅಲ್ಲದೇ, 'ಯಲ್ಲಪ್ಪ ಆರೋಪದಿಂದ ಮಾನಸಿಕ ಒತ್ತಡ ಉಂಟಾಗಿದೆ' ಎಂದಿದ್ದರಿಂದ ನಿರಾಣಿ ಅವರ ಚಿಕಿತ್ಸಾ ವೆಚ್ಚಕ್ಕೆ ಭಿಕ್ಷಾಟನೆ ಮಾಡಿ ಹಣ ನೀಡುವುದಾಗಿ ಯಲ್ಲಪ್ಪ ಘೋಷಿಸಿದ್ದರು. ಬೀಳಗಿಗೆ ಭಿಕ್ಷಾಟನೆಗೆ ಬರುವಾಗಲೇ ಹಲ್ಲೆಯಾಗಿದೆ.

ಯಲ್ಲಪ್ಪ ಹೆಗಡೆ

ಸಂಕ್ಷಿಪ್ತ ಸುದ್ದಿ

ಸರಸ್ವತಿಗೆ 'ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ'

ಬೆಂಗಳೂರು: ಪಂಡಿತರತ್ನ ಎ.ಶಾಂತಿರಾಜಶಾಸ್ತ್ರಿ ಟ್ರಸ್ಟ್ ನೀಡುವ 'ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ'ಗೆ ಮೈಸೂರಿನ ಲೇಖಕಿ ಸರಸ್ವತಿ ವಿಜಯಕುಮಾರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಟ್ರಸ್ಟ್‌ನ ಅಧ್ಯಕ್ಷ ಎಸ್.ಜಿತೇಂದ್ರ ಕುಮಾರ್ ನೇತೃತ್ವದಲ್ಲಿ ಎಂ.ಜೆ. ಇಂದ್ರಕುಮಾರ್, ಎ.ಸಿ. ವಿದ್ಯಾಧರ್, ಪಿ.ವೈ. ರಾಜೇಂದ್ರ ಕುಮಾರ್, ಪದ್ಮರಾಜ ದಂಡಾವತಿ ಹಾಗೂ ಜಿ.ಪಿ.ನಾಗೇಂದ್ರ ಪ್ರಸಾದ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಟಿಐ 230 ಹುದ್ದೆಗಳಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ 230 ವಾಣಿಜ್ಯ ತೆರಿಗೆ ಪರಿವೀಕ್ಷಕರು (ಸಿಟಿಐ) ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಉದ್ಯೋಗಾಕಾಂಕ್ಷಿಗಳು ಸೆ.1 ರಿಂದ 30ವರೆಗೆ ಅರ್ಜಿ ಸಲ್ಲಿಸಬಹುದು. ನ. 4 ರಂದು ಕನ್ನಡ ಪರೀಕ್ಷೆ, 5 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ ಎಂದು ಕೆಪಿಎಸ್‌ಸಿ ತಿಳಿಸಿದೆ.

ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ ₹ 600, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹300, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹ 50 ಶುಲ್ಕ ಪಾವತಿಸಬೇಕು. ಪ್ರವರ್ಗ 1, ಎಸ್‌ಸಿ, ಎಸ್‌ಟಿ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. ಹೆಚ್ಚಿನ ಮಾಹಿತಿಗೆ ಕೆಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಕಾಲೇಜು ವಿದ್ಯಾರ್ಥಿನಿಗೆ ಇರಿತ, ಅಪಹರಣ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಮಹಿಳಾ ಕಾಲೇಜು ಬಳಿ ದ್ವಿತೀಯ ಪಿಯು ವಿದ್ಯಾರ್ಥಿನಿಯ ಮೇಲೆ ಸೋಮವಾರ ಬೆಳಿಗ್ಗೆ ಚಾಕುವಿನಿಂದ ಹಲ್ಲೆ ನಡೆಸಿದ ಯುವಕನೊಬ್ಬ ಆಕೆಯನ್ನು ಕಾರಿನಲ್ಲಿ ಅಪಹರಿಸಿ ಅರ್ಧ ತಾಸಿನ ಬಳಿಕ ಆಸ್ಪತ್ರೆಗೆ ದಾಖಲಿಸಿದ್ದಾನೆ.

ಚೇತನ್ ಡಿ.ಎನ್

ಅಪಹರಣದ ಬಳಿಕ ಕಾರಿನಲ್ಲಿಯೇ ವಿದ್ಯಾರ್ಥಿನಿಯ ಭುಜ, ತಲೆ ಹಾಗೂ ಬೆನ್ನಿಗೆ ಚಾಕುವಿನಿಂದ ಇರಿದಿದ್ದಾನೆ. ತೀವ್ರ ರಕ್ತಸ್ರಾವದಿಂದ ಅಸ್ವಸ್ಥಳಾದ ಆಕೆಯನ್ನು ತಾನೇ ಕಾರಿನಲ್ಲಿ ಆಸ್ಪತ್ರೆಗೆ ತಂದು ದಾಖಲಿಸಿದ್ದಾನೆ. ವಿದ್ಯಾರ್ಥಿನಿಯ ಪರಿಸ್ಥಿತಿ ಚಿಂತಾಜನಕವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

ಆಸ್ಪತ್ರೆಯಲ್ಲಿಯೇ ಇದ್ದ ಆರೋಪಿ ಚೇತನ್ ಡಿ.ಎನ್. ಎಂಬಾತನನ್ನು ರಾಮನಗರ ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕನಕಪುರ ತಾಲ್ಲೂಕಿನ ಆತ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯೊಂದರ ಕ್ಯಾಬ್ ಚಾಲಕನಾಗಿದ್ದ.

ಪ್ರೀತಿಸುವಂತೆ ಕೆಲ ತಿಂಗಳಿಂದ ವಿದ್ಯಾರ್ಥಿನಿಯನ್ನು ಪೀಡಿಸುತ್ತಿದ್ದ. ಯುವತಿ ನಿರಾಕರಿಸಿದ್ದರಿಂದ ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್ಲರೆದುರೇ ಕೃತ್ಯ: ಕಾಲೇಜು ಕಾಂಪೌಂಡ್ ಹತ್ತಿರ ಕಾರು ನಿಲ್ಲಿಸಿಕೊಂಡು ಕಾಯುತ್ತಿದ್ದ ಯುವಕ ಬೆಳಗ್ಗೆ 9.15ಕ್ಕೆ ಇತರ ವಿದ್ಯಾರ್ಥಿಗಳ ಎದುರೇ ವಿದ್ಯಾರ್ಥಿನಿ ಅಡ್ಡಗಟ್ಟಿ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದಾನೆ.

ಜಿಪಿಎಸ್ ನೆರವು: ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿದ್ದ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿ, ಕಾರು ನೋಂದಣಿ ಸಂಖ್ಯೆ ಆಧರಿಸಿ ಮಾಹಿತಿಯನ್ನು ಪೊಲೀಸರು ಕಲೆ ಹಾಕಿದ್ದಾರೆ. ಜಿಪಿಎಸ್ ಟ್ರ್ಯಾಕ್ ನೆರವಿನಿಂದ ಆಸ್ಪತ್ರೆ ಬಳಿ ಕಾರು ಪತ್ತೆ ಹಚ್ಚಿದ್ದಾರೆ.

ಪೋಷಕರು ಕಾಲೇಜು ಬಳಿ ಜಮಾಯಿಸಿ, 'ಪುಂಡರ ಹಾವಳಿ ಹೆಚ್ಚಾಗಿದ್ದು, ವರ್ಗಾವಣೆ ಪತ್ರ (ಟಿ.ಸಿ) ಕೊಡುವಂತೆ' ಆಗ್ರಹಿಸಿದರು.

ಮಾಲೀಕನಿಗೆ ಸುಳ್ಳು ಹೇಳಿ ಕಾರು ತಂದಿದ್ದ

'ರಾಮನಗರದಲ್ಲಿ ಒಂದು ಟ್ರಿಪ್ ಇದೆ' ಎಂದು ಯುವಕ ತನ್ನ ಮಾಲೀಕನಿಗೆ ಸುಳ್ಳು ಹೇಳಿ ಕಾರು ತೆಗೆದುಕೊಂಡು ಬಂದು ಈ ಕೃತ್ಯ ಎಸಗಿದ್ದಾನೆ.

ಆಸ್ಪತ್ರೆ ಬಳಿ ಆತನನ್ನು ಬಂಧಿಸಿ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಆತನ ವಿರುದ್ಧ ಐಪಿಸಿ 307 (ಕೊಲೆ ಯತ್ನ), 366ಎ (ಬಾಲಕಿ ಮೇಲೆ ದೌರ್ಜನ್ಯ) ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ರಾಮನಗರ ಪುರ ಠಾಣೆ ಪೊಲೀಸರು ತಿಳಿಸಿದರು.

ಶಾಸಕರ ಸ್ವಂತ ವೆಚ್ಚದಲ್ಲಿ 600 ಬಡವರಿಗೆ ನಿವೇಶನ

ಪುತ್ತೂರು (ದಕ್ಷಿಣ ಕನ್ನಡ): 'ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಬಡವರು ಮನೆ, ಅನ್ನ, ಬಟ್ಟೆ, ಬೆಳಕು ಇಲ್ಲದೆ ಕೊರಗಬಾರದು. ಈ ನಿಟ್ಟಿನಲ್ಲಿ ರೈ ಎಸ್ಟೇಟ್ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್‌ನಿಂದ ಈಗಾಗಲೇ ನೋಂದಣಿಯಾಗಿರುವ 600 ಮಂದಿ ಬಡವರಿಗೆ ನಿವೇಶನ ನೀಡಲಾಗುವುದು. ಇದಕ್ಕಾಗಿ ವಿಟ್ಲ ಭಾಗದಲ್ಲಿ 5 ಎಕರೆ ಭೂಮಿ ಖರೀದಿ ಮಾಡಲಾಗಿದೆ' ಎಂದು ಶಾಸಕ ಅಶೋಕ್ ಕುಮಾರ್ ಇಲ್ಲಿ ಹೇಳಿದರು.

ಪುತ್ತೂರು ನಗರಸಭೆಯ ಹಳೆಯ ಕಚೇರಿ ಕಟ್ಟಡದಲ್ಲಿ ಸೋಮವಾರ ಆರಂಭಿಸಲಾದ ಶಾಸಕರ ಕಚೇರಿ ಉದ್ಘಾಟನಾ ಸಮಾರಂಭದ ಬಳಿಕ ಅವರು ಫಲಾನುಭವಿಗಳಿಗೆ 94ಸಿ ಮತ್ತು 94ಸಿಸಿ ಹಕ್ಕುಪತ್ರ ವಿತರಣೆ ಮಾಡಿ ಮಾತನಾಡಿದರು.

'ಪ್ರತಿ ಕುಟುಂಬಕ್ಕೆ 3 ಸೆಂಟ್ಸ್ ಜಾಗದಲ್ಲಿ ಮನೆ ನಿರ್ಮಾಣ ಮಾಡಲಾಗುವುದು. ಜತೆಗೆ, ಗ್ರಾಮೀಣ ಭಾಗದಲ್ಲಿ 1 ಸಾವಿರ ಮನೆಗಳ ನಿರ್ಮಾಣಕ್ಕೆ ಸರ್ಕಾರದಿಂದ ನಿವೇಶನ ಕಾದಿರಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಅವರು ತಿಳಿಸಿದರು.

ಜಿತೇಂದ್ರ ಜಾಧವ್ ಐಎನ್‌ಎಇ ಫೆಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯ (ಎಡಿಎ) ನಿರ್ದೇಶಕ ಜೀತೇಂದ್ರ ಜೆ. ಜಾಧವ್ ಅವರು ಐಎನ್‌ಎಇ (ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್) ಫೆಲೋ ಆಗಿ ಆಯ್ಕೆಯಾಗಿದ್ದಾರೆ.

ಕಳೆದ ಜುಲೈನಲ್ಲಿ ಯುಕೆ ರಾಯಲ್ ಏರೋನಾಟಿಕಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾಗಿದ್ದರು. ಇದು ಎಡಿಎಗೆ ಹೆಮ್ಮೆ ತಂದಿದೆ ಎಂದು ಪ್ರಕಟಣೆ ಮಾಹಿತಿ ನೀಡಿದೆ .

ಸೌಜನ್ಯಾ ಕೊಲೆ ಪ್ರಕರಣ ಮರುತನಿಖೆಗೆ ಎಸ್‌ಐಟಿ ರಚಿಸಲು ಒತ್ತಾಯಿಸಿ 'ಬೆಳ್ತಂಗಡಿ ಚಲೊ'

'ಅಸಹಜ ಸಾವಿನ ನೆತ್ತರಿಗೆ ಉತ್ತರ ಬೇಕು'

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): 'ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆ ಪ್ರಕರಣವನ್ನು ನ್ಯಾಯಾಂಗದ ಸುಪರ್ದಿಯಲ್ಲಿ ಮರು ತನಿಖೆ ನಡೆಸಬೇಕು. ಅಷ್ಟೇ ಅಲ್ಲ... ಇಲ್ಲಿ ನಡೆದ ಅಸಹಜ ಸಾವುಗಳಲ್ಲಿ ಹರಿದ ನೆತ್ತರಿಗೆ ಉತ್ತರ ಬೇಕು...'

ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆ ಪ್ರಕರಣದ ಮರುತನಿಖೆಗೆ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆಗೆ ಒತ್ತಾಯಿಸಿ ಜನಪರ ಸಂಘಟನೆಗಳ ಒಕ್ಕೂಟ ಮತ್ತು ಕರ್ನಾಟಕ ಪ್ರಗತಿಪರ ಸಂಘಟನೆಗಳ ಹೋರಾಟ ಸಮಿತಿಯ ಆಶ್ರಯದಲ್ಲಿ ಇಲ್ಲಿ ಸೋಮವಾರ ಏರ್ಪಡಿಸಿದ್ದ 'ಬೆಳ್ತಂಗಡಿ ಚಲೊ' ಪ್ರತಿಭಟನೆಯಲ್ಲಿ ಮೊಳಗಿದ ಒಕ್ಕೊರಲ ಒತ್ತಾಯವಿದು.

ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದ ವಿವಿಧ ಸಂಘಟನೆಗಳ ಪ್ರಮುಖರು, 'ಸೌಜನ್ಯಾ ಈಗ ಎಲ್ಲರ ಮನೆ ಮಗಳಾಗಿದ್ದಾಳೆ. ಅವಳ ಕುಟುಂಬಕ್ಕೆ ಸಿಗುವ ನ್ಯಾಯ, ಮುಂದೆ ಇಂತಹ ಅಮಾನವೀಯ ಘಟನೆಗಳನ್ನು ಮುಚ್ಚಿಹಾಕುವ ಪ್ರಯತ್ನಗಳನ್ನು ತಡೆಯಬಲ್ಲುದು' ಎಂದು ಅಭಿಪ್ರಾಯಪಟ್ಟರು.

ಹೈಕೋರ್ಟ್ ವಕೀಲ ಶ್ರೀನಿವಾಸ್, 'ಸೌಜನ್ಯಾ ಮೇಲೆ ಅತ್ಯಾಚಾರ ನಡೆಸಿದವರ ಜೊತೆ ಈ ಪ್ರಕರಣದ ತನಿಖೆಯ ಹಾದಿ ತಪ್ಪಿಸಿದ ಪೊಲೀಸ್, ಸಿಐಡಿ, ಸಿಬಿಐ ಅಧಿಕಾರಿಗಳೂ ಆರೋಪಿಗಳು. ತನಿಖಾಧಿಕಾರಿಗಳ ತಪ್ಪನ್ನು ನ್ಯಾಯಾಲಯವೇ ಬೊಟ್ಟು ಮಾಡಿರುವುದರಿಂದ ಈ ಪ್ರಕರಣದ ಮರುತನಿಖೆ ನಡೆಸಲು ಯಾವುದೇ ಅಡ್ಡಿ ಇಲ್ಲ. ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು' ಎಂದರು.

ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲ, 'ಈ ಪ್ರಕರಣದಲ್ಲಿ ಸರ್ಕಾರ ಕೇವಲ ಅಡ್ವೋಕೇಟ್ ಜನರಲ್ ಅಭಿಪ್ರಾಯವನ್ನು ನೆಚ್ಚಿಕೊಂಡರೆ ಸಾಲದು. ಇತರ ಕಾನೂನು ತಜ್ಞರ ಸಲಹೆಗಳನ್ನು ಪಡೆದು ಈ ಪ್ರಕರಣದ ಮರುತನಿಖೆಗೆ ವಹಿಸುವ ದಾರಿಗಳನ್ನು ಹುಡುಕಬೇಕು' ಎಂದರು.

'ಒಡನಾಡಿ'ಯಸ್ಟ್ಯಾನ್ಲಿ, 'ಈಪ್ರಕರಣದಲ್ಲಿ ಕೇಂದ್ರಕ್ಕೆ ಪತ್ರ ಬರೆದು ರಾಜ್ಯ ಸರ್ಕಾರ ಸುಮ್ಮನಿರುವುದನ್ನು ಒಪ್ಪಲಾಗದು. ತನಿಖೆಯ ದಾರಿ ತಪ್ಪಿಸಿದ ಅಧಿಕಾರಿಗಳ ಮೂಗು ಹಿಡಿದರೆ ತಪ್ಪಿತಸ್ಥರನ್ನು ಪತ್ತೆ ಹಚ್ಚುವುದು ಕಷ್ಟವೇನಲ್ಲ' ಎಂದು ಪ್ರಶ್ನಿಸಿದರು.

ಸೌಜನ್ಯಾ ಕುಟುಂಬಕ್ಕೆ ಬೆಂಬಲವಾಗಿ ನಿಂತಿರುವ ಮಹೇಶ ಶೆಟ್ಟಿ ತಿಮರೋಡಿ, 'ಈ ಪ್ರಕರಣ ನಡೆದಾಗ ಬಿಜೆಪಿ ನೇತೃತ್ವದ ಸರ್ಕಾರ ಇತ್ತು. ದುರಾಡಳಿತದಿಂದಾಗಿ ಅವರು ರಾಜ್ಯದಲ್ಲಿ ನೆಲಕಚ್ಚಿದ್ದಾರೆ. ಈಗ ಜನ ಕಾಂಗ್ರೆಸ್‌ಗೆ ಅಧಿಕಾರ ನೀಡಿದ್ದಾರೆ. ಸೌಜನ್ಯಾ ಕುಟುಂಬಕ್ಕೆ ನ್ಯಾಯ ಒದಗಿಸದಿದ್ದರೆ, ಕಾಂಗ್ರೆಸ್ ಕೂಡ ಸರ್ವನಾಶವಾಗಲಿದೆ' ಎಂದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕೆ.ನೀಲಾ, 'ಸೌಜನ್ಯಾ ಮಾತ್ರವಲ್ಲ, ಇಲ್ಲಿ ಅದೆಷ್ಟೊ ಹೆಣ್ಣು ಮಕ್ಕಳ ಅಸಹಜ ಸಾವುಗಳಾಗಿದೆ. ಇಲ್ಲಿಗೆ ಬಂದವರು ಏಕೆ ಹೆಣವಾದರು, ಆ ತನಿಖೆಗಳ ದಿಕ್ಕು ತಪ್ಪಿಸಿದ್ದು ಯಾರು, ಸಾಕ್ಷ್ಯಗಳೇ ಇಲ್ಲದಂತೆ ಮಾಡಿದ್ದು ಯಾರು ಎಂದು ಗೊತ್ತಾಗಬೇಕು. ಅಷ್ಟೂ ಅಸಹಜ ಸಾವುಗಳಿಗೆ ಉತ್ತರಬೇಕು' ಎಂದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಮೀನಾಕ್ಷಿ ಬಾಳಿ, 'ನಾವು 800 ಕಿ.ಮೀ. ದೂರದಿಂದ ಬಂದು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದೇವೆ. ಅತ್ಯಾಚಾರ ಪ್ರಕರಣದ ಆರೋಪಿಗಳು ಜೈಲಿನಿಂದ ಹೊರಗೆ ಬಂದಾಗ ಅವರಿಗೆ ಸನ್ಮಾನ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಡೆಯಲು ನಾವು ಧ್ವನಿ ಎತ್ತಬೇಕಾಗಿದೆ' ಎಂದರು. ಸಮಿತಿಯ ಗೌರವ ಸಂಚಾಲಕ ವಸಂತ ಬಂಗೇರ ಪ್ರತಿಭಟನೆಯನ್ನು ಉದ್ಘಾಟಿಸಿದರು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದ ವಿವಿಧ ಸಂಘಟನೆಗಳ ಪ್ರಮುಖರು ಘೋಷಣಾ ಫಲಕ ಪ್ರದರ್ಶಿಸುವ ಮೂಲಕ ಪ್ರತಿಭಟನೆಗೆ ಚಾಲನೆ ನೀಡಿದರು— ಪ್ರಜಾವಾಣಿ ಚಿತ್ರ

ಸೂಕ್ತ ತನಿಖೆಗೆ ನಿರ್ದೇಶನ ಕೋರಿ ಹೈಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಜನ್ಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ತನಿಖೆಯನ್ನಾದರೂ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು. ನ್ಯಾಯಾಂಗ ಮತ್ತು ಧರ್ಮಸ್ಥಳದ ಮಂಜುನಾಥ ದೇವಾಲಯದ ವಿರುದ್ಧ ನಿಂದನಾತ್ಮಕ ಹೇಳಿಕೆ ನೀಡುತ್ತಿರುವ ಉಜಿರೆಯ ಮಹೇಶ್ ತಿಮ್ಮರೋಡಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

'ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ'ಯ ಪ್ರಾದೇಶಿಕ ನಿರ್ದೇಶಕ ಶೀನಪ್ಪ ಮತ್ತು ನಂದೀಶ್ ಕುಮಾರ್ ಜೈನ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು ವಿಚಾರಣೆಗೆ ನಿಗದಿಯಾಗಬೇಕಿದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮಹೇಶ್ ತಿಮ್ಮರೋಡಿ ಸೇರಿದಂತೆ ಒಟ್ಟು ಒಂಬತ್ತು ಜನರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: '2012ರಲ್ಲಿ ನಡೆದ ಕುಮಾರಿ ಸೌಜನ್ಯಾ ಮೇಲಿನ ಅತ್ಯಾಚಾರ ಮತ್ತು ಭೀಕರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹೇಶ್ ಶೆಟ್ಟಿ ಅಲಿಯಾಸ್ ಮಹೇಶ್ ತಿಮ್ಮರೋಡಿ ಮತ್ತು ಆತನ ಅನುಯಾಯಿಗಳು ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಾಲಯ ಮತ್ತು ದೇವಸ್ಥಾನಕ್ಕೆ ಸೇರಿದ ಸಂಸ್ಥೆಗಳು, ಟ್ರಸ್ಟ್ ವಿರುದ್ಧ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ. ನ್ಯಾಯಾಂಗ ಮತ್ತು ನ್ಯಾಯಾಧೀಶರ ವಿರುದ್ಧ ನಿಂದನಾತ್ಮಕ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಪೊಲೀಸ್ ಇಲಾಖೆ ಬಗ್ಗೆ ಅವಹೇಳನಕಾರಿಯಾಗಿ ಯೂ– ಟ್ಯೂಬ್ ಚಾನೆಲ್‌ಗಳು, ಮುದ್ರಣ ಮಾಧ್ಯಮ ಮತ್ತು ಟಿ.ವಿ. ಚಾನೆಲ್‌ಗಳಲ್ಲಿ ಹೇಳಿಕೆ ನೀಡುತ್ತಿದ್ದಾರೆ. ಪ್ರತಿಭಟನೆ ನಡೆಸುತ್ತಿದ್ದಾರೆ' ಎಂದು ಆಪಾದಿಸಲಾಗಿದೆ.

'ಡಾ. ಡಿ ವೀರೇಂದ್ರ ಹೆಗ್ಗಡೆ, ಅವರ ಕುಟುಂಬದ ಸದಸ್ಯರ ವಿರುದ್ಧ ಹೇಳಿಕೆ ನೀಡದಂತೆ ಅಧೀನ ನ್ಯಾಯಾಲಯ ಮಾಡಿರುವ ಆದೇಶ ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರಿಗೆ ನಿರ್ದೇಶಿಸಬೇಕು ಪ್ರಕರಣವನ್ನು ಸೂಕ್ತ ತನಿಖಾ ಸಂಸ್ಥೆಗೆ ವಹಿಸಿ ನ್ಯಾಯ ಒದಗಿಸಿ' ಎಂದು ಅರ್ಜಿದಾರರು ಕೋರಿದ್ದಾರೆ.

ಇ– ಕಾಮರ್ಸ್ ಕಂಪನಿಗಳಿಗೆ ನಷ್ಟ • ದತ್ತಾಂಶ ಕದ್ದು ಕೃತ್ಯ: 21 ಮಂದಿ ಬಂಧನ

ಗ್ರಾಹಕರಿಗೆ ₹70 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ಜಪ್ತಿ ಮಾಡಿರುವ ಲ್ಯಾಪ್‌ಟಾಪ್‌ಗಳು ಹಾಗೂ ಮೊಬೈಲ್‌ಗಳು

ಬೆಂಗಳೂರು: ಇ– ಕಾಮರ್ಸ್ ಜಾಲತಾಣಗಳ ಗ್ರಾಹಕರಿಗೆ ನಕಲಿ ವಸ್ತುಗಳನ್ನು ಪೂರೈಸಿ ವಂಚಿಸುತ್ತಿದ್ದ ಜಾಲ ಭೇದಿಸಿರುವ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು, 21 ಆರೋಪಿಗಳನ್ನು ಬಂಧಿಸಿದ್ದಾರೆ.

'ವಸ್ತುಗಳ ಡೆಲಿವರಿ ಏಜೆನ್ಸಿಯೊಂದರ ಮಾಲೀಕ ವಂಚನೆ ಬಗ್ಗೆ ಇತ್ತೀಚೆಗೆ ದೂರು ನೀಡಿದ್ದರು. ಮಹಾರಾಷ್ಟ್ರ, ಗುಜರಾತ್ ಹಾಗೂ ಮಧ್ಯಪ್ರದೇಶದ ನಿವಾಸಿಗಳಾಗಿರುವ 21 ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ₹ 7.50 ಲಕ್ಷ ನಗದು, 11 ಮೊಬೈಲ್, 3 ಲ್ಯಾಪ್‌ಟಾಪ್ ಹಾಗೂ ಹಾರ್ಡ್‌ಡಿಸ್ಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಕಂಪನಿ ಸಿಬ್ಬಂದಿ ಶಾಮೀಲು: 'ಇ-ಕಾಮರ್ಸ್ ಜಾಲತಾಣ ಮೂಲಕ ವಸ್ತುಗಳನ್ನು ಕಾಯ್ದಿರಿಸುತ್ತಿದ್ದ ಗ್ರಾಹಕರ ಮಾಹಿತಿ ಸರ್ವರ್‌ನಲ್ಲಿ ದಾಖಲಾಗುತ್ತಿತ್ತು. ಇ-ಕಾಮರ್ಸ್ ಕಂಪನಿಯ ಕೆಲ ಸಿಬ್ಬಂದಿಯೇ ದತ್ತಾಂಶವನ್ನು ಕಳ್ಳತನ ಮಾಡಿ ಆರೋಪಿಗಳಿಗೆ ನೀಡುತ್ತಿದ್ದರು. ಅದರ ನೆರವಿನಿಂದಲೇ ಆರೋಪಿಗಳು ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಕೋರಿಯರ್ ಮೂಲಕ ನಕಲಿ ವಸ್ತು: 'ಕ್ಯಾಶ್ ಆನ್ ಡೆಲಿವರಿ (ಸಿಒಡಿ) ಸೌಲಭ್ಯದೊಂದಿಗೆ ಜಾಲತಾಣದಲ್ಲಿ ಬುಕ್ಕಿಂಗ್ ಮಾಡುತ್ತಿದ್ದ ಗ್ರಾಹಕರಿಗೆ ಅಸಲಿ ವಸ್ತುಗಳನ್ನು ಕಳುಹಿಸಲು ಕಂಪನಿಯವರು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಇದಕ್ಕೂ ಮುನ್ನವೇ ಆರೋಪಿಗಳು, ಅಧಿಕೃತ ಏಜೆನ್ಸಿಯಿಂದ ವಸ್ತುಗಳು ಡೆಲಿವರಿ ಆಗುವ ಮುನ್ನವೇ ಬೇರೆ ಕೊರಿಯರ್ ಮೂಲಕ ಗ್ರಾಹಕರ ವಿಳಾಸಕ್ಕೆ ನಕಲಿ ವಸ್ತುಗಳನ್ನು ಕಳುಹಿಸಿ ಹಣ ಪಡೆದುಕೊಳ್ಳುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ವಸ್ತು ನಕಲಿ ಎಂಬುದು ಗೊತ್ತಾಗುತ್ತಿದ್ದಂತೆ ಗ್ರಾಹಕರು, ಜಾಲತಾಣ ಮೂಲಕ ಕಂಪನಿಗೆ ವಾಪಸು ಕಳುಹಿಸುತ್ತಿದ್ದರು. ಕೆಲ ಗ್ರಾಹಕರ ಖಾತೆಗೆ ಹಣ ಜಮೆ ಆಗುತ್ತಿತ್ತು. ಎರಡು ದಿನಗಳ ನಂತರ ಅಸಲಿ ವಸ್ತುಗಳು ಬಂದರೂ ಗ್ರಾಹಕರು ಸ್ವೀಕರಿಸುತ್ತಿರಲಿಲ್ಲ. ಹೀಗಾಗಿ, ಅಸಲಿ ವಸ್ತುಗಳನ್ನೂ ಏಜೆನ್ಸಿಯವರು ವಾಪಸು ಕಂಪನಿಗೆ ಕಳುಹಿಸುತ್ತಿದ್ದರು' ಎಂದು ಹೇಳಿದರು.

ಲೆಕ್ಕ ತಪಾಸಣೆಯಿಂದ ಪತ್ತೆ: 'ಆರೋಪಿಗಳು ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದರು. ನೂರಾರು ಕೋಟಿ ರೂಪಾಯಿ ವಹಿವಾಟು ನಡೆಸುವ ಕಂಪನಿಯವರಿಗೆ ಈ ಸಂಗತಿ ಗೊತ್ತಾಗಿರಲಿಲ್ಲ. ಇತ್ತೀಚೆಗೆ ಲೆಕ್ಕ ತಪಾಸಣೆ ವೇಳೆ ₹ 70 ಲಕ್ಷ ವ್ಯತ್ಯಾಸ ಕಂಡುಬಂದಿತ್ತು' ಎಂದು ಪೊಲೀಸರು ತಿಳಿಸಿದರು. 'ಆಂತರಿಕ ತನಿಖೆ ನಡೆಸಿದ್ದ ಕಂಪನಿ ಅಧಿಕಾರಿಗಳು ಹಾಗೂ ಡೆಲಿವರಿ ಏಜೆನ್ಸಿ ಸಿಬ್ಬಂದಿ, ನಕಲಿ ವಸ್ತು ನೀಡುತ್ತಿದ್ದ ಜಾಲದ ಬಗ್ಗೆ ಮಾಹಿತಿ ಕಲೆಹಾಕಿದ್ದರು. ನಂತರವೇ ಠಾಣೆಗೆ ದೂರು ನೀಡಿದ್ದರು' ಎಂದು ಹೇಳಿದರು.

ಬಂಧಿತರು: ಅಭಿಷೇಕ್ ಗುಪ್ತಾ, ಆಶೀಷ್ ತಲಿವೈ, ಮಿಲನ್, ಗೌತಮ್ ಪನಸೂರ್ಯ, ಪಾರ್ಥ್ ತಲಿವೈ, ವಾಗಸೀಯಾ, ಮನಸೂಕಬೈ, ಅಕ್ಷಯ್ ಪ್ರದೀಪ್‌ಬೈ,ದರ್ಶಿತ್ ರಫಿಲಿಯಾ, ರಾಹುಲ್ ಡಕೇಜಾ, ವಾಗಸೀಯಾ ಕೆಯೂರ್, ಬ್ರಿಜೇಶ್ ಸರೋಲ್, ಗೌರವ್ ಬೈ,ರೇಖಾಬಿನ್ ಬೈ, ವಿವೇಕ್ ಸದ್ವೋದಯ, ತಲವಿಯಾ ಭೂಮಿತ್, ಪನಸೂರ್ಯ ಉತ್ತಮ್, ನಿಕುಂಜಾ, ಮೊಹಮ್ಮದ್ ಶಕೀರ್ ಅನ್ಸಾರಿ, ಅಂಕಿತ್ ವಿ., ಅನಿಕೇತ್ ವಿ., ಶುಭಮ್ ವರ್ಮ್.

ಅಪರಾಧ ಸುದ್ದಿ

ಬ್ಯಾಂಕ್ ವಹಿವಾಟು ನೀಡಿದ ಸುಳಿವು

'ವಸ್ತು ಸ್ವೀಕರಿಸುತ್ತಿದ್ದ ಗ್ರಾಹಕರು, ಕೋರಿಯರ್ ಸಿಬ್ಬಂದಿ ಕೈಗೆ ಹಣ ನೀಡುತ್ತಿದ್ದರು. ಅದೇ ಹಣದಲ್ಲಿ ಕಮಿಷನ್ ಪಡೆಯುತ್ತಿದ್ದ ಕೋರಿಯರ್ ಸಿಬ್ಬಂದಿ, ಉಳಿದ ಹಣವನ್ನು ಆರೋಪಿಗಳ ಖಾತೆಗಳಿಗೆ ವರ್ಗಾಯಿಸುತ್ತಿದ್ದರು. ಈ ವಹಿವಾಟಿನಿಂದಲೇ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳ ಬ್ಯಾಂಕ್ ಖಾತೆಯಲ್ಲಿ ₹ 19.45 ಲಕ್ಷ ಹಣವಿದೆ. ಕೃತ್ಯದ ಬಗ್ಗೆ ಬ್ಯಾಂಕ್‌ಗಳಿಗೆ ಮಾಹಿತಿ ನೀಡಿ, ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ' ಎಂದರು.

ಶ್ರೀನಿವಾಸ ಮೂರ್ತಿ ನ್ಯಾಯಾಂಗ ವಶಕ್ಕೆ

ಕೆ.ಟಿ. ಶ್ರೀನಿವಾಸ ಮೂರ್ತಿ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಪ್ರಕರಣದಲ್ಲಿ ಬಂಧಿತರಾಗಿರುವ ಬೆಂಗಳೂರು ಪೂರ್ವ (ಕೆ.ಆರ್. ಪುರ) ತಾಲ್ಲೂಕಿನ ಭೂಮಾಪನ ಇಲಾಖೆ ಅಧೀಕ್ಷಕ ಕೆ.ಟಿ. ಶ್ರೀನಿವಾಸ ಮೂರ್ತಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಶ್ರೀನಿವಾಸ ಮೂರ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು, ಆರೋಪಿಗೆ ಸಂಬಂಧಿಸಿದ 14 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದ್ದರು. ಅದೇ ದಿನ ಆರೋಪಿಯನ್ನು ಬಂಧಿಸಿದ್ದರು. ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಹೆಚ್ಚಿನ ತನಿಖೆಗಾಗಿ ಅವರನ್ನು 5 ದಿನಗಳವರೆಗೆ ತನಿಖಾ ತಂಡದ ವಶಕ್ಕೆ ನೀಡಲಾಗಿತ್ತು.

ಮತೀಯ ಗೂಂಡಾಗಿರಿ: ಆರೋಪಿ ಜಾಕೀರ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಜಾಕೀರ್

ಬೆಂಗಳೂರು: ಸಹೋದ್ಯೋಗಿಯಾಗಿದ್ದ ಹಿಂದೂ ಧರ್ಮದ ಪುರುಷನ ಜೊತೆ ಬೈಕ್‌ನಲ್ಲಿ ಹೊರಟಿದ್ದ ಮುಸ್ಲಿಂ ಯುವತಿಯನ್ನು ಅಡ್ಡಗಟ್ಟಿ ಕಿರುಕುಳ ನೀಡಿದ್ದ ಆರೋಪದಡಿ ಬಂಧಿಸಿರುವ ಜಾಕೀರ್, ಎಂಬಿಬಿಎಸ್ ವಿದ್ಯಾರ್ಥಿ ಎಂಬುದು ತನಿಖೆಯಿಂದ ಗೊತ್ತಾಗಿದೆ.

'ಇತ್ತೀಚೆಗೆ ನಡೆದಿದ್ದ ಘಟನೆ ಸಂಬಂಧ 21 ವರ್ಷ ವಯಸ್ಸಿನ ಯುವತಿ ನೀಡಿದ್ದ ದೂರು ಆಧರಿಸಿ ಜಾಕೀರ್‌ನನ್ನು ಈಗಾಗಲೇ ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋಲಾರ ಜಿಲ್ಲೆಯ ಯುವತಿ, ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅದೇ ಕಂಪನಿಯಲ್ಲಿ ಹಿಂದೂ ಧರ್ಮದ ಪುರುಷ ಸಹ ಕೆಲಸದಲ್ಲಿದ್ದಾರೆ. ಸಹೋದ್ಯೋಗಿಗಳಾಗಿದ್ದರಿಂದ ಅವರಿಬ್ಬರು, ಪರಸ್ಪರ ಪರಿಚಿತರು. ಕೆಲಸ ಮುಗಿಯುತ್ತಿದ್ದಂತೆ ಯುವತಿಯನ್ನು ಸಹೋದ್ಯೋಗಿಯೇ ಮನೆಯವರೆಗೂ ಬಿಟ್ಟು ಬರುತ್ತಿದ್ದರು' ಎಂದರು.

'ಕೆಲ ದಿನಗಳ ಹಿಂದೆಯಷ್ಟೇ ಯುವತಿ, ಸಹೋದ್ಯೋಗಿ ಜೊತೆ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬುರ್ಖಾ ಧರಿಸಿದ್ದರು. ಸಹೋದ್ಯೋಗಿ ಪುರುಷ ಕೈಗೆ ಕೇಸರಿ ದಾರ ಕಟ್ಟಿಕೊಂಡಿದ್ದರು' ಎಂದು ಹೇಳಿದರು.

'ಪುರುಷನ ಜೊತೆ ಯುವತಿ ಹೊರಟಿದ್ದನ್ನು ಆರೋಪಿ ಜಾಕೀರ್ ಗಮನಿಸಿದ್ದ. ಸಹೋದ್ಯೋಗಿ ಕೈಯಲ್ಲಿದ್ದ ಕೇಸರಿ ದಾರ ನೋಡಿದ್ದ. ಯುವತಿ ಬುರ್ಖಾ ಧರಿಸಿದ್ದರಿಂದ ಮತ್ತಷ್ಟು ಅನುಮಾನಗೊಂಡಿದ್ದ. ನಡುರಸ್ತೆಯಲ್ಲಿ ಬೈಕ್ ಅಡ್ಡಗಟ್ಟಿ, ಯುವತಿಯನ್ನು ಬೈಯಲಾರಂಭಿಸಿದ್ದ' ಎಂದು ತಿಳಿಸಿದರು.

'ಬೈಕ್‌ನಿಂದ ಇಳಿದಿದ್ದ ಯುವತಿ, 'ಈತ ನನ್ನ ಸಹೋದ್ಯೋಗಿ. ಮನೆಗೆ ಹೊರಟಿದ್ದೇನೆ' ಎಂದು ಹೇಳಿದ್ದರು. ಅಷ್ಟಕ್ಕೆ ಸುಮ್ಮನಾಗದ ಆರೋಪಿ, 'ಹಿಂದೂ ಧರ್ಮದ ಪುರುಷನ ಜೊತೆ ಸುತ್ತಾಡಬಾರದು' ಎಂದು ಹೇಳಿ ರಂಪಾಟ ಮಾಡಿದ್ದ. ಯುವತಿಯನ್ನು ನಡುರಸ್ತೆಯಲ್ಲಿ ನಿಲ್ಲಿಸಿ ಬೈದಾಡಿ, ಅದರ ವಿಡಿಯೊ ಚಿತ್ರೀಕರಿಸಿಕೊಂಡಿದ್ದ. ಅದೇ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದ. ಅದನ್ನು ನೋಡಿದ್ದ ಯುವತಿ, ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಹೇಳಿದರು.

ಎರಡು ಬಾರಿ ಪಿಯುಸಿ ಅನುತ್ತೀರ್ಣ: 'ಬಂಧಿತ ಜಾಕೀರ್, ದ್ವಿತೀಯ ಪಿಯುಸಿ ಎರಡು ಬಾರಿ ಅನುತ್ತೀರ್ಣನಾಗಿದ್ದ. ಮೂರನೇ ಬಾರಿ ಪರೀಕ್ಷೆ ಬರೆದು ಉತ್ತೀರ್ಣನಾಗಿದ್ದ. ಇದಾದ ನಂತರ, ವಿದೇಶದ ಕಾಲೇಜೊಂದರಲ್ಲಿ ಎಂಬಿಬಿಎಸ್ ವ್ಯಾಸಂಗಕ್ಕೆ ಹೋಗಿದ್ದ. ಆದರೆ, ಕಲಿಕೆ ಅರ್ಧಕ್ಕೆ ಬಿಟ್ಟು ಪುನಃ ನಗರಕ್ಕೆ ವಾಪಸು ಬಂದಿದ್ದ' ಎಂದು ತಿಳಿಸಿದರು.

'ನಗರದಲ್ಲಿರುವ ಸಹೋದರಿ ಮನೆಯಲ್ಲಿ ಜಾಕೀರ್ ಉಳಿದುಕೊಂಡಿದ್ದ. ಮತೀಯ ಗೂಂಡಾಗಿರಿ ಮಾಡಿರುವ ಈತನ ಹಿನ್ನೆಲೆ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಗುಳೇದ್ ಹೇಳಿದರು.

ತೆಲಂಗಾಣ 'ಕೈ' ಮುಖಂಡನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ ಜೀವ ಬೆದರಿಕೆಯೊಡ್ಡಿರುವ ಆರೋಪದಡಿ ಕೆ. ಶಿವಕುಮಾರ್ ರೆಡ್ಡಿ ವಿರುದ್ಧ ನಗರದ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಗರದ ಹೋಟೆಲೊಂದರಲ್ಲಿ ನಡೆದಿರುವ ಘಟನೆ ಬಗ್ಗೆ ಸಂತ್ರಸ್ತ ಮಹಿಳೆ ದೂರು ನೀಡಿದ್ದಾರೆ. ಕೆ. ಶಿವಕುಮಾರ್ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯದಲ್ಲೇ ಅವರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಶಿವಕುಮಾರ್ ರೆಡ್ಡಿ, ತೆಲಂಗಾಣದ ಕಾಂಗ್ರೆಸ್ ಮುಖಂಡ. ನಾರಾಯಣ್ ಪೇಟ್ ಜಿಲ್ಲಾ ಘಟಕದ ಅಧ್ಯಕ್ಷ. 2018ರಲ್ಲಿ ತೆಲಂಗಾಣ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರು' ಎಂದು ತಿಳಿಸಿವೆ.

ಕೃತ್ಯ ಎಸಗಿ ವಿಡಿಯೊ ಚಿತ್ರೀಕರಣ: 'ಶಿವಕುಮಾರ್ ಹಾಗೂ ಮಹಿಳೆ ನಡುವೆ ಸ್ನೇಹ ಬೆಳೆದಿತ್ತು. ಮಹಿಳೆ ಜೊತೆ ಬೆಂಗಳೂರಿನ ಹೋಟೆಲೊಂದರ ಕೊಠಡಿಯಲ್ಲಿ ಶಿವಕುಮಾರ್ ಉಳಿದುಕೊಂಡಿದ್ದರು. ಇದೇ ಸಂದರ್ಭದಲ್ಲಿ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದರೆಂಬ ಆರೋಪವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅತ್ಯಾಚಾರದ ವೇಳೆ ಮಹಿಳೆಯ ವಿಡಿಯೊಗಳನ್ನು ಆರೋಪಿ ಚಿತ್ರೀಕರಣ ಮಾಡಿಕೊಂಡಿದ್ದಾರೆ. ವಿಡಿಯೊವನ್ನು ಜಾಲತಾಣ ಗಳಲ್ಲಿ ಹರಿಬಿಡುವುದಾಗಿ ಹೇಳಿ ಬೆದರಿಸುತ್ತಿದ್ದಾರೆ. ಮಹಿಳೆ ಠಾಣೆಗೆ ದೂರು ನೀಡಿದ್ದಾರೆ' ಎಂದು ತಿಳಿಸಿವೆ.

'ಅತ್ಯಾಚಾರ ಆರೋಪದಡಿ ಶಿವಕುಮಾರ್ ರೆಡ್ಡಿ ವಿರುದ್ಧ ತೆಲಂಗಾಣದ ಪಂಜಗುಟ್ಟ ಠಾಣೆಯಲ್ಲಿ 2020ರಲ್ಲೂ ಪ್ರಕರಣ ದಾಖಲಾಗಿತ್ತು. ಇದೀಗ, ಎರಡನೇ ಬಾರಿ ಎಫ್‌ಐಆರ್ ದಾಖಲಾಗಿದೆ' ಎಂದು ಹೇಳಿವೆ.

ಅಬಕಾರಿ ವರಮಾನ ಶೇ 14ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ದರ ಏರಿಕೆಯಾದರೂ, ಮದ್ಯ ಮಾರಾಟದಿಂದ ಅಬಕಾರಿ ವರಮಾನದಲ್ಲಿ ಶೇ 14ರಷ್ಟು ಹೆಚ್ಚಾಗಿದೆ.

ಪ್ರಸಕ್ತ ಸಾಲಿನ (2023–24) ವರೆಗಿನ ಮದ್ಯ ಮಾರಾಟವನ್ನು ವಿಶ್ಲೇಷಿಸಿದರೆ, ಮದ್ಯ ಮಾರಾಟದಲ್ಲಿ ಶೇ 4.24 ರಷ್ಟು ಹೆಚ್ಚಳವಾಗಿದ್ದು, ₹ 1,628 ಕೋಟಿ ರಾಜಸ್ವ ಸಂಗ್ರಹ ಆಗಿದೆ. ಹೀಗಾಗಿ, ಅಬಕಾರಿ ಸುಂಕ ಶೇ 20ರಷ್ಟು ಹೆಚ್ಚಿಸಿದ ಪರಿಣಾಮ ಮದ್ಯ ಮಾರಾಟ ಕುಂಠಿತವಾಗಿದೆ ಎನ್ನುವುದು ಸರಿಯಲ್ಲ ಎಂದು ಅಬಕಾರಿ ಇಲಾಖೆ ಮೂಲಗಳು ಹೇಳಿವೆ.

ಪ್ರಸಕ್ತ ಸಾಲಿನಲ್ಲಿ ಈವರೆಗೆ (ಏಪ್ರಿಲ್ 1ರಿಂದ ಆಗಸ್ಟ್ 25 ರವರೆಗೆ) ₹ 13,515 ಕೋಟಿ ರಾಜಸ್ವ ಸಂಗ್ರಹವಾಗಿದೆ. ಬಜೆಟ್‌ನಲ್ಲಿ ನಿಗದಿಪಡಿಸಿ ಗುರಿಗೆ (₹ 36,000 ಕೋಟಿ) ಶೇ 37.5ರಷ್ಟು ಸಾಧನೆಯಾಗಿದೆ. ಕಳೆದ ವರ್ಷ ಈ ಅವಧಿಗೆ ₹ 11,887 ಕೋಟಿ ಸಂಗ್ರಹ ಆಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ₹ 1,628 ಕೋಟಿ ಹೆಚ್ಚು ಸಂಗ್ರಹವಾಗಿದ್ದು, ಶೇ 13.7ರಷ್ಟು ಬೆಳವಣಿಗೆ ಆಗಿದೆ ಎಂದೂ ಮೂಲಗಳು ಹೇಳಿವೆ.

ಸಾಮಾನ್ಯವಾಗಿ ಮದ್ಯದ ದರವನ್ನು ಬಜೆಟ್‌ನಲ್ಲಿ ಹೆಚ್ಚಿಸಿ ಘೋಷಿಸಲಾಗುತ್ತದೆ. ಪ್ರಸಕ್ತ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ಬಜೆಟ್ ಮಂಡಿಸಿದ್ದು, ಹೆಚ್ಚಿಸಿದ ದರ ಜುಲೈ 20ರಂದು ಜಾರಿಗೆ ಬಂದಿದೆ. ಮದ್ಯ ಮಾರಾಟಗಾರರು ಈ ಅವಧಿಯ ನಡುವೆ ಹೆಚ್ಚು ಮದ್ಯ ಖರೀದಿಸಿ ಮುಂಗಡ ದಾಸ್ತಾನು ಇಟ್ಟುಕೊಂಡು ಹೊಸ ದರದಲ್ಲಿ ಮಾರಾಟ ಮಾಡುತ್ತಾರೆ ಎಂದೂ ಇಲಾಖೆಯ ಮೂಲಗಳು ಹೇಳಿವೆ.

ಬಿಬಿಎಂಪಿಯ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಬೆಂಕಿ ಅವಘಡ

ಮುಖ್ಯ ಎಂಜಿನಿಯರ್ ಸ್ಥಿತಿ ಚಿಂತಾಜನಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಆ.11ರಂದು ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ತೀವ್ರ ಗಾಯಗೊಂಡಿದ್ದ ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರ ಸ್ಥಿತಿ ಚಿಂತಾಜನಕವಾಗಿದೆ.

ಶೇಷಾದ್ರಿಪುರದ ಅಪೊಲೊ ಆಸ್ಪತ್ರೆಯಲ್ಲಿ ಆ.21ರಿಂದ ಶಿವಕುಮಾರ್ ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಕೃತಕ ಉಸಿರಾಟದಲ್ಲಿದ್ದಾರೆ. ಆಪರೇಟರ್ ಜ್ಯೋತಿ ಅವರನ್ನೂ ಆ.24ರಂದು ಅಪೊಲೊ ಆಸ್ಪತ್ರೆಗೆ ಸೇರಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ.

'ಶಿವಕುಮಾರ್ ಅವರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ವೈದ್ಯರು ಉತ್ತಮ ಚಿಕಿತ್ಸೆ ನೀಡುತ್ತಿದ್ದಾರೆ. ಅವರು ಆದಷ್ಟು ಬೇಗ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಅಪೊಲೊ ಆಸ್ಪತ್ರೆಗೆ ಭೇಟಿ ನೀಡಿದ ನಂತರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಈ ಹಿಂದೆ ನಾನು ಆಸ್ಪತ್ರೆಗೆ ಭೇಟಿ ನೀಡಿದ್ದ ಸಮಯದಲ್ಲಿ ಶಿವಕುಮಾರ್ ಅವರ ಆರೋಗ್ಯ ಸುಧಾರಿಸುತ್ತಿರುವಂತೆ ಕಂಡಿತ್ತು. ಅವರಿಗೆ ಉತ್ತಮ ಚಿಕಿತ್ಸೆ ಕೊಡಿಸಬೇಕು ಎಂಬ ಕಾರಣಕ್ಕೆ ಈ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಲ್ಲಿನ ವೈದ್ಯರು ಎಲ್ಲ ರೀತಿಯ ಚಿಕಿತ್ಸೆ ನೀಡಿ ಅವರ ಆರೋಗ್ಯ ಸುಧಾರಿಸಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಬ್ಬ ಗಾಯಾಳು ಜ್ಯೋತಿ ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

'ಶಿವಕುಮಾರ್ ಆರೋಗ್ಯ ಚಿಂತಾಜನಕವಾಗಿದ್ದು, ವೈದ್ಯರು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಮಧ್ಯಂತರ ವರದಿ: ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡಕ್ಕೆ ಸಂಬಂಧಿಸಿದಂತೆ ಮಧ್ಯಂತರ ವರದಿಯನ್ನು ಇನ್ನೆರಡು ದಿನದಲ್ಲಿ ಸಲ್ಲಿಸಲಾಗುವುದು ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

'ತಜ್ಞರು ಪ್ರಯೋಗಾಲಯಕ್ಕೆ ಭೇಟಿ ನೀಡಬೇಕೆಂದು ಬಯಸಿದ್ದಾರೆ. ಪೊಲೀಸರು ಪ್ರಯೋಗಾಲಯವನ್ನು ಬಂದ್ ಮಾಡಿದ್ದು, ತಜ್ಞರ ಭೇಟಿ ಅವಕಾಶ ಮಾಡಕೊಡಬೇಕು ಎಂದು ಕೇಳಿದ್ದೇವೆ. ಬೇಜವಾಬ್ದಾರಿಯೇ ಬೆಂಕಿ ಅವಘಡಕ್ಕೆ ಕಾರಣ ಎಂಬುದು ತಿಳಿದುಬಂದಿದೆ' ಎಂದು ಅವರು ಹೇಳಿದರು.

ಅಪೊಲೊ ಆಸ್ಪತ್ರೆಗೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯ ಎಂಜಿನಿಯರ್ ಶಿವಕುಮಾರ್ ಆರೋಗ್ಯ ವಿಚಾರಿಸಿದರು

ನೀರಿಲ್ಲದೇ ಒಣಗುತ್ತಿರುವ ಉಲ್ಲಾಳು ಕೆರೆ

ಮೀನುಗಳ ಸಾಮೂಹಿಕ ಸಾವು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬಿಬಿಎಂಪಿ ವ್ಯಾಪ್ತಿಗೆ ಬರುವ ಉಲ್ಲಾಳು ಕೆರೆಯಲ್ಲಿ ನೀರಿಲ್ಲದೆ ಸಾವಿರಾರು ಮೀನುಗಳು ಸಾಯುತ್ತಿವೆ.

ಉಲ್ಲಾಳು ಕೆರೆ 27 ಎಕರೆ ಪ್ರದೇಶದ ವ್ಯಾಪ್ತಿಯಲ್ಲಿದ್ದು. ಕೆರೆಯ ಸುತ್ತಮುತ್ತ ಬಿಡಿಎ ಬಡಾವಣೆ ಮತ್ತು ಕೆಲವು ಖಾಸಗಿ ಬಡಾವಣೆಗಳು ತಲೆ ಎತ್ತಿದ ಪರಿಣಾಮವಾಗಿ ಕೆರೆಗೆ ಹರಿದು ಬರುತ್ತಿದ್ದ ನೀರುಗಾಲುವೆಗಳು ಕಣ್ಮರೆಯಾಗಿವೆ. ಇದರಿಂದ ಕೆರೆ ತುಂಬುತ್ತಿಲ್ಲ.

ಉಲ್ಲಾಳು ಕೆರೆಗೆ ಮಲ್ಲತಹಳ್ಳಿ ಕೆರೆಯಿಂದ ನೀರು ಸರಬರಾಜು ಮಾಡಲು ಪೈಪ್ ಅಳವಡಿಸಲಾಗಿತ್ತು. ಪೈಪ್ ಒಡೆದು ಹೋಗಿರುವುದರಿಂದ ನೀರು ಬಾರದೆ ಕೆರೆಯಲ್ಲಿ ಸಾವಿರಾರು ಮೀನುಗಳು ಸಾವನ್ನಪ್ಪಿವೆ ಎಂದು ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ಅನಿಲ್‌ಕುಮಾರ್ ಮಾಹಿತಿ ನೀಡಿದರು.

ನೀರು ಕಡಿಮೆಯಾಗಿ ಕೆಲವು ದಿನಗಳಿಂದ ಮೀನುಗಳು ಸಾಯುತ್ತಿದ್ದು, ಬೆಳಿಗ್ಗೆ ವಾಯು ವಿಹಾರಕ್ಕೆ ಬರುವವರು ಮೂಗು ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ನಾಲ್ಕೈದು ದಿನಗಳು ಕಳೆದರೂ ಬಿಬಿಎಂಪಿ ಕೆರೆ ಎಂಜಿನಿಯರ್ ಆಗಲಿ, ಗುತ್ತಿಗೆದಾರರಾಗಲಿ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ದೂರಿದರು.

‘ಕಲ್ಮಶದಿಂದ ಮೀನುಗಳು ಸಾಯುತ್ತಿವೆ ಎಂದು ಸ್ಥಳೀಯರು ದೂರು ನೀಡಿದ್ದರು. ಕಲ್ಮಶ ಹೊರಹಾಕಲಾಗಿದೆ. ಕೆರೆಗೆ ನೀರು ಹರಿಯದ ಕಾರಣ, ಒಣಗುತ್ತಿದೆ. ಹೀಗಾಗಿ ಮೀನುಗಳು ಸಾಯುತ್ತಿರಬಹುದು. ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಉಲ್ಲಾಳು ಕೆರೆಯಲ್ಲಿ ಸತ್ತು ಬಿದ್ದಿರುವ ಮೀನುಗಳು

ಮೇವಿಗೂ ಕೊರತೆ ಉಂಟಾಗುವ ಆತಂಕದಲ್ಲಿ ರೈತರು

ಬಾರದ ಮಳೆ: ಬಾಡಿದ ಬೆಳೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ತಾಲ್ಲೂಕಿನಲ್ಲಿ ಮಳೆಯ ಕೊರತೆ ಉಂಟಾಗಿದ್ದು, ರಾಗಿ ಹಾಗೂ ಇನ್ನಿತರ ಬೆಳೆಗಳು ಒಣಗುತ್ತಿವೆ. ತಾಲ್ಲೂಕಿನಲ್ಲಿ ಬರ ಆವರಿಸಿಕೊಳ್ಳುವ ಮುನ್ಸೂಚನೆ ಇದ್ದು, ರೈತರಲ್ಲಿ ಆತಂಕ ಮೂಡಿಸಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ರಾಗಿ ಪ್ರಮುಖ ಬೆಳೆ. ಅದರ ಜೊತೆಗೆ ಉಪ ಬೆಳೆಗಳಾಗಿ ತೊಗರಿ, ಅವರೆ, ಅಲಸಂದೆ, ಮೆಕ್ಕೆಜೋಳ, ನೆಲಗಡಲೆ ಮತ್ತು ಹುರುಳಿ ಬೆಳೆಯಲಾಗುತ್ತದೆ. ಈ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ಬಾರದೆ ಇರುವುದು ಈ ಎಲ್ಲ ಬೆಳೆಗಳ ಮೇಲೆ ಪರಿಣಾಮ ಬೀರಿದೆ.

ಸಾವಿರಾರು ರೂಪಾಯಿ ಖರ್ಚು ಮಾಡಿ ಬೇಸಾಯ ಮಾಡಿರುವ ರೈತರಿಗೆ ನಷ್ಟ ಉಂಟಾಗುವುದರ ಜೊತೆಗೆ ಪ್ರಮುಖವಾಗಿ ಹೈನುಗಾರಿಕೆಗೆ ಮೇವಿನ ಕೊರತೆ ಉಂಟಾಗುವ ಭಯ ರೈತರನ್ನು ಕಾಡುತ್ತಿದೆ.

ಈ ಮುಂಗಾರಿನಿಂದ ಇಲ್ಲಿಯವರೆಗೆ ತಾಲ್ಲೂಕಿನಲ್ಲಿ 230.76 ಮಿ.ಮೀ ಮಳೆಯಾಗಿದೆ. ವಾಡಿಕೆಗಿಂತ ಶೇ 34ರಷ್ಟು ಮಳೆ ಕೊರತೆಯಾಗಿದೆ. ಕಳೆದ ಬಾರಿ ರಾಗಿ ತೊಗರಿ, ಅವರೆ, ಅಲಸಂದೆ, ಮೆಕ್ಕೆಜೋಳ, ಸೇರಿದಂತೆ 17,742 ಹೆಕ್ಟೇರ್ ಬಿತ್ತನೆಯಾಗಿತ್ತು (ಶೇ 98ರಷ್ಟು). ಈ ವರ್ಷ 12,155 ಹೆಕ್ಟೇರ್‌ನಲ್ಲಿ ಕೇವಲ ಶೇ 65ರಷ್ಟು ಬಿತ್ತನೆಯಾಗಿದೆ. ಒಟ್ಟಾರೆ ಕಳೆದ ಬಾರಿಗಿಂತ ಶೇ 33ರಷ್ಟು ಬಿತ್ತನೆ ಕಡಿಮೆಯಾಗಿದೆ ಎನ್ನುತ್ತಾರೆ ನೆಲಮಂಗಲ ಸಹಾಯಕ ಕೃಷಿ ನಿರ್ದೇಶಕ ರಾಮಕೃಷ್ಣ. ಜುಲೈನಲ್ಲಿ ಕೊನೆಯ ವಾರದಲ್ಲಿ ಬಿತ್ತನೆಯಾದ ರಾಗಿಯು ಮಳೆ ಇಲ್ಲದೆ ಮೊಳಕೆಯಲ್ಲಿಯೇ ಸೊರಗಿದೆ.

ವಿಮೆಗೆ ಆಸಕ್ತಿ ತೋರಿದ ರೈತರು: ತಾಲ್ಲೂಕಿನ ರೈತರಲ್ಲಿ ಹೆಚ್ಚಿನ ಅರಿವು ಮೂಡಿಸಿ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿ ಅತಿ ಹೆಚ್ಚು ರೈತರನ್ನು ಬೆಳೆ ವಿಮೆ ಯೋಜನೆಗೆ ನೋಂದಾಯಿಸಲಾಗಿದೆ.

ಕಳೆದ ಸಾಲಿನಲ್ಲಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿ ಕೇವಲ 190 ರೈತರು ನೋಂದಾಯಿಸಿಕೊಂಡಿದ್ದರು. ಆದರೆ, ಈ ಸಾಲಿನಲ್ಲಿ 2,196 ರೈತರು ನೋದಾಯಿಸಿಕೊಂಡಿದ್ದಾರೆ.

ನೆಲಮಂಗಲ ತಾಲ್ಲೂಕಿನ ಕಂಬಾಳು ಗ್ರಾಮದಲ್ಲಿ ರೈತರ ರಾಗಿ ಹೊಲ ಮಳೆ ಇಲ್ಲದೆ ಬಾಡಿರುವುದು.

ಶೇ 40ರಷ್ಟು ಬೆಳೆ ನಷ್ಟ ಸಾಧ್ಯತೆ

ತಾಲ್ಲೂಕಿನಲ್ಲಿ ಮಳೆ ಕೊರತೆ ಹೀಗೆ ಮುಂದುವರಿದರೆ ಎಲ್ಲಾ ಬೆಳೆಗಳ ಫಸಲಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ರಾಗಿಯೂ ಸಂದಿಗ್ಧದಲ್ಲಿದ್ದು, ಮಳೆ ಅತ್ಯವಶ್ಯಕವಾಗಿ ಬೇಕಾಗಿರುತ್ತದೆ. ಮಳೆ ಕೊರತೆ ಹೀಗೆ ಮುಂದುವರಿದರೆ ಶೇ 20ರಿಂದ 40ರಷ್ಟು ಬೆಳೆ ನಷ್ಟ ಅಂದಾಜಿಸಬಹುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ರಾಮಕೃಷ್ಣ ಹೇಳಿದರು.

ಸೆ.3ರಂದು ‘ಶೈಕ್ಷಣಿಕ ಮೇಳ’

ಬೆಂಗಳೂರು: ಎಜುಕೇಷನ್ ಯುಎಸ್‌ಎ, ಬೆಂಗಳೂರಿನ ಯಶ್ನಾ ಟ್ರಸ್ಟ್ ಸಹಯೋಗದಲ್ಲಿ ಸೆ.3ರಂದು ಎಂ.ಜಿ.ರಸ್ತೆಯ ತಾಜ್ ಹೋಟೆಲ್‌ನಲ್ಲಿ ‘ಶೈಕ್ಷಣಿಕ ಮೇಳ’ ಆಯೋಜಿಸಲಾಗಿದೆ. ಮಧ್ಯಾಹ್ನ 2ರಿಂದ ಸಂಜೆ 5ರ ವರೆಗೆ ಮೇಳ ನಡೆಯಲಿದೆ.

ಅಮೆರಿಕದಲ್ಲಿ ಉನ್ನತ ಶಿಕ್ಷಣದ ಅವಕಾಶಗಳ ಬಗ್ಗೆ ತಿಳಿದುಕೊಳ್ಳಲು ಶೈಕ್ಷಣಿಕ ಮೇಳ ಸಹಕಾರಿ ಆಗಲಿದೆ. ಅಮೆರಿಕ ವಿ.ವಿಗಳ ಪ್ರತಿನಿಧಿಗಳನ್ನು ವಿದ್ಯಾರ್ಥಿಗಳು, ಪೋಷಕರು ಖುದ್ದು ಭೇಟಿಯಾಗಬಹುದು. ಮೇಳದಲ್ಲಿ ಮಾನ್ಯತೆ ಪಡೆದ 36 ವಿ.ವಿ ಮತ್ತು ಕಾಲೇಜುಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಈ ಮೇಳವು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸ್ನಾತಕ, ಸ್ನಾತಕೋತ್ತರ, ಪಿಎಚ್‌.ಡಿ ಕೋರ್ಸ್ ಕಲಿಯುವ ಆಸಕ್ತರಿಗೆ ಮುಕ್ತವಾಗಿರುತ್ತದೆ. ಪ್ರವೇಶ ಉಚಿತವಾಗಿರಲಿದೆ. ಆದರೆ, ನೋಂದಣಿ ಅಗತ್ಯ ಎಂದು ಪ್ರಕಟಣೆ ತಿಳಿಸಿದೆ. ನೋಂದಣಿಗೆ https://bit.ly/EdUSAFair23PR.

ಸೆ.3ರ ವರೆಗೆ ಹೈದರಾಬಾದ್, ಮುಂಬೈ, ಪುಣೆ, ನವದೆಹಲಿ, ಅಹಮದಾಬಾದ್, ಕೋಲ್ಕತ್ತ, ಚೆನ್ನೈ, ಬೆಂಗಳೂರು ಒಳಗೊಂಡಂತೆ ದೇಶದ 8 ನಗರಗಳಲ್ಲಿ ಈ ಶೈಕ್ಷಣಿಕ ಮೇಳ ನಡೆಯಲಿದೆ.

ಕಾಶ್ಮೀರ: ಮೂಲಭೂತ ಹಕ್ಕು ಕಸಿದ ಸಂವಿಧಾನದ ವಿಧಿ 35ಎ –‘ಸುಪ್ರೀಂ’

ನವದೆಹಲಿ: ಸರ್ಕಾರಿ ಉದ್ಯೋಗ, ಸ್ಥಿರಾಸ್ತಿಯನ್ನು ಸ್ವಾಧೀನ ಪಡೆಯುವುದು ಹಾಗೂ ರಾಜ್ಯದಲ್ಲಿ ನೆಲೆಯೂರುವ ಮೂರು ಹಕ್ಕುಗಳಿಗೆ ವಿನಾಯಿತಿ ನೀಡುವಂತೆ ಸಂವಿಧಾನದ ವಿಧಿ 35ಎ ರಚನೆಯಾಗಿದೆ. ಇದು, ಅಕ್ಷರಶಃ ನಾಗರಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು.

ಸಂವಿಧಾನದ ವಿಧಿ 370ರ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ಹಿಂಪಡೆದಿರುವುದಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸಿಜೆಐ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಸೋಮವಾರ ವಿಚಾರಣೆ ಮುಂದುವರಿಸಿದ ವೇಳೆ ಈ ರೀತಿ ಹೇಳಿತು.

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸುವ ಮೂಲಕ ಅದರ ಸ್ವರೂಪವನ್ನು ಕುಗ್ಗಿಸಲಾಗಿದೆಯೇ ಎಂದು ಪ್ರಶ್ನಿಸಿತು. ಸಂವಿಧಾನದ ವಿಧಿ 356 (ರಾಷ್ಟ್ರಪತಿ ಆಡಳಿತ) ಅನ್ನು ಮೂರು ವರ್ಷಗಳಿಗೆ ವಿಸ್ತರಿಸಬಹುದು. ಈ ಮಿತಿಯನ್ನು ಮೀರಲಾಗಿದೆಯೇ ಎಂದು ಪ್ರಶ್ನಿಸಿತು.

2018ರ ಕೇಂದ್ರದ ತೀರ್ಮಾನ ಸಮರ್ಥಿಸಿಕೊಂಡ ಸಾಲಿಸಿಟರ್ ಜನರಲ್ ತುಷಾರ ಮೆಹ್ತಾ, ‘ಉದ್ಯೋಗ ಬದುಕಿನ ಹಕ್ಕು ಹೌದು. ಆದರೆ, ವಿಧಿ 35ಎ ಅನ್ವಯ, ದಶಕಗಳ ಕಾಲ ವಾಸವಿದ್ದರೂ ಜಮ್ಮು ಕಾಶ್ಮೀರದ ಹೊರಗಿನ ವ್ಯಕ್ತಿ ಆಸ್ತಿ ಖರೀದಿಸಲು ಆಗುವುದಿಲ್ಲ, ಹೂಡಿಕೆ ಮಾಡುವಂತಿರಲಿಲ್ಲ ಎಂದು ಗಮನಕ್ಕೆ ತಂದರು.

ಆಗ, ಸಂವಿಧಾನದ 35ಎ ವಿಧಿ ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳಿಗೆ ವಿಶೇಷ ಹಕ್ಕು ನೀಡಲಿದೆ. ಇತರರ ಹಕ್ಕುಗಳನ್ನು ಕಸಿದುಕೊಳ್ಳಲಿದೆ ಎಂದು ಪೀಠವು ಅಭಿಪ್ರಾಯಪಟ್ಟಿತು.

ಕೇಂದ್ರ ಪಂಚಾಯತ್ ರಾಜ್ ಖಾತೆ ರಾಜ್ಯ ಸಚಿವ ಕಪಿಲ್ ಮೋರೇಶ್ವರ್ ಪಾಟೀಲ್ ಅವರು ನೇಮಕಾತಿ ಪತ್ರ ವಿತರಿಸಿದರು. ಗಡಿಭದ್ರತಾ ಪಡೆ ಕೇಂದ್ರದ ಐಜಿ ಜಾರ್ಜ್ ಮಂಜೂರನ್, ಕಮಾಂಡೆಂಟ್ ವಿಪಿನ್ ವಿಲಾಸ್ ನಾಯ್ಕ್ ಇದ್ದರು.

ರೋಜ್‌ಗಾರ್ ಮೇಳ: 224 ಮಂದಿಗೆ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಯಲಹಂಕ: ಭಾರತೀಯ ಸೇನೆಯ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಲು ತರಬೇತಿಗೆ ಆಯ್ಕೆಯಾಗಿರುವ 224 ಯುವ ಸೇನಾನಿಗಳಿಗೆ ಕೇಂದ್ರ ಪಂಚಾಯತ್‌ರಾಜ್ ಖಾತೆ ರಾಜ್ಯ ಸಚಿವ ಕಪಿಲ್ ಮೋರೇಶ್ವರ್ ಪಾಟೀಲ್ ನೇಮಕಾತಿ ಪತ್ರ ವಿತರಿಸಿದರು.

ಗಡಿ ಭದ್ರತಾ ಪಡೆ(ಬಿ.ಎಸ್‌.ಎಫ್) ಸಹಾಯಕ ಪ್ರಶಿಕ್ಷಣ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ರೋಜ್ಗಾರ್ ಮೇಳದಲ್ಲಿ ಅವರು ನೇಮಕಾತಿ ಪತ್ರ ವಿತರಣೆ ಮಾಡಿದರು.

ನೇಮಕಾತಿ ಪಡೆದ ವಿದ್ಯಾರ್ಥಿಗಳು ಹೆಚ್ಚಿನ ಶ್ರದ್ಧೆಯೊಂದಿಗೆ ದೇಶದ ಭದ್ರತೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಎಸ್‌ಎಫ್, ಸಿಆರ್‌ಪಿಎಫ್, ಎಸ್‌.ಎಸ್‌.ಬಿ ಮತ್ತು ಐಟಿಬಿಪಿಗೆ ಒಟ್ಟು 224 ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಗಡಿಭದ್ರತಾ ಪಡೆ ಕೇಂದ್ರದ ಐಜಿ ಜಾರ್ಜ್ ಮಂಜೂರನ್, ಕಮಾಂಡೆಂಟ್ ವಿಪಿನ್ ವಿಲಾಸ್ ನಾಯ್ಕ್ ಉಪಸ್ಥಿತರಿದ್ದರು.

ಬಿಜೆಪಿ ಚಾರ್ಜ್‌ಶೀಟ್ ಇಂದು

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ನೂರು ದಿನಗಳಲ್ಲಿ ಸಾಧನೆಗಿಂತ ವೇದನೆಯೇ ಹೆಚ್ಚು ಎಂದು ಜನರಿಗೆ ತಿಳಿಸಲು ಸರ್ಕಾರದ ವಿರುದ್ಧ ಬಿಜೆಪಿ ಮಂಗಳವಾರ ‘ಚಾರ್ಜ್‌ಶೀಟ್’ ಬಿಡುಗಡೆ ಮಾಡಲಿದೆ.

ಈ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಶಾಸಕ ಬಸವರಾಜ ಬೊಮ್ಮಾಯಿ ಮತ್ತು ಪಕ್ಷದ ಇತರ ನಾಯಕರೂ ಭಾಗವಹಿಸಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ನಗರದಲ್ಲಿ ಇಂದು

ಭಗವಾನ್ ಜಿಹ್ವೇಶ್ವರ ಜಯಂತಿ ಆಚರಣೆ ಹಾಗೂ ಸಂಘದ 17ನೇ ವಾರ್ಷಿಕ ಸಭೆ: ಉದ್ಘಾಟನೆ: ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ಕೃಷ್ಣ ಭೈರೇಗೌಡ, ಎನ್‌.ಎಸ್‌. ಬೋಸರಾಜು, ಅಧ್ಯಕ್ಷತೆ: ಪ್ರದೀಪ್ ರೋಖಡೆ, ಆಯೋಜನೆ: ಸಂಯುಕ್ತ ಸ್ವಕುಳಸಾಲಿ ಸಂಘ, ಸ್ಥಳ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತದ ಬಳಿ, ಗಾಂಧಿನಗರ, ಬೆಳಿಗ್ಗೆ 7

ಎಲೆಕ್ಟ್ರಿಕ್ ವಾಹನಗಳ ತಂತ್ರಜ್ಞಾನದ ಬಗ್ಗೆ ಕಾರ್ಯಾಗಾರ: ಮುಖ್ಯ ಅತಿಥಿ: ರಂಗಾರೆಡ್ಡಿ, ಮುಖ್ಯ ಭಾಷಣ: ಸಂಜೀವ್ ಕೆ. ನಾಯಕ್, ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9

ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಪ್ರಯುಕ್ತ ಪುಷ್ಪ ನಮನ ಹಾಗೂ ದಾಸೋಹ: ಆಯೋಜನೆ: ವೀರಶೈವ ಲಿಂಗಾಯತ ಮಹಾ ವೇದಿಕೆ, ಸ್ಥಳ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವೃತ್ತ, ಕೆ.ಜಿ. ರಸ್ತೆ, ಬೆಳಿಗ್ಗೆ 8.30ರಿಂದ

‘ಗಾನಧಾರೆ’ ಭಾವಗೀತೆ ಕಾರ್ಯಕ್ರಮ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಮುಖ್ಯ ಅತಿಥಿಗಳು: ಪ್ರಭಾಕರ ಶಾಸ್ತ್ರಿ, ಎಂ.ಟಿ. ನಾಣಯ್ಯ, ಅಧ್ಯಕ್ಷತೆ: ಎನ್‌. ದೇವದಾಸ್, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ಚಂದ್ರಶೇಖರ ಕಂಬಾರ

ದುಂಡು ಮೇಜಿನ ಸಭೆ: ‘ಕಾವೇರಿ ನೀರಿನ ಹಂಚಿಕೆ ವಿಚಾರವಾಗಿ ಕನ್ನಡಿಗರ ಮತ್ತು ಕರುನಾಡಿನ ರೈತರ ರಕ್ಷಣೆ ಹಾಗೂ ಸರ್ಕಾರದ ಜವಾಬ್ದಾರಿ’ ಕುರಿತು, ಆಯೋಜನೆ: ಕರ್ನಾಟಕ ಜಲ ಸಂರಕ್ಷಣಾ ಸಮಿತಿ, ಸ್ಥಳ: ಶಾಸಕರ ಭವನ, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಮಹೋತ್ಸವ: ಉದ್ಘಾಟನೆ: ಲೀಲಾದೇವಿ ಆರ್‌. ಪ್ರಸಾದ್, ಅಧ್ಯಕ್ಷತೆ: ಮಂಜುನಾಥ್ ಆರ್‌.ವಿ., ಮುಖ್ಯ ಅತಿಥಿ: ಕೆ.ವಿ. ನಾಗರಾಜಮೂರ್ತಿ, ಪ್ರಾಸ್ತಾವಿಕ ನುಡಿ: ಹಾ.ವೀ. ಮಂಜುಳಾ ಶಿವಾನಂದ, ಆಯೋಜನೆ: ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ಅಭಿನಂದನಾ ಕಾರ್ಯಕ್ರಮ: ಉತ್ತಮ ಸೌಹಾರ್ದ ಸಹಕಾರಿಗಳು, ಶ್ರೇಷ್ಠ ಸಹಕಾರಿ ವ್ಯಕ್ತಿಗಳು ಹಾಗೂ ‘ಸಹಕಾರ ರತ್ನ’ ಪುರಸ್ಕೃತರಿಗೆ, ಉದ್ಘಾಟನೆ: ಕೆ.ಎನ್‌. ರಾಜಣ್ಣ, ಅಧ್ಯಕ್ಷತೆ: ಜಿ. ನಂಜನಗೌಡ, ಮುಖ್ಯ ಅತಿಥಿಗಳು: ನಿಖಿಲ್ ಕತ್ತಿ, ಮಂಜುನಾಥ್ ಪ್ರಸಾದ್, ರಾಜೇಂದ್ರ ಕೆ., ಆಯೋಜನೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಸ್ಥಳ: ಪ್ರಿನ್ಸೆಸ್ ಗಾಲ್ಫ್, ಅರಮನೆ ಮೈದಾನ, ಮಧ್ಯಾಹ್ನ 12.30

ವಚನ ಶ್ರಾವಣ: ನೃತ್ಯ: ನಾಟ್ಯ ಸನ್ನಿಧಿ ವಿದ್ಯಾರ್ಥಿಗಳು, ವಚನ ಗಾಯನ: ಎಸ್‌. ಪಿನಾಕಪಾಣಿ, ವಚನ ಚಿಂತನ: ನಂ. ವಿಜಯಕುಮಾರ್, ಉಪಸ್ಥಿತಿ: ಮೋನಿಷ ನವಿನ್, ಅಧ್ಯಕ್ಷತೆ: ಬಿ.ಎಸ್‌. ಶಿವಪ್ರಕಾಶ್, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ನಾಟ್ಯ ಸನ್ನಿಧಿ, # 50, 60 ಅಡಿ ರಸ್ತೆ, 4ನೇ ಬ್ಲಾಕ್, ಡಿ ಗ್ರೂಪ್ ಲೇಔಟ್, ಹೇರೋಹಳ್ಳಿ, ಸಂಜೆ 5.30

ರಾಮಕೃಷ್ಣ ಹೆಗಡೆ ಅವರ 97ನೇ ಜನ್ಮದಿನೋತ್ಸವ: ಸಂಗೀತ ಕಾರ್ಯಕ್ರಮ: ಕೆ.ಎಸ್‌. ವೈಶಾಲಿ, ಅಕ್ಷಯ್ ಜೋಶಿ, ಮಧುಸೂದನ್ ಭಟ್, ಉಪಸ್ಥಿತಿ: ಮಮತಾ ನಿಚ್ಚಾನಿ, ಟಿ. ಪ್ರಭಾಕರ್, ಎಂ.ಪಿ. ನಾಡಗೌಡ, ಆಯೋಜನೆ: ರಾಷ್ಟ್ರೀಯ ನವನಿರ್ಮಾಣ ವೇದಿಕೆ, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 5.30



ರಾಮಕೃಷ್ಣ ಹೆಗಡೆ

ಬೆಂಗಳೂರು ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಕೆ.ಎನ್‌. ಫಣೀಂದ್ರ, ಅಧ್ಯಕ್ಷತೆ: ಸಿ.ಎಸ್‌. ಷಡಾಕ್ಷರಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಸಂಜೆ 6

ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಸಪ್ತರಾತ್ರೋತ್ಸವ: ಉದ್ಘಾಟನೆ: ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 6.30

ಹರಿದಾಸ ನಮನ: ಅನಂತಕುಲಕರ್ಣಿ ಬಾಗಲಕೋಟೆ ಮತ್ತು ಸಂಗಡಿಗರು, ಆಯೋಜನೆ: ಹರಿದಾಸ ನಮನಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಈಜುಕೊಳದ ಬಡಾವಣೆ, ಸಂಜೆ 6.30

ದಾಸವಾಣಿ: ಕಮಲಾ ಶ್ರೀನಿವಾಸ್, ವಿಮಲಾ ಸತ್ಯನಾಥ್, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 7

ರಾಜಕೀಯ ಹೇಳಿಕೆಗಳ ಅಬ್ಬರ

'ಮತ ಹೆಚ್ಚಿಸಿಕೊಳ್ಳುವತ್ತ ಗಮನ'

ಬೆಂಗಳೂರು: 'ಅನ್ಯ ಪಕ್ಷಗಳ ಶಾಸಕರು ಕಾಂಗ್ರೆಸ್ ಸೇರುವ ವಿಚಾರದ ಬಗ್ಗೆ ನನ್ನ ಬಳಿ ಯಾರೂ ಚರ್ಚೆ ಮಾಡಿಲ್ಲ. ಆದರೆ, ಬೇರೆ ಪಕ್ಷಗಳ ಶಾಸಕರನ್ನು ಕರೆದುಕೊಳ್ಳುವುದಕ್ಕಿಂತ ನಮ್ಮ ಮತ ಪ್ರಮಾಣ ಹೆಚ್ಚಿಸಿಕೊಳ್ಳುವತ್ತ ಹೆಚ್ಚು ಗಮನಹರಿಸುತ್ತಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಸೇರಿದಂತೆ ಬೇರೆ ಶಾಸಕರು ನಿಮ್ಮ ಪಕ್ಷದ ನಾಯಕರ ಸಂಪರ್ಕದಲ್ಲಿ ಇಲ್ಲವೇ' ಎಂಬ ಪ್ರಶ್ನೆಗೆ, 'ಈ ಬಗ್ಗೆ ನೀವು ಅವರನ್ನೇ ಕೇಳಬೇಕು. ನಾವು ಬಿಜೆಪಿ ಶಾಸಕರ ಕ್ಷೇತ್ರಗಳಲ್ಲೂ ಜನರಿಗೆ ನೆರವಾಗಿ ಅವರ ಸಮಸ್ಯೆ ಬಗೆಹರಿಸಲು ಮುಂದಾಗುತ್ತಿದ್ದೇವೆ. ನಮಗೆ ಇಡೀ ರಾಜ್ಯದ ಅಭಿವೃದ್ಧಿ ಮುಖ್ಯ. ಸೋಮಶೇಖರ್ ಅವರು ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಿದ್ದಾರೆ. ಅದನ್ನು ಬಗೆಹರಿಸುವ ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ರಾಜಕೀಯ ಯಾಕೆ ಮಾಡಬೇಕು' ಎಂದರು.

'ಭವಿಷ್ಯ ಹೇಳಲು ಜ್ಯೋತಿಷಿ ಅಲ್ಲ'

ಪ್ರಜಾವಾಣಿ ವಾರ್ತೆ



ಶಿವರಾಮ ಹೆಬ್ಬಾರ್

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): 'ಈಗಿನವರೆಗೆ ನಾನು ಬಿಜೆಪಿಯ ಶಾಸಕ. ಬಿಜೆಪಿಯಲ್ಲಿಯೇ ಇದ್ದೇನೆ. ಭವಿಷ್ಯದ ಬಗ್ಗೆ ಹೇಳಲು ನಾನು ಜ್ಯೋತಿಷಿಯಲ್ಲ' ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

'ಯಲ್ಲಾಪುರ ಕ್ಷೇತ್ರವನ್ನು ಬರಪೀಡಿತವೆಂದು ಘೋಷಿಸಲು ಕೋರಿ ಈಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದೆ. ಇದರ ಹಿಂದೆ ಯಾವುದೇ ರಾಜಕೀಯ ಕಾರಣಗಳಿರಲಿಲ್ಲ. ಭೇಟಿ ಬಗ್ಗೆ ಯಾರು ಏನು ಬೇಕಾದರೂ ಮಾತನಾಡಲಿ. ಅದರ ಬಗ್ಗೆ ತಲೆಕೆಡಿಸಿಕೊಳ್ಳಲ್ಲ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್ ಸೇರ್ಪಡೆ ಬಗ್ಗೆ ನನಗೇ ಮಾಹಿತಿ ಇಲ್ಲ. ಆದರೆ, ಹಲವು ವದಂತಿಗಳಿವೆ. ಅವುಗಳಿಗೆ ಉತ್ತರಿಸುವುದು ಅಗತ್ಯವಿಲ್ಲ. ವಿವೇಚನೆಯಿಂದ ಉತ್ತರ ನೀಡುವೆ' ಎಂದರು.

'ಕ್ಷೇತ್ರದಲ್ಲಿ 'ಕೆರೆ ತುಂಬಿಸುವ ಯೋಜನೆ' ಕಾಮಗಾರಿ ಪೂರ್ಣಗೊಂಡಿದ್ದು, ಅನುಷ್ಠಾನ ಬಾಕಿ ಇದೆ. ಅಧಿಕಾರಿಗಳ ತಂಡವು ಅಂತಿಮ ಹಂತದ ವೀಕ್ಷಣೆ ಕಾರ್ಯ ನಡೆಸಿ ಒಪ್ಪಿಗೆ ನೀಡಿದ ಬಳಿಕ ಯೋಜನೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸುವರು' ಎಂದರು.

'ಕಾಂಗ್ರೆಸ್‌ನತ್ತ ಕಲ್ಯಾಣ ಕರ್ನಾಟಕದ ಪ್ರಮುಖರು'



ಎನ್.ಎಸ್. ಭೋಸರಾಜು

ಮಡಿಕೇರಿ: 'ಕಲ್ಯಾಣ ಕರ್ನಾಟಕದ ಪ್ರಮುಖ ನಾಯಕರು ಕಾಂಗ್ರೆಸ್ ಸೇರಲು ಒಲವು ತೋರಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ತಿಳಿಸಿದರು.

'ಈಗಾಗಲೇ ಅನೇಕರು ನನ್ನೊಂದಿಗೆ ಸಂಪರ್ಕದಲ್ಲಿದ್ದಾರೆ. ಇನ್ನೂ ಮಂದಿ ಬರುತ್ತಾರೆಂದು ಹೇಳಲಾಗದು. ಬಿಜೆಪಿಯಿಂದ ಅತಿ ಮುಖ್ಯವಾದ ನಾಯಕರು ಪಕ್ಷಕ್ಕೆ ಬಂದರೆ ಅವರ ಪಡೆಯಲು, ಅವರು ಪಕ್ಷಕ್ಕೆ ಬರುವುದರಿಂದ ಆಗುವ ಲಾಭ, ನಷ್ಟಗಳನ್ನು ಕುರಿತು ರಾಜ್ಯ ನಾಯಕರಿಗೆ ಮಾಹಿತಿ ನೀಡಲಾಗಿದೆ' ಎಂದು ಇಲ್ಲಿ ಸೋಮವಾರ ಸುದ್ದಿಗಾರರಿಗೆ ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ಮೈಸೂರು– ಕೊಡಗು ಕ್ಷೇತ್ರದಿಂದ ಡಾ.ಯತೀಂದ್ರ ಸಿದ್ದರಾಮಯ್ಯ ಕಣಕ್ಕೆ ಇಳಿಯುವ ವಿಚಾರ ಗೊತ್ತಿಲ್ಲ. ಇದುವರೆಗೆ ಯಾರ ಹೆಸರೂ ಪ್ರಸ್ತಾಪವಾಗಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಆಪರೇಷನ್ ಹಸ್ತ'ದ ಅನಿವಾರ್ಯತೆ ಇಲ್ಲ'

ಬೆಂಗಳೂರು: 'ಆಪರೇಷನ್ ಹಸ್ತ ಮಾಡುವ ಅನಿವಾರ್ಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ. ನಮ್ಮ ತತ್ವ, ಸಿದ್ಧಾಂತ ಯಾರು ಒಪ್ಪಿಕೊಳ್ಳುತ್ತಾರೋ ಅಂಥವರಿಗೆ ಪಕ್ಷಕ್ಕೆ ಸ್ವಾಗತವಿದೆ' ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬಿಜೆಪಿ ಶಾಸಕರು, ಸಂಸದರು ನನ್ನ ಜೊತೆ ಚೆನ್ನಾಗಿದ್ದಾರೆ. ಸ್ಥಳೀಯ ಮಟ್ಟದಲ್ಲಿ ವಿರೋಧ ಇಲ್ಲದವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತದೆ. ನಿರೀಕ್ಷೆ ಇಟ್ಟುಕೊಂಡು ಬರುವವರ ಗೌರವಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕಾಗುವುದು ನಮ್ಮ ಕರ್ತವ್ಯ' ಎಂದರು.

'ಸದ್ಯ ಆಪರೇಷನ್ ಹಸ್ತ ಎನ್ನುವ ಪದವೇ ನಮ್ಮ ಬಳಿ ಇಲ್ಲ. ಎಲ್ಲಿ ನಮಗೆ ಸೋಲಾಗಿದೆ, ಕಾರ್ಯಕರ್ತರಿಗೆ ಸಮಸ್ಯೆಯಾಗಿದೆ, ಅಲ್ಲಿ ನಾವು ಪಕ್ಷ ಸಂಘಟನೆ ಮಾಡುತ್ತೇವೆ. ನಾವು ಯಾರನ್ನೂ ಪಕ್ಷಕ್ಕೆ ಸೆಳೆಯುವ ಪ್ರಯತ್ನ ಮಾಡುತ್ತಿಲ್ಲ. ಪಕ್ಷ ದುರ್ಬಲವಾಗಿರುವ ಕಡೆಗಳಲ್ಲಿ ಸಂಘಟನೆ ಗಟ್ಟಿ ಮಾಡುವಂತೆ ಕೆಪಿಸಿಸಿ ಅಧ್ಯಕ್ಷರು, ವರಿಷ್ಠರು ಸೂಚನೆ ನೀಡಿದ್ದಾರೆ' ಎಂದರು.

ಬೆಂಗಳೂರು ಉತ್ತರ ಕ್ಷೇತ್ರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಸದ್ಯಕ್ಕೆ ರಾಜಕಾರಣವೇ ಸಾಕು ಎಂದು ನಾನಿದ್ದೇನೆ, ಉತ್ತರನೋ, ದಕ್ಷಿಣನೋ, ಪೂರ್ವವೋ, ಪಶ್ಚಿಮವೋ ನನಗೆ ಗೊತ್ತಿಲ್ಲ. ನನ್ನನ್ನು ರಾಜಕೀಯವಾಗಿ ಬೆಳೆಸುತ್ತಿರುವವರ ತೀರ್ಮಾನವೇ ಅಂತಿಮ' ಎಂದರು.

ಡಿಕೆಸು– ಸುರೇಶ್ ಗೌಡ ಚರ್ಚೆ

ತುಮಕೂರು ಲೋಕಸಭೆ ಕ್ಷೇತ್ರವನ್ನು ಗೆಲ್ಲಲು ರಾಜಕೀಯ ಕಾರ್ಯತಂತ್ರ ರೂಪಿಸುತ್ತಿರುವ ಕಾಂಗ್ರೆಸ್, ಆ ಭಾಗದ ಬಿಜೆಪಿ– ಜೆಡಿಎಸ್ ನಾಯಕರನ್ನು ಸೆಳೆಯುವ ಯತ್ನ ಚುರುಕುಗೊಳಿಸಿದೆ.

ಈ ಮಧ್ಯೆಯೇ, ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರನ್ನು ತುಮಕೂರು ಗ್ರಾಮೀಣ ಕ್ಷೇತ್ರದ ಬಿಜೆಪಿ ಶಾಸಕ ಸುರೇಶ್ ಗೌಡ ಭೇಟಿ ಮಾಡಿರುವುದು ಕುತೂಹಲ ಮೂಡಿಸಿದೆ. ಡಿ.ಕೆ. ಸುರೇಶ್ ನಿವಾಸದಲ್ಲಿ ಇಬ್ಬರು ನಾಯಕರು ಸುದೀರ್ಘ ಚರ್ಚೆ ನಡೆಸಿದ್ದಾರೆ. ಜೊತೆಗೆ, ತುಮಕೂರು ಭಾಗದ ಜೆಡಿಎಸ್‌ನ ಹಾಲಿ– ಮಾಜಿ ಶಾಸಕರಿಬ್ಬರನ್ನು ಕಾಂಗ್ರೆಸ್ ಕಡೆ ಸೆಳೆಯುವ ಪ್ರಯತ್ನ ನಡೆಯುತ್ತಿದೆ ಎನ್ನಲಾಗಿದೆ. ಪ್ರಭಾವಿ ಬಿಜೆಪಿ ನಾಯಕರೊಬ್ಬರನ್ನು ಪಕ್ಷಕ್ಕೆ ಕರೆತಂದು ತುಮಕೂರು ಲೋಕಸಭೆ ಟಿಕೆಟ್ ನೀಡಲು ಕಾಂಗ್ರೆಸ್‌ನಲ್ಲಿ ಚರ್ಚೆ ನಡೆಯುತ್ತಿದೆ ಎಂದೂ ಹೇಳಲಾಗಿದೆ.

'ಸದ್ಯ ಕಾಂಗ್ರೆಸ್‌ಗೆ ಹೋಗಲ್ಲ, ಜನವರಿಯಲ್ಲಿ ನಿರ್ಧಾರ'

ಪ್ರಜಾವಾಣಿ ವಾರ್ತೆ

ಶಂಕರ ಪಾಟೀಲ

ಶಂಕರ ಪಾಟೀಲ ಮುನೇನಕೊಪ್ಪ ಜೊತೆ ಮಾತನಾಡಿದ್ದೇನೆ. ಬಿಜೆಪಿ ಬಿಟ್ಟು ಹೋಗಲ್ಲ ಎಂದು ಭರವಸೆ ನೀಡಿದ್ದಾರೆ. ಬಿಜೆಪಿ ತತ್ವ, ಸಿದ್ಧಾಂತಕ್ಕೆ ಬದ್ಧರಾಗಿರುವವರು ಪಕ್ಷದಲ್ಲಿ ಇರುತ್ತಾರೆ. ಅಧಿಕಾರಕ್ಕಾಗಿ ಕೆಲವರು ಪಕ್ಷ ಬಿಟ್ಟು ಹೋಗಿರುವುದು ದೌರ್ಭಾಗ್ಯ.
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಹುಬ್ಬಳ್ಳಿ: 'ಕಾಂಗ್ರೆಸ್ ಸೇರುವ ವಿಚಾರ ಸದ್ಯಕ್ಕಿಲ್ಲ. ನನ್ನ ಕ್ಷೇತ್ರದ ಮತದಾರರು, ಹಿತೈಷಿಗಳ ಜೊತೆ ಚರ್ಚಿಸಿ ಜನವರಿಯಲ್ಲಿ ನಿರ್ಣಯ ಪ್ರಕಟಿಸುವೆ' ಎಂದು ಬಿಜೆಪಿ ನಾಯಕ ಶಂಕರ ಪಾಟೀಲ ಮುನೇನಕೊಪ್ಪ ತಿಳಿಸಿದರು.

'ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸೇರಿ ಯಾವ ಕಾಂಗ್ರೆಸ್ ಮುಖಂಡರೂ ನನ್ನನ್ನು ಸಂಪರ್ಕಿಸಿಲ್ಲ. ಪಕ್ಷಕ್ಕೆ ಆಹ್ವಾನಿಸಿಲ್ಲ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಲೋಕಸಭೆಗೆ ಸ್ಪರ್ಧಿಸುವ ಬಗ್ಗೆ ಆಲೋಚನೆಯಿಲ್ಲ. ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುವೆ. ವೈಯಕ್ತಿಕ ಕಾರಣಗಳಿಂದ ನವೆಂಬರ್‌ವರೆಗೆ ಪಕ್ಷದ ಸಭೆ ಮತ್ತು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ. ಇದನ್ನು ಪಕ್ಷದ ಮುಖಂಡರಿಗೆ ತಿಳಿಸಿ, ಅನುಮತಿ ಪಡೆದಿರುವೆ' ಎಂದು ಅವರು ಹೇಳಿದರು.

ಅಸಮಾಧಾನವಿದೆ: 'ಇತ್ತೀಚಿನ ಕೆಲ ಬೆಳವಣಿಗೆಗಳಿಂದ ಪಕ್ಷದ ಕೆಲ ನಾಯಕರ ಬಗ್ಗೆ ಅಸಮಾಧಾನವಿದೆ. ಪಕ್ಷದಲ್ಲಿರುವ ಎಲ್ಲ ಜಾತಿಯ ನಾಯಕರನ್ನು ಸೇರಿ ಧಾರವಾಡ ಜಿಲ್ಲೆಯ ನಾಯಕರನ್ನು ಒಗ್ಗೂಡಿಸಿ ಒಯ್ಯುವ ಕೆಲಸವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾಡಬೇಕಿತ್ತು. ಹಿಂದೆ ಇದನ್ನು ಅನಂತಕುಮಾರ್ ಮತ್ತು ಜಗದೀಶ ಶೆಟ್ಟರ ಮಾಡುತ್ತಿದ್ದರು' ಎಂದರು.

'ಬಿಜೆಪಿಗೆ ಸಾಮಾನ್ಯ ಕಾರ್ಯಕರ್ತನಾಗಿ ಸೇರಿದ ನಾನು ಬೆಳೆಯಲು ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಕಾರಣ. ಕಾರ್ಯಕರ್ತ, ಶಾಸಕ ಮತ್ತು ಸಚಿವನಾಗಿ ಕೆಲಸ ಮಾಡಲು ಅವರು ಸಹಕರಿಸಿದರು. ಪಕ್ಷವನ್ನು ಲಿಂಗಾಯತರು ಅಷ್ಟೇ ಅಲ್ಲ, ಅನ್ಯಜಾತಿಯವರೂ ತೊರೆದಿದ್ದಾರೆ' ಎಂದರು.

ಯಾವ ತನಿಖೆಗೂ ಹೆದರುವುದಿಲ್ಲ: ಸುಧಾಕರ್

ಬೆಂಗಳೂರು: 'ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ನಾನು ಯಾವ ತಪ್ಪನ್ನೂ ಮಾಡಿಲ್ಲ. ಯಾವ ತನಿಖೆಗೂ ಹೆದರುವುದಿಲ್ಲ' ಎಂದು ಮಾಜಿ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆ ಹೆಸರಿನಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ಆಯೋಗ ನೇಮಿಸಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಾನು ಒತ್ತಡಗಳಿಗೆ ಮಣಿಯುವ ಅವಶ್ಯಕತೆಯೇ ಇಲ್ಲ' ಎಂದರು. 'ಕೋವಿಡ್ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಕೆಲವರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರು, ನರ್ಸ್‌ಗಳೂ ಆಗ ಮೃತಪಟ್ಟಿದ್ದಾರೆ. ಅಂತಹ ಪ್ರಕರಣಗಳಲ್ಲಿ ನನ್ನನ್ನು ಹೊಣೆ ಮಾಡಲಾಗುತ್ತದೆಯೆ' ಎಂದು ಪ್ರಶ್ನಿಸಿದರು.

28 ಕ್ಷೇತ್ರಗಳಲ್ಲೂ ಸ್ಪರ್ಧೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಚಿಂತನೆ ಇದೆ. ಯಾವುದೇ ಪಕ್ಷದೊಂದಿಗೂ ಮೈತ್ರಿ ಪ್ರಸ್ತಾವ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸೋಮವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡು ಸಾಕಷ್ಟು ಅನುಭವಿಸಿದ್ದೇವೆ. ಕಾಂಗ್ರೆಸ್‌ನವರು ಕತ್ತು ಕೊಯ್ಯುವ ಕೆಲಸ ಮಾಡಿದರು. ಅದರಿಂದ ನಮ್ಮ ಪಕ್ಷದ ಕಾರ್ಯಕರ್ತರು ಬಲಿಪಶುವಾಗಬೇಕಾಯಿತು. 28 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳು ಗೆಲ್ಲುತ್ತಾರೆ ಎನ್ನುವುದಿಲ್ಲ. ಆದರೆ, 4–5 ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸವಿದೆ' ಎಂದು ತಿಳಿಸಿದರು.

'ಎಲ್ಲಾ ಕ್ಷೇತ್ರಗಳಲ್ಲೂ ಕಾರ್ಯಕರ್ತರನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆದಿರುವುದರಿಂದ ಸ್ವತಂತ್ರವಾಗಿ ಚುನಾವಣೆ ಎದುರಿಸುತ್ತೇವೆ. ಕಳೆದ ಚುನಾವಣೆಯಲ್ಲಿ ನಿಖಿಲ್ ಸ್ಪರ್ಧಿಸಲು ತಯಾರಿರಲಿಲ್ಲ, ಆದರೆ ಶಾಸಕರು ಹಾಗೂ ಕಾರ್ಯಕರ್ತರ ಒತ್ತಡಕ್ಕೆ ಮಣಿದು ತಲೆ ಕೊಡಬೇಕಾಯಿತು' ಎಂದರು.

'5 ವರ್ಷ ಯಾವುದೇ ಚುನಾವಣೆ ಬೇಡ ಎಂದು ನಿಖಿಲ್‌ಗೆ ಹೇಳಿದ್ದೇನೆ. ಅವನು ಸ್ಪರ್ಧಿಸಿದ್ದ 2 ಚುನಾವಣೆಯಲ್ಲೂ ಕುತಂತ್ರಕ್ಕೆ ಬಲಿಯಾಗಿದ್ದಾನೆ. ದೇವರು ಕೊಟ್ಟಿರುವ ಸಿನಿಮಾ ಕಲೆಯಲ್ಲೇ ಮುಂದುವರಿಯುತ್ತಾನೆ. ಅವನಿಗಾಗಿ ಮೂರು ಸಿನಿಮಾ ಮಾಡಲು ನಿರ್ಮಾಪಕರು ಮುಂದೆ ಬಂದಿದ್ದಾರೆ' ಎಂದರು.

'ಕಾವೇರಿ ವಿಷಯವನ್ನು ಸರ್ಕಾರ ನಿರ್ಲಕ್ಷ್ಯಿಸುತ್ತಿದೆ. ನೀರು ನಿರ್ವಹಣಾ ಮಂಡಳಿಯವರು ಕೊಡಿ ಎಂದೊಡನೆ ನೀರು ಬಿಡುಗಡೆಮಾಡಿತು.ಆಬಗ್ಗೆನಮ್ಮಕಡೆಯವರುಪ್ರತಿಭಟಿಸಬೇಕಾಗಿತ್ತು. ಬೆಳೆ ಬೆಳೆಯಬೇಡಿ ನಷ್ಟ ಪರಿಹಾರ ಕೊಡುತ್ತೇವೆ ಎಂದು ತಕ್ಷಣವೇ ಘೋಷಿಸಿ, ಸರ್ಕಾರ ರೈತರಿಗೆ 6ನೇ ಗ್ಯಾರಂಟಿ ಕೊಡಬೇಕು' ಎಂದು ಒತ್ತಾಯಿಸಿದರು.

'ಕೃಷಿ ಸಚಿವರ ವಿರುದ್ಧ ಅಧಿಕಾರಿಗಳು ಬರೆದಿರುವ ಪತ್ರದ ಸಾರಾಂಶದ ಬಗ್ಗೆ ತನಿಖೆಯಾಗಬೇಕು. ಕೃಷಿ ಇಲಾಖೆಯಲ್ಲಿ ಜೆಡಿ, ಎಡಿ ಹಂತದಲ್ಲಿ ಲಂಚ ನಿಗದಿಯಾಗಿದ್ದು ಆ ಬಗ್ಗೆ ಯಾವ ಅಧಿಕಾರಿಯೂ ಬಹಿರಂಗವಾಗಿ ಹೇಳುವುದಿಲ್ಲ. ಹೀಗಾಗಿ ಪತ್ರದಲ್ಲಿರುವ ವಿಷಯದ ಬಗ್ಗೆ ತನಿಖೆಯಾಗಬೇಕು' ಎಂದರು.

ಸೆ.10 ರಂದು ಸಮಾವೇಶ

ಬೆಂಗಳೂರು: 'ಜೆಡಿಎಸ್ ಪಕ್ಷ ಬಲ ಕಳೆದುಕೊಳ್ಳಲು ಅವಕಾಶ ನೀಡುವುದಿಲ್ಲ. ಪಕ್ಷದ ಸಂಘಟನೆಗೆ ಮತ್ತೆ ಶಕ್ತಿ ತುಂಬಲು ಸೆಪ್ಟೆಂಬರ್ 10ರಂದು ನಗರದ ಅರಮನೆ ಮೈದಾನದಲ್ಲಿ ಸಮಾವೇಶ ನಡೆಸಲಾಗುವುದು' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವನ್ನು ತುಳಿಯುತ್ತಿದ್ದಾರೆ. ಈಗ ಪಕ್ಷವನ್ನು ರಕ್ಷಿಸುವುದು ನನ್ನ ಗುರಿ. 91ರ ಇಳಿ ವಯಸ್ಸಿನಲ್ಲೂ ಪಕ್ಷಕ್ಕಾಗಿ ಕೆಲಸ ಮಾಡುತ್ತಿದ್ದೇನೆ. ಈ ಹಂತದಲ್ಲಿ ಕಾರ್ಯಕರ್ತರು ನನ್ನ ಕೈ ಬಿಡಬೇಡಿ' ಎಂದು ಭಾವುಕರಾಗಿ ಮನವಿ ಮಾಡಿದರು.

ಸೆ.10 ರ ಸಮಾವೇಶದಲ್ಲಿ 20,000ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಕಾರ್ಯಕರ್ತರು ಸ್ವಂತ ಶಕ್ತಿಯಿಂದ ಬಂದು ಭಾಗವಹಿಸಬೇಕು. ಎಲ್ಲ ಜಿಲ್ಲೆಗಳ ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಳ್ಳಬೇಕು ಎಂದರು.

'100 ದಿನಗಳ 'ಸರ್ವಾಧಿಕಾರಿ' ಆಡಳಿತ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದ ನೂರು ದಿನಗಳ ಸಾಧನೆ ಎಂದರೆ ವಿಧಾನಸೌಧದ ಮೂಲೆ–ಮೂಲೆಯಲ್ಲೂ ಭ್ರಷ್ಟಾಚಾರದ ತಾಂಡವ, ಗುತ್ತಿಗೆದಾರರ ಬಿಲ್ ಬಾಕಿ ಉಳಿಸಿಕೊಂಡು ಕಮಿಷನ್ ದಂಧೆಗೆ ಆರಂಭಿಸಿರುವುದು ಮತ್ತು ಸರ್ವಾಧಿಕಾರಿ ಆಡಳಿತ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ವ್ಯಾಖ್ಯಾನಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, 'ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ಸರ್ಕಾರ ನೂರು ದಿನಗಳಲ್ಲಿ ಎಡವಿದ್ದೇ ಹೆಚ್ಚು. ಗ್ಯಾರಂಟಿ ನೆಪದಲ್ಲಿ ಒಂದು ವರ್ಷದ ಅಭಿವೃದ್ಧಿಯ ಎಲ್ಲ ಕಾಮಗಾರಿಗಳನ್ನೂ ನಿಲ್ಲಿಸಿದ್ದಾರೆ. ವರ್ಗಾವಣೆಯನ್ನು ಕಮಿಷನ್ ದಂಧೆಯನ್ನಾಗಿ ಮಾಡಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.

'ರೈತರು ಬರಗಾಲದ ಬವಣೆಯಲ್ಲಿ ಸಿಲುಕಿದ್ದರೂ ಕೂಡ ಸರ್ಕಾರ ಆ ಕಡೆ ತಿರುಗಿ ನೋಡಿಲ್ಲ. ರೈತರ ಆತ್ಮಹತ್ಯೆ ಮತ್ತೆ ಆರಂಭವಾಗಿದೆ. ಕೃಷಿ ಉತ್ಪಾದನೆಗೆ ಪೆಟ್ಟು ಬೀಳುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಪೂರ್ಣ ಪ್ರಮಾಣದ ಗ್ಯಾರಂಟಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಹರಿಹಾಯ್ದಿದ್ದಾರೆ.

'ಒಂದು ಕಡೆ ವಿದ್ಯುತ್ ದರ ಹೆಚ್ಚಿಸಿ ಗ್ರಾಹಕರಿಗೆ ಶಾಕ್ ಕೊಟ್ಟಿದೆ. ಸಾರಿಗೆ ಸಿಬ್ಬಂದಿಗೆ ಸಮರ್ಪಕವಾದ ಸಂಬಳವನ್ನೂ ನೀಡಿಲ್ಲ. 10 ಕೆ.ಜಿ ಅಕ್ಕಿ ಗ್ಯಾರಂಟಿಯನ್ನು ಈಡೇರಿಸಲಾಗಿಲ್ಲ. ಕೇಂದ್ರದ ಐದು ಕೆ.ಜಿ ಅಕ್ಕಿಯೇ ಜನರ ಸಹಾಯಕ್ಕೆ ಬಂದಿದೆ. ರಾಜ್ಯದಲ್ಲಿ ಗೃಹ ಲಕ್ಷ್ಮಿಯರ ಹುಡುಕಾಟ ಪೂರ್ಣಗೊಂಡಿಲ್ಲ' ಎಂದು ಬೊಮ್ಮಾಯಿ ಟೀಕಿಸಿದ್ದಾರೆ.

'ಈ ಮಧ್ಯೆ ಗ್ಯಾರಂಟಿ ಕಾರ್ಯಕ್ರಮಗಳಿಗೆ ಎಸ್‌ಸಿ ಎಸ್‌ಟಿ ಅಭಿವೃದ್ಧಿಗಾಗಿ ಮೀಸಲಾದ ₹11,000 ಕೋಟಿ ಬಳಕೆ ಮಾಡಿಕೊಂಡು ಎಸ್‌ಸಿ–ಎಸ್‌ಟಿಯವರಿಗೆ ಸರ್ಕಾರ ಮೋಸ ಮಾಡಿದೆ' ಎಂದು ಹೇಳಿದ್ದಾರೆ.

'ರಾಜ್ಯ ಸರ್ಕಾರ ಕಾವೇರಿ ಜಲಾನಯನ ಪ್ರದೇಶದ ರೈತರು ಮತ್ತು ಸಾರ್ವಜನಿಕರ ಹಿತ ಕಾಯಲು ವಿಫಲವಾಗಿದೆ. ನಮ್ಮ ಅಣೆಕಟ್ಟೆಗಳ ಕೀಲಿಕೈಯನ್ನು ತಮಿಳುನಾಡಿಗೆ ಒಪ್ಪಿಸಿ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಪೈಪೋಟಿಗೆ ಇಳಿದಿದ್ದಾರೆ. ಇದರಿಂದ ಆಡಳಿತದ ವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರಿದೆ. ಕಾನೂನು ಸುವ್ಯವಸ್ಥೆಯೂ ಸಂಪೂರ್ಣವಾಗಿ ಹದಗೆಟ್ಟಿದೆ. ಕೊಲೆ– ಸುಲಿಗೆ ಸಾಮಾನ್ಯವಾಗಿದೆ' ಎಂದಿದ್ದಾರೆ.

'ಜನಸಾಮಾನ್ಯರು, ಮಾಧ್ಯಮ, ಸಂಘ–ಸಂಸ್ಥೆಗಳು ದುರಾಡಳಿತದ ವಿರುದ್ಧ ಧ್ವನಿ ಎತ್ತುವುದನ್ನು ಪೊಲೀಸ್ ಇಲಾಖೆ ಮೂಲಕ ಹತ್ತಿಕ್ಕುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ಮತ್ತು ಸರ್ವಾಧಿಕಾರಿ ಆಡಳಿತ ಎಂಬುದು ನೂರು ದಿನಗಳಲ್ಲಿ ಗೊತ್ತಾಗಿದೆ' ಎಂದು ಬೊಮ್ಮಾಯಿ ಹೇಳಿದ್ದಾರೆ.

ಸೂಕ್ಷ್ಮವಲಯದಲ್ಲಿ ಅಕ್ರಮ ಕಟ್ಟಡ: ತೆರವಿಗೆ ಕೂಗು

ಒಂದನೇ ಪುಟದಿಂದ...

'ಆನೆಗಳ ಓಡಾಟ ಇಲ್ಲಿ ಹೆಚ್ಚಾಗಿದೆ. ಜಮೀನು ಮಾಲೀಕರು ಬೇಲಿಗೆ ದೀಪಗಳನ್ನು ಅಳವಡಿಸುತ್ತಿದ್ದು, ಬೆಳಕಿಗೆ ಬೆದರುವ ಆನೆಗಳು ರೈತರ ಜಮೀನಿಗೆ ನುಗ್ಗುತ್ತಿವೆ' ಎಂದು ಬಾಚಹಳ್ಳಿ ಗ್ರಾಮದ ಮಹೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ವಾಣಿಜ್ಯ ಚಟುವಟಿಕೆಗೆ ಅವಕಾಶ ಇಲ್ಲ: 'ಪರಿಸರ ಸೂಕ್ಷ್ಮ ವಲಯದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿಲ್ಲ. ವಾಸ ಹಾಗೂ ಕೃಷಿ ಉದ್ದೇಶಕ್ಕೆ ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಬಹುದು. ಅದಕ್ಕೂ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿಯ ಅನುಮತಿ ಅಗತ್ಯ.

'ತಾತ್ಕಾಲಿಕ ಉದ್ದೇಶದ ಮನೆ ಕಟ್ಟಲು ಅನುಮತಿ ಪಡೆಯುವ ಜಮೀನು ಮಾಲೀಕರು, ಶಾಶ್ವತ ಕಟ್ಟಡ ಕಟ್ಟುತ್ತಾರೆ. ಹೋಂ ಸ್ಟೇಗಳನ್ನು ಮಾಡಿ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಾರೆ' ಎಂಬುದು ಪರಿಸರವಾದಿಗಳ ದೂರು.

'ಸೂಕ್ಷ್ಮ ವಲಯದಲ್ಲಿ ಕಾರ್ಯಾಚರಿಸುತ್ತಿರುವ ವಾಣಿಜ್ಯ ಉದ್ದೇಶದ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅವರು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ (ಎನ್‌ಟಿಸಿಎ) ಪತ್ರ ಬರೆದಿದ್ದರು. ಈ ಪತ್ರದ ಆಧಾರದಲ್ಲಿ ಪ್ರಾಧಿಕಾರವು ರಾಜ್ಯದ ಮುಖ್ಯ ವನ್ಯಜೀವಿ ವಾರ್ಡನ್ ಅವರಿಗೆ ಕಟ್ಟಡಗಳ ಬಗ್ಗೆ ವಸ್ತುಸ್ಥಿತಿ ವರದಿ ನೀಡುವಂತೆ ಸೂಚಿಸಿದೆ. ಆದರೆ, ಈ ವಿಚಾರದಲ್ಲಿ ಹೊಸ ಬೆಳವಣಿಗೆ ಏನೂ ಆಗಿಲ್ಲ.

ಸಮನ್ವಯ ಕೊರತೆ: ಪರಿಸರ ಸೂಕ್ಷ್ಮ ವಲಯ ಅರಣ್ಯ ಪ್ರದೇಶವಲ್ಲ. ಅದು ಕಂದಾಯ ಭೂಮಿಯಾಗಿರುವುದರಿಂದ, ಅಲ್ಲಿ ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಕಂದಾಯ ಇಲಾಖೆ ಕ್ರಮಕೈಗೊಳ್ಳಬೇಕು ಎಂಬುದು ಅರಣ್ಯ ಅಧಿಕಾರಿಗಳ ಪ್ರತಿಪಾದನೆ. ಇದು ಅರಣ್ಯ ಇಲಾಖೆಯ ವ್ಯಾಪ್ತಿಯ ವಿಚಾರವಾಗಿರುವುದರಿಂದ ಅಲ್ಲಿನ ಅಧಿಕಾರಿಗಳೇ ಆಸಕ್ತಿ ವಹಿಸಬೇಕು ಎಂಬುದು ಕಂದಾಯ ಅಧಿಕಾರಿಗಳ ವಾದ. ಇಲಾಖೆಗಳ ನಡುವಣ ಸಮನ್ವಯದ ಕೊರತೆಯೂ ಅಕ್ರಮ ಕಟ್ಟಡಗಳ ತೆರವಿಗೆ ಅಡಚಣೆಯಾಗಿದೆ.

ಕ್ರಮ ಕೈಗೊಳ್ಳದ ಇಲಾಖೆ: ಆರೋಪ

'ಪರಿಸರ ಸೂಕ್ಷ್ಮ ವಲಯದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣದ ಬಗ್ಗೆ ಮಾಹಿತಿ ಇದ್ದರೂ ಅರಣ್ಯಾಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ' ಎಂಬುದು ಪರಿಸರವಾದಿಗಳ ಆರೋಪ. ಹಿಂದಿನ ಕೆಲವು ಅಧಿಕಾರಿಗಳು ಅಕ್ರಮ ಕಟ್ಟಡಗಳ ಬಗ್ಗೆ ಕ್ರಮ ಕೈಗೊಳ್ಳುವ ಅಗತ್ಯದ ಬಗ್ಗೆ ಬಲವಾಗಿ ಪ್ರತಿಪಾದಿಸಿದ್ದರು. 2020ರಲ್ಲಿ ಹುಲಿ ಯೋಜನೆ ನಿರ್ದೇಶಕರಾಗಿದ್ದ ಬಾಲಚಂದ್ರ ಅವರು ಅಕ್ರಮ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಂದಿನ ಜಿಲ್ಲಾಧಿಕಾರಿ ಎಂ.ಆರ್.ರವಿಯವರಿಗೆ ಪತ್ರ ಬರೆದಿದ್ದರು. 2016ರ ಜುಲೈ 18ರಂದು ನಡೆದಿದ್ದ ಪರಿಸರ ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿಯ ಮೊದಲ ಸಭೆಯಲ್ಲಿ ಅಂದಿನ ಹುಲಿ ಯೋಜನೆ ನಿರ್ದೇಶಕ, ಸಮಿತಿಯ ಸದಸ್ಯ ಕಾರ್ಯದರ್ಶಿ ಹೀರಾಲಾಲ್ ಅವರು, 'ಕಣಿಯನಪುರ ಆನೆ ಕಾರಿಡಾರ್ ಪ್ರದೇಶದಲ್ಲಿ ರೈತರು ಬೀಳು ಬಿಟ್ಟಿದ್ದ ಜಮೀನುಗಳನ್ನು ಖರೀದಿಸಿ, ವನ್ಯಜೀವಿ ಕಾರಿಡಾರ್ ಅಭಿವೃದ್ಧಿ ಪಡಿಸಲು ಇಲಾಖೆ ಕ್ರಮ ಕೈಗೊಳ್ಳುತ್ತಿದೆ. ಆದರೆ, ದೂರದೂರಿನವರು ಜಮೀನು ಖರೀದಿಸಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ' ಎಂದಿದ್ದರು.

ಅನುಮತಿ ಇಲ್ಲದೆ ನಿರ್ಮಿಸಲಾಗಿರುವ, ವಿಸ್ತರಿಸಲಾಗಿರುವ ಎಲ್ಲ ರೀತಿಯ ಕಟ್ಟಡಗಳನ್ನು ಕಾನೂನು ಪ್ರಕಾರವಾಗಿ ನೆಲಸಮ ಗೊಳಿಸಬೇಕು
ಗಿರಿಧರ ಕುಲಕರ್ಣಿ
ವನ್ಯಜೀವಿ ಸಂರಕ್ಷಣಾವಾದಿ

ಬೇಲಿ ಹಾಕಿರುವುದರಿಂದ ಆನೆಗಳು ಗ್ರಾಮ ಹಾಗೂ ರೈತರ ಜಮೀನುಗಳಿಗೆ ಬರುತ್ತಿರುವ ಬಗ್ಗೆ ದೂರುಗಳು ಬಂದಿವೆ. ಪರಿಶೀಲನೆ ನಡೆಸಲಾಗುವುದು
ಪಿ.ರಮೇಶ್‌ಕುಮಾರ್
ಹುಲಿ ಯೋಜನೆ ನಿರ್ದೇಶಕ

'ಪರಿಸರಸೂಕ್ಷ್ಮ ವಲಯ ಪ್ರದೇಶದ ಅಧ್ಯಕ್ಷರು ಪ್ರಾದೇಶಿಕ ಆಯುಕ್ತರು. ಕಂದಾಯ ಇಲಾಖೆಯವರ ಪಾತ್ರ ಇಲ್ಲಿ ಹೆಚ್ಚಿದೆ. ಅಕ್ರಮ ಕಟ್ಟಡಗಳ ತೆರವಿಗೆ ಎಲ್ಲ ಇಲಾಖೆಗಳ ಸಹಕಾರವೂ ಬೇಕು' ಎನ್ನುತ್ತಾರೆ ಹುಲಿ ಯೋಜನೆ ನಿರ್ದೇಶಕ ರಮೇಶ್‌ಕುಮಾರ್.

ಪೂರಕ ಮಾಹಿತಿ: ಮಲ್ಲೇಶ ಎಂ.

'ಕಾಂಗ್ರೆಸ್ ತಟ್ಟೆಯಲ್ಲಿ ಉಣ್ಣುವವರಿಗೆ ಸ್ವಾಗತ'

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಶಿರಸಿ (ಉತ್ತರ ಕನ್ನಡ ಜಿಲ್ಲೆ): 'ಕಾಂಗ್ರೆಸ್ ಪಕ್ಷಕ್ಕೆ ಈಗಾಗಲೇ ಹೊಟ್ಟೆ ತುಂಬಿದೆ. ಆದರೆ, ಬೇರೆ ಪಕ್ಷದವರು ಬಂದು ಇಲ್ಲಿ ಉಣ್ಣುವಷ್ಟು ತಟ್ಟೆಯಲ್ಲಿ ಊಟವಿದೆ. ಬೇರೆ ಪಕ್ಷಗಳ ನಾಯಕರಿಗೆ ಸ್ವಾಗತವಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

'ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಬರುವ ಶಾಸಕರು, ಮಾಜಿ ಶಾಸಕರು ಕಾಂಗ್ರೆಸ್‌ಗೆ ಬರಬಹುದು. ಆಯಾ ಕ್ಷೇತ್ರಗಳಲ್ಲಿ ಸ್ಥಳೀಯ ನಾಯಕರ ಅಸಮಾಧಾನವಿದ್ದಲ್ಲಿ, ಹಿರಿಯ ನಾಯಕರು ಬಗೆಹರಿಸುತ್ತಾರೆ. ಕೆಲವೊಮ್ಮೆ ಪಕ್ಷ ಸೇರ್ಪಡೆ ಅನಿವಾರ್ಯವಾಗುತ್ತದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಪ್ರಧಾನಿ ದೇಶಕ್ಕೆ ತಂದೆಯಿದ್ದಂತೆ. ಸಂತೋಷದ ಸಂದರ್ಭದಲ್ಲಿ ಇಸ್ರೊಗೆ ಭೇಟಿ ನೀಡಲು ರಾಜ್ಯಕ್ಕೆ ಬಂದಂತೆ, ಕಷ್ಟದ ಸಂದರ್ಭದಲ್ಲಿ ಮಣಿಪುರಕ್ಕೆ ಯಾಕೆ ಹೋಗಲಿಲ್ಲ ಎಂಬುದನ್ನು ಬಿಜೆಪಿಯ ನಾಯಕರು ಅಥವಾ ಕಾರ್ಯಕರ್ತರು ಉತ್ತರಿಸಬೇಕು' ಎಂದು ಅವರು ಪ್ರಶ್ನಿಸಿದರು.

'ಮೋದಿ ರಾಜ್ಯಕ್ಕೆ ಬಂದಾಗ, ಬಿಜೆಪಿ ನಾಯಕರನ್ನು ಸರಿಯಾದ ಜಾಗದಲ್ಲಿ ಇಟ್ಟಿದ್ದಾರೆ. ವಿರೋಧ ಪಕ್ಷದ ನಾಯಕನೂ ಇಲ್ಲದ ಬಿಜೆಪಿಯವರು ಮೋದಿ ಹೆಸರಲ್ಲಿ ಮತ ಕೇಳಿದ್ದರು. ಈಗ ಅದೇ ಮೋದಿ ಅವರನ್ನು ನಿರ್ಲಕ್ಷಿಸಿದ್ದಾರೆ' ಎಂದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–1/2022–23/1862 ದಿನಾಂಕ: 24–08–2023

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಮತ್ತು ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **http://kpp. karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	SC Category	
1)	PWD/2023-24/RD/WORK_INDENT4022	2.50
2)	PWD/2023-24/BD/WORK_INDENT3811	44.52
	ST Category	
3)	PWD/2023-24/BD/WORK_INDENT3	10.00
	General Category	
4)	PWD/2023-24/BD/WORK_INDENT38	0.91
5)	PWD/2023-24/BD/WORK_INDENT711	10.00
6)	PWD/2023-24/RD/WORK_INDENT3469	4.90
7)	PWD/2023-24/RD/WORK_INDENT3468	4.90
8)	PWD/2023-24/RD/WORK_INDENT3802	5.00
9)	PWD/2023-24/RD/WORK_INDENT3803	12.26
10)	PWD/2023-24/BD/WORK_INDENT3876	38.12
11)	PWD/2023-24/RD/WORK_INDENT924	200.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.
ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **04-09-2023** ರಂದು **12.00** ಗಂಟೆಯ ವರೆಗೆ. ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **07-09-2023** ರಂದು **16.00** ಗಂಟೆಯ ವರೆಗೆ. ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **08-09-2023** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/232/ಕೆಎಸ್‌ಎಂಸಿಎ/2023–24

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 NOTICE FOR PRIVATE SALE OF GOLD 28/08/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-09-2023 as shown below:

Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore, Karnataka- 560097 Ph,. No. 9544597221 :- 23966400000498,23966400000506.

Br. Bangalore/Sadashivanagar: #88, Keerthi, 2nd Main, Palace Guttahalli P O, Bangalore- 560 003 Ph No. 080 23565050 :- 21986400039645,21986400040213,21986400037102,21986400037110,21986400037136,21986400037557.

Br. Chikkaballapur: No 1153/3, BB Road, Chikkaballapur- 562 101 Ph No. 08156-274088 :- 20216400032551,20216400032593,20216400032452,20216400028880,20216400037949,20216400037428,20216400035554,20216400038723.

Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157 , Ph No. 080-28467032 :- 20866400034732,20866400035093,20866400035275,20866400030755,20866400034724, 20866400016853,20866400029252,20866400037370,20866400037628,20866400020491,20866400035481,20866400037388,20866400034930,20866400040408, 20866400039095,20866400037529,20866400034922,20866400039111,20866400024360, 20866400037230,20866400034914,20866400041133,20866400025847, 20866400037248,20866400037784,20866400035291,20866400034112,20866400037834,20866400036703,20866400036828,20866400037750.

Br. Doddaballapur: D Cross Road, Doddaballapur, Bangalore Rural- 561 203 Ph No.080-27622105 :- 16316400082873,16316400094936,16316400082980,16316400080562,16316400085025,16316400085678,16316400088581,16316400088995,16316400089985, 16316400090892,16316400094951,16316400089480,16316400087047,16316400085868,16316400092856,16316400088680,16316400080463,16316400093557, 16316400074078,16316400092773,16316400089886,16316400092161,16316400080521,16316400075992,16316400084788,16316400085587,16316400090009, 16316400091601,16316400080547,16316400070985,16316400091783,16316400078111,16316400090876,16316400074557,16316400071215,16316400088268, 16316400070811,16316400058238,16316400068161,16316400085660,16316400060739,16316400095131,16316400087898,16316400093342,16316400083038, 16316400092609,16316400091585,16316400059541,16316400079168,16316400051670,16316400090223,16316400089860,16316400087120,16316400075570, 16316400094787,16316400080661,16316400080646,16316400081099,16316400081529,16316400081636,16316400081636,16316400088359,16316400091361, 16316400082345,16316400066132,16316400081743,16316400082303,16316400082501,16316400081016,16316400082550,16316400061653,16316400082576, 16316400069037,16316400082626,16316400082568,16316400082758,16316400082865.

Br. Dommasandra: Khata No. 13 - Gramathana, Dommasandra (Bangalore East), Bidarahalli Hobli, Virgonagar P O, Bangalore- 560 049, Ph No. 080-29906232:- 21656400008391,21656400012419,21656400009936,21656100045891,21656100042732,21656400013490,21656400014688, 21656400012161,21656400011650,21656400005884,21656400009928,21656400013458,21656400010975,21656400009183,21656400009944,21656400013441, 21656400012831,21656400014597,21656400015644,21656400011171, 21656400015396,21656400015768,21656100044118,21656400014183,21656400015891, 21656400010843,21656100044399,21656400012534,21656400014381,21656400013763,21656400009381,21656400009704,21656400012609,21656400013474, 21656400005074,21656400004572,22626400048704,21656100044134,21656700001971.

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :- 21636400061434,21636400061715,21636400061400,21636400061798,21636400063828,21636400063497,21636400060279,21636400061608,21636400047839, 21636400054934,21636400063489,21636400065427,21636400061251,21636400061699,21636400060972,21636400064362,21636400060543,21636400047730, 21636400063422,21636400061079,21636400064321,21636400056152,21636400059230,21636400061970,21636400061806,21636400066466,21636400041626, 21636400047847,21636400061988,21636400059305,21636400060097,21636400043788,21636400047854,21636400061996,21636400060493,21636400060709, 21636400061533,21636400064339,21636400056681,21636400050684.

Br. Hoskote: Gangamma Gudi Road, M V Extension, Hoskote, Bangalore Rural-562 114 Ph no. 080-27933430:- 15856400027205,15856400024707,15856400019897,15856400024996,15856400024715,15856400028013,15856400016935,15856400027577.

Br. Jangamakote Cross: No. 295, Hosapet Village, Jangamakote Cross, Shidlaghtta Taluk, Chikballapur- 562 102 Ph no. 08158252222 :- 21696100026442,21696100026525,21696100026533,21696400024469,21696400028221,21696400030664,21696400025037,21696400025052,21696400031050, 21696400025581,21696400024238,21696100027739,21696400028445,21696400025003,21696400024881,21696400024964,21696400029088,21696400025284, 21696400029005.

Br. Kunigal: KRS Agrahara, BM Road, Kunigal, Tumkur- 572 130 Ph no. 08132221111 :- 20706400074728,20706400075774,20706400062384,20706400075782,20706400065049,20706400073589,20706400072276,20706400072268,20706400062160, 20706400073423,20706400073407,20706400074934,20706400074827,20706400074819,20706400074751,20706400074777,20706400075576,20706400051338, 20706400074587,20706400066138,20706400047310,20706400075378,20706400077697,20706400073787,20706400071229,20706400071369,20706400071690, 20706400073753,20706400071922,20706400071393,20706400072680,20706400073795,20706400063796,20706400041719,20706400076624,20706400065916, 20706400074355,20706400074793.

Br. Nelamangala: Paramanna Layout, B H Road, Nelamangala, Bangalore Rural- 562 123 Ph no. 080-27722251 :- 15536400095879,15536400095861,15536400095887,15536400096240,15536400096265,15536400096687,15536400099624,15536400092132,15536400097545, 15536400096661,15536400097164,15536400085144,15536400090813,15536400086027,15536400086019,15536400086225,15536400086407,15536400086399, 15536400086381,15536400086373,15536400086308,15536400096026,15536400096745,15536400097487.

Br. Tumkur: Amogh Mansion, KR Extension, Tumkur-572 101 Ph no. 0816-2255470 :- 16036400067118,16036400076333,16036400075780,16036400073538,16036400074114,16036400066011,16036400072951,16036400076325,16036400056699, 16036400046799,16036400071169,16036400070591,16036400076341,16036400076192,16036400076606,16036400071219,16036400072944,16036400076473, 16036400072068,16036400063497,16036400066490,16036400076358,16036400076499,16036400066417,16036400073363,16036400065559.

Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur, Tumkur- 572 201 Ph no. 08313425011 4 :- 19906400023492,19906400022395,19906400023328,19906400022650.

Bangalore 28-08-2023 Vice President & Zonal Head

ನಿಮ್ಮ ಯಕೃತ್ತಿಗೆ ನೀವೇ ಜವಾಬ್ದಾರಿ

ಡಾ. ವಿನಯ ಶ್ರೀನಿವಾಸ್

ಪಿತ್ತಜನಕಾಂಗ ಅಥವಾ ಯಕೃತ್ತು (ಲಿವರ್) ನಮ್ಮ ಶರೀರದ ಎರಡನೆಯ ದೊಡ್ಡ ಅಂಗಾಂಗ. ಹಲವಾರು ಕೆಲಸಗಳನ್ನು ನಿರ್ವಹಿಸುವ ಈ ಅಂಗಾಂಗವನ್ನು ದೇಹದ ಕಾರ್ಖಾನೆ, ಉಗ್ರಾಣ, ಶೋಧಕ, ಆರಕ್ಷಕ ಮತ್ತು ಬಹುತೇಕ ಎಲ್ಲಾ ಪ್ರಮುಖ ಚಯಾಪಚಯ ಕ್ರಿಯೆಗಳ ತಾಣ ಎಂದರೆ ಸರಿಹೋಗಬಹುದು. ಅಷ್ಟೇ ಅಲ್ಲ, ಒಂದು ಅಂತಃಸ್ರವ ಗ್ರಂಥಿಯಂತೆ, ವಿಸರ್ಜನಾ ಅಂಗದಂತೆ, ಕೆಲವೊಮ್ಮೆ ರಕ್ತದ ಉತ್ಪಾದಕನಂತೆ ಮತ್ತು ರೋಗನಿರೋಧಕ ವ್ಯವಸ್ಥೆಯ ಭಾಗವಾಗಿಯೂ ಇದು ಕಾರ್ಯೋನ್ಮುಖವಾಗುವುದಿದೆ. ಕರುಳುಗಳಿಂದ ಹೀರಲ್ಪಟ್ಟ ಅನೇಕ ರಾಸಾಯನಿಕಗಳನ್ನು ವಿವಿಧ ಪ್ರಕ್ರಿಯೆಗೆ ಒಳಪಡಿಸಿ ಅಲ್ಲಿ ಉತ್ಪತ್ತಿಯಾಗುವ ಹಾನಿಕಾರಕ ವಸ್ತುಗಳನ್ನು ಶರೀರದಿಂದ ಹೊರಹಾಕುವ ಕಾರ್ಯವೂ ಯಕೃತ್ತಿನದೇ. ತನ್ನ ಶೇ. ತೊಂಬತ್ತರಷ್ಟು ಭಾಗಕ್ಕೆ ಹಾನಿಯಾದರೂ ಪುನಃ ಬೆಳೆದು ಮೊದಲಿನ ಕಾರ್ಯಕ್ಷಮತೆಯನ್ನು ಪಡೆಯುವ ವಿಶೇಷ ಶಕ್ತಿ ಯಕೃತ್ತಿಗೆ ಇದೆ.

ಮುಖ್ಯ ಕಾರ್ಯಗಳು

- ವ್ಯಕ್ತಿ ಹಲವು ಗಂಟೆಗಳ ಕಾಲ ಆಹಾರ ಸೇವಿಸದಿದ್ದಾಗ ಮತ್ತು ಒತ್ತಡಕ್ಕೆ ಒಳಗಾದಾಗ ತನ್ನಲ್ಲಿ ಸಂಗ್ರಹವಾಗಿದ್ದ ಪಿಷ್ಟಾಂಶವನ್ನು ಬಿಡುಗಡೆ ಮಾಡಿ ಶರೀರಕ್ಕೆ ಶಕ್ತಿಯನ್ನು ಪೂರೈಸುವುದು.
- ವಿವಿಧ ಕೊಬ್ಬಿನಾಂಶಗಳ ಚಯಾಪಚಯ ಕ್ರಿಯೆ.
- ಪ್ರಮುಖ ಪ್ರೊಟೀನ್ ಘಟಕಗಳ ಉತ್ಪಾದನೆ.
- ಶರೀರದ ಚಯಾಪಚಯ ಕ್ರಿಯೆಯಲ್ಲಿನ ಉಪ ಉತ್ಪನ್ನಗಳನ್ನು ಮತ್ತು ಹೊರಗಿನಿಂದ ಶರೀರವನ್ನು ಸೇರಿದ ಇತರ ವಿಷಕಾರಕ ವಸ್ತುಗಳನ್ನು ಮೂತ್ರಪಿಂಡ ಮತ್ತು ಕರುಳುಗಳ ಮೂಲಕ ಹೊರಹಾಕುವುದು
- ದೇಹಕ್ಕೆ ಅಧಿಕವಾದ ಪಿಷ್ಟಾಂಶ, ಕೊಬ್ಬಿನಾಂಶ ಮತ್ತು 'ಎ' ಜೀವಸತ್ವವನ್ನು ಸಂಗ್ರಹಿಸಿಡುವುದು.
- ರಕ್ತಹೆಪ್ಪುಗಟ್ಟುವಿಕೆಯಲ್ಲಿ ನೆರವಾಗುವ ಮತ್ತು ರೋಗನಿರೋಧಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುವ ಅನೇಕ ಪ್ರೊಟೀನ್‌ಗಳನ್ನು ಉತ್ಪಾದಿಸುವುದು.

ಬಾಧಿಸುವ ಕಾಯಿಲೆಗಳು

- 'ಹೆಪಟೈಟಿಸ್ ವೈರಾಣು' ಎಂದೇ ಕರೆಯಲ್ಪಡುವ ಒಟ್ಟು ಆರು ಬಗೆಯ ವೈರಾಣುಗಳ ಜೊತೆ ಇತರ ವೈರಾಣುಗಳೂ ಯಕೃತ್ತಿನಲ್ಲಿ ಉರಿಯೂತವನ್ನು ಉಂಟುಮಾಡಬಹುದು. ಹೆಪಟೈಟಿಸ್ 'ಎ' ಮತ್ತು 'ಈ' ವೈರಾಣುಗಳು ಕಲುಷಿತ ಆಹಾರ ಮತ್ತು ನೀರಿನ ಮೂಲಕ ವ್ಯಕ್ತಿಯನ್ನು ತಲುಪಿದರೆ ಹೆಪಟೈಟಿಸ್ 'ಬಿ', 'ಡಿ' ಮತ್ತು 'ಸಿ' ವೈರಾಣುಗಳು ಸೋಂಕಿತ ರಕ್ತ ಮತ್ತು ರಕ್ತದ ಉತ್ಪನ್ನಗಳ ಮೂಲಕ, ರೋಗಿಯೊಡನೆಯ ಲೈಂಗಿಕ ಸಂಪರ್ಕದ ಮೂಲಕ ಹಾಗೂ ಸೋಂಕಿತ ತಾಯಿಯಿಂದ ಗರ್ಭಾಶಯದಲ್ಲಿರುವ ಮಗುವಿಗೆ ತಲುಪುತ್ತವೆ.
- ಅತಿಯಾದ ಮದ್ಯಪಾನ ಮತ್ತು ಅಪೌಷ್ಟಿಕತೆಯೂ ಯಕೃತ್ತಿನಲ್ಲಿ ಒಂದು ಬಗೆಯ ಉರಿಯೂತಕ್ಕೆ ಕಾರಣವಾಗುತ್ತದೆ.
- ಚಯಾಪಚಯಾ ಕ್ರಿಯೆಗಳಲ್ಲಿ ಪ್ರಮುಖ ಪಾತ್ರವಹಿಸುವ ಕೆಲವು ಕಿಣ್ವಗಳ ಕೊರತೆ ಜನ್ಮಜಾತವಾಗಿ ಇದ್ದಾಗಲೂ ಯಕೃತ್ತು ಅನಾರೋಗ್ಯಕ್ಕೆ ತುತ್ತಾಗಬಹುದು.
- ಕೆಲವು ಔಷಧಗಳ ದೀರ್ಘಕಾಲದ ಬಳಕೆ ಮತ್ತು ಕೆಲವು ಬಗೆಯ ವಿಷಕಾರಕ ಅಣಬೆಗಳು ಯಕೃತ್ತಿಗೆ ಹಾನಿಕಾರಕವಾಗಬಹುದು.
- ಪಿತ್ತಕೋಶದ ನಾಳಗಳಲ್ಲಿ ತೊಡಕು ಉಂಟಾದಾಗಲೂ ಯಕೃತ್ತು ಒತ್ತಡಕ್ಕೆ ಸಿಲುಕಬಹುದು.
- ಇಲಿ ಜ್ವರದ (ಲೆಪ್ಟೋಸ್ಪೈರೋಸಿಸ್) ಸೂಕ್ಷ್ಮಾಣು ಹಾಗೂ ಅಪರೂಪಕ್ಕೆ ಕೆಲವು ಪರಾವಲಂಬಿ ಸೂಕ್ಷ್ಮಾಣುಗಳೂ ಉರಿಯೂತವನ್ನು ಉಂಟುಮಾಡಬಹುದು.

ಗುಣಲಕ್ಷಣಗಳೇನು?

- ಆಯಾಸ
- ಕಾಮಾಲೆ (ಜಾಂಡೀಸ್): ದೇಹವು ಹಳದಿಬಣ್ಣಕ್ಕೆ ತಿರುಗುವುದು.
- ವಾಕರಿಕೆ, ವಾಂತಿ ಮತ್ತು ಹಸಿವಾಗದಿರುವುದು
- ಹೊಟ್ಟೆಯ ಬಲ ಮತ್ತು ಮೇಲ್ಭಾಗದಲ್ಲಿ ನೋವು.

ನೆನಪಿಡಿ, ಯಕೃತ್ತಿನ ಕಾರ್ಯಕ್ಷಮತೆಯಲ್ಲಿ ಸ್ವಲ್ಪ ಮಟ್ಟಿನ ಏರುಪೇರಾದಾಗ ವ್ಯಕ್ತಿಯಲ್ಲಿ ಯಾವುದೇ ಲಕ್ಷಣಗಳು ಕಾಣಿಸವು. ಏಕೆಂದರೆ ಕೇವಲ ಶೇ. ಹತ್ತರಷ್ಟು ಸಹಜತೆ ಇದ್ದರೂ ತನ್ನ ಸಂಪೂರ್ಣ ಕಾರ್ಯಕ್ಷಮತೆಯನ್ನು ಕಾಯ್ದಿರಿಸಿಕೊಳ್ಳುವ ವಿಭಿನ್ನ ಅಂಗಾಂಗ ಇದಾಗಿದೆ.

ಆರೋಗ್ಯವಾಗಿದೆಯೇ?

ಯಕೃತ್ತಿನ ಕಾರ್ಯಕ್ಷಮತೆಯನ್ನು ಅಳೆಯಲು ಒಂದಿಷ್ಟು ರಕ್ತಪರೀಕ್ಷೆಗಳಿವೆ. ಅವನ್ನು ಒಟ್ಟಾರೆ ಯಕೃತ್ತಿನ ಕಾರ್ಯಕ್ಷಮತೆಯ ಪರೀಕ್ಷೆಗಳು ಎನ್ನುತ್ತೇವೆ. ರಕ್ತದಲ್ಲಿನ ಕೆಲವು ಪ್ರೊಟೀನ್‌ಗಳು, ಕಿಣ್ವಗಳು ಮತ್ತು ಉಪ ಉತ್ಪನ್ನಗಳಾದ ಬಿಲಿರುಬಿನ್ ಅಂಶಗಳ ಪ್ರಮಾಣ ಯಕೃತ್ತಿನ ಆರೋಗ್ಯದ ಸೂಚನೆಯನ್ನು ಕೊಡಬಲ್ಲದು. ಇದರೊಂದಿಗೆ ಹೊಟ್ಟೆಯ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಪರೀಕ್ಷೆ ಯಕೃತ್ತಿನ ಆಕಾರ ಮತ್ತು ರಚನೆಯಲ್ಲಿನ ದೋಷಗಳನ್ನು ಪತ್ತೆ ಹಚ್ಚುತ್ತದೆ.

ಕಸಿ ಸಾಧ್ಯ

ಇಂದು ಯಕೃತ್ತಿನ ಕಸಿ ಸಾಧ್ಯ. ಆದರೆ ಎಲ್ಲ ರೀತಿಯಲ್ಲಿ ರೋಗಿಗೆ ಹೊಂದುವ ದಾನಿ ಸಿಗಬೇಕಷ್ಟೆ. ಮಿದುಳು ನಿಷ್ಕ್ರಿಯರಾದವರಿಂದ ಹಾಗೂ ಬದುಕಿರುವ ವ್ಯಕ್ತಿಯಿಂದಲೂ ಯಕೃತ್ತನ್ನು ಪಡೆದು ರೋಗಿಗೆ ಕಸಿ ಮಾಡಬಹುದು.

ನೆನಪಿಡಿ, ಜಾಂಡೀಸ್‌ನಿಂದ ಬಳಲುವವರು ಕೆಲವೊಮ್ಮೆ ದಿಢೀರನೆ ಯಕೃತ್ತಿನ ವೈಫಲ್ಯಕ್ಕೆ ತುತ್ತಾಗಬಹುದು. ಮನೆಔಷಧವನ್ನು ಮಾಡುತ್ತಾ ನಿರ್ಲಕ್ಷಿಸದಿರಿ. ವೈದ್ಯರಲ್ಲಿ ಸಲಹೆ ಪಡೆಯಿರಿ.

ಇದು ನಿಮ್ಮದೇ ಯಕೃತ್ತು!

- ಅತಿಯಾದ ಮದ್ಯಪಾನ ಯಕೃತ್ತನ್ನು ವಿವಿಧ ಹಂತಗಳಲ್ಲಿ ತೊಂದರೆಗೆ ಸಿಲುಕಿಸಬಹುದು. ಮೊದಲಿನ ಹಂತದಲ್ಲಿ ಯಕೃತ್ತಿನ ಜೀವಕೋಶಗಳಲ್ಲಿ ಕೊಬ್ಬಿನಾಂಶ ತುಂಬಿಕೊಳ್ಳುತ್ತದೆ. ಎರಡನೆಯ ಹಂತದಲ್ಲಿ ಆ ಜೀವಕೋಶಗಳು ಉರಿಯೂತಕ್ಕೊಳಗಾಗಿ ಹಾನಿಗೊಳಗಾಗುತ್ತವೆ. ಈ ಎರಡೂ ಹಂತಗಳಿಂದ ಯಕೃತ್ತು ಮೊದಲಿನ ಸಹಜಸ್ಥಿತಿಗೆ ಮರಳಬಹುದು. ಆದರೆ, ಮೂರನೆಯ ಹಂತದಲ್ಲಿ ಜೀವಕೋಶಗಳು ಸಂಪೂರ್ಣ ನಶಿಸಿ ಆ ಭಾಗದಲ್ಲಿ ನಾರಿನಂತಹ (ಫೈಬ್ರೋಸಿಸ್) ಅಂಶವು ತುಂಬಿಕೊಳ್ಳುತ್ತದೆ. ಒಮ್ಮೆ ಯಕೃತ್ತು ಈ ಹಂತವನ್ನು ತಲುಪಿದರೆ ಮತ್ತೆ ಮೊದಲಿನ ಸಹಜ ಸ್ಥಿತಿ ತಲುಪುವುದು ಅಸಾಧ್ಯ. ಆದ್ದರಿಂದಲೇ ಮದ್ಯಪಾನಿಗಳು ಆರಂಭದಲ್ಲಿಯೇ ಎಚ್ಚರ ವಹಿಸುವುದು ಮುಖ್ಯ.
- ಅತಿಯಾದ ದೇಹ ತೂಕ ಅಥವಾ ಬೊಜ್ಜು ಸಹ ಯಕೃತ್ತಿನ ಮೇಲೆ ಒತ್ತಡವನ್ನು ಹೇರುತ್ತದೆ. ನಿಯಮಿತ ವ್ಯಾಯಾಮ ಮತ್ತು ಪೌಷ್ಟಿಕ ಆಹಾರ ಸೇವನೆಯಂತಹ ಸದಾಭ್ಯಾಸಗಳ ಮೂಲಕ ಸರಿಯಾದ ದೇಹದ ತೂಕವನ್ನು ಕಾಯ್ದಿರಿಸಿಕೊಳ್ಳುವುದು ಬಹಳ ಮುಖ್ಯ.
- ವೈರಾಣುಗಳಿಂದ ಉಂಟಾಗುವ ಉರಿಯೂತಗಳಿಗೆ ಇದೀಗ ಲಸಿಕೆಗಳು ಲಭ್ಯವಿವೆ. ಹೆಪಟೈಟಿಸ್ 'ಎ' ಮತ್ತು 'ಬಿ' ವೈರಾಣುಗಳ ವಿರುದ್ಧ ಲಭ್ಯವಿರುವ ಲಸಿಕೆಗಳನ್ನು ವೈದ್ಯರ ಸಲಹೆಯ ಮೇರೆಗೆ ಹಾಕಿಸಿಕೊಳ್ಳಬಹುದು.
- ವೈದ್ಯರ ಸಲಹೆಯಿಲ್ಲದೆ ಸೇವಿಸುವ ಔಷಧಗಳು ನಿಮ್ಮ ಯಕೃತ್ತು ಮತ್ತು ಮೂತ್ರಪಿಂಡಗಳ ಮೇಲೆ ಅಪಾಯಕರ ಪರಿಣಾಮಗಳನ್ನು ಬೀರಬಹುದು. ಆದ್ದರಿಂದ ಸ್ವಯಂವೈದ್ಯರಾಗಬೇಡಿ. ಯಾವುದೇ ಔಷಧಗಳ ಸೇವನೆಗೂ ಮೊದಲು ವೈದ್ಯರಲ್ಲಿ ಸಮಾಲೋಚಿಸಿ.
- ವೈಯಕ್ತಿಕ ಸ್ವಚ್ಛತೆಗೆ ಗಮನ ಕೊಡಿ. ರಸ್ತೆ ಬದಿಯಲ್ಲಿ ತೆರೆದಿಟ್ಟು ಮಾರುವ ಆಹಾರ ಪದಾರ್ಥಗಳ ಸೇವನೆ ಬೇಡ. ಕಲುಷಿತ ಆಹಾರ ಮತ್ತು ನೀರು ಹೆಪಟೈಟಿಸ್ 'ಎ' ಮತ್ತು 'ಈ' ವೈರಾಣುಗಳನ್ನು ಹರಡಬಹುದು.
- ಸೋಂಕಿತರೊಡನೆ ಮತ್ತು ರೋಗವಾಹಕರೊಡನೆ ಅಸುರಕ್ಷಿತ ಲೈಂಗಿಕ ಸಂಪರ್ಕ ಹೆಪಟೈಟಿಸ್ 'ಬಿ' ಮತ್ತು 'ಸಿ' ವೈರಾಣುಗಳ ಹರಡುವಿಕೆಗೆ ಕಾರಣವಾಗಬಹುದು.

❖

ಆಯಾಸಕ್ಕೆ ಉಪಚಾರದ ಮದ್ದು

ರಮ್ಯಾ ಶ್ರೀಹರಿ

ನಾವೆಷ್ಟೇ ಸ್ವಾವಲಂಬಿಗಳಾಗಿದ್ದರೂ, ಏನೇ ಆಗಲಿ ಒಬ್ಬಂಟಿಯಾಗಿ ಹೋರಾಡುವ ಗಟ್ಟಿ ಮನಸ್ಸಿನವರಾಗಿದ್ದರೂ, ಎಷ್ಟೇ ಸಂಪನ್ಮೂಲಗಳನ್ನು ಹೊಂದಿದವರಾಗಿದ್ದರೂ, ಎಷ್ಟೇ ಜೀವನಾನುಭವದಿಂದ ವಿವೇಕವನ್ನು ಗಳಿಸಿದವರಾಗಿದ್ದರೂ ಬದುಕಿನ ಓಟದಲ್ಲಿ ಆಯಾಸಗೊಳ್ಳುವುದು ಅನಿವಾರ್ಯ, ಹಾಗೆ ಆಯಾಸಗೊಂಡಾಗ ನಮ್ಮನ್ನು ಸಂತೈಸಿ, ಉಪಚರಿಸಿ ಮತ್ತೆ ಮುಂದಿನ ಪಯಣಕ್ಕೆ ಬೇಕಾದ ಮಾನಸಿಕ, ದೈಹಿಕ, ಭಾವನಾತ್ಮಕ ಸ್ಥೈರ್ಯ ತುಂಬಿಸುವ ಆತ್ಮೀಯರು ಬೇಕೇ ಬೇಕು.

ನಮ್ಮ ಬದುಕಿನಲ್ಲಿರುವ ಹಲವರಿಗೆ ನಾವೇ ಅಂತಹ ಸಾಂತ್ವನಗೊಳಿಸುವ, ಉಪಚರಿಸುವ ಆತ್ಮೀಯರಾಗಿರುತ್ತೇವೆ; ಕೆಲವರು ತಾವಾಗೇ ಹೇಳಿಕೊಳ್ಳದಿದ್ದರೂ ಅಂತಹ ಭಾವನಾತ್ಮಕ ಆಸರೆಗಾಗಿ ನಮ್ಮನ್ನು ನೆಚ್ಚಿಕೊಂಡಿರುತ್ತಾರೆ. ಹಾಗೆ ಒಬ್ಬರಿಗೊಬ್ಬರು ಉಪಚರಿಸುವುದು, ಸಂತೈಸುವುದು, ಪ್ರೋತ್ಸಾಹಿಸುವುದು ಕೌಟುಂಬಿಕ ಮತ್ತು ಸಾಮಾಜಿಕ ಬದುಕಿನ ಬಹುದೊಡ್ಡ ಮೌಲ್ಯ.

ಜೀವನದ ಎಷ್ಟೋ ಸಂದರ್ಭಗಳಲ್ಲಿ ನಮಗೆ ಇನ್ನೊಂದು ಜೀವಿಯ ಆಸರೆ ಅತ್ಯಗತ್ಯವಾಗಿರುವ ಸಮಯದಲ್ಲೇ ಅದು ದೊರೆಯದೇ ಹೋಗಬಹುದು. ಆಗ ನಮ್ಮನ್ನು ನಾವೇ ಸಂತೈಸಿಕೊಳ್ಳುವ ಸಾಮರ್ಥ್ಯವೂ ನಮ್ಮಲ್ಲೇ ಅಡಗಿರುತ್ತದೆ ಎನ್ನುವುದನ್ನು ಮರೆಯಬಾರದು. ಆದರೆ ಈ ಸ್ವ-ಸಾಂತ್ವನದ ಸಾಮರ್ಥ್ಯವೂ ತನ್ನಿಂದ ತಾನೇ ಉಂಟಾಗುವಂಥದ್ದಲ್ಲ; ಹಿಂದೆ ಎಂದೋ ಯಾರೋ ಇಂತಹ ಸಾಂತ್ವನ ಒದಗಿಸಿದ್ದರಷ್ಟೇ ಅದನ್ನು ಮಾದರಿಯಾಗಿಟ್ಟುಕೊಂಡು ಇಂದು ನಮ್ಮನ್ನು ನಾವು ಉಪಚರಿಸಿಕೊಳ್ಳಬಹುದು. ಹಾಗಾಗಿ ಮತ್ತೊಂದು ವ್ಯಕ್ತಿ ನೀಡುವ ಭಾವನಾತ್ಮಕ ಪೋಷಣೆ ಬಹಳ ಮುಖ್ಯವಾಗುತ್ತದೆ.

ಮಗು ಆಡಿ ದಣಿದು, ಆ ದಣಿವನ್ನು ನೀಗಿಸಿಕೊಳ್ಳುವ ಉಪಾಯ ಕಾಣದೆ ರಗಳೆ ಮಾಡತೊಡಗಿದಾಗ ತಾಯಿ ಹಾಲು ಕುಡಿಸಿ, ಜೋಗುಳ ಹಾಡಿ, ಮುದ್ದು ಮಾಡಿ, ತೊಟ್ಟಿಲು ತೂಗಿ ಮಲಗಿಸುವುದು ಬದುಕಿನ ಪ್ರಾರಂಭಿಕ ಹಂತದಲ್ಲಿನ ಆಯಾಸನಿವಾರಣೆಯ ಪ್ರಬಲ ಅನುಭವ. ಹಾಗೇ ಮುಂದಿನ ಬದುಕಿನಲ್ಲೂ ಆಯಾಸಗೊಂಡಾಗ ಅದನ್ನು ಗುರುತಿಸುವುದು ಹೇಗೆ, ಆಗ ಮಾಡಬೇಕಿರುವುದೇನು ಎನ್ನುವುದಕ್ಕೆ ಮಗು ತಂದೆ, ತಾಯಿ ಆಯಾಸವನ್ನು ಹೇಗೆ ಗುರುತಿಸುತ್ತಾರೆ, ಹೇಗೆ ಸಂತೈಸುತ್ತಾರೆ ಎನ್ನುವುದನ್ನು ಮಾದರಿಯಾಗಿಟ್ಟುಕೊಳ್ಳುತ್ತದೆ.

ಹೌದು, ಆಯಾಸಗೊಂಡಿರುವುದನ್ನು ಗುರುತಿಸಬೇಕಾಗುತ್ತದೆ. ಅದು ಹಲವು ಬಾರಿ ತಾನೇ ತಾನಾಗಿ ಗೊತ್ತಾಗುವುದಿಲ್ಲ. ದಿನನಿತ್ಯದ ಸಾಧಾರಣ ಆಯಾಸವು ನಿದ್ರೆಯಿಂದ ಪರಿಹಾರವಾಗುತ್ತದೆ. ಆದರೆ ನಮ್ಮ ವ್ಯಕ್ತಿತ್ವದಲ್ಲೇ ಆಳವಾಗಿ ಬೇರುಬಿಟ್ಟಿರುವ ಭಾವನಾತ್ಮಕ ಆಯಾಸವನ್ನು ಪತ್ತೆ ಮಾಡುವುದು ಸುಲಭವಲ್ಲ. ಉದಾಹರಣೆಗೆ, ಆಗಾಗ ದೀರ್ಘಕಾಲದ ಆಲಸ್ಯ ಕಾಡುವುದುಂಟು. ಎಷ್ಟೇ ಚುರುಕಾಗಿ ಕೆಲಸ ಮಾಡಬೇಕೆಂದುಕೊಂಡರೂ ಮಾಡಲಾಗದೇ ನಮ್ಮನ್ನು ನಾವೇ ಹೀಗೆಳೆದುಕೊಳ್ಳುವುದೂ ಉಂಟು. ಎಲ್ಲರೊಡನೆ ನಗುನಗುತ್ತಾ ಬೆರೆಯಬೇಕೆಂದುಕೊಂಡರೂ ಬಾಂಧವ್ಯವನ್ನು ಚಿಗುರಿಸಲು, ಬೆಳೆಸಲು ಬೇಕಾದ ಮಾನಸಿಕ ತ್ರಾಣವೇ ಇಲ್ಲದಂತಹ ಅನುಭವವಾಗುತ್ತದೆ. ಆಯಾಸ ಕೆಲವೊಮ್ಮೆ ಆಲಸ್ಯದಂತೆ, ಕೆಲವೊಮ್ಮೆ ಸಿಟ್ಟು-ಕೋಪದಂತೆ, ಕೆಲವೊಮ್ಮೆ ಆತಂಕದಂತೆ ಕಾಣಿಸಿಕೊಳ್ಳುವುದೂ ಉಂಟು. ಆಯಾಸಗೊಂಡಿದ್ದು ಏಕೆ ಎಂದು ತಿಳಿದುಕೊಳ್ಳಲೂ ಆತ್ಮೀಯರ ನೆರವು ಬೇಕಾಗುತ್ತದೆ.

ದೇಹ ಮತ್ತು ಮನಸ್ಸು ಬೇರೆ ಬೇರೆ ಘಟಕಗಳಲ್ಲ, ಅವು ಒಂದೇ ವ್ಯವಸ್ಥೆಯಂತೆ ಕೆಲಸಮಾಡುತ್ತವೆ. ಭಾವನಾತ್ಮಕ ಆಘಾತಗಳಾದಾಗ, ಪ್ರೀತಿಪಾತ್ರರು ದೂರ ಸರಿದಾಗ, ನಂಬಿಕೆ ವಿಶ್ವಾಸ ದ್ರೋಹವಾದಾಗ, ಜೀವನ ಅರ್ಥಹೀನ ಎನಿಸಿದಾಗ, ಪದೇ ಪದೇ ಬಾಂಧವ್ಯದಲ್ಲಿ ಬಿರುಕುಗಳು ಉಂಟಾದಾಗ, ಎಷ್ಟೇ ಬಿಡಿಸಿ ಹೇಳಿದರೂ, ಹೇಗೆ ತಿಳಿಸಿದರೂ ಅರ್ಥಮಾಡಿಕೊಳ್ಳದವರೊಡನೆ ಬಾಳಬೇಕಾದಾಗ, ಕೆಲಸ ಮಾಡಬೇಕಾದಾಗ-ಇನ್ನೂ ಇಂತಹ ಅನೇಕ ಕಗ್ಗಂಟಿನಂತಹ ಸಮಸ್ಯೆಗಳಲ್ಲಿ ಸಿಲುಕಿದಾಗ ಮನಸ್ಸು ನಲುಗುತ್ತದೆ, ದೇಹವೂ ಕುಗ್ಗುತ್ತದೆ. ಆಗ ನಮ್ಮ ಮನಸ್ಸನ್ನು ತೆರೆದಿಡಲು, ಮುಕ್ತವಾಗಿ ಮಾತನಾಡಲು, ಬದುಕಿನಲ್ಲಿ ಆಗುತ್ತಿರುವುದನ್ನು ಅರ್ಥಮಾಡಿಕೊಳ್ಳಲು ಒಂದು ಶಾಂತವಾದ, ಸುರಕ್ಷಿತ ಭಾವನಾತ್ಮಕ ನೆಲೆ **(emotional space)** ಬೇಕಾಗುತ್ತದೆ, ಇಂತಹ ನೆಲೆಯನ್ನು ಒದಗಿಸುವವರೇ ನಮ್ಮ ನಿಜವಾದ ಆತ್ಮೀಯರು. ವಿಶ್ರಾಂತಿಯೆಂದರೆ ಕೇವಲ ಮಲಗಿ ನಿದ್ರಿಸುವುದಲ್ಲ, ನಿದ್ರೆಯಿಂದಲೂ ಪರಿಹಾರವಾಗದ ಆಯಾಸ ಇಂತಹ ಭಾವನಾತ್ಮಕ ನೆಲೆಯಲ್ಲಿ ವಿರಮಿಸುವುದು ಸಾಧ್ಯವಾದಾಗ ಪರಿಹಾರವಾಗುತ್ತದೆ.

ಜೀವನೋತ್ಸಾಹವನ್ನು, ಜೀವನಪ್ರೀತಿಯನ್ನು ಹೀರುವ ಎಲ್ಲದರಿಂದಲೂ ಸ್ವಲ್ಪ ಕಾಲ ದೂರ ನಿಂತು, ವಸ್ತುನಿಷ್ಠವಾಗಿ ಪರಾಮರ್ಶಿಸುವ ಅವಕಾಶವನ್ನು ನೀಡುವ ಆಸರೆಯೇ ನಿಜವಾದ ಆಯಾಸಪರಿಹಾರಕವಾದ ಉಪಚಾರ. ಹೀಗೆ ವಿಶ್ರಾಂತಿಯಲ್ಲಿ ಚೇತರಿಸಿಕೊಂಡು ಮತ್ತೆ ಮುಂದಿನ ಸವಾಲುಗಳನ್ನು ಎದುರಿಸಲು ನಾವು ಸಿದ್ಧರಾಗುತ್ತೇವೆ.

ಆಯಾಸಗೊಂಡಿರುವವರನ್ನು ಉಪಚರಿಸುವುದು ಹೇಗೆ, ಆಯಾಸವಾದಾಗ ನಮ್ಮನ್ನು ನಾವೇ ಸಂತೈಸಿಕೊಳ್ಳುವುದು ಹೇಗೆ ಎನ್ನುವ ಬಗೆಗೆ ಕೆಲವು ಸಹಾಯಕವಾಗಬಹುದಾದ ಅಂಶಗಳು ಇಲ್ಲಿವೆ:

1 ಇಡೀ ದಿನದ ಕೆಲಸದಲ್ಲಿ, ಪ್ರಪಂಚದ ಜಂಜಾಟದಲ್ಲಿ ದಣಿದು ಮನೆಗೆ ಬಂದಾಗ 'ನಮ್ಮ ಮನೆ' ಎನ್ನುವ ಪರಿಚಿತ ಪರಿಸರ, 'ನಮ್ಮದು' ಎನ್ನುವುದಕ್ಕೆ ಮರಳಿಬಂದ ಸಮಾಧಾನ ಆಯಾಸವನ್ನು ಪರಿಹರಿಸುತ್ತದೆ. 'ನಮ್ಮದು' ಎನ್ನುವುದಕ್ಕೆ ಮರಳಿ ಬರುವಂತೆ ಮತ್ತು 'ನಾವು ನಾವಾಗಿ ಇರಬಹುದಾದ' ವಲಯಗಳನ್ನು ಕಂಡುಕೊಳ್ಳುವಂತೆ ಆತ್ಮೀಯರನ್ನು ಪ್ರೋತ್ಸಾಹಿಸಬಹುದು. ಮನೆಯೆಂದರೆ ಕೇವಲ ಭೌತಿಕ ಮನೆ ಮಾತ್ರ ಅಲ್ಲವಷ್ಟೇ; ಮನೆಯಂತಹದೇ ಬೆಚ್ಚಗಿನ ಭಾವ ನೀಡುವ ಆತ್ಮೀಯರನ್ನು, ಅಭ್ಯಾಸಗಳನ್ನು ಕಂಡುಕೊಳ್ಳುವುದು ಆಯಾಸಕ್ಕೆ ಒಳ್ಳೆಯ ಉಪಚಾರ. ಮೌನವೂ ಧ್ಯಾನವೂ ಕಲೆಯೂ ವ್ಯಾಯಾಮವೂ ಏಕಾಂತವೂ ಸಹೃದಯರ ಸಹವಾಸವೂ ಆಯಾಸಪರಿಹಾರಕವೇ ಹೌದು.

2 'ನಿನಗೆ ಆಯಾಸವಾಗಿದೆಯಲ್ಲವೇ, ಸ್ವಲ್ಪ ಸುಧಾರಿಸಿಕೋ' ಎನ್ನುವ ಮಾತನ್ನು ಕಾಳಜಿಯಿಂದ ಹೇಳಿದಾಗಲಂತೂ ಆಯಾಸವು ಹೊರಟು ಹೋದಂತೆಯೇ ಅನಿಸುತ್ತದೆ. ಒಳ್ಳೆಯ ಮಾತು ಸಿಹಿನೀರಿಗಿಂತಲೂ ತಂಪು. ಪ್ರಾಮಾಣಿಕವಾದ ಸಾಂತ್ವನದ ಮಾತುಗಳಿಗೆ ಇರುವ ಮಾಂತ್ರಿಕ ಶಕ್ತಿ ನಮ್ಮ ಊಹೆಗೂ ಮೀರಿದ್ದು. ಪ್ರೀತಿಯ ಸ್ಪರ್ಶ, ಅಪ್ಪುಗೆ, ತಲೆ ನೇವರಿಸುವುದು ಮುಂತಾದ ಆತ್ಮೀಯತೆಯ ಅಭಿವ್ಯಕ್ತಿಯೂ ಆಯಾಸವನ್ನು ನಿವಾರಿಸುತ್ತದೆ.

3 ಅತಿಯಾದ ಆಲೋಚನೆ, ಅತಿ ಮಾತು-ಜಗಳ, ಅನಗತ್ಯ ಓಡಾಟ, ಅತಿಯಾದ ನಿರೀಕ್ಷೆಗಳು, ಎಲ್ಲವನ್ನೂ ಒಟ್ಟಿಗೇ, ಈಗಲೇ ಮಾಡಿಬಿಡಬೇಕೆನ್ನುವ ಆತುರ ಪ್ರವೃತ್ತಿ, ಅನಗತ್ಯ ಸಾಮಾಜಿಕ ಚಟುವಟಿಕೆಗಳು, ಸಾಮಾಜಿಕ ಜಾಲತಾಣಗಳ ಮಿತಿ ಮೀರಿದ ಬಳಕೆ - ಯಾವುದಾದರೂ ಸರಿ 'ಅತಿ', 'ಅನಗತ್ಯ' ಎನ್ನುವುದೆಲ್ಲಾ ಆಯಾಸ ತರುತ್ತವೆ. ಆತ್ಮೀಯರು ಹೀಗೆ ಅತಿರೇಕದ ವರ್ತನೆಗಳಲ್ಲಿ ಸಿಲುಕಿಕೊಂಡಾಗ ಅವರನ್ನು ನಯವಾಗಿ ಎಚ್ಚರಿಸುವುದು; ಅದರ ಕುರಿತಾಗಿ ಮಾತನಾಡಿ ಹಿತ ಮಿತದ ಸಮತೋಲನವನ್ನು ಕಂಡುಕೊಳ್ಳುವಂತೆ ಪ್ರೋತ್ಸಾಹಿಸುವುದು; ಕಾಲಕಾಲಕ್ಕೆ ಆಹಾರ, ವಿಹಾರ, ವಿಶ್ರಾಂತಿಯಲ್ಲಿ ತೊಡಗುತ್ತಿದ್ದಾರೆಯೇ ಇಲ್ಲವೇ ಎಂದು ವಿಚಾರಿಸಿಕೊಳ್ಳುವುದು; ವಿರಮಿಸಲು ನಮ್ಮ ಕೈಲಾದ ಸಹಕಾರ ನೀಡುವುದು ಪರಿಣಾಮಕಾರಿ.

4 ಬೇರೆಯವರ ಆಯಾಸಪರಿಹಾರ ಮಾಡಲು ತೊಡಗುವ ಮೊದಲು ನಾವು ಸಾಕಷ್ಟು ದೈಹಿಕ, ಮಾನಸಿಕ ವಿಶ್ರಾಂತಿ ಪಡೆದಿದ್ದೇವೆಯೇ ಎನ್ನುವುದು ಮುಖ್ಯವಾಗುತ್ತದೆ. ತಾನೇ ಆಯಾಸಗೊಂಡ ವ್ಯಕ್ತಿ ಮತ್ತೊಬ್ಬರಿಗೆ ಭಾವನಾತ್ಮಕ ಆಸರೆ ಒದಗಿಸುವುದು ಸಾಧ್ಯವಿಲ್ಲ.

5 ಯಾವುದೇ ಪ್ರಯತ್ನ ಫಲಕಾರಿಯಾದಾಗ ನಮಗೆ ಆ ಕೆಲಸದಿಂದ ಆಯಾಸವಾಗುವುದಿಲ್ಲ. ಪ್ರಯತ್ನಗಳಿಂದ ಪದೇಪದೇ ಸೋಲುಂಟಾಗುತ್ತಿದ್ದರೂ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳದೆ ಅಂತಹ ಪ್ರಯತ್ನಗಳನ್ನೇ ಮತ್ತೆಮತ್ತೆ ಮಾಡುತ್ತಲಿರುವುದು; ಪರಿಹಾರವೇ ಇಲ್ಲದ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುತ್ತಲೇ ಇರುವುದು, ದೊರೆಯುವುದು ಅಸಾಧ್ಯವಾದುದ್ದರ ಬಗ್ಗೆ ಚಿಂತಿಸುತ್ತಲಿರುವುದು; ತೆರೆಯದ ಬಾಗಿಲುಗಳನ್ನೇ ಮತ್ತೆ ಮತ್ತೆ ಬಡಿದು ತೆರೆಯಬಹುದೇನೋ ಎಂದು ಕಾಯುತ್ತಲೇ ಇರುವುದು - ಇಂತಹ ಯಾವ ತೃಪ್ತಿಯನ್ನೂ ಸಂತೋಷವನ್ನೂ ನೀಡದ ನಿಷ್ಫಲ ಕ್ರಿಯೆಗಳು ಆಯಾಸಕಾರಿ. ಬದಲಾವಣೆಗಳನ್ನು ನಿರಾಕರಿಸಿ ಅಲ್ಲಲ್ಲೇ ಗಿರಕಿ ಹೊಡೆಯುವ ಮನಸ್ಸಿನ ಅಭ್ಯಾಸಕ್ಕೆ ಕಡಿವಾಣ ಹಾಕುವುದು ಆಯಾಸಪರಿಹಾರದ ಪರಿಣಾಮಕಾರಿ ಮಾರ್ಗ.

❖

ನಿಂದಕರೆ ಸಾಧನೆಗೆ ಪ್ರೇರಕರು

ದೀಪಶ್ರೀ ಎಸ್. ಕೂಡ್ಲಿಗಿ

ನಿಂದಕರಿರಬೇಕು ಜಗದೊಳಗೆ... ನಿಂದನೆ, ತೆಗಳಿಕೆ, ಅವಮಾನ, ಟೀಕೆ-ಟಿಪ್ಪಣಿ – ಇವೆಲ್ಲ ಜೀವನದಲ್ಲಿ ಎದುರಾಗುವ ಸವಾಲುಗಳು. ಅವಮಾನಗಳನ್ನು ಅನುಭವಿಸದ ಮನುಷ್ಯನೇ ಇಲ್ಲ.

ನಿಂದನೆಯ ರೂಪ–ಪ್ರಮಾಣ ಪ್ರತಿಯೊಬ್ಬರ ಜೀವನದಲ್ಲಿಯೂ ಒಂದೇ ತೆರನಾಗಿಲ್ಲದಿರಬಹುದು. ನಿಂದನೆಗಳನ್ನು ಗಂಭೀರವಾಗಿ ಪರಿಗಣಿಸಿದರೆ ಆಗ ಕೆಟ್ಟಕನಸುಗಳು, ನಿದ್ರಾಹೀನತೆ, ಕ್ರೌರ್ಯ, ಕೋಪ ದ್ವೇಷ, ಹಗೆ, ಅಸಹಾಯಕತೆ, ಹಠ, ಉದ್ವೇಗ, ಖಿನ್ನತೆಯಂಥ ಸಮಸ್ಯೆಗಳಿಗೆ ಅದು ಅವಕಾಶ ಮಾಡಿಕೊಡಬಹುದು. ನಿಂದನೆಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು. ಆಗ ಜೀವನದಲ್ಲಿ ಸಾಧಿಸಿಯೇ ತೀರುತ್ತೇನೆಂಬ ಛಲ, ದೃಢ ನಿರ್ಧಾರ ಗಟ್ಟಿಯಾಗಿ, ಅವು ನಮಗೆ ಲಾಭದಾಯಕವಾಗಿ ಪರಿಣಮಿಸಬಹುದು.

ಬಾಲ್ಯದಲ್ಲಿ ಆದ ನಿಂದನೆಯ ಗಾಯ ವಾಸಿಯಾಗದೆ ಉಳಿಯಬಹುದು. ಬಾಲ್ಯದ ಅವಮಾನ ಸೇಡಿನ ಹಾದಿಯನ್ನೂ ಹಿಡಿಯಬಹುದು. ಆದರೆ ಅಣಕಿಸುವವರ ಜತೆ ನಿಂತು ಯಾರಿಗೂ ಅವಮಾನ ಮಾಡದಿರಿ. ಮುಂದಿನ ಸರದಿ ನಿಮ್ಮದೂ ಆಗಬಹುದು. ನಿಂದನೆಯ ಸುರಿಮಳೆ ಸುರಿದಾಗ ಹೀಗೆ ಮಾಡಿ:

- **ಸಕಾರಾತ್ಮಕ ಮನೋಭಾವದಿಂದಿರಿ:** ನಿಂದನೆಯನ್ನು ತಾಳಿಕೊಂಡು, ಬದುಕನ್ನು ಕಟ್ಟಿಕೊಂಡವರ ಕಥೆಗಳು ಚರಿತ್ರೆಯಲ್ಲಿಯೇ ಸಿಗುತ್ತದೆ. ಅವಮಾನಿತನಾದ ಚಾಣಕ್ಯನು ಹೊಸದೊಂದು ಸಾಮ್ರಾಜ್ಯದ ಸ್ಥಾಪನೆಗೇ ಕಾರಣನಾದನು. ಟೀಕೆ-ಟಿಪ್ಪಣಿಗಳಿಗೆ ನಿರ್ಲಕ್ಷ್ಯವೇ ಉತ್ತರ. ನಿಮ್ಮಿಂದ ಏನೂ ಆಗುವುದಿಲ್ಲ ಎನ್ನುವವರೇ ನಿಮ್ಮ ಕೆಲಸಕ್ಕೆ ಪ್ರೇರಣೆ ಎಂದುಕೊಳ್ಳಿ. ಕಷ್ಟದ ಕೆಲಸಕ್ಕೆ ಅವರೇ ನಿಮ್ಮ ಮಾರ್ಗದರ್ಶಕರು.
- **ನಿಂದಿಸುವವರನ್ನು ನಿರ್ಲಕ್ಷಿಸಿ:** ಚುಚ್ಚುಮಾತಿನಲ್ಲಿ ಅವಮಾನಿಸುವವರಿಗೆ ನಗುವೇ ಪ್ರತಿಕ್ರಿಯೆ ಆಗಲಿ. ಆ ಕ್ಷಣಕ್ಕೆ ಸುಮ್ಮನಿದ್ದುಬಿಡಿ. ಮೌನವೇ ಸಾಧನವಾಗಲಿ. ನಿಂದನೆಗೆ ಗಟ್ಟಿತನವೇ ಪ್ರತ್ಯುತ್ತರ. ಅವಮಾನಿಸುವವರೇ ಏಳಿಗೆಯ ಪ್ರಥಮ ಮೆಟ್ಟಿಲುಗಳು ಎಂದೇ ಭಾವಿಸಿ. ಆರಂಭದ ಮೆಟ್ಟಿಲುಗಳನ್ನು ಹತ್ತಿ ಮುಂದುವರಿದಾಗಲೇ ಕೊನೆಯ ಮೆಟ್ಟಿಲನ್ನು ತಲುಪಲು ಸಾಧ್ಯ.
- **ಗುರಿಯೆಡೆಗಿರಲಿ ಗಮನ:** ಚುಚ್ಚುಮಾತುಗಳಿಗೆ ವಿವರಣೆಯನ್ನು ಕೊಡಬೇಡಿ. ಕ್ರಿಯಾಶೀಲತೆಯೆ ಟೀಕೆಗಳಿಗೆ ಪ್ರತ್ಯುತ್ತರವನ್ನು ನೀಡುವಂತಾಗಲಿ. ಟೀಕಿಸುವವರೇ ಹೊಗಳುವಂಥ ಕಾಲ ಸನಿಹದಲ್ಲೇ ಇದೆ ಎಂದು ಭಾವಿಸಿ ಮುಂದುವರೆಯಿರಿ. ಎಲ್ಲಕ್ಕೂ ಕಾಲವೇ ಉತ್ತರ ಕೊಡುತ್ತದೆ. ನಮ್ಮ ಸಂಪೂರ್ಣ ಗಮನ ನಾವು ಆಯ್ಕೆ ಮಾಡಿಕೊಂಡ ಕಾರ್ಯದ ಮೇಲಿರಲಿ. ಸಾಧನೆಯ ಮೈಲಿಗಲ್ಲು ಏರಬೇಕಾದರೆ ಎಲ್ಲ ವಿಧದ ನೋವುಗಳನ್ನು ನುಂಗಿಕೊಳ್ಳಬೇಕಾಗುತ್ತದೆ. ಅವಮಾನಿಸುವವರ ಕುರಿತು ಆಲೋಚಿಸದೆ ಗುರಿಯೆಡೆಗೆ ಗಮನವಿಡಿ.
- **ಮುಕ್ತವಾಗಿರಲಿ ಮನಸ್ಸು:** ನಿಂದಿಸುವವರೊಡನೆ ಮಿತ್ರತ್ವವನ್ನು ಬೆಳೆಸಬಲ್ಲಂಥ ಗಟ್ಟಿತನ ಇರಲಿ. ಎಲ್ಲರಂತೆಯೇ ನನಗೂ ಅವಮಾನವಾಗಿದೆ, ಅದು ಸಹಜ ಎಂದು ಭಾವಿಸಿ. ನಿಂದನೆಯನ್ನು ಸಹಜ ಎಂದು ತೆಗೆದುಕೊಂಡರೆ ಕಡ್ಡಿ, ಆತಂಕ ಎಂದು ಪರಿಗಣಿಸಿದರೆ ಗುಡ್ಡ. ಟೀಕೆಗಳಿಗೆ ಕುಗ್ಗದೆ, ಕೊರಗದಿರಿ.
- **ಆಶಾವಾದಿಗಳಾಗಿ:** ಸಜ್ಜನರ ಸಹವಾಸವನ್ನು ಮಾಡಿ. ಅದರಿಂದ ಸಕಾರಾತ್ಮಕ ಮನೋಭಾವ ಬೆಳೆಯುತ್ತದೆ. ಪರಿಸ್ಥಿತಿಯನ್ನು ಬುದ್ಧಿಪೂರ್ವಕವಾಗಿ ನಿಭಾಯಿಸಿ. ನಿರಾಶರಾಗದೇ ಆಶಾವಾದವನ್ನು ಬೆಳೆಸಿಕೊಳ್ಳಿ.

❖

ನೂಹ್‌ನಲ್ಲಿ ಇನ್ನೂ ಬಿಗುವಿನ ಸ್ಥಿತಿ ● ಸ್ವಾಮೀಜಿಗಳು ಸೇರಿ 15 ಮಂದಿಯ ತಂಡಕ್ಕಷ್ಟೇ ಅವಕಾಶ

ಪೂಜೆಗೆ ಸಮ್ಮತಿ, ಶೋಭಾಯಾತ್ರೆಗೆ ನಕಾರ

ನೂಹ್ (ಹರಿಯಾಣ), (ಪಿಟಿಐ): ಉದ್ವಿಗ್ನ ಸ್ಥಿತಿ ತಲೆದೋರಿದ್ದ ಹರಿಯಾಣದ ನೂಹ್ ಜಿಲ್ಲೆ ನಲ್ಹಾರ್‌ನ ಶಿವ ದೇವಸ್ಥಾನದಲ್ಲಿ ಪೂಜೆ, ಪ್ರಾರ್ಥನೆ ಸಲ್ಲಿಸಲು 15 ಮಂದಿ ಸ್ವಾಮೀಜಿಗಳು, ನಾಯಕರಿಗೆ ಜಿಲ್ಲಾಡಳಿತ ಸೋಮವಾರ ಅವಕಾಶವನ್ನು ಕಲ್ಪಿಸಿತು.

ಅಲ್ಲದೆ, ಶ್ರಾವಣ ಮಾಸದ ಕಡೆಯ ಸೋಮವಾರ ಹಿನ್ನೆಲೆಯಲ್ಲಿ ದೇವಸ್ಥಾನಗಳಲ್ಲಿ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಲು ಸ್ಥಳೀಯರಿಗೆ ಅವಕಾಶ ಕಲ್ಪಿಸಲಾಗಿತ್ತು. ಕೆಲ ಸ್ವಾಮೀಜಿಗಳು ಯಾತ್ರೆ ಕರೆ ನೀಡಿದ್ದರು ಅವಕಾಶ ನೀಡಲಾಗಿಲ್ಲ. ಬಹುತೇಕ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಸರ್ವಜಾತೀಯ ಹಿಂದೂ ಮಹಾ ಪಂಚಾಯತ್ ಜುಲೈ 31ರಂದು ಕೈಗೊಂಡಿದ್ದ ಶೋಭಾಯಾತ್ರೆಯು ಹಿಂಸಾಚಾರಕ್ಕೆ ತಿರುಗಿದ್ದ ಕಾರಣ ಜಿಲ್ಲೆಯಲ್ಲಿ ಉದ್ವಿಗ್ನ ಸ್ಥಿತಿ ಮೂಡಿದೆ. ಇದೇ ಕಾರಣದಿಂದ ಸೋಮವಾರ ಯಾತ್ರೆ ನಡೆಸಲು ಜಿಲ್ಲಾಡಳಿತ ಅನುಮತಿಯನ್ನು ನಿರಾಕರಿಸಿತು.

ನೂಹ್‌ಗೆ ತೆರಳುತ್ತಿದ್ದ ಸ್ವಾಮೀಜಿಗಳನ್ನು ಗುರುಗ್ರಾಮದ ಬಳಿಯೇ ತಡೆಯಲಾಯಿತು. ದೆಹಲಿ–ಗುರುಗ್ರಾಮ ಗಡಿಯಲ್ಲಿ ನೂಹ್‌ವರೆಗೂ ಮುಂಜಾಗ್ರತೆಯಾಗಿ ಐದು ಚೆಕ್ ಪಾಯಿಂಟ್ ಸ್ಥಾಪಿಸಲಾಗಿತ್ತು. ಮಾರ್ಗದುದ್ದ ವಾಹನಗಳಿಗೂ ಅವಕಾಶ ನೀಡಲಿಲ್ಲ.

ಸೊಹ್ನಾದ ಘಾಮ್ರೋಜ್ ಟೋಲ್ ಪ್ಲಾಜಾ ಬಳಿ ಅಯೋಧ್ಯಾದ ಜಗದ್ಗುರು ಪರಮಹಂಸ ಆಚಾರ್ಯ ಅವರ ವಾಹನ ತಡೆಯಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು. 'ನಲ್ಹಾರ್‌ನ ದೇಗುಲದಲ್ಲಿ ಜಲಾಭಿಷೇಕ ನಡೆಸಲು ಅಯೋಧ್ಯೆಯಿಂದ ಮಣ್ಣು ಮತ್ತು ಸರಯೂ ನದಿಯಿಂದ ನೀರು ಒಯ್ಯಲಾಗುತ್ತಿತ್ತು. ಪೊಲೀಸರು ವಾಹನವನ್ನು ತಡೆದಿದ್ದಾರೆ' ಎಂದು ಸ್ವಾಮೀಜಿ ಆರೋಪಿಸಿದರು. ಕೆಲ ಹೊತ್ತು ಧರಣಿ ನಡೆಸಿದರು.

ಈ ಮಧ್ಯೆ, 'ನಲ್ಹಾರ್‌ನ ದೇಗುಲದಲ್ಲಿ ಜಲಾಭಿಷೇಕ ನಡೆಸಲು ಸ್ವಾಮೀಜಿಗಳು ಸೇರಿ 15 ಜನರಿಗೆ ಅವಕಾಶ ನೀಡಲಾಗಿತ್ತು. ಇವರಲ್ಲಿ ಮಹಾಮಂಡಲೇಶ್ವರ ಸ್ವಾಮಿ ಧರ್ಮದೇವ್ ಮತ್ತು ಸ್ವಾಮಿ ಪರಮಾನಂದ ಇವರಲ್ಲಿ ಸೇರಿದ್ದರು' ಎಂದು ನೂಹ್ ಜಿಲ್ಲಾಧಿಕಾರಿ ತಿಳಿಸಿದರು.

ಹರಿಯಾಣದ ನೂಹ್‌ನಲ್ಲಿ ಸೋಮವಾರ ಕೆಲ ಹಿಂದೂ ಸಂಘಟನೆಗಳು ಶೋಭಾಯಾತ್ರೆಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

ಪೂಜೆ ಬಳಿಕ ಸ್ವಾಮೀಜಿಗಳಿದ್ದ ತಂಡವು ಫಿರೋಜ್‌ಪುರ್ ಝಿರ್ಕಾದ ಝಿರ್ ದೇವಸ್ಥಾನಕ್ಕೆ ತೆರಳಿತು. 'ಬಿಗಿ ಭದ್ರತೆಯ ಕಾರಣದಿಂದ ಇವರನ್ನು ಕರೆದೊಯ್ಯಲಾಯಿತು' ಎಂದು ಸ್ಥಳೀಯ ಬಜರಂಗದಳದ ನಾಯಕ ಪ್ರವೀಣ್ ಹಿಂದೂಸ್ತಾನಿ ತಿಳಿಸಿದರು.

ಹಿಂದೂ ಬಲಪಂಥೀಯ ನಾಯಕ ಕುಲಭೂಷಣ್ ಭಾರದ್ವಾಜ್ ಅವರು, 'ಹರಿಯಾಣ ಸರ್ಕಾರವು ಜಿಲ್ಲೆಯಲ್ಲಿ ಹಿಂದೂ ನಾಯಕರನ್ನು ಗೃಹಬಂಧನದಲ್ಲಿ ಇರಿಸಿದೆ. ಇದು, ಹಿಂದೂಗಳ ನಂಬಿಕೆಯ ಮೇಲೆ ನಡೆದ ದಾಳಿಯಾಗಿದೆ' ಎಂದು ಆರೋಪಿಸಿದರು.

ಸೋಮವಾರವೂ ಜಿಲ್ಲೆಯಲ್ಲಿ ಸೊಹ್ನಾದಿಂದ ನೂಹ್‌ವರೆಗೂ ಬಿಗುವಿನ ಸ್ಥಿತಿಯೇ ಇತ್ತು. ರಸ್ತೆಗಳಲ್ಲಿ ಬಿಕೋ ಎನ್ನುವ ವಾತಾವರಣವಿತ್ತು. ಅಂಗಡಿ ಮಳಿಗೆಗಳು ತೆರೆದಿರಲಿಲ್ಲ. ಜನಸಂಚಾರವೂ ಇರಲಿಲ್ಲ.

ಮುಂಜಾಗ್ರತೆಯಾಗಿ ಬಂದ್ ಮಾಡುವಂತೆ ಶಿಕ್ಷಣ ಸಂಸ್ಥೆಗಳು, ಬ್ಯಾಂಕ್‌ಗಳಿಗೆ ಜಿಲ್ಲಾಡಳಿತ ಸೂಚಿಸಿತ್ತು. ಮೊಬೈಲ್ ಇಂಟರ್‌ನೆಟ್ ಸಂಪರ್ಕ, ಗುಂಪು ಎಸ್‌ಎಸ್‌ಎಸ್ ಸೇವೆಯನ್ನು ತಡೆಹಿಡಿದಿದ್ದು, ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಜಿಲ್ಲೆಗೆ ಹೊರಗಿನವರಿಗೆ ಪ್ರವೇಶ ಇರಲಿಲ್ಲ.

ಜುಲೈ 31ರಂದು ವಿಶ್ವಹಿಂದೂ ಪರಿಷತ್ ಕೈಗೊಂಡಿದ್ದ ಮೆರವಣಿಗೆಯ ಮೇಲೆ ಗುಂಪೊಂದು ದಾಳಿ ಮಾಡಿದ್ದು, ಕೋಮುಗಲಭೆಗೆ ಕಾರಣವಾಗಿತ್ತು. ಹಿಂಸಾತ್ಮಕ ಕೃತ್ಯಗಳಲ್ಲಿ ಇಬ್ಬರು ಹೋಂ ಗಾರ್ಡ್‌ಗಳು ಸೇರಿ ಆರು ಜನರು ಸತ್ತಿದ್ದರು.

ಹಿಂಸಾಚಾರ: ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಆಗ್ರಹ

ಚಂಡೀಗಢ (ಪಿಟಿಐ): ನೂಹ್ ಹಿಂಸಾಚಾರ ಘಟನೆ ಸೋಮವಾರ ಹರಿಯಾಣ ವಿಧಾನಸಭೆಯಲ್ಲಿ ಪ್ರತಿಧ್ವನಿಸಿದ್ದು, ಈ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಕಾಂಗ್ರೆಸ್ ಆಗ್ರಹಪಡಿಸಿತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯರು, ವಿಷಯದ ಚರ್ಚೆಗೆ ಒತ್ತಾಯಿಸಿದರು. ಆದರೆ, 'ಈ ವಿಷಯ ನ್ಯಾಯಾಲಯದಲ್ಲಿದೆ' ಎಂದು ಕಾರಣವನ್ನು ನೀಡಿದ ಸ್ಪೀಕರ್ ಚರ್ಚೆಗೆ ಅನುಮತಿಯನ್ನು ನಿರಾಕರಿಸಿದರು.

ವಿರೋಧಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ, 'ಬುಲ್ಡೋಜರ್ ಕಾರ್ಯಾಚರಣೆ ವಿಷಯವಷ್ಟೇ ಕೋರ್ಟ್‌ನಲ್ಲಿದೆ' ಎಂದು ಗಮನಸೆಳೆದರು. ಕಾನೂನು ಸುವ್ಯವಸ್ಥೆ ಚರ್ಚೆಗೆ ಅವಕಾಶ ನೀಡಿ ಎಂದು ಮುಖಂಡ ಕಿರಣ್ ಚೌಧರಿ ಕೋರಿದರು.

ಈ ವಿಷಯ ಆಡಳಿತ–ವಿರೋಧಪಕ್ಷದ ಸದಸ್ಯರ ನಡುವೆ ವಾಗ್ವಾದ, ಕೋಲಾಹಲ ಸೃಷ್ಟಿಗೆ ಕಾರಣವಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದಾಗ ಸ್ಪೀಕರ್ ಕಲಾಪವನ್ನು ಭೋಜನ ವಿರಾಮಕ್ಕೂ ಮೊದಲು ಎರಡು ಬಾರಿ ಮುಂದೂಡಿದರು.

ಆಲ್ಟ್ ನ್ಯೂಸ್‌ನ ಜುಬೈರ್ ವಿರುದ್ಧ ಎಫ್‌ಐಆರ್

ಮುಜಫ್ಫರನಗರ (ಉತ್ತರಪ್ರದೇಶ) (ಪಿಟಿಐ): ಖುಬ್ಬಾಪುರ ಗ್ರಾಮದಲ್ಲಿ ಶಿಕ್ಷಕಿ ಸೂಚನೆ ಮೇರೆಗೆ ಸಹಪಾಠಿಗಳಿಂದ ಕಪಾಳಮೋಕ್ಷಕ್ಕೊಳಗಾದ ಮುಸ್ಲಿಂ ವಿದ್ಯಾರ್ಥಿಯ ಗುರುತು ಬಹಿರಂಗಪಡಿಸಿದ ಆರೋಪದ ಮೇಲೆ ಆಲ್ಟ್ ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ವಿರುದ್ಧ ಸೋಮವಾರ ಎಫ್‌ಐಆರ್ ದಾಖಲಿಸಲಾಗಿದೆ.

ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 74 ರ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಸುಮನ್ ತಿಳಿಸಿದ್ದಾರೆ.

ಘಟನೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುವ ಮೂಲಕ ಜುಬೈರ್ ಬಾಲಕನ ಗುರುತು ಬಹಿರಂಗಪಡಿಸಿದ್ದಾರೆ ಎಂದು ದೂರುದಾರ ವಿಷ್ಣು ದತ್ ಆರೋಪಿಸಿದ್ದಾರೆ.

ಬಾಲಕನ ಕುಟುಂಬ ನೀಡಿದ ದೂರಿನ ಮೇರೆಗೆ ಐಪಿಸಿ ಸೆಕ್ಷನ್ 323 (ಹಲ್ಲೆ), 504 (ಉದ್ದೇಶಪೂರ್ವಕವಾಗಿ ನಿಂದಿಸಿ ಶಾಂತಿಭಂಗ ಉಂಟು ಮಾಡುವುದು) ಅಡಿ ಶಿಕ್ಷಕಿ ವಿರುದ್ಧ ಶನಿವಾರ ಪ್ರಕರಣ ದಾಖಲಿಸಲಾಗಿದೆ.

'ಈ ವಿಷಯಕ್ಕೆ ಕೋಮು ಬಣ್ಣ ನೀಡಲು ವಿಡಿಯೊ ತಿರುಚಲಾಗಿದೆ. ಇದನ್ನು ವಿದ್ಯಾರ್ಥಿಯ ಚಿಕ್ಕಪ್ಪ ಚಿತ್ರೀಕರಿಸಿದ್ದಾರೆ. ಸಹಪಾಠಿಗಳಿಂದ ವಿದ್ಯಾರ್ಥಿಗೆ ಕಪಾಳಮೋಕ್ಷ ಮಾಡಿಸಿದ್ದು ತಪ್ಪು. ಅಂಗವಿಕಲೆಯಾಗಿರುವ ಕಾರಣ ಎದ್ದು ನಿಲ್ಲಲು ನನಗೆ ಆಗುವುದಿಲ್ಲ. ಹೋಂ ವರ್ಕ್ ಮಾಡದ ಕಾರಣ ಆತನಿಗೆ ಶಿಕ್ಷೆ ವಿಧಿಸಿದೆ' ಎಂದು ಶಿಕ್ಷಕಿ ತ್ರಿಪ್ತಾ ತ್ಯಾಗಿ ಹೇಳಿದ್ದಾರೆ.

ಮುಚ್ಚಿದ ಶಾಲೆ: ಘಟನೆ ನಡೆದಿರುವ ಗ್ರಾಮದ ನೇಹಾ ಪಬ್ಲಿಕ್ ಶಾಲೆ ಮೂರನೇ ದಿನವಾದ ಸೋಮವಾರವೂ ಬಾಗಿಲು ತೆರೆದಿಲ್ಲ.

ಮಾನ್ಯತೆ ಕುರಿತು ಶಿಕ್ಷಣ ಇಲಾಖೆ ನೀಡಿದ ಶೋಕಾಸ್ ನೋಟಿಸ್‌ಗೆ ಉತ್ತರಿಸುವಲ್ಲಿ ನಿರತವಾಗಿದ್ದರಿಂದ ಶಾಲೆ ತೆರೆಯುತ್ತಿಲ್ಲ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

'ಶಾಲೆಗೆ ಶನಿವಾರ ಶೋಕಾಸ್ ನೋಟಿಸ್ ನೀಡಿದ್ದು, ಸೋಮವಾರ ಉತ್ತರ ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಶಾಲೆಗೆ 2019 ರಲ್ಲಿ ಮೂರು ವರ್ಷಗಳ ಅವಧಿಗೆ ಮಾನ್ಯತೆ ನೀಡಲಾಯಿತು. ಕಳೆದ ವರ್ಷ ಮುಕ್ತಾಯಗೊಂಡಿದ್ದರೂ ಆಡಳಿತ ಮಂಡಳಿ ಮಾನ್ಯತೆ ನವೀಕರಣಕ್ಕೆ ಪ್ರಯತ್ನಿಸಿಲ್ಲ' ಎಂದು ಉತ್ತರ ಪ್ರದೇಶ ಸರ್ಕಾರದ ಪ್ರಾಥಮಿಕ ಶಿಕ್ಷಣಾಧಿಕಾರಿ ಶುಭಂ ಶುಕ್ಲಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮತ್ತೊಂದು ಶಾಲೆಗೆ ದಾಖಲು: ಶಾಲಾ ಶಿಕ್ಷಕರ ಸೂಚನೆ ಮೇರೆಗೆ ಬಾಲಕ ಇಲ್ಲಿನ ಖುಬ್ಬಾಪುರ ಗ್ರಾಮದಿಂದ ಕೆಲವು ಕಿಲೋಮೀಟರ್ ದೂರದಲ್ಲಿರುವ ಶಹಪುರ ಪಟ್ಟಣದ ಆಂಗ್ಲ ಮಾಧ್ಯಮ ಖಾಸಗಿ ಶಾಲೆಗೆ ದಾಖಲಾಗಿದ್ದಾನೆ ಎಂದು ಜಮೀಯತ್‌-ಎ-ಉಲೇಮಾ ಹಿಂದ್ ಸಂಘಟನೆ ಜಿಲ್ಲಾಧ್ಯಕ್ಷ ಮೌಲಾನಾ ಮುಕರ್ರಂ ತಿಳಿಸಿದ್ದಾರೆ.

ಬಾಲಕನ ತಂದೆ ಮತ್ತು ಸಂಘಟನೆಯ ಸದಸ್ಯರು ಸೋಮವಾರ ಹೊಸ ಶಾಲೆಗೆ ಭೇಟಿ ನೀಡಿ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಆತನನ್ನು ಶಾಲೆಗೆ ಕರೆದೊಯ್ಯಲು ಬಾಡಿಗೆ ವಾಹನ ವ್ಯವಸ್ಥೆ ಮಾಡಲಾಗಿದ್ದು, ಆತನ ಶಿಕ್ಷಣದ ಜವಾಬ್ದಾರಿಯನ್ನು ಸಂಸ್ಥೆಯೇ ತೆಗೆದುಕೊಂಡಿದೆ ಎಂದರು.

ವಿದ್ಯಾರ್ಥಿ ದತ್ತು ಪಡೆಯಲು ಸಿದ್ಧ (ತಿರುವನಂತಪುರ): ಸಹಪಾಠಿಗಳಿಂದ ಕಪಾಳಕ್ಕೆ ಹೊಡೆಸಿಕೊಂಡಿರುವ ಮುಸ್ಲಿಂ ವಿದ್ಯಾರ್ಥಿಯನ್ನು ದತ್ತು ತೆಗೆದುಕೊಂಡು, ಉಚಿತ ಶಿಕ್ಷಣ ನೀಡಲು ಸಿದ್ಧ ಎಂದು ಕೇರಳದ ಸರ್ಕಾರ ಸೋಮವಾರ ಹೇಳಿದೆ.

ಮಗು ಜೀವ ಉಳಿಸಲು ವಿಮಾನ ತುರ್ತು ಭೂಸ್ಪರ್ಶ

ನಾಗ್ಪುರ (ಪಿಟಿಐ): ಪ್ರಯಾಣದ ವೇಳೆಯೇ ಹೃದಯಸ್ತಂಭನಕ್ಕೆ ಒಳಗಾದ 14 ತಿಂಗಳ ಮಗುವಿನ ಜೀವ ಉಳಿಸಲು ಬೆಂಗಳೂರು-ನವದೆಹಲಿ ನಡುವಿನ ವಿಸ್ತಾರ ವಿಮಾನವನ್ನು ಭಾನುವಾರ ರಾತ್ರಿ ನಾಗ್ಪುರ ವಿಮಾನ ನಿಲ್ದಾಣದಲ್ಲಿ ತುರ್ತಾಗಿ ಇಳಿಸಲಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ಹಾರಾಟದ ವೇಳೆಯ ಹೃದಯ ಸ್ತಂಭನಕ್ಕೆ ಒಳಗಾಗಿದ್ದ ಮಗು ಪ್ರಜ್ಞಾಹೀನತೆಗೆ ಜಾರಿತ್ತು ಎಂದು ನಾಗ್ಪುರದ ಕಿಮ್ಸ್‌-ಕಿಂಗ್ಸ್‌ವೇ ಆಸ್ಪತ್ರೆಯ ಸಂವಹನ ವಿಭಾಗದ ಅಧಿಕಾರಿ ಏಜಾಜ್ ಶಮಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

'ಅದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವೈದ್ಯರು ಮಗುವಿಗೆ ಸಿಪಿಆರ್ (ಕಾರ್ಡಿಯೊಪಲ್ಮನರಿ ರಿಸಸಿಟೇಷನ್ – ಹೃದಯ ಶ್ವಾಸಕೋಶವನ್ನು ಮರುಜೀವಗೊಳಿಸುವುದು) ಮಾಡುವ ಮೂಲಕ ಜೀವರಕ್ಷಕ ಕ್ರಮಗಳನ್ನು ಕೈಗೊಂಡಿದ್ದರು' ಎಂದು ಶಮಿ ಪಿಟಿಐಗೆ ತಿಳಿಸಿದರು.

ಯಾವುದೇ ವ್ಯಕ್ತಿ ಹೃದಯಸ್ತಂಭನಕ್ಕೆ ಒಳಗಾದಾಗ ಅಥವಾ ಉಸಿರಾಟ ನಿಂತಾಗ ಸಿಪಿಆರ್ ಮಾಡುವುದು ಅತ್ಯಗತ್ಯವಾಗಿದ್ದು, ಅದೊಂದು ಜೀವರಕ್ಷಕ ತಂತ್ರ.

ವಿಮಾನದಲ್ಲಿ ವೈದ್ಯರ ಪ್ರಯತ್ನಗಳ ಹೊರತಾಗಿಯೂ ಮಗುವಿನ ಪರಿಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ನಾಗ್ಪುರ ಏರ್‌ಪೋರ್ಟ್ ಅಧಿಕಾರಿಗಳೊಂದಿಗೆ ಮಾತನಾಡಿದ ವಿಮಾನ ಸಿಬ್ಬಂದಿ, ವಿಮಾನವನ್ನು ಇಳಿಸಿದ್ದಾರೆ. ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದ ಆಂಬುಲೆನ್ಸ್ ಮೂಲಕ ಮಗುವನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಕ್ಕಳ ಆರೈಕೆ ವಿಭಾಗದ ಹಿರಿಯ ವೈದ್ಯರು ಮಗುವಿಗೆ ಚಿಕಿತ್ಸೆ ನೀಡಿದ್ದಾರೆ ಎಂದು ಆಸ್ಪತ್ರೆ ಅಧಿಕಾರಿಗಳು ತಿಳಿಸಿದರು.

'ಜಿ20 ಶೃಂಗಕ್ಕೆ ಬರಲಾಗದು'

ನವದೆಹಲಿ (ಪಿಟಿಐ): ಸೆಪ್ಟೆಂಬರ್ ಮೊದಲ ವಾರ ನಡೆಯಲಿರುವ ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ಆಗುತ್ತಿಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ದೃಢಪಡಿಸಿದ್ದಾರೆ.

ಸೋಮವಾರ ತಮ್ಮ ಜೊತೆಗೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಪುಟಿನ್ ಈ ಮಾಹಿತಿ ನೀಡಿದ್ದಾರೆ. ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರು ಶೃಂಗಸಭೆಯಲ್ಲಿ ರಷ್ಯಾವನ್ನು ಪ್ರತಿನಿಧಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ದೆಹಲಿ ಅಬಕಾರಿ ನೀತಿ: ಮೂವರ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ, ಮದ್ಯದ ಉದ್ಯಮಿ ಅಮನದೀಪ್ ಧಲ್ ಅವರಿಂದ ₹ 5 ಕೋಟಿ ಪಡೆದಿರುವ ಆರೋಪ ಕುರಿತಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಸಹಾಯಕ ನಿರ್ದೇಶಕ ಪವನ್ ಖಾತ್ರಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಏರ್ ಇಂಡಿಯಾದ ಸಹಾಯಕ ಪ್ರಧಾನ ವ್ಯವಸ್ಥಾಪಕ ದೀಪಕ್ ಸಾಂಗ್ವಾನ್, ಕ್ಲಾರಿಡ್ಜ್ ಹೋಟೆಲ್ ಮತ್ತು ರೆಸಾರ್ಟ್ಸ್‌ನ ಸಿಇಒ ವಿಕ್ರಮಾದಿತ್ಯ, ಲೆಕ್ಕಪರಿಶೋಧಕ ಪ್ರವೀಣ್ ಕುಮಾರ್ ವಾಟ್ಸ್, ಇ.ಡಿಯ ಯುಡಿಸಿ ನಿತೀಶ್ ಕೋಹರ್, ಬಿರೇಂದರ್ ಪಾಲ್‌ಸಿಂಗ್ ಹೆಸರನ್ನು ಉಲ್ಲೇಖಿಸಿದೆ.

ಬಿಜೆಪಿ ಶಾಸಕನ ಸಂಬಂಧಿ ವಿರುದ್ಧ ಪ್ರಕರಣ

ಬಲರಾಮ್‌ಪುರ (ಪಿಟಿಐ): ಕೆಲ ದಲಿತ ವ್ಯಕ್ತಿಗಳನ್ನು ಥಳಿಸಿದ ಆರೋಪದ ಮೇಲೆ ತುಳಸೀಪುರದ ಬಿಜೆಪಿ ಶಾಸಕ ಕೈಲಾಶ್‌ನಾಥ್ ಶುಕ್ಲಾ ಅವರ ಸಂಬಂಧಿ ಸೋನು ಶುಕ್ಲಾ ಮತ್ತು ಇತರ 11 ಮಂದಿ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ ಅಡಿ ದೂರು ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ತಿಂಗಳ ಹಿಂದೆ ಈ ಪ್ರಕರಣ ನಡೆದಿದೆ. ದಲಿತರನ್ನು ತುಳಸೀಪುರ ತಾಲೂಕಿನ ದ್ವಾರದ ಬಳಿ ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಈ ಕುರಿತು ಕ್ರಮ ಕೈಗೊಳ್ಳಲಾಗಿದೆ ಎಂದು ಎಸ್‌ಪಿ ಕೇಶವ್ ಕುಮಾರ್ ಹೇಳಿದ್ದಾರೆ. ರಾಕೇಶ್ ಎಂಬುವವರ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದಿದ್ದಾರೆ.

'ಬಿಜೆಪಿ ಚಲೇ ಜಾವ್'ಗೆ ಕರೆ: ನಾನಾ ಪಟೋಲೆ

ಮುಂಬೈ: ಮುಂಬರುವ ಲೋಕಸಭಾ ಚುನಾವಣೆಯ ಸಿದ್ಧತೆಯ ಅಂಗವಾಗಿ ಇಲ್ಲಿ ನಡೆಯಲಿರುವ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ಮಹತ್ವದ ಸಭೆಯಲ್ಲಿ, 'ಬಿಜೆಪಿ ಚಲೇ ಜಾವ್' (ಬಿಜೆಪಿ ತೊಲಗಲಿ) ಅಭಿಯಾನಕ್ಕೆ ಕರೆ ನೀಡಲಾಗುವುದು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹೇಳಿದ್ದಾರೆ.

ಮುಂಬೈನ ಸಾಂತಾಕ್ರೂಜ್‌ನ ವಕೋಲಾದ ಗ್ರ್ಯಾಂಡ್ ಹಯಾತ್ ಹೋಟೆಲ್‌ನಲ್ಲಿ ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ನಡೆಯಲಿರುವ ಸಭೆಯಲ್ಲಿ 'ಇಂಡಿಯಾ' ಒಕ್ಕೂಟದ ಲೋಗೊ ಅನಾವರಣಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

'ಚಂದ್ರನನ್ನು 'ಹಿಂದೂ ರಾಷ್ಟ್ರ' ಎಂದು ಘೋಷಿಸಿ'

ನವದೆಹಲಿ: 'ಚಂದ್ರನನ್ನು 'ಹಿಂದೂ ರಾಷ್ಟ್ರ' ಎಂದು ಘೋಷಿಸಬೇಕು ಹಾಗೂ ಚಂದ್ರಯಾನ–3 ಬಾಹ್ಯಾಕಾಶ ನೌಕೆಯು ಇಳಿದ ಜಾಗವನ್ನು ರಾಜಧಾನಿಯನ್ನಾಗಿ ಮಾಡಬೇಕು ಎನ್ನುವ ವಿಶಿಷ್ಟ ಬೇಡಿಕೆಯನ್ನು ಅಖಿಲ ಭಾರತ ಹಿಂದೂ ಮಹಾಸಭಾದ ರಾಷ್ಟ್ರೀಯ ಘಟಕದ ಅಧ್ಯಕ್ಷ ಸ್ವಾಮಿ ಚಕ್ರಪಾಣಿ ಮಹಾರಾಜ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿದ್ದಾರೆ.

'ಬೇರೆ ಧರ್ಮದವರು ಚಂದ್ರನನ್ನು ತಮ್ಮದೆಂದು ಪ್ರತಿಪಾದಿಸುವ ಮುನ್ನ ಭಾರತ ಸರ್ಕಾರವು ಚಂದ್ರನ ಮಾಲೀಕತ್ವವನ್ನು ಪ್ರತಿಪಾದಿಸಿ, ಈ ಕುರಿತು ಸಂಸತ್ತಿನಲ್ಲಿ ನಿರ್ಣಯವನ್ನು ಅಂಗೀಕರಿಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಇಳಿದ ಸ್ಥಳವನ್ನು ಪ್ರಧಾನಿ ಮೋದಿ ಅವರು ಈಚೆಗಷ್ಟೇ 'ಶಿವಶಕ್ತಿ ಪಾಯಿಂಟ್' ಎಂದು ನಾಮಕರಣ ಮಾಡಿದ್ದರು.

ಚಂದ್ರನನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಬೇಕೆಂಬ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹಂಚಿಕೊಂಡಿರುವ ಸ್ವಾಮಿ ಚಕ್ರಪಾಣಿ ಮಹಾರಾಜ್ ಅವರು, 'ಚಂದ್ರನನ್ನು 'ಸನಾತನ ಹಿಂದೂ ರಾಷ್ಟ್ರ'ವೆಂದು ಸಂಸತ್ತು ಘೋಷಿಸಬೇಕು. 'ಶಿವಶಕ್ತಿ ಪಾಯಿಂಟ್' ಅನ್ನು ಚಂದ್ರನ ರಾಜಧಾನಿಯನ್ನಾಗಿ ಮಾಡಬೇಕು. ಇದರಿಂದ ಜಿಹಾದಿ ಮನಃಸ್ಥಿತಿ ಉಳ್ಳ ಯಾವುದೇ ಉಗ್ರಗಾಮಿ ಅಲ್ಲಿ ತಲುಪಲಾರ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದೂ ಹೇಳಿದ್ದಾರೆ.

ಮುಸ್ಲಿಮರು ಜಾಗ ಖಾಲಿ ಮಾಡುವಂತೆ ಬೆದರಿಕೆ

ಗುರುಗ್ರಾಮ (ಪಿಟಿಐ): 'ಮುಸ್ಲಿಮರು ಸೋಮವಾರದೊಳಗೆ ಜಾಗ ಖಾಲಿ ಮಾಡಬೇಕು ಅಥವಾ ಪರಿಣಾಮ ಎದುರಿಸಬೇಕಾಗುತ್ತದೆ' ಎಂಬ ಬೆದರಿಕೆ ಪೋಸ್ಟರ್‌ಗಳನ್ನು ಇಲ್ಲಿನ ಸೆಕ್ಟರ್ 69ರ ಕೊಳೆಗೇರಿಯ ಕೆಲ ಅಂಗಡಿಗಳ ಮೇಲೆ ಅಂಟಿಸಲಾಗಿದೆ.

ಈ ಸಂಬಂಧ ದೂರು ನೀಡಿರುವ ಸ್ಥಳೀಯ ನಿವಾಸಿ ಮೊಜೀದ್, 'ಭಾನುವಾರ ಬೆಳಿಗ್ಗೆ ತಮ್ಮ ಚಹಾ ಅಂಗಡಿಯ ಗೋಡೆ ಮೇಲೆ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಹೆಸರಿನಲ್ಲಿ ಪೋಸ್ಟರ್ ಹಾಕಲಾಗಿದೆ. ಎಲ್ಲಾ ಮುಸ್ಲಿಮರು ಸೋಮವಾರದೊಳಗೆ ಜಾಗ ಖಾಲಿ ಮಾಡಬೇಕು ಅಥವಾ ಸಾವಿಗೆ ಜವಾಬ್ದಾರರಾಗಬೇಕು ಎಂದು ಬರೆಯಲಾಗಿದೆ' ಎಂದು ಅವರು ಆರೋಪಿಸಿದ್ದಾರೆ.

ಆಸಿಫ್ ಎಂಬಾತ ತನಗೆ ಬೆದರಿಕೆ ಹಾಕಲು ಮತ್ತು ಈ ಪ್ರದೇಶದಲ್ಲಿ ಹಿಂಸಾಚಾರ ಪ್ರಚೋದಿಸಲು ಸುಳ್ಳು ಪೋಸ್ಟರ್ ಹಾಕಿರುವ ಬಗ್ಗೆ ಶಂಕೆ ಇದೆ. ಆತ ಸೆಕ್ಟರ್ 69ರಲ್ಲಿ ಗುಜರಿ ಅಂಗಡಿ ನಡೆಸುತ್ತಿದ್ದು, 3–4 ದಿನಗಳ ಹಿಂದೆ ನನಗೆ ಬೆದರಿಕೆ ಹಾಕಿದ್ದ ಎಂದು ಮೋಜಿದ್ ದೂರಿನಲ್ಲಿ ತಿಳಿಸಿದ್ದಾರೆ. ಪೋಸ್ಟರ್‌ಗೂ ತಮಗೂ ಯಾವುದೇ ಸಂಬಂಧ ಇಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ವಿಎಚ್‌ಪಿ ಒತ್ತಾಯಿಸಿದೆ.

ಇ.ಡಿ ಹೊಸ ಆರೋಪಪಟ್ಟಿ

ನವದೆಹಲಿ (ಪಿಟಿಐ): ಶಾರದಾ ಸಮೂಹದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೋಮವಾರ ಇ.ಡಿ ಹೊಸದಾಗಿ ಆರೋಪಪಟ್ಟಿ ದಾಖಲಿಸಿದೆ. ಪಶ್ಚಿಮ ಬಂಗಾಳದ ಮಾಜಿ ಡಿಜಿಪಿ ಮತ್ತು ಸಿಪಿಎಂನ ಮಾಜಿ ಶಾಸಕ ಅವರನ್ನು ಆರೋಪಿಗಳಾಗಿ ಉಲ್ಲೇಖಿಸಿದೆ.

ಕೋಲ್ಕತ್ತದಲ್ಲಿನ ವಿಶೇಷ ಪಿಎಂಎಲ್‌ಎ ಕೋರ್ಟ್‌ಗೆ ಆಗಸ್ಟ್ 21ರಂದು ಎರಡನೇ ಪೂರಕ ದೂರು ಸಲ್ಲಿಸಲಾಗಿದೆ. ಕೋರ್ಟ್ ಇದನ್ನು ಅಂಗೀಕರಿಸಿದೆ ಎಂದು ಜಾರಿ ನಿರ್ದೇಶನಾಲಯದ ಹೇಳಿಕೆ ತಿಳಿಸಿದೆ.

ಪಶ್ಚಿಮ ಬಂಗಾಳದ ಮೀಸಲು ಪಡೆಯ ಮಾಜಿ ಡಿಜಿಪಿ ರಜತ್ ಕುಮಾರ್ ಮಜುಂದಾರ್, ಸಿಪಿಎಂನ ಮಾಜಿ ಶಾಸಕ ದೇವವ್ರತಾ ಸರ್ಕಾರ್, ಸಂಧೀರ್ ಅಗರವಾಲ್, ಸಜ್ಜನ್ ಅಗರವಾಲ್, ನರೇಶ್ ಬಲೋಡಿಯಾ ಮತ್ತು ಅನುಭೂತಿ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ ಸಂಸ್ಥೆಯನ್ನು ಆರೋಪಿಗಳಾಗಿ ಹೆಸರಿಸಲಾಗಿದೆ ಎಂದು ತಿಳಿಸಿದೆ. ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ದಿವಂಗತ ಅಂಜನ್ ದತ್ತಾ ಅವರು ಈ ಸಂಸ್ಥೆಯ ಮಾಲೀಕರಾಗಿದ್ದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ–590018, ಕರ್ನಾಟಕ, ಭಾರತ

Ref.VTU/BGM/SAP/CW4/T-629-2nd Call/2022-2023/2693 Date :28/08/2023

ಟೆಂಡರ ಪ್ರಕಟಣೆ –2ನೇ ಕರೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ ಇ–ಟೆಂಡರ (ದ್ವಿ ಲಕೋಟೆ ಪದ್ಧತಿ) ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು:"Tender for Pro curement of Tools, Accessories and Measuring Instruments for CNC Machines in workshop and Mechanical Engineering Dept of P.G. Centre, VTU Belgavi". ಟೆಂಡರಿಗಿಟ್ಟ ಮೊತ್ತ:

ಕ್ರ ಸಂ	ವಿವರಣೆ	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ
1	Schedule I:Measuring Instruments for CNC Machine Lab	Rs.3,77,750/-	Rs.9500/-
2	Schedule II:VMC and Drill Tap Tooling and Accessories	Rs.8,42,892/-	Rs.21,100/-
3	Schedule III:CNC Lathe Tooling and Accessories	Rs.2,93,250/-	Rs.7,500/-
4	Schedule IV: Accessories and General Hardware Items	Rs.4,84,430/-	Rs.12,100/-

ಟೆಂಡರ ಸಲ್ಲಿಸಲು ಕೂನೆಯ ದಿನಾಂಕ:11/09/2023 ರಂದು 2.30 ರ ವರೆಗೆ ಕುಲಸಚಿವರ ಕಛೇರಿ, ವಿ.ತಾ.ವಿ. ಬೆಳಗಾವಿ. ಟೆಂಡರ ತೆರೆಯುವ ದಿನಾಂಕ: 12/09/2023–ರಂದು 4.00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-329/KSMCA/2023-24

ಕರ್ನಾಟಕ ಸರ್ಕಾರ
Govt of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ ಬಾಗಲಕೋಟೆ–587103
Ph: 08354-235776 E-mail: dudc_bgk@yahoo.co.in, Itstaff dudc_bagalkote@yahoo.co.in

ಸಂಖ್ಯೆ: ಜಿನಕೋಬಾ 3ನೇ ವ್ಯಕ್ತಿ/ಟೆಂಡರ್:2022–2023. ದಿನಾಂಕ: 28.08.2022.

ಟೆಂಡರ್ ಪ್ರಕಟಣೆ (E-Proceurement portal ಮುಖಾಂತರ)

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸನ್ 2023–24ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ಯೋಜನೆಯಡಿ ಕೈಗೊಳ್ಳಲಾಗುವ ಅಭಿವೃದ್ಧಿಕಾಮಗಾರಿಗಳನ್ನು 3ನೇ ವ್ಯಕ್ತಿ ತಪಾಸಣೆಗೆ ಒಳಪಡಿಸಲು 3ನೇ ವ್ಯಕ್ತಿ ನೇಮಕಮಾಡುವ ಬಗ್ಗೆ e-protal: https://eproc.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು,

ಇಂಡೆಂಟ ನಂ: (1) DMA/2023-24/SE0704 (2) DMA/2023-24/SE0705

ಸೂಚನೆಗಳು: (1) Pre-bid Meeting: 26.09.2023 at 4.00 PM
(2) Last Date & Time for receipt of tenders: 29.09.2023, at 04.30pm.
(3) Opening of Technical bid is on Dtd: 30.09.2023 at 5.00 pm.
(4) Date & Time for Opening of Financial Bid Dtd: 06.10.2023 at 11.30 am

ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಬಂದಲ್ಲಿ ಇ–ಪೋರ್ಟಲ್ ನಲ್ಲಿ ತಿಳಿಸಲಾಗುವದು ಮತ್ತು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ ಎಂದು ಸೂಚಿಸಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ,ಬಾಗಲಕೋಟೆ

ವಾ.ಸಾ.ಇ./ಬಾಗಲಕೋಟೆ/99/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ, ಲೊಯರ್ ಹುತ್ತಾ, ಭದ್ರಾವತಿ –577301
Phone : 08282-266355 Fax: 08282 -266647
Email: dcfbdvt@yahoo.in

ಸಂಖ್ಯೆ: ಎ2:ಬಿಯುಡಿ:ಟೆಂಡರ್.ಸಿ.ಆರ್–26/2023–24–4 Dt:22.08.2023

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

2023–24ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ವಿವಿಧ ವಲಯ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ: 06.09.2023ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕಾಮಗಾರಿಯ ಅಂದಾಜು ಮೊತ್ತ:–152.93300 ಲಕ್ಷಗಳು

1. ಮುಂಗಡ ಗುಂಡಿ ಹಾಗೂ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06.09.2023
ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 07.09.2023 4.30 Pm
ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 08.09.2023 5.30 Pm

ಸಹಿ–/ (ಎಮ್.ವಿ. ಅಶೀಶ್ ರೆಡ್ಡಿ ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/80/08/23–24/374

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ/ಟೆಂಡರ್/2023–24 ದಿ: 23.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2023–24 (ಕೆಪಿಪಿ ಪೋರ್ಟಲ್) ಏಕ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–1 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.20.00 ಲಕ್ಷ ಗಳವರೆಗೆ. ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ :01.09.2023 ಸಂಜೆ 4.00 ಗಂಟೆಯವರೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 02.09.2023 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 30.08.2023 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/130/KSMCA/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾವೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರ್ಯಾಲಯ, ಜಿಲ್ಲಾ ಕ್ರೀಡಾಂಗಣ, ಹಾವೇರಿ–581110 ದೂರವಾಣಿ: 08375–232070
ಫ್ಯಾಕ್ಸ್: 08375–232443 ಇ–ಮೇಲ್: adysshvr@gmail.com

ಸಂಖ್ಯೆ:ಸನಿ/ಯುಸಕ್ರೀ/ಇ/ಹಾ/ಜಿತಾಕ್ರೀಸಿಇಟೆ/21/2023–24 ದಿನಾಂಕ: 24–08–2023

ಅಲ್ಪಾವಧಿ ಇ-ಟೆಂಡರ್

ವಿಷಯ: 2023–24ನೇ ಸಾಲಿನಲ್ಲಿ ಎರಡು ವರ್ಷದ ಅವಧಿಗೆ ಕೆ.ಟಿ.ಪಿ.ಪಿ. ನಿಯಮಗಳನ್ವಯ ಜಿಲ್ಲಾ ಕ್ರೀಡಾಂಗಣ, ತಾಲೂಕು ಕ್ರೀಡಾಂಗಣ ಮತ್ತು ಕ್ರೀಡಾ ವಸತಿ ನಿಲಯಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹೊರ ಸಂಪನ್ಮೂಲ ಏಜೆನ್ಸಿಯಿಂದ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಪ್ರಕ್ಯೂರಮೆಂಟ್ ಮುಖಾಂತರ ಅಲ್ಪಾವದಿ ಇ–ಟೆಂಡರ್ ಆಹ್ವಾನಿಸುವ ಕುರಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಕ್ರೀಡಾಂಗಣ, ತಾಲೂಕು ಕ್ರೀಡಾಂಗಣಗಳ ನಿರ್ವಹಣೆಗಾಗಿ ಮತ್ತು ಕ್ರೀಡಾ ಶಾಲೆಯ ನಿರ್ವಹಣೆಗಾಗಿ 2023–24ನೇ ಸಾಲಿನಲ್ಲಿ ಎರಡು ವರ್ಷದವರೆಗೆ ಕಾವಲುಗಾರರು, ಸ್ವಚ್ಛತಾಗಾರರು, ಕೇರಟೇಕರ್, ಡಾಟಾಎಂಟ್ರಿ ಆಪರೇಟರ್, ಮಾರ್ಕರ್, ನಿರ್ವಾಹಕರು, ವಾರ್ಡನ್, ಕೇರಟೇಕರ್, ಸ್ವಚ್ಛತಾ ಸಿಬ್ಬಂದಿ, ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಸಿಬ್ಬಂದಿಗಳನ್ನು ಪಡೆಯಲು ಕೆಟಿಪಿಪಿ ನಿಯಮಗಳನ್ವಯ ಇ–ಪ್ರಕ್ಯೂರಮೆಂಟ್ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ದಿನಾಂಕ: 24–08–2023 ರಿಂದ ಪಡೆಯಬಹುದಾಗಿದೆ. ವಿವರ ಈ ಕೆಳಗಿನಂತಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:	04–09–2023
ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ:	05–09–2023

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ ಕಛೇರಿ ವೇಳೆಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಿ ಪಡೆಯಬಹುದಾಗಿದೆ. (ಕಛೇರಿ ದೂರವಾಣಿ ಸಂಖ್ಯೆ: 08375–232080

ಸಹಿ/–
ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ

ವಾ.ಸಾ.ಇ./ಹಾವೇರಿ/139/2023–24/ದೇಶಪಾಂಡೆಪಬ್ಲಿಸಿಟಿ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಹುಣಸೂರು.

ಐ.ಎಫ್.ಟಿ ಸಂಖ್ಯೆ.3/2023–24 ದಿನಾಂಕ:25.08.2023

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಹುಣಸೂರು ತಾಲ್ಲೂಕಿನಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಹಾಗೂ ಪಿರಿಯಾಪಟ್ಟಣ ಮತ್ತು ಹೆಚ್.ಡಿ ಕೋಟೆ ತಾಲ್ಲೂಕುಗಳಲ್ಲಿ ವಾಲ್ಮೀಕ ಆಶ್ರಮ ಶಾಲೆಗಳ ನಿರ್ಮಾಣ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ 1ನೇ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಟೆಂಡರ್ ಕರೆಯಲಾಗಿದ್ದು, **ದಿನಾಂಕ:25–08–2023** ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ **ಮೊತ್ತ ರೂ. 1487.38 ಲಕ್ಷಗಳು,** ಇ.ಎಂ.ಡಿ **ರೂ. 15.00 ಲಕ್ಷಗಳು,** ಕಾಲಾವಧಿ **11–ತಿಂಗಳು** ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ 05–09–2023 (16.30 ಗಂಟೆಯವರೆಗೆ)** ಎಂದು ನಿಗದಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು.

DIPR/MYS/KAVITA/258/2023-24

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಮಾನಿಮಂ/225/ಹಿಪಅ/ಗಣಿ/ಪಸಾಸ/2023–24/2888 ದಿನಾಂಕ : 28–08–2023

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ ಶ್ರೀಕಾಂತ ಆನಂದರಾವ್ ಕದಮ್‌ರವರು ಎರಡು ಸಂಯೋಜಿತ ಸಮೂಹ ಕ್ವಾರಿಗಳಾದ ಸರ್ವೆ ನಂ.62/2(P), ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆಯಲ್ಲಿ 1.39 ಎಕರೆ ಪ್ರದೇಶದಲ್ಲಿ ವಾರ್ಷಿಕ ಉತ್ಪಾದನೆ 40,377 ಟನ್ ಕಟ್ಟಡ ಕಲ್ಲು (ಎಂ–ಸ್ಯಾಂಡ್) ಮತ್ತು Sy No. 63/1+2, 63/3, ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ & ಜಿಲ್ಲೆಯಲ್ಲಿ 12 ಎಕರೆ ಪ್ರದೇಶದಲ್ಲಿ ವಾರ್ಷಿಕ ಉತ್ಪಾದನೆ 2,50,000 ಟನ್ ಕಟ್ಟಡ ಕಲ್ಲು (ಎಂ–ಸ್ಯಾಂಡ್) ಗಣಿಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿ, ಸಂಯೋಜಿತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕ್ಲಸ್ಟರ್ ಯೋಜನೆಯ ಒಟ್ಟು ವಾರ್ಷಿಕ ಉತ್ಪಾದನೆ 2,90,377 ಟನ್ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಒಟ್ಟು 13.39 ಎಕರೆ ಕ್ಲಸ್ಟರ್ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು MoEF&CC ಹೊರಡಿಸಿರುವ ಜ್ಞಾಪನ ಪತ್ರ ದಿನಾಂಕ:12.12.2018ರ ಪ್ರಕಾರ ಕ್ಲಸ್ಟರ್ ಪರಿಣಾಮದ ಅಡಿಯಲ್ಲಿ ಒಳಪಟ್ಟಿರುತ್ತದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 355MIN 2022, ದಿನಾಂಕ: 27.09.2022 ಮತ್ತು SEIAA 550 MIN 2022, ದಿನಾಂಕ: 14.03.2023 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ: 31.03.20223ರ ಪ್ರಕಾರ ಮತ್ತು ಪ್ರಾದೇಶಿಕ ಅಧಿಕಾರಿ, ಬೆಳಗಾವಿ–1, ಇವರ ಪತ್ರ ದಿನಾಂಕ:01.08.2023ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿದೆ:

1 ಕಂಪನಿಯ ಹೆಸರು ಮತ್ತು ವಿಳಾಸ.: ಶ್ರೀ. ಶ್ರೀಕಾಂತ ಆನಂದರಾವ ಕದಮ್, #75, ಶಾಹು ನಗರ, 3ನೇ ಕ್ರಾಸ್, ಬೆಳಗಾವಿ, ಬೆಳಗಾವಿ ಜಿಲ್ಲೆ, ಕರ್ನಾಟಕ.

2 ಉದ್ದೇಶಿತ ಕ್ವಾರಿಗಳ ಯೋಜನಾ ಸ್ಥಳ : 1) ಸರ್ವೆ ನಂ.62/2(P), ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ. 2) ಸರ್ವೆ ನಂ.63/1+2& 63/3, ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

3 ಉದ್ದೇಶಿತ ಕ್ವಾರಿಗಳ ಯೋಜನೆಯ ವಿವರ : 1.39 ಎಕರೆ ಪ್ರದೇಶದಲ್ಲಿ ವಾರ್ಷಿಕ ಉತ್ಪಾದನೆ 40,377 ಟನ್ ಕಟ್ಟಡ ಕಲ್ಲು (ಎಂ–ಸ್ಯಾಂಡ್) ಮತ್ತು 12 ಎಕರೆ ಪ್ರದೇಶದಲ್ಲಿ ವಾರ್ಷಿಕ ಉತ್ಪಾದನೆ 2,50,000 ಟನ್ ಕಟ್ಟಡ ಕಲ್ಲು(ಎಂ–ಸ್ಯಾಂಡ್) ಗಣಿಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿ, ಸಂಯೋಜಿತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಒಟ್ಟು 13.39 ಎಕರೆ ಕ್ಲಸ್ಟರ್ ಪ್ರದೇಶದಲ್ಲಿ ಒಟ್ಟು ವಾರ್ಷಿಕ ಉತ್ಪಾದನೆ 2,90,377 ಟನ್ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

4 ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 29.09.2023 (ಶುಕ್ರವಾರ), ಸಮಯ : ಬೆಳಗ್ಗೆ 11.00 ಗಂಟೆ ಸ್ಥಳ: ಯೋಜನಾ ಸ್ಥಳ, ಶ್ರೀ. ಶ್ರೀಕಾಂತ ಆನಂದರಾವ್ ಕದಮ್, ಸರ್ವೆ ನಂ. 62/2(ಪಿ) ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

5 ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ. ಅ) ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ ಜಿಲ್ಲೆ, ಬೆಳಗಾವಿ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಜಿಲ್ಲೆ, ಬೆಳಗಾವಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಜಿಲ್ಲೆ, ಬೆಳಗಾವಿ ಈ) ತಹಶೀಲ್ದಾರರ ಕಾರ್ಯಲಯ, ಬೆಳಗಾವಿ ತಾಲ್ಲೂಕು. ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ಹುಲಿಕಟ್ಟಿ ಗ್ರಾಮ, ಬೆಳಗಾವಿ ತಾಲ್ಲೂಕು. ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ–1. ಋ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. ಎ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.karnataka.gov.inನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

" ಏಕ ಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ನಿಲ್ಲಿಸಿ"

❦ ಸುಭಾಷಿತ ❦
ಕೊಡುವುದಿರಲಿ ಅಥವಾ ಪಡೆಯುವುದಿರಲಿ,
ಯಾವಾಗಲೂ ಗುಣಮಟ್ಟಕ್ಕಾಗಿ ಹೋರಾಡಿ.
–ವಾಲ್ಟ್ ಡಿಸ್ನಿ

ಜಾವೆಲಿನ್ ಥ್ರೋಗೆ ತಾರಾವರ್ಚಸ್ಸು ದೊರಕಿಸಿಕೊಟ್ಟ ಧೀರ ನೀರಜ್

ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಮತ್ತೊಂದು ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಭಾರತಕ್ಕೆ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಮೊದಲ ಬಂಗಾರದ ಪದಕ ಗೆದ್ದುಕೊಟ್ಟಿದ್ದಾರೆ. ಬುಡಾಪೆಸ್ಟ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋನಲ್ಲಿ ಅವರು ಈ ಸಾಧನೆ ಮಾಡಿದರು. 88.17 ಮೀಟರ್ಸ್ ದೂರ ಥ್ರೋ ಮಾಡಿ ಈ ದಾಖಲೆ ಬರೆದರು. ಅವರಿಗೆ ನಿಕಟ ಪೈಪೋಟಿಯೊಡ್ಡಿದ್ದ ಪಾಕಿಸ್ತಾನದ ಅರ್ಷದ್ ನದೀಂ ಮತ್ತು ಜೆಕ್ ರಿಪಬ್ಲಿಕ್‌ನ ಯಾಕುಬ್ ವಾದ್ಲೇಚ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗಳಿಸಿದರು. ವಿಶ್ವ ಅಥ್ಲೆಟಿಕ್ ಕೂಟದ ಇತಿಹಾಸದಲ್ಲಿ ಭಾರತಕ್ಕೆ ಒಲಿದ ಮೂರನೇ ಪದಕ ಇದಾಗಿದೆ. ಅದರಲ್ಲಿ ಎರಡು ನೀರಜ್ ಅವರದ್ದೇ ಕಾಣಿಕೆ. ಹೋದ ವರ್ಷ ಅಮೆರಿಕದಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ನೀರಜ್ ಬೆಳ್ಳಿ ಜಯಿಸಿದ್ದರು. ಎರಡು ದಶಕಗಳ ಹಿಂದೆ ಅಂಜು ಬಾಬಿ ಜಾರ್ಜ್ ಮಹಿಳೆಯರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಕಂಚು ಗಳಿಸಿದ್ದರು. ಇದರೊಂದಿಗೆ ನೀರಜ್ ಅವರು ಎಲ್ಲ ಪ್ರಮುಖ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸ್ವರ್ಣ ಗೆದ್ದ ಅಥ್ಲೀಟ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಕ್ರೀಡಾಕೂಟ, 2021ರಲ್ಲಿ ಟೋಕಿಯೊ ಒಲಿಂಪಿಕ್ ಕೂಟ, ಡೈಮಂಡ್ ಲೀಗ್ ಕೂಟಗಳು ಅದರಲ್ಲಿ ಪ್ರಮುಖವಾದವು. ಯುರೋಪ್ ದೇಶಗಳ ಬಲಾಢ್ಯ ಅಥ್ಲೀಟ್‌ಗಳ ಪೈಪೋಟಿಯನ್ನು ಮೀರಿ ನಿಂತು ಮಾಡಿದ ಈ ಸಾಧನೆ ಅದ್ಭುತವೇ ಸರಿ. ಹಲವು ದಶಕಗಳಿಂದ ಒಲಿಂಪಿಕ್ಸ್ ಮತ್ತು ವಿಶ್ವ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಭಾರತದ ಅಥ್ಲೀಟ್‌ಗಳಿಗೆ ಪದಕ ಒಲಿದಿರುವುದು ವಿರಳಾತಿವಿರಳ. ಆದರೆ ಈಗ ನೀರಜ್ ತಮ್ಮ ಸಾಧನೆಗಳಿಂದ ಎಲ್ಲವೂ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಸಾಧನೆಗೆ ಅವರ ಸಿದ್ಧತೆ, ಬದ್ಧತೆ, ಪರಿಶ್ರಮವೇ ಕಾರಣ. ಎರಡು ವರ್ಷಗಳ ಹಿಂದೆ ಒಲಿಂಪಿಕ್ ಪದಕ ವಿಜೇತರಾದ ಬಳಿಕ ಲಭಿಸಿದ ಕೀರ್ತಿ, ಹಣ ಮತ್ತು ಗೌರವವನ್ನು ಅವರು ಮೈಮರೆಯಲಿಲ್ಲ. ನಿರಂತರ ಸಾಧನೆಯ ತುಡಿತ ಅವರಲ್ಲಿತ್ತು. ಎಲ್ಲ ಕ್ರೀಡಾಪಟುಗಳು ಅವರಿಂದ ಕಲಿಯಬೇಕಾದ ಗುಣಗಳು ಇವು ಎಂಬುದರಲ್ಲಿ ಸಂಶಯವಿಲ್ಲ.

ದೇಶದ ಕ್ರೀಡಾಕ್ಷೇತ್ರ ಮತ್ತಷ್ಟು ಸದೃಢವಾಗಿ ಬೆಳೆಯಲು ನೀರಜ್ ಚೋಪ್ರಾ ಅವರ ಸಾಧನೆಯು ಪ್ರೇರಣೆಯಾಗಬೇಕು. ಪ್ರತಿಭಾನ್ವಿತರನ್ನು ಹುಡುಕಿ ತರಬೇತಿ ನೀಡುವ ಕಾರ್ಯ ಬಿರುಸು ಪಡೆಯಬೇಕು

ನೀರಜ್ ಅವರ ಸಾಲು ಸಾಲು ಸಾಧನೆಗಳಿಂದಾಗಿ ಇವತ್ತು ದೇಶದಲ್ಲಿ ಅಥ್ಲೆಟಿಕ್ಸ್‌ಗೆ ಬರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಈಗ ನಡೆದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ನೀರಜ್ ಅವರ ಜೊತೆ ಫೈನಲ್ ಸುತ್ತಿನಲ್ಲಿ ಭಾರತದ ಡಿ.ಪಿ. ಮನು ಮತ್ತು ಕಿಶನ್ ಜೇನಾ ಸ್ಪರ್ಧೆಯಲ್ಲಿದ್ದರು. ಜಾವೆಲಿನ್ ಥ್ರೋನಲ್ಲಿ ಭಾರತದ ಮೂವರು ಅಥ್ಲೀಟ್‌ಗಳು ಫೈನಲ್ ತಲುಪಿದ್ದು ಕೂಡ ದಾಖಲೆ. ಅದರಲ್ಲಿ ಮನು ಅವರು ಕರ್ನಾಟಕದ ಹಾಸನದವರು ಎಂಬುದು ವಿಶೇಷ. ಇದೇ ಕೂಟದ ಪುರುಷರ 4X400 ರಿಲೇಯಲ್ಲಿ ಭಾರತ ತಂಡವು ಫೈನಲ್ ತಲುಪಿತು. ಬೇರೆ ಬೇರೆ ವಿಭಾಗಗಳಲ್ಲಿಯೂ ಭಾರತದ ಅಥ್ಲೀಟ್‌ಗಳು ಗಮನ ಸೆಳೆದರು. ಹರಿಯಾಣದ ಹಳ್ಳಿಯೊಂದರಿಂದ ಬಂದ ನೀರಜ್ ಇವತ್ತು ವಿಶ್ವದ ಅಗ್ರಮಾನ್ಯ ಅಥ್ಲೀಟ್ ಆಗಿ ಬೆಳೆದಿದ್ದು ಸಣ್ಣ ಸಾಧನೆಯೇನಲ್ಲ. ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನ (ಆ. 29) ಆಚರಿಸುತ್ತಿರುವ ಈ ಹೊತ್ತಿನಲ್ಲಿ ನೀರಜ್ ಸಾಧನೆಯಿಂದ ದೇಶದಲ್ಲಿ ಸಂತಸದ ಹೊನಲು ಹರಿದಿದೆ. ಜಾವೆಲಿನ್ ಥ್ರೋ ಕ್ರೀಡೆಗೆ ತಾರಾವರ್ಚಸ್ಸು ತಂದುಕೊಟ್ಟ ಶ್ರೇಯವೂ ನೀರಜ್ ಅವರಿಗೆ ಸಲ್ಲಬೇಕು. ದೇಶದ ಕ್ರೀಡಾಕ್ಷೇತ್ರವು ಮತ್ತಷ್ಟು ಸದೃಢವಾಗಿ ಬೆಳೆಯಲು ನೀರಜ್ ಅವರ ಸಾಧನೆಯು ಪ್ರೇರಣೆಯಾಗಬೇಕು. ದೇಶದ ಗ್ರಾಮಾಂತರ ಭಾಗಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು. ಪ್ರತಿಭಾನ್ವಿತರನ್ನು ಹುಡುಕಿ ತರಬೇತಿ ನೀಡುವ ಕಾರ್ಯ ಬಿರುಸು ಪಡೆಯಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ಆಗ ನೀರಜ್ ಅವರಂತಹ ಮತ್ತಷ್ಟು ಸಾಧಕರು ಹೊರಹೊಮ್ಮುವುದು ಖಚಿತ.

ದಿನದ ಟ್ವೀಟ್

‘ಉಚಿತ ಭಾಗ್ಯ’ ಯಾಕಾಗಿ?

ಉದ್ದೇಶಪೂರ್ವಕ ಸುಸ್ತಿದಾರರಿಗೆ ಆರ್‌ಬಿಐ 3.46 ಲಕ್ಷ ಕೋಟಿ ರೂಪಾಯಿಗಳನ್ನು ಉಚಿತ ಕೊಡುಗೆಯಾಗಿ ಕೊಡುವ ಬದಲು, ಆ ಮೊತ್ತವನ್ನು ಅವರಿಂದ ವಸೂಲಿ ಮಾಡಿದ್ದರೆ, ಇಸ್ರೊದ ಬಾಹ್ಯಾಕಾಶ ಅನ್ವೇಷಣಾ ಕಾರ್ಯಕ್ರಮಗಳಿಗೆ ಸಾಕಷ್ಟು ಹಣ ಇರುತ್ತಿತ್ತು. ಚಂದ್ರಯಾನ-3 ಯೋಜನೆಗೆ ₹ 615 ಕೋಟಿ ಖರ್ಚಾಗಿದೆ.

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ

ಎಚ್.ಡಿ. ಕುಮಾರಸ್ವಾಮಿ ಯಾರಿಗೂ ಅಷ್ಟು ಸುಲಭಕ್ಕೆ ಅರ್ಥವಾಗುವುದಿಲ್ಲ. ಅವರನ್ನು ಜೀರ್ಣಿಸಿಕೊಳ್ಳುವುದು ಸುಲಭವಲ್ಲ. ಪೆನ್‌ಡ್ರೈವ್ ವಿಚಾರದಲ್ಲಿ ಆಗಿರುವ ವಾದ, ವಿವಾದಗಳನ್ನು ನೋಡಿದ್ದೇನೆ. ಟೀಕೆ ಮಾಡುವವರಿಗೆ ಇದು ತಿಳಿದಿರಲಿ. ಆ ಬಗ್ಗೆ ಮುಂದೆ ಮಾತನಾಡುತ್ತೇನೆ.

ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಶನಿವಾರ, 29-8-1998

- **ಮೈಸೂರು ಅರಮನೆ ಸ್ವಾಧೀನ ಕ್ರಮಕ್ಕೆ ರಾಷ್ಟ್ರಪತಿ ಅಂಕಿತ**

ಬೆಂಗಳೂರು, ಆಗಸ್ಟ್ 28– ರಾಜಮನೆತನದ ಒಡೆತನಕ್ಕೆ ಒಳಪಟ್ಟಿರುವ ವಿಶ್ವವಿಖ್ಯಾತ ಮೈಸೂರು ಅರಮನೆಯನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ಮೈಸೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಮಸೂದೆಗೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ಅಂಕಿತ ಹಾಕಿದ್ದಾರೆ.

ರಾಜ್ಯ ವಿಧಾನಮಂಡಲದ ಉಭಯ ಸದನಗಳ ಒಪ್ಪಿಗೆ ಪಡೆದು ನಂತರ ಕೇಂದ್ರ ಸರ್ಕಾರ ಶಿಫಾರಸು ಮಾಡಿದ ಈ ಮಸೂದೆಗೆ ರಾಷ್ಟ್ರಪತಿಯವರು ಅಂಕಿತ ಹಾಕಿರುವ ಬಗ್ಗೆ ರಾಷ್ಟ್ರಪತಿ ಭವನದ ಅಧಿಕಾರಿಗಳಿಂದ ಸರ್ಕಾರಕ್ಕೆ ಸಂದೇಶ ಬಂದಿದೆ ಎಂದು ಕಾನೂನು ಸಚಿವ ಎಂ.ಸಿ. ನಾಣಯ್ಯ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮೈಸೂರು ಅರಮನೆಯನ್ನು ಸರ್ಕಾರವೇ ವಶಕ್ಕೆ ತೆಗೆದುಕೊಂಡು ರಾಷ್ಟ್ರೀಯ ಸ್ಮಾರಕವಾಗಿ ಕಾಪಾಡಬೇಕು ಎಂಬುದು ಅರಸರಾಗಿದ್ದ ಜಯಚಾಮರಾಜೇಂದ್ರ ಒಡೆಯರ ಆಶಯವೂ ಆಗಿತ್ತು’ ಎಂದು ಹೇಳಿದರು.

- **ಕಾವೇರಿ: ಸಚಿವರ ಪ್ರವಾಸಕ್ಕೆ ಸೂಚನೆ**

ಬೆಂಗಳೂರು, ಆಗಸ್ಟ್ 28– ಕಾವೇರಿ ಪ್ರಾಧಿಕಾರ ರಚಿಸುವ ನಿರ್ಧಾರದ ಬಗ್ಗೆ ಜನರಲ್ಲಿ ಮೂಡಿರುವ ಗೊಂದಲಗಳನ್ನು ನಿವಾರಿಸಲು ಕಾವೇರಿ ನದಿ ಪಾತ್ರದ ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸ ಕೈಗೊಳ್ಳುವಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಸಂಪುಟದ ಹಿರಿಯ ಸಹೋದ್ಯೋಗಿಗಳಿಗೆ ಸೂಚಿಸಿದ್ದಾರೆ.

‘ಕಾವೇರಿ ನದಿ ನೀರಿನ ಹಂಚಿಕೆ ಸಂಬಂಧ ನ್ಯಾಯಮಂಡಲಿ ನೀಡಿರುವ ಮಧ್ಯಂತರ ಆದೇಶವನ್ನು ಜಾರಿಗೊಳಿಸಲು ಪ್ರಾಧಿಕಾರ ರಚನೆಗೆ ಒಪ್ಪಿಗೆ ನೀಡಿರುವ ರಾಜ್ಯ ಸರ್ಕಾರದ ಕ್ರಮದ ಬಗ್ಗೆ ಕೆಲವು ರಾಜಕೀಯ ಪಕ್ಷಗಳು ಜನರಲ್ಲಿ ಗೊಂದಲ ಉಂಟು ಮಾಡಲು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸ ಮಾಡಿ ವಸ್ತುಸ್ಥಿತಿಯನ್ನು ಜನರಿಗೆ ತಿಳಿಸುವಂತೆ ಸಂಪುಟದ ಹಿರಿಯ ಸಹೋದ್ಯೋಗಿಗಳಿಗೆ ತಿಳಿಸಿದ್ದೇನೆ’ ಎಂದು ಸ್ವತಃ ಮುಖ್ಯಮಂತ್ರಿ ಪಟೇಲ್ ಇಂದು ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 29-8-1973

- **ಭಾರತ- ಪಾಕಿಸ್ತಾನ ನಡುವೆ ಐತಿಹಾಸಿಕ ಒಪ್ಪಂದ: ಶಾಶ್ವತ ಶಾಂತಿ ಸ್ಥಾಪನೆ ದಿಸೆಯಲ್ಲಿ ಮತ್ತೊಂದು ಹೆಜ್ಜೆ**

ನವದೆಹಲಿ, ಆಗಸ್ಟ್ 28– ಐತಿಹಾಸಿಕ ಒಪ್ಪಂದವೊಂದಕ್ಕೆ ಭಾರತ ಮತ್ತು ಪಾಕಿಸ್ತಾನ ಇಂದು ಸಹಿ ಹಾಕಿದವು.

ಭಾರತದಲ್ಲಿರುವ ಪಾಕಿಸ್ತಾನಿ ಯುದ್ಧ ಬಂದಿಗಳು, ಪಾಕಿಸ್ತಾನದಲ್ಲಿ ಬಂಧನದಲ್ಲಿರುವ ಬಂಗಾಳಿಗಳು ಮತ್ತು ಬಾಂಗ್ಲಾದೇಶದಲ್ಲಿರುವ ಪಾಕಿಸ್ತಾನಿ ರಾಷ್ಟ್ರೀಯರನ್ನು (ಪಾಕಿಸ್ತಾನವೇ ತಮ್ಮ ತಾಯಿನಾಡು ಎಂದು ನಿರ್ಧರಿಸಿರುವವರು) ಏಕಕಾಲದಲ್ಲಿ ಅವರವರ ದೇಶಕ್ಕೆ ಮರಳಿಸುವುದಕ್ಕೆ ಈ ಒಪ್ಪಂದ ಅವಕಾಶ ಮಾಡಿದೆ.

‘ಉಪಖಂಡದಲ್ಲಿ ಶಾಶ್ವತ ಶಾಂತಿ ಸ್ಥಾಪನೆಯ ದಿಸೆಯಲ್ಲಿ ಇನ್ನೊಂದು ದೊಡ್ಡ ಹೆಜ್ಜೆ’ ಎಂದು ಈ ಒಪ್ಪಂದವನ್ನು ಭಾರತೀಯ ನಿಯೋಗದ ನಾಯಕ ಪಿ.ಎನ್. ಹಕ್ಸರ್ ಮತ್ತು ಪಾಕಿಸ್ತಾನದ ನಿಯೋಗದ ನಾಯಕ ಅಜೀಜ್ ಅಹ್ಮದ್ ಅವರು ಪ್ರಶಂಸಿಸಿದರು.

- **ಕ್ಷೇತ್ರ ಮರುವಿಂಗಡಣೆ: ಸಂವಿಧಾನ ತಿದ್ದುಪಡಿ ಕ್ರಮಕ್ಕೆ ಅಸ್ತು**

ಬೆಂಗಳೂರು, ಆಗಸ್ಟ್ 28– ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಅವಕಾಶ ಕಲ್ಪಿಸಿಕೊಡಲು ಸಂವಿಧಾನಕ್ಕೆ 31ನೇ ತಿದ್ದುಪಡಿ ಸೂಚಿಸುವ ಕೇಂದ್ರ ವಿಧೇಯಕಕ್ಕೆ ವಿಧಾನಸಭೆ ಇಂದು ಅಂಗೀಕಾರ ನೀಡಿತು.

ಈಗಾಗಲೇ ಸಂಸತ್ತಿನ ಅಂಗೀಕಾರ ಪಡೆದಿರುವ ಈ ವಿಧೇಯಕಕ್ಕೆ ಅಂಗೀಕಾರ ನೀಡಬೇಕೆಂದು ಕೋರಿ ಕಾನೂನು ಸಚಿವ ಡಿ.ಕೆ. ನಾಯ್ಕರ್ ಅವರು ಮಂಡಿಸಿದ ನಿರ್ಣಯಕ್ಕೆ ಸಭೆ ಒಪ್ಪಿಗೆ ನೀಡಿತು. ಕ್ಷೇತ್ರಗಳ ಮರುವಿಂಗಡಣೆಯಿಂದ ಲೋಕಸಭೆಯ ಸದಸ್ಯರ ಸಂಖ್ಯೆ 20ರಷ್ಟು ಹೆಚ್ಚಲಿದೆ.

ದಕ್ಷ ಆಡಳಿತದ ಖಾತರಿಗೆ ಎಲ್ಲ ಹಂತಗಳಲ್ಲಿ ಸರಿಯಾಗಬೇಕು ಆಡಳಿತ ವ್ಯವಸ್ಥೆ

ಅರಿಯಬೇಕಿದೆ ಜನಾದೇಶದ ಮರ್ಮ

ವಿಶ್ಲೇಷಣೆ

ಎ.ಆರ್.ವಾಸವಿ

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕ ಯಶಸ್ಸು ಅತ್ಯಂತ ಅಗತ್ಯವಾಗಿದ್ದ ಆಶಾವಾದದ ಅಲೆಯನ್ನು ಸೃಷ್ಟಿಸಿದೆ. ಹೊಸ ಸರ್ಕಾರದ ರಚನೆಗೆ ಸಿಕ್ಕ ಈ ಜನಾದೇಶವು ಮುಖ್ಯವಾಗಿ ಭ್ರಷ್ಟಾಚಾರ, ಬೆಲೆ ಏರಿಕೆ, ದ್ವೇಷ, ಹಿಂಸೆ ಹಾಗೂ ರಾಜ್ಯದ ಸಾಮಾನ್ಯ ಪ್ರಜೆಯನ್ನು ಬಾಧಿಸಿದ ಹಲವಾರು ಸಮಸ್ಯೆಗಳ ವಿರುದ್ಧದ ಫಲಿತಾಂಶವಾಗಿದೆ. ಅಧಿಕಾರಕ್ಕೆ ಬಂದಾಗಿನಿಂದ ಹೊಸ ಸರ್ಕಾರವು ಸುಳ್ಳು ಸುದ್ದಿಗಳ ವಿಷಕಾರಿ ಪ್ರಚಾರಾಂದೋಲನಕ್ಕೂ ತುತ್ತಾಗಿದೆ.

ಹೀಗಾಗಿ ಸರ್ಕಾರವು ತಾನು ನೀಡಿದ್ದ ಭರವಸೆಗಳಿಗೆ ಬದ್ಧವಾಗಿ ಉಳಿಯುವ, ಎಲ್ಲಾ ‘ಐದು ಗ್ಯಾರಂಟಿ’ಗಳನ್ನು ಅನುಷ್ಠಾನಗೊಳಿಸುವ, ಬೆಳವಣಿಗೆಯನ್ನು ಉತ್ತೇಜಿಸುವ ಹಾಗೂ ಎಲ್ಲರನ್ನೂ ಸಾಮಾಜಿಕವಾಗಿ ಒಳಗೊಳ್ಳುವಂತಹ ಆಡಳಿತ ನೀಡುವ ಮಾತುಗಳನ್ನು ಪದೇಪದೇ ಆಡಬೇಕಾಯಿತು. ಈ ಸರ್ಕಾರದ ಸಾಧನೆಯನ್ನು ಮೌಲ್ಯಮಾಪನ ಮಾಡಲು ನೂರು ದಿನಗಳ ಅವಧಿ ಸಾಕಾಗುವುದಿಲ್ಲ ಎಂಬುದೇನೋ ನಿಜ. ಆದರೆ, ಸರ್ಕಾರವು ಗಮನಹರಿಸಬೇಕಾದ ಪ್ರಮುಖ ವಿಷಯಗಳ ಬಗ್ಗೆ ಅವಲೋಕಿಸಲು ಇದೊಂದು ಒಳ್ಳೆಯ ಸಂದರ್ಭವೂ ಆಗಿದೆ. ವಾಗ್ದಾನಗಳನ್ನು ಅನುಷ್ಠಾನಗೊಳಿಸುವ ಅಥವಾ ಹೊಸ ಪ್ರಜಾತಾಂತ್ರಿಕ ರಾಜಕಾರಣಕ್ಕೆ ಎಡೆ ಮಾಡಿಕೊಡುವ ಯಾವುದೇ ಸರ್ಕಾರದ ಸಾಮರ್ಥ್ಯವನ್ನು ದೊಡ್ಡಮಟ್ಟದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂರಚನೆಗಳು ನಿರ್ಧರಿಸುತ್ತವೆ. ಭಾರತದ ಬೇರೆಡೆಗಳಂತೆ ಕರ್ನಾಟಕದಲ್ಲಿ ಕೂಡ ಈ ಸಂರಚನೆಗಳು ಬಲಪಂಥೀಯ ಹಾಗೂ ಎಡಪಂಥೀಯ ನಿಲುವುಗಳನ್ನು ತುಷ್ಟೀಕರಿಸುತ್ತ ಸಾಗಬೇಕಾದ ಸಂದರ್ಭವನ್ನು ಸೃಷ್ಟಿಸಿವೆ.

ಜಾತಿಯು ಒಂದು ಅಸ್ಮಿತೆಯ ಗುಂಪಾಗಿ, ಒಂದು ಸಂಪನ್ಮೂಲವಾಗಿ ಹಾಗೂ ಒಂದು ರಾಜಕೀಯ ಶಕ್ತಿಯಾಗಿ ಒಗ್ಗೂಡುವುದನ್ನು ಇದು ಒಳಗೊಂಡಿದೆ. ಅತ್ಯಂತ ಹಿಂದುಳಿದ ವರ್ಗಗಳ ಆರ್ಥಿಕ ಅಗತ್ಯಗಳನ್ನು ಪೂರೈಸದೆ ಇರುವ ಉಪೇಕ್ಷೆಯ ಆರ್ಥಿಕ ರಚನೆಯು ಪ್ರಶ್ನಾತೀತ ಎಂದು ಭಾವಿಸಿರುವ ನೀತಿಗಳು ಇಲ್ಲಿ ಪೂರಕವಾಗಿ ಕೆಲಸ ಮಾಡಿವೆ. ಹಾಗೆಯೇ, ದುರ್ಬಲ ವರ್ಗಗಳ ಜನರನ್ನು ಚುನಾವಣೆ ಬಂದಾಗ ಓಲೈಸುವ, ಬಹುಜನರಿಗೆ ಪ್ರಿಯವಾಗುವ ರಾಜಕಾರಣವು ಇಲ್ಲಿದೆ.

ಕರ್ನಾಟಕವು ಇದನ್ನು ಬದಲಾಯಿಸಬೇಕೆಂದರೆ ಜಾತಿ, ಆರ್ಥಿಕತೆ ಮತ್ತು ರಾಜಕಾರಣದ ಸಂರಚನೆಗಳನ್ನು ಜಾಗರೂಕವಾಗಿ ಪರಿಶೀಲಿಸಬೇಕಾಗುತ್ತದೆ. ಅದಾಗಲೇ ಸವಲತ್ತುಳ್ಳವರಿಗೇ ಸವಲತ್ತುಗಳನ್ನು ಕೊಡಮಾಡುವ, ಅವಕಾಶ ವಂಚಿತರನ್ನು ಮತ್ತಷ್ಟು ಅವಕಾಶ ವಂಚಿತರನ್ನಾಗಿಸುವ ಸಂರಚನೆಗಳ ಪುನರ್‌ಸೃಷ್ಟಿ ಆಗದಿರಲು ಇಂತಹ ಎಚ್ಚರಿಕೆ ಅಗತ್ಯ. ಇದನ್ನು ಮಾಡಿ ತೋರಿಸಬೇಕೆಂದರೆ, ರಾಜ್ಯದಲ್ಲಿನ ಆಡಳಿತಾತ್ಮಕ ಕ್ರಮಗಳಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಕೈಗೊಳ್ಳುವುದು ಅಗತ್ಯವಿರುತ್ತದೆ.

ಜಾತಿ ಆಧಾರಿತ ಬೇಡಿಕೆಗಳು ಮತ್ತು ಜಾತಿ ಆಧಾರಿತ ಮೈತ್ರಿಕೂಟಗಳನ್ನು ನಿರ್ವಹಿಸಲೇಬೇಕಾದ ಸಂದರ್ಭಗಳು ಈ ಹಿಂದೆ ಸರ್ಕಾರಗಳಿಗೆ ಎದುರಾಗಿವೆ. ಆದರೆ, ರಾಜ್ಯವು ಹೀಗೆ ಜಾತಿ ಆಧಾರಿತ ಬೇಡಿಕೆಗಳಿಗೆ ಸ್ಪಂದಿಸಿದ ವಿದ್ಯಮಾನಗಳು ನಿಜವಾಗಿಯೂ ಜಾತಿ ಆಧಾರಿತ ಅಸಮಾನತೆಗಳನ್ನು ಅಥವಾ ಜಾತಿ ಆಧಾರಿತ ಸವಲತ್ತುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪರಿಹರಿಸಿಲ್ಲ.

ಜಾತಿ ಆಧಾರಿತ ನಿಗಮಗಳ ಸ್ಥಾಪನೆಯು ಸೂಕ್ಷ್ಮ ಅಥವಾ ಸ್ಥೂಲಸ್ತರಗಳಲ್ಲಿ ಜಾತಿ ಆಧಾರಿತ ಅಸಮಾನತೆಗಳನ್ನು ಪರಿಹರಿಸುವ ಬದಲಿಗೆ ಸ್ವಾರ್ಥ ಹಿತಾಸಕ್ತಿಗಳು ಈ ಸಂಸ್ಥೆಗಳ ಆಯಕಟ್ಟಿನ ಹುದ್ದೆಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಆಸ್ಪದ ಮಾಡಿಕೊಟ್ಟಿದೆ. ಜಾತಿಯ ಕಾರಣದಿಂದಾಗಿನ ಅವಕಾಶಗಳ ಅಲಭ್ಯತೆಯನ್ನು ಗುರುತಿಸಿ, ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳುವುದರ ಜೊತೆಗೆ ಎಲ್ಲ ಹಂತಗಳಲ್ಲೂ ಉತ್ತಮ ಗುಣಮಟ್ಟದ ಸಾರ್ವಜನಿಕ ಶಿಕ್ಷಣವನ್ನು ಲಭ್ಯವಾಗಿಸಬೇಕಾಗುತ್ತದೆ. ಇನ್ನು, ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಿಗೆ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವುದಾಗಿ ಘೋಷಿಸಲಾಗಿದೆ. ಹೀಗೆ ಮಾಡುವಾಗ ಶೈಕ್ಷಣಿಕ ಅವಕಾಶ, ಗುಣಮಟ್ಟ, ಎಲ್ಲಾ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಹಾಗೂ ಕೋರ್ಸ್‌ಗಳ ಫಲಿತಾಂಶಗಳು ಖಾಸಗಿ ಶಿಕ್ಷಣ ಕ್ಷೇತ್ರವನ್ನು ನಿಯಂತ್ರಿಸುವ ವ್ಯವಸ್ಥೆಗೆ ಸರಿಸಾಟಿಯಾಗಿರುವಂತೆ ಕ್ರಮವಹಿಸಬೇಕಾಗುತ್ತದೆ.

ಅದೇ ರೀತಿಯಾಗಿ, ನಮ್ಮ ಆರ್ಥಿಕ ನೀತಿಗಳು ಗ್ರಾಮೀಣ ಹಾಗೂ ಕೃಷಿ ಆರ್ಥಿಕತೆಗಿಂತ ಹೆಚ್ಚಾಗಿ ನಗರೀಕೃತ, ಔದ್ಯಮಿಕ ಹಾಗೂ ಷೇರು ಮಾರುಕಟ್ಟೆಯಂತಹ ಊಹಾತ್ಮಕ ಆರ್ಥಿಕತೆಗಳಿಗೆ ಹೆಚ್ಚು ಆದ್ಯತೆ ಕೊಡುವ ರೀತಿಯಲ್ಲಿ ಮುಂದುವರಿದಿವೆ. ಕಾಂಗ್ರೆಸ್ ಪಕ್ಷಕ್ಕೆ ಅತ್ಯುತ್ಸಾಹದಿಂದ ಮತ ನೀಡಿರುವವರು ಗ್ರಾಮೀಣ ಜನರು ಎಂಬುದು ವಾಸ್ತವವಾದರೂ ಚುನಾವಣಾ ನಂತರದ ಹೊಸ ಬಜೆಟ್‌ನಲ್ಲಿ ನಗರಗಳ ಮೂಲ ಸೌಕರ್ಯಕ್ಕಾಗಿ ಹೆಚ್ಚಿನ ಹಣ ಮೀಸಲಿಡಲಾಗಿದೆ. ‘ಬ್ರ್ಯಾಂಡ್ ಬೆಂಗಳೂರು’ಗೆ ಉತ್ತೇಜನ ನೀಡುವ ಜೊತೆಗೆ ಪ್ರಾದೇಶಿಕ ಅಭಿವೃದ್ಧಿ, ಗ್ರಾಮೀಣ- ನಗರ ಹಾಗೂ ಕೃಷಿ-ಕೈಗಾರಿಕೆಗಳ ಸಮತೋಲನದ ಅಗತ್ಯವನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ, ಚುನಾವಣೆ ಪ್ರಚಾರದ ಸಂದರ್ಭದಲ್ಲಿ, ಭೂಸ್ವಾಧೀನ ಕಾಯ್ದೆ– 2019 ಮತ್ತು ಭೂ ಸುಧಾರಣೆ ತಿದ್ದುಪಡಿ– 2020, ಇವುಗಳನ್ನು ಹಿಂತೆಗೆದುಕೊಳ್ಳುವುದಾಗಿ ನೀಡಲಾಗಿದ್ದ ಭರವಸೆಗಳನ್ನು ಈಡೇರಿಸಬೇಕಾಗುತ್ತದೆ. ಕೃಷಿ ಆಧಾರಿತ ಮತ್ತು ಗ್ರಾಮೀಣ ಆರ್ಥಿಕತೆ ದೃಷ್ಟಿಯಿಂದ ಮಾತ್ರ ಇದು ಮಹತ್ವದ್ದಾಗಿರದೆ ಮಾರುಕಟ್ಟೆ ಪ್ರಣೀತ ಆರ್ಥಿಕತೆಯ ಲೂಟಿ ಪ್ರವೃತ್ತಿಯನ್ನೂ ಚಿವುಟಿ ಹಾಕುತ್ತದೆ.

ಹವಾಮಾನ ವೈಪರೀತ್ಯದ ಸವಾಲುಗಳನ್ನು ಎದುರಿಸುವ ದಿಸೆಯಲ್ಲಿ ರಾಜ್ಯವು ವಿಕೇಂದ್ರೀಕೃತ ರೀತಿಯ ಕ್ರಿಯಾಯೋಜನೆಗಳಿಗೆ ಚಾಲನೆ ನೀಡಬೇಕಾಗುತ್ತದೆ. ಇದರಲ್ಲಿ ವಿಫಲವಾದರೆ ರಾಜ್ಯ ಸರ್ಕಾರವು ರಕ್ಷಣೆ, ಪುನರ್ವಸತಿ ಮತ್ತು ಪರಿಹಾರಗಳಿಗಾಗಿ (ಬರ ಮತ್ತು ಪ್ರವಾಹದ ಸಂದರ್ಭಗಳಲ್ಲಿ ಮಾಡುವಂತೆ) ಪುನರಾವರ್ತಿತ ವೆಚ್ಚ ಭರಿಸಬೇಕಾಗುತ್ತದೆ. ಜೊತೆಗೆ, ಆಹಾರ ಉತ್ಪಾದನೆಯ ತೀವ್ರ ನಷ್ಟದ ಅಪಾಯಗಳನ್ನು ಎದುರಿಸಲೇಬೇಕಾಗುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಪರಿಷ್ಕರಿಸುವ ತುರ್ತು ಅವಶ್ಯಕತೆ ಕೂಡ ಇದೆ. ಜನರು ಆರೋಗ್ಯಕ್ಕಾಗಿ ಮಾಡುವ ವೆಚ್ಚವು ಹಲವರನ್ನು ಬಡತನಕ್ಕೆ ದೂಡುತ್ತಿದೆ. ಹೀಗಾಗಿ, ಸರ್ಕಾರವು ಈ ವೆಚ್ಚವನ್ನು ಜನರ ಮೇಲೆ ಹೊರಿಸಬಾರದು. ಐದು ಗ್ಯಾರಂಟಿಗಳು ಘೋಷಿತ ‘ಸಾರ್ವತ್ರಿಕ ಕನಿಷ್ಠ ಆದಾಯ’ಕ್ಕೆ ಬದಲಾಗಿ ರಾಜಕೀಯ ಹಿತರಕ್ಷಣೆಯನ್ನು ಪ್ರತಿನಿಧಿಸುತ್ತವೆ. ಆದರೂ ಹೆಚ್ಚಿನ ಜನರ ಖರೀದಿ ಸಾಮರ್ಥ್ಯ ಹೆಚ್ಚಿಸಲು, ಬದುಕಿನ ಗುಣಮಟ್ಟ ಉತ್ತಮಗೊಳಿಸಲು, ಸಂಚಾರದ ಅಗತ್ಯ ಪೂರೈಸಲು ಸಹಕಾರಿಯಾಗುವುದರಿಂದ ಈ ‘ಗ್ಯಾರಂಟಿ’ಗಳನ್ನು ಮರುವಿತರಣೆಯ ಮಾರ್ಗೋಪಾಯಗಳೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಈ ಯೋಜನೆಗಳ ಸೌಲಭ್ಯಗಳು ಪರಿಣಾಮಕಾರಿಯಾಗಿ ಫಲಾನುಭವಿಗಳಿಗೆ ತಲುಪುತ್ತವೆ ಎಂಬುದನ್ನು ಖಾತರಿಗೊಳಿಸಿಕೊಳ್ಳುವ ಅಗತ್ಯವಿರುತ್ತದೆ.

ಕೆಲವು ವರ್ಷಗಳಿಂದ ಕರ್ನಾಟಕದ ಆಡಳಿತ ವ್ಯವಸ್ಥೆಯು ಹಲವಾರು ಸ್ಕೀಮ್‌ಗಳು ಹಾಗೂ ಕಾರ್ಯಕ್ರಮಗಳ ಹೊರೆಯಿಂದ ಬಳಲುತ್ತಿದೆ. ಇದರ ಜೊತೆಗೆ ಮೇಲ್ವಿಚಾರಣೆಯ ಕೊರತೆ ಮತ್ತು ಹೆಚ್ಚಾದ ರಾಜಕೀಯ ಹಸ್ತಕ್ಷೇಪಗಳು ಕಾಡುತ್ತಿವೆ. ಈ ಸ್ಕೀಮುಗಳ ಸೌಲಭ್ಯಗಳನ್ನು ಫಲಾನುಭವಿಗಳಿಗೆ ತಲುಪಿಸಬೇಕೆಂದರೆ ಹಾಗೂ ಒಟ್ಟಾರೆಯಾಗಿ ದಕ್ಷತೆಯಿಂದ ಕೂಡಿದ ಭ್ರಷ್ಟಾಚಾರಮುಕ್ತ ಆಡಳಿತವನ್ನು ಖಾತರಿಗೊಳಿಸಬೇಕೆಂದರೆ ಪಂಚಾಯಿತಿಗಳು, ನಗರಸಭೆಗಳಿಂದ ಹಿಡಿದು ರಾಜ್ಯ ಮಟ್ಟದವರೆಗೆ ಆಡಳಿತ ವ್ಯವಸ್ಥೆಯನ್ನು ಪೂರ್ತಿಯಾಗಿ ಸರಿಪಡಿಸಬೇಕಾಗುತ್ತದೆ.

ಸಾಮಾಜಿಕ, ಆರ್ಥಿಕ, ರಾಜಕೀಯ ವಲಯಗಳ ನಡುವಿನ ಸಂಬಂಧಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಅತ್ಯಂತ ಅವಕಾಶವಂಚಿತ ಪ್ರಜೆಗಳ ಶೋಚನೀಯ ಸ್ಥಿತಿ ಮುಂದುವರಿಯದಂತೆ ಮಾಡುವ ಕಾರ್ಯನೀತಿಗಳು ಹಾಗೂ ಆಡಳಿತವು ಸರ್ಕಾರಕ್ಕೆ ಜನಾದೇಶವನ್ನು ಈಡೇರಿಸಲು ಅನುವು ಮಾಡಿಕೊಡುತ್ತವೆ. ಆಗಷ್ಟೇ ಆರ್ಥಿಕ ಬೆಳವಣಿಗೆಯು ಸಾಮಾಜಿಕ ಕಲ್ಯಾಣಕ್ಕೆ ಪೂರಕ ಆಗುತ್ತದೆ; ರಾಜಕಾರಣ ಎಂಬುದು ನಿರ್ದೇಶಿಸಬಲ್ಲ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಲ್ಲ ಯಂತ್ರದಂತೆ ಕಾರ್ಯನಿರ್ವಹಿಸುತ್ತದೆ. ಇದಕ್ಕೆ ಆಸ್ಪದ ಮಾಡಿಕೊಡುವ ಜೊತೆಗೆ ಕರ್ನಾಟಕದ ಬಹುತ್ವ, ವಿವಿಧತೆಯಿಂದ ಕೂಡಿದ ಸಾಮಾಜಿಕ ವಿನ್ಯಾಸದ ಕಾಯ್ದುಕೊಳ್ಳುವಿಕೆಯನ್ನು ಖಾತರಿಗೊಳಿಸುವ ವಿಶಾಲ ಕಾರ್ಯಸೂಚಿಯು ಕುವೆಂಪು ಅವರ ನುಡಿಯಂತೆ ರಾಜ್ಯವನ್ನು ‘ಸರ್ವ ಜನಾಂಗದ ಶಾಂತಿಯ ತೋಟ’ವಾಗಿ ಮಾಡುವ ಸಾಧ್ಯತೆಯನ್ನು ತೆರೆಯುತ್ತದೆ.

ಚುರುಮುರಿ



ಆನಂದ... ಪ್ರಜ್ಞಾನಂದ

• ಕೆ.ವಿ.ರಾಜಲಕ್ಷ್ಮಿ

ಮನೆಯಲ್ಲಿ ಹಬ್ಬದ ವಾತಾವರಣ. ‘ಆನಂದ... ಪ್ರಜ್ಞಾನಂದ’ ನನ್ನವಳು ರಾಗವಾಗಿ ಹಾಡುತ್ತಿದ್ದಳು.

‘ಒಳ್ಳೆ ಮೂಡ್‌ನಲ್ಲಿ ಇರೋ ಹಾಗಿದೆ’ ಎಂದೆ, ಜಿಹ್ವೆಗೆ ರುಚಿಯಾಗಿ ಏನಾದರೂ ಬೀಳುವುದೇ ಎಂಬ ಆಸೆಯಿಂದ.

‘ಅಲ್ವೇ ಮತ್ತೆ, ನಮ್ಮ ಸಾಧನೆಯೇನು ಕಡಿಮೇನೇ? ಪ್ರಜ್ಞಾನ್, ಚಂದ್ರನ ಅಂಗಳದಲ್ಲಿ ನಲಿದಾಡ್ತಿರೋದು ದೊಡ್ಡ ವಿಕ್ರಮ ಅಲ್ವೇ?’

‘ಜೊತೆಗೆ ಪ್ರಜ್ಞಾನಂದನ ಸಾಧನೆ! ಇಡೀ ವಿಶ್ವವೇ ನಮ್ಮತ್ತ ನೋಡ್ತಿದೆ’ ಪುಟ್ಟಿಯ ಗಮನ ಚೆಸ್‌ನತ್ತ.

‘ಚಂದ್ರಯಾನವಾಗಲೀ ಚದುರಂಗವಾಗಲೀ ನಡಿಗೆಯ ಸಾಮರ್ಥ್ಯ ಮುಖ್ಯ. ಅಲ್ಲಿ ವಿಕ್ರಮ್ ಲ್ಯಾಂಡರ್‌ನ ನಡಿಗೆಯಾಗಲೀ, ಇಲ್ಲಿ ಕಾಯಿ ನಡೆಸೋದಾಗಲೀ, ಅಡೆತಡೆಗಳನ್ನು ಮೆಟ್ಟಿ ಗುರಿ ಮುಟ್ಟಿರೋದು ಶ್ಲಾಘನೀಯ’ ಅತ್ತೆಯ ವಿಶ್ಲೇಷಣೆ.

‘ವಿಪರೀತ ಸೆಕೆ’ ಎನ್ನುತ್ತಾ ಕಂಠಿ ಬಂದ.

‘ಅದಕ್ಕೇನಂತೆ ಫ್ಯಾನ್ ಹಾಕಿದರಾಯ್ತು, ಹೇಗೂ ಜೀರೋ ಬಿಲ್ಲು, ಈ ತಿಂಗಳು ಅರ್ಹ ಯುನಿಟ್‌ಗಳಿಗಿಂತ ಕಡಿಮೆ ಬಳಕೆಯಾಗಿದೆ’ ಎಂದಳು ನನ್ನವಳು ಹೆಮ್ಮೆಯಿಂದ.

‘ಬಾಸ್ ಮನೆಗೆ ಅಡುಗೆಯವರನ್ನು ಒಪ್ಪಿಸಿಯಾಯ್ತು, ಹೇಗೂ ಫ್ರೀ ಪಾಸ್ ಇರೋದ್ರಿಂದ ಪ್ರಯಾಣಭತ್ಯೆ ಕೊಡಬೇಕಿಲ್ಲ ಅಂತ ಸಲಹೆ ಕೊಟ್ಟಿದ್ದರಿಂದ ಬಾಸ್ ಮಿಸೆಸ್ ಫುಲ್ ಖುಷ್’.

‘ಅಂದ್ಹಾಗೆ ನಿಮ್ಮ ಸಮಾಜದ ಪ್ರೆಸಿಡೆಂಟ್ ಸರೋಜಾ ಮನೆ ವಿಷಯ ಗೊತ್ತಾಯ್ತಾ?’ ಕಂಠಿಯ ಮಾತಿಗೆ ಮೈಯೆಲ್ಲ ಕಿವಿಯಾಯಿತು ನನ್ನವಳಿಗೆ. ಮಹಿಳಾ ಸಮಾಜದಲ್ಲಿ ಆಕೆಯ ವಿರೋಧಿ!

‘ಬಳಸಿದ ಯುನಿಟ್‌ಗಳು 204, ಜಸ್ಟ್ ಮಿಸ್, ಫ್ರೀ ಯುನಿಟ್‌ಗಳಿಂದ ವಂಚಿತೆ. ಜೀರೋ ಬಿಲ್ ಭಾಗ್ಯವಿಲ್ಲ ಅಂತ ಮನೆಯವರ ಮೇಲೆಲ್ಲಾ ಎಗರಾಡ್ತಿದ್ದಾರಂತೆ’. ನನ್ನವಳ ಮುಖದಲ್ಲಿ ಹೊಸ ಮಿಂಚು. ಶತ್ರುವಿನ ಸಂಕಟ ಇವಳಿಗೆ ಸಂತಸ.

‘ಸಮಾಜದಲ್ಲೂ ಹಾಗೇ... ಮುಂದಾಲೋಚನೆ ಇಲ್ದೆ ಏನೇನೋ ಮಾಡೋಕ್ಕೆ ಹೋಗಿ ಸದಸ್ಯರಿಂದ ಮಂಗಳಾರತಿ ಮಾಡಿಸ್ಕೊಳ್ತಾರೆ. ಇರಲಿ, ಅವರ ವಿಷಯ ನಮಗ್ಯಾಕೆ? ಬೋಂಡಾ ಕರಿದು, ಸಜ್ಜಿಗೆ ಮಾಡ್ತೀನಿ, ಮನೆಗೂ ತೊಗೊಂಡು ಹೋಗು ವಿರಂತೆ’ ಎನ್ನುತ್ತಾ ಅಡುಗೆಮನೆಯತ್ತ ನಡೆದಳು ನನ್ನವಳು. ‘ಆನಂದ... ಪರಮಾನಂದ’ ನಾನೂ ರಾಗವೆಳೆದೆ.

ಚರ್ಚೆ

ವಿಶ್ವವಿದ್ಯಾಲಯ ‘ಪಿಸುಮಾತಿನ’ ತಾಣವಲ್ಲ

ಒಂದು ವಿಶ್ವವಿದ್ಯಾಲಯವು ಬೌದ್ಧಿಕ ವೈವಿಧ್ಯ ಮತ್ತು ತೀವ್ರವಾದ ಭಿನ್ನಾಭಿಪ್ರಾಯಗಳ ಜೊತೆಯೂ ಸಂವಾದಿಸುವ ಕೌಶಲವನ್ನು ವಿದ್ಯಾರ್ಥಿ ಸಮುದಾಯಕ್ಕೆ ಕಲಿಸುವಂತೆ ಇರಬೇಕು

• ಕಿರಣ್ ಎಂ. ಗಾಜನೂರು

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿನ ಇಂದಿನ ಸ್ಥಿತಿಗತಿ ಕುರಿತ ಅಭಿಪ್ರಾಯ ಸಂಗ್ರಹವನ್ನು ಆಧರಿಸಿದ ಚಿಂತನೆಯು ‘ವಿಶ್ವವಿದ್ಯಾಲಯಕ್ಕೆ ಪ್ರವೇಶವಿಲ್ಲ’ ಎಂಬ ಶೀರ್ಷಿಕೆಯಡಿ ಪ್ರಕಟವಾಗಿದೆ (ಪ್ರ.ವಾ., ಆ.26). ಹೊಸ ಶಿಕ್ಷಣ ನೀತಿಯನ್ನು ರೂಪಿಸುವ ಪ್ರಯತ್ನದಲ್ಲಿರುವ ಕರ್ನಾಟಕಕ್ಕೆ ತನ್ನ ವಿಶ್ವವಿದ್ಯಾಲಯಗಳ ಬೌದ್ಧಿಕ ವಾತಾವರಣವನ್ನು ಕಟ್ಟುವ ದೃಷ್ಟಿಯಿಂದ ಇದು ಮಹತ್ವದ ಕಣ್ಣೋಟ ಒದಗಿಸಿದೆ.

ಅದು 2005. ನಾನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದುತ್ತಿದ್ದ ಕಾಲಘಟ್ಟ. ನಾವು ಬಿಸಿಎಂ ಹಾಸ್ಟೆಲಿನಲ್ಲಿ ಇದ್ದೆವು. ರಾತ್ರಿ ಊಟ ಮುಗಿದ ಮೇಲೆ ವಿಶ್ವವಿದ್ಯಾಲಯದ ಮೈದಾನದಲ್ಲಿ ಕುಳಿತು ಮೀಸಲಾತಿ, ಖಾಸಗೀಕರಣ, ಜಾತಿ ಅಸಮಾನತೆಯಂತಹ ವಿಷಯಗಳ ಕುರಿತು ತಾಸುಗಟ್ಟಲೆ ಚರ್ಚಿಸುತ್ತಿದ್ದೆವು. ಎಷ್ಟೋ ಬಾರಿ ಚರ್ಚೆ ಜಗಳಕ್ಕೆ ತಿರುಗಿ ಮೂರ್ನಾಲ್ಕು ದಿನ ಮಾತು ಬಿಟ್ಟ ಪ್ರಸಂಗಗಳೂ ಇವೆ.

ವಿಶ್ವವಿದ್ಯಾಲಯ ಅಂದರೆ ಅಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ತರಗತಿ ಕೊಠಡಿಗಳು, ಗ್ರಂಥಾಲಯ ಮತ್ತು ಪಾಠ ಪ್ರವಚನಗಳು ಮಾತ್ರ ಇರುವುದಲ್ಲ. ಜೊತೆ ಜೊತೆಗೆ ಈ ಎಲ್ಲಾ ಸೌಲಭ್ಯಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಪೂರಕವಾದ ‘ಬೌದ್ಧಿಕ ವಾತಾವರಣ’ ಬಹಳ ಮುಖ್ಯವಾಗುತ್ತದೆ. ಇದು ರೂಪುಗೊಳ್ಳುವುದು ತರಗತಿಗಳ ಆಚೆ ಘಟಿಸುವ ಅನೌಪಚಾರಿಕ ಚರ್ಚೆಗಳ ಮೂಲಕ.

ವಿಮರ್ಶಾತ್ಮಕ ಚಿಂತನೆಯು ಕಲಿಕೆಯ ಅವಿಭಾಜ್ಯ ಗುಣವಾಗಿದೆ. ಈ ಕಾರಣಕ್ಕಾಗಿಯೇ ಎಲ್ಲಾ ಜ್ಞಾನಶಾಖೆಗಳ ಅರಿವನ್ನು ಚಿಂತನ-ಮಂಥನದ ಮೂಲಕ ಪಡೆಯುವ ಮತ್ತು ವರ್ತಮಾನದ ಸೌಹಾರ್ದ ಸಮಾಜಕ್ಕೆ ಅಗತ್ಯವಾದ ತತ್ವ ಯಾವುದಿರಬೇಕು ಎಂಬ ಅರಿವನ್ನು ಕಂಡುಕೊಳ್ಳುವ ವಿವೇಚನೆಯನ್ನು ಯುವಜನರ ಪ್ರಜ್ಞೆಗೆ ತರುವುದೇ ಉನ್ನತ ಶಿಕ್ಷಣದ ಪ್ರಮುಖ ಗುರಿ ಎಂದು ಹಲವಾರು ಚಿಂತಕರು ಪ್ರತಿಪಾದಿಸಿದ್ದಾರೆ. ಇದು ಸಾಧ್ಯವಾಗುವುದು ವಿದ್ಯಾರ್ಥಿಗಳಿಗೆ ಎಲ್ಲಾ ಮಾದರಿಯ ಚಿಂತನೆಗಳೊಂದಿಗೆ ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟಾಗ. ಆದರೆ ನಮ್ಮ ಬಹುತೇಕ ವಿಶ್ವವಿದ್ಯಾಲಯಗಳು ಇದಕ್ಕೆ ವಿರುದ್ಧವಾದ ಮಾದರಿಯನ್ನು ಅನುಸರಿಸುತ್ತಿವೆ ಅನ್ನಿಸುತ್ತಿದೆ. ಇಲ್ಲಿ ಕ್ಯಾಂಪಸ್ಸಿನಲ್ಲಿ ಯಾವ ವಿಷಯಗಳ ಕುರಿತು ಚರ್ಚೆಯಾಗಬೇಕು, ಯಾರನ್ನು ಆಹ್ವಾನಿಸಬೇಕು, ಯಾರನ್ನು ಆಹ್ವಾನಿಸಬಾರದು ಎಂಬುದನ್ನು ಪಠ್ಯಕ್ರಮದ ಭಾಗವಾದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ನಿರ್ಧರಿಸುತ್ತಿಲ್ಲ. ಬದಲಾಗಿ, ಕ್ಯಾಂಪಸ್ಸಿನ ಹೊರಗಿನ ಶಕ್ತಿಗಳು, ಪಕ್ಷ, ಸಂಘಟನೆಗಳು ನಿರ್ಧರಿಸುವ ಸ್ಥಿತಿಯೊಂದು ನಿರ್ಮಾಣವಾಗಿದೆ. ಇದು ಬಹಳ ಅಪಾಯಕಾರಿಯಾದ ಬೆಳವಣಿಗೆ.

ನಾವು ಒಪ್ಪಿಕೊಂಡಿರುವ ಸಾಮಾಜಿಕತೆ, ರಾಜಕಾರಣ ಮತ್ತು ಆಡಳಿತ ವೈಖರಿಗಳಲ್ಲಿಯೇ ನೂರಾರು ಮಿತಿಗಳಿವೆ. ಅವುಗಳನ್ನೆಲ್ಲಾ ಮುಕ್ತವಾಗಿ ಚರ್ಚಿಸಿ ವಿಮರ್ಶಿಸಲು, ಪ್ರಶ್ನಿಸಲು ಸಾಧ್ಯವಿರುವ ಜಾಗವೆಂದರೆ ಅದು ವಿಶ್ವವಿದ್ಯಾಲಯ ಮಾತ್ರ. ಇಲ್ಲಿ ಎಲ್ಲವೂ ಚರ್ಚೆಯಾಗಬೇಕು, ಎಲ್ಲಾ ನಂಬಿಕೆಗಳು ವಿಮರ್ಶೆಗೆ ಒಳಗಾಗಬೇಕು, ಎಲ್ಲಾ ಐಡಿಯಾಲಜಿಗಳ ಚಿಂತಕರನ್ನು ವಿಶ್ವವಿದ್ಯಾಲಯವು ಒಳಗೊಳ್ಳಬೇಕು.

ಇದಕ್ಕೆ ವಿರುದ್ಧವಾಗಿ ತನ್ನವರನ್ನು (?) ಮಾತ್ರ ಒಳಗೊಳ್ಳುವ ಮೂಲಕ ವಿಶ್ವವಿದ್ಯಾಲಯಗಳೂ ಪಕ್ಷ, ಸಂಘಟನೆಗಳ ಕಟ್ಟುನಿಟ್ಟಾದ ಸೈದ್ಧಾಂತಿಕ ಅನುಕರಣೆಗೆ ಮುಂದಾದರೆ, ಇದರ ಅಪಾಯ ತಲೆಮಾರುಗಳ ಸೃಜನಶೀಲ ಚಿಂತನೆಯನ್ನೇ ಮೊಟಕುಗೊಳಿಸುತ್ತದೆ. ಅಧ್ಯಯನವನ್ನು ಆಧರಿಸಿ ಮುಕ್ತವಾಗಿ ಚರ್ಚಿಸಬೇಕಾದ, ಧೈರ್ಯವಾಗಿ ತಮ್ಮ ಭಿನ್ನಾಭಿಪ್ರಾಯಗಳನ್ನು ಮಂಡಿಸಬೇಕಾದ ಯುವಜನರನ್ನು ವಿಶ್ವವಿದ್ಯಾಲಯಗಳು ‘ಅಯ್ಯೋ ನಮಗ್ಯಾಕೆ ಬೇಕು ಬಿಡು’ ಎಂಬ ‘ಪಿಸುಮಾತಿನ’ ಗುಂಪುಗಳನ್ನಾಗಿ ಮಾರ್ಪಡಿಸಬಾರದು. ಈ ಬೆಳವಣಿಗೆಯನ್ನು ತಡೆಯಲು ವಿಭಿನ್ನ ಸೈದ್ಧಾಂತಿಕ ಹಿನ್ನೆಲೆಯ ಚಿಂತನೆಗಳನ್ನು ಬೌದ್ಧಿಕವಾಗಿ ಪ್ರತಿಪಾದಿಸುವ ಚಿಂತಕರನ್ನು, ತಜ್ಞರನ್ನು ಒಳಗೊಳ್ಳುವ ವೈಶಾಲ್ಯವನ್ನು ವಿಶ್ವವಿದ್ಯಾಲಯಗಳು ಬೆಳೆಸಿಕೊಳ್ಳಬೇಕು. ವಾಸ್ತವವಾಗಿ, ತನ್ನ ನಂಬಿಕೆಗೆ ವಿರುದ್ಧವಾದ ಅಭಿಪ್ರಾಯಗಳನ್ನು ಕೇಳಿಸಿಕೊಂಡು ಚರ್ಚಿಸುವ ಕೌಶಲವನ್ನು ಕಲಿಸುವುದೇ ವಿಶ್ವವಿದ್ಯಾಲಯಗಳ ಮುಖ್ಯ ಕೆಲಸ ಎಂಬ ಸಾಮಾನ್ಯ ಸಂಗತಿಯನ್ನು ನಾವು ಮರೆಯಬಾರದು.



ವರ್ತಮಾನದಲ್ಲಿ ಮೂಲಭೂತವಾದಿ ಚಿಂತನೆಗಳು ಬೆಳೆಯಲು ಮುಖ್ಯವಾದ ಕಾರಣಗಳಲ್ಲಿ, ಅವು ವಿಶ್ವವಿದ್ಯಾಲಯಗಳಲ್ಲಿ ತೀಕ್ಷ್ಣವಾದ ಬೌದ್ಧಿಕ ವಿಮರ್ಶೆಗೆ, ಚರ್ಚೆಗೆ ಒಳಗಾಗದಿರುವುದು ಒಂದಾಗಿದ್ದು, ಅದಕ್ಕಾಗಿ ಅವು ಸಾಮಾಜಿಕ ಜಾಲತಾಣ, ಅಬ್ಬರಿಸುವ ಭಾಷಣಗಳಂತಹ ಏಕಮುಖ ಸಂವಹನ ಮಾದರಿಗಳನ್ನು ಬಳಸಿಕೊಂಡು ಯುವಜನರನ್ನು ತಲುಪಲು ಪ್ರಯತ್ನಿಸುತ್ತಿವೆ. ಇದು ಇನ್ನೂ ಅಪಾಯಕಾರಿ ಬೆಳವಣಿಗೆ. ಇದನ್ನು ನಿಯಂತ್ರಿಸುವ ಭಾಗವಾಗಿ ನಾವು ಆ ಚಿಂತನೆಗಳ ಮಿತಿಗಳನ್ನು ಮುಕ್ತವಾಗಿ ಚರ್ಚಿಸುವ ಅವಕಾಶವನ್ನು ಶಿಕ್ಷಣದ ಭಾಗವಾಗಿಸಿಕೊಳ್ಳಬೇಕಿದೆ. ಏಕೆಂದರೆ ‘ಒಳ್ಳೆಯ ಕ್ರಿಯೆ ಮಾತ್ರವೇ ಒಳ್ಳೆಯ ರಾಜಕಾರಣ ಸೃಷ್ಟಿಸಲು ಸಾಧ್ಯ’ ಎಂದು ಗಾಂಧೀಜಿ ಹಿಂದೆಯೇ ಹೇಳಿದ್ದಾರೆ.

ರಾಜ್ಯ ಸರ್ಕಾರ ರೂಪಿಸಲು ಯೋಜಿಸುತ್ತಿರುವ ಶಿಕ್ಷಣ ನೀತಿಯು ವಿಶ್ವವಿದ್ಯಾಲಯಗಳಲ್ಲಿ ವಿಮರ್ಶಾತ್ಮಕ ಬೌದ್ಧಿಕ ವಾತಾವರಣ ನಿರ್ಮಿಸುವ ಹೊಣೆಯನ್ನು ನಿರ್ವಹಿಸಬೇಕಿದೆ. ಏಕೆಂದರೆ ಈ ಕಾಲಕ್ಕೆ ‘ಬದುಕು ಎಂದರೆ ನಮ್ಮನ್ನು ನಾವು ಕಂಡುಕೊಳ್ಳುವುದಲ್ಲ, ನಮ್ಮನ್ನು ನಾವು ರೂಪಿಸಿಕೊಳ್ಳುವುದು’. ಆ ಹಾದಿಯಲ್ಲಿ ಶಿಕ್ಷಣ ನೀಡುವ ವಿಮರ್ಶಾತ್ಮಕ ಕಣ್ಣೋಟಗಳು ಮಹತ್ವದ ಪಾತ್ರವನ್ನು ನಿರ್ವಹಿಸಲಿವೆ.

ವಾಚಕರ ವಾಣಿ

ಗ್ರಾಮ ಸ್ವರಾಜ್ಯದ ಕಡೆಗಣನೆ ವಿಷಾದಕರ

ಅಂಕೋಲ ತಾಲ್ಲೂಕಿನ ಕೇದಂಗಿಯಲ್ಲಿ ರಸ್ತೆ ಇಲ್ಲದ ಕಾರಣ, ರೋಗಿಯೊಬ್ಬರನ್ನು ಗ್ರಾಮಸ್ಥರು ಕಂಬಳಿಯ ಜೋಲಿಯಲ್ಲಿ ಮಲಗಿಸಿ 10 ಕಿ.ಮೀ. ದೂರದ ಆಸ್ಪತ್ರೆಗೆ ಹೊತ್ತೊಯ್ದ ಘಟನೆ (ಪ್ರ.ವಾ., ಆ. 27) ವರದಿಯಾಗಿದೆ. ಇಂತಹ ಸುದ್ದಿಗಳು ದಿನಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗುತ್ತಲೇ ಇರುತ್ತವೆ. ಈ ಆಧುನಿಕ ಯುಗದಲ್ಲೂ ಇನ್ನೂ ರಸ್ತೆ ಇಲ್ಲದ, ವಿದ್ಯುತ್ ತಲುಪದ ಹಲವಾರು ಗ್ರಾಮಗಳು ದೇಶದಲ್ಲಿವೆ.

ಭಾರತವು ಚಂದ್ರಯಾನ- 3ರ ಯಶಸ್ಸಿನಿಂದ ಜಾಗತಿಕ ವೇದಿಕೆಯಲ್ಲಿ ಮಿಂಚುತ್ತಿದ್ದರೂ ಗ್ರಾಮೀಣ ಭಾರತವು ಸರ್ಕಾರದ ಕಡೆಗಣನೆಗೆ ಒಳಗಾಗಿ ದುಃಸ್ಥಿತಿ ಅನುಭವಿಸುತ್ತಿರುವುದು ನೋವಿನ ಸಂಗತಿ. ಜನಸಾಮಾನ್ಯರ ಕಲ್ಯಾಣದಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಆಡಳಿತಗಾರರು ಮನಗಾಣಬೇಕಿದೆ.

ಸಫ್ವಾನ್, ಕುದ್ಲೂರು

ಭಿನ್ನಮತಕ್ಕೆ ಉಳಿಗಾಲವಿದೆಯೇ?

‘ಈಗ ಬಿಜೆಪಿಯಲ್ಲಿರುವುದು ಒಬ್ಬನೇ ಒಬ್ಬ ಸಂಸದ, ಇನ್ನುಳಿದವರೆಲ್ಲ ಜೈ ಜೈ’ ಎಂಬ ದೇವನೂರ ಮಹಾದೇವ ಅವರ ವ್ಯಂಗ್ಯಕ್ಕೆ (ಪ್ರ.ವಾ., ಆ. 27) ಸಂಬಂಧಿಸಿದಂತೆ ಈ ಪ್ರತಿಕ್ರಿಯೆ. ಅಧಿಕ ಬಹುಮತ ಇರುವ ಸಂದರ್ಭದಲ್ಲಿ ಸಭಾನಾಯಕ ಅಥವಾ ನಾಯಕಿಯ ಮಾತೇ ಅಂತಿಮ. ಇತರರಿಗೆ ಅಭಿಪ್ರಾಯ ಸೂಚಿಸಲು ಅವಕಾಶವೇ ಇರುವುದಿಲ್ಲ. ಇದು, ಇಂದಿರಾ ಗಾಂಧಿ ಅವರ ಆಡಳಿತ ಅವಧಿಯಿಂದಲೂ ನಮ್ಮಲ್ಲಿ ನಡೆದುಬಂದಿದೆ. ಇಂದಿರಾ ಅವರು ಪ್ರಧಾನಿ ಹಾಗೂ ಪಕ್ಷದ ಅಧ್ಯಕ್ಷೆ ಆಗಿದ್ದ ಸಂದರ್ಭದಲ್ಲಿ, ಭಿನ್ನ ಧ್ವನಿಯವರಿಗೆ ಉನ್ನತಿ ಕಾಣಲು ಆಸ್ಪದ ಕೊಡುತ್ತಿದ್ದರೇ? ಅಂತಹವರ ಮಾತಿಗೆ ಮನ್ನಣೆ ಇರಲಿಲ್ಲ. ಅಂಥವರನ್ನು ಪಕ್ಷದಿಂದ ಹೊರಹಾಕಲಾಗುತ್ತಿತ್ತು. ಇಲ್ಲವೇ ಅಂತಹವರು ತಾವಾಗಿಯೇ ರಾಜೀನಾಮೆ ನೀಡಿ ಮುಕ್ತವಾಗಿ ಪ್ರತಿಭಟಿಸುತ್ತಿದ್ದರು.

ಪಕ್ಷದ ಹಿರಿಯ ಮುಖಂಡರಾಗಿದ್ದ ಜಗಜೀವನರಾಂ ಅವರು ಆ ರೀತಿ ತಾವೇ ಹೊರಬಂದು ಇಂದಿರಾ ಗಾಂಧಿಯವರ ನಾಯಕತ್ವಕ್ಕೆ ಸವಾಲು ಹಾಕಿದ್ದು, ಇಂದಿರಾ ಅಂದರೆ ಇಂಡಿಯಾ ಎಂದು ಕಾಂಗ್ರೆಸ್ ಮುಖಂಡರೊಬ್ಬರು ಬೊಬ್ಬೆ ಹಾಕಿದ್ದು ದೊಡ್ಡ ಮಟ್ಟದಲ್ಲಿ ಚರ್ಚೆಯನ್ನು ಹುಟ್ಟುಹಾಕಿತ್ತು. ಭಿನ್ನಮತಕ್ಕೆ ಉಳಿಗಾಲವಿದೆಯೇ? ಅದೆಲ್ಲಾ ಇತಿಹಾಸವಿರಬಹುದು. ಆದರೆ, ವಾಸ್ತವವನ್ನು ಮರೆಯಲಾದೀತೆ?

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ನಿಂದಿಸುವ ಈ ಗೂಂಡಾಗಿರಿ...

ಮೈಸೂರಿನ ಸಿನಿಮಾ ಮಂದಿರವೊಂದರ ಆವರಣದಲ್ಲಿ, ‘ಟೋಬಿ’ ಚಿತ್ರ ಚೆನ್ನಾಗಿಲ್ಲ ಎಂದು ಹೇಳಿದ ದೃಶ್ಯಮಾಧ್ಯಮದ ಯುವ ಪತ್ರಕರ್ತೆಯೊಬ್ಬರ ಮೇಲೆ ಬೈಗುಳಗಳ ಸುರಿಮಳೆ ಆಗಿರುವುದು ಆಘಾತಕರ. ದುಡಿಮೆಯ ಹಣ ಹಾಗೂ ಸಮಯವನ್ನು ತೆತ್ತು ಸಿನಿಮಾ ವೀಕ್ಷಿಸಿದಾಗ, ಅದು ಇಷ್ಟವಾಗದಿದ್ದರೆ, ‘ಚೆನ್ನಾಗಿಲ್ಲ’ ಎಂದು ಹೇಳುವ ಹಕ್ಕು ಇದ್ದೇ ಇರುತ್ತದೆ. ಹೀಗಿರುವಾಗ, ಅದನ್ನು ಸ್ವೀಕರಿಸಲಾಗದೆ, ಹಾಗೆ ಹೇಳಿದವರನ್ನೇ ನಿಂದಿಸಲು ಮುಂದಾಗುವುದು ಗೂಂಡಾಗಿರಿ ಅಲ್ಲವೇ?

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಯಾರಿಗೂ ಇಲ್ಲವಾಯಿತೇ ತಾಳ್ಮೆ?

ಕೋಲಾರದಲ್ಲಿ ಪರಿಶಿಷ್ಟ ಪಂಗಡದ ಬಾಲಕನನ್ನು ಪ್ರೀತಿಸಿದ್ದ ಒಕ್ಕಲಿಗ ಯುವತಿಯನ್ನು ಆಕೆಯ ತಂದೆಯೇ ಕೊಲೆ ಮಾಡಿ ತಮ್ಮ ಸಹೋದರರ ಸಹಾಯದೊಂದಿಗೆ ತೋಟದಲ್ಲಿ ಹೂತುಹಾಕಿದ್ದ ಪ್ರಕರಣ ವರದಿಯಾಗಿದೆ (ಪ್ರ.ವಾ., ಆ. 28). ಇನ್ನೊಂದು ಕಡೆ, ಹಾಸನ ಸಮೀಪದ ಅಕ್ಕಲವಾಡಿ ಎಂಬ ಗ್ರಾಮದಲ್ಲಿ ತನ್ನ ಮನೆ ಕಟ್ಟಲು ತಾಯಿಯ ಹೆಸರಿನಲ್ಲಿ ಸಾಲ ಪಡೆದಿದ್ದ ಮಗ, ತಾಯಿ ಸತ್ತರೆ ಸಾಲ ತೀರಿಸುವಂತಿಲ್ಲ ಎಂದುಕೊಂಡು, ತಂದೆ ತಾಯಿಗೆ ಆಹಾರದಲ್ಲಿ ವಿಷವಿಟ್ಟು ಕೊಂದಿದ್ದಾನೆ. ಇವರಲ್ಲಿ, ಸ್ವಂತ ತಂದೆ ತಾಯಿ ಮತ್ತು ಮಕ್ಕಳ ಮೇಲೆ ಯಾರಿಗೂ ಪ್ರೀತಿಯೇ ಇಲ್ಲದಂತಾಯಿತೇ? ಅಷ್ಟು ವರ್ಷ ಹೆತ್ತು, ಹೊತ್ತು ಸಾಕಿದ ತಂದೆಯ ಮನಸ್ಸು, ಮಗಳ ಮದುವೆಗೆ ಸ್ವಾತಂತ್ರ್ಯ ನೀಡದೆ ಆಕೆಯನ್ನೇ ಕೊಲ್ಲುವಷ್ಟು ಕ್ರೂರವಾಯಿತೇ?

ಮಕ್ಕಳ ಭವಿಷ್ಯಕ್ಕೋಸ್ಕರ ತ್ಯಾಗ ಮಾಡಿದ ಹೆತ್ತವರನ್ನು ಮರೆತರೇ ಮಕ್ಕಳು? ವಯಸ್ಸಾದವರಿಗೂ ತಾಳ್ಮೆ ಇಲ್ಲ, ಹರಿಹರೆಯದವರಿಗೂ ತಾಳ್ಮೆ ಇಲ್ಲದಂತಾಯಿತೆ? ಯಾಕಿಷ್ಟು ಕ್ರೌರ್ಯ? ವಿಕೃತ ಮನಸ್ಸುಗಳಿಂದ ಇಂತಹ ಅನಾಹುತಗಳು ಸಂಭವಿಸುತ್ತವೆ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಅತಿರೇಕದ ವರ್ತನೆ: ವೈದ್ಯನ ವಿಚಾರಣೆ ನಡೆಯಲಿ

ಗದಗದ ಜಿಲ್ಲಾ ಆಸ್ಪತ್ರೆಯಲ್ಲಿ (ಜಿಮ್ಸ್) ತಾಯಿ, ಮಗುವಿಗೆ ಸರಿಯಾಗಿ ಚಿಕಿತ್ಸೆ ನೀಡುವಂತೆ ಆಗ್ರಹಿಸಿದ ರೋಗಿಯೊಬ್ಬರ ಪತಿ ಮತ್ತು ಇತರ ಸಂಬಂಧಿಕರ ಮೇಲೆ ಹರಿಹಾಯ್ದು ಅತಿರೇಕದಿಂದ ವರ್ತಿಸಿದ ವೈದ್ಯ ಗೌತಮ್ ಪಾಟೀಲ ಎಂಬುವರನ್ನು ಅಮಾನತು ಮಾಡಲಾಗಿದೆ (ಪ್ರ.ವಾ., ಆ. 28). ವೈದ್ಯೋ ನಾರಾಯಣೋ ಹರಿಃ ಎಂದು ಭಾವಿಸಿರುವ ಜನರಿಗೆ ಇಂತಹ ವೈದ್ಯರು ಜನರಿಗೆ ಯಮನಂತೆ ಕಂಡರೂ ಅಚ್ಚರಿ ಎನಿಸದು. ಈ ಮಧ್ಯೆ ಈ ವೈದ್ಯ ಮಹಾಶಯನಿಗೆ ‘ಬೈಪೋಲಾರ್ ಡಿಸಾರ್ಡರ್’ ಎಂಬ ಕಾಯಿಲೆಯಿದ್ದು, ಇದಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರಂತೆ. ಹೀಗಾಗಿ, ತಮ್ಮ ವರ್ತನೆಯ ಬಗ್ಗೆ ಅವರಿಗೆ ನೆನಪೇ ಇರುವುದಿಲ್ಲ ಎಂದು ಜಿಮ್ಸ್ ನಿರ್ದೇಶಕರು ಹೇಳಿದ್ದಾರೆ. ಪ್ರಸ್ತುತ ಪ್ರಕರಣದಲ್ಲಿ ವೈದ್ಯರು ಬರೀ ಬಾಯಿಮಾತಿನ ಅತಿರೇಕದ ವರ್ತನೆ ತೋರಿದ್ದು, ಒಂದು ಪಕ್ಷ ಯಾರಿಗಾದರೂ ಚುಚ್ಚುಮದ್ದು ನೀಡಿಯೋ ಇನ್ನಾವುದೊ ರೀತಿಯಲ್ಲೋ ದೌರ್ಜನ್ಯ ಎಸಗಿ, ನಂತರ ತನಗೆ ತಿಳಿಯಲೇ ಇಲ್ಲ ಎಂದು ಹೇಳಿದರೆ ಸಾಮಾನ್ಯ ಜನರ ಪಾಡೇನು?

ಆರೋಗ್ಯ ಇಲಾಖೆಯು ಇವರನ್ನು ಸೂಕ್ತ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು. ವೈದ್ಯ ವೃತ್ತಿ ನಡೆಸದಂತೆ ಇವರ ಮೇಲೆ ನಿರ್ಬಂಧ ಹೇರಬೇಕು ಅಥವಾ ಬೇರೆ ಇನ್ನೇನಾದರೂ ಕೆಲಸ ನೀಡಬೇಕು.

ವಿಜಯ್ ಹೆಮ್ಮಿಗೆ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಲ್ಲಿ ಕೇಳಿ ಹಕ್ಕಿಗಳ ಸಂಖ್ಯೆ ಕ್ಷೀಣಿಸುತ್ತಿದೆ...

ಪ್ರಜಾವಾಣಿ ವಾರ್ತೆ

'**ಭಾರತದ ಸಂಸ್ಕೃತಿಯಲ್ಲಿ** ಹಕ್ಕಿಗಳಿಗೆ ವಿಶೇಷ ಸ್ಥಾನವಿದೆ. 3,000 ವರ್ಷಗಳಷ್ಟು ಹಳೆಯದಾದದ್ದು ಎಂದು ಹೇಳಲಾಗುವ ಯಜುರ್ವೇದದಲ್ಲಿ 'ಕೋಗಿಲೆ'ಯ ಉಲ್ಲೇಖವಿದೆ. ಜತೆಗೆ ಭಾರತದ ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯದಲ್ಲಿ ನವಿಲು, ಜಕ್ಕವಕ್ಕಿ, ಪಾರಿವಾಳ, ಗಿಳಿ ಮೊದಲಾದವುಗಳಿಗೆ ವಿಶೇಷ ಸ್ಥಾನವಿದೆ. ಹಕ್ಕಿಗಳು ಪರಿಸರದ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂಬ ಕಾರಣದಿಂದಲೇ, ಭಾರತದ ಸಂಸ್ಕೃತಿಯಲ್ಲಿ ಅವುಗಳಿಗೆ ವಿಶೇಷ ಸ್ಥಾನ ನೀಡಲಾಗಿದೆ' ಎನ್ನುತ್ತದೆ ಭಾರತದ ಹಕ್ಕಿಗಳ ಸ್ಥಿತಿ–ಗತಿ ವರದಿ–2020.

'ಹಣ್ಣು ತಿನ್ನುವ ಮಂಗಟ್ಟೆಗಳು, ಹಣ್ಣಿನ ಬೀಜದ ಪ್ರಸಾರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಂತೆಯೇ ಇಲಿ–ಹಾವುಗಳನ್ನು ಬೇಟೆಯಾಡಿ ತಿನ್ನುವ ಹಕ್ಕಿಗಳು ಉಪದ್ರವಿ ಪ್ರಭೇದಗಳ ಸಮತೋಲನ ಕಾಯ್ದುಕೊಳ್ಳುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇಂತಹ ಹಕ್ಕಿಗಳ ಸಂಖ್ಯೆಯಲ್ಲಿ ಇಳಿಕೆಯಾದರೆ, ಅದು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದರೆ ಈಗ ಅವುಗಳ ಸ್ಥಿತಿಗತಿಯಲ್ಲಿ ಆಗುತ್ತಿರುವ ಬದಲಾವಣೆಯನ್ನು ಗುರುತಿಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಹಲವು ಹಕ್ಕಿಗಳು ಶಾಶ್ವತವಾಗಿ ಕಣ್ಮರೆಯಾಗುವ ಅಪಾಯವಿದೆ' ಎಂದೂ ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಕರ್ನಾಟಕಕ್ಕೇ ವಿಶಿಷ್ಟವಾದ ಹಲವು ಹಕ್ಕಿಗಳ ಸಂಖ್ಯೆಯೂ 30 ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಅಂತಹ ಹಕ್ಕಿಗಳ ಸಂರಕ್ಷಣೆ ಬಗ್ಗೆ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಅರಣ್ಯೀಕರಣದ ಹೆಸರಿನಲ್ಲಿ ಸ್ಥಳೀಯವಲ್ಲದ ಪ್ರಭೇದದ ಸಸ್ಯ–ಮರಗಳನ್ನು ಕರ್ನಾಟಕದ ಅರಣ್ಯ ಪ್ರದೇಶಗಳಿಗೆ ಪರಿಚಯಿಸಿದ್ದು, ಹಲವು ಹಕ್ಕಿಗಳಿಗೆ ಮಾರಕವಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ನವಿಲಿನ ಸಂಖ್ಯೆ ಭಾರಿ ಏರಿಕೆ

2000ನೇ ಇಸವಿಯಿಂದ ಈಚೆಗೆ ದೇಶದ ಉದ್ದಗಲಕ್ಕೂ ನವಿಲಿನ ಸಂಖ್ಯೆಯಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಅಂದಾಜಿನ ಪ್ರಕಾರ ನವಿಲಿನ ಸಂಖ್ಯೆಯಲ್ಲಿ ಶೇ 400ರಷ್ಟು ಏರಿಕೆಯಾಗಿದೆ ಎನ್ನಲಾಗಿದೆ. ನವಿಲನ್ನು ರಾಷ್ಟ್ರ ಪಕ್ಷಿ ಎಂದು ಘೋಷಿಸಿದ್ದು ಮತ್ತು ಅದರ ಹತ್ಯೆಗೆ ಕಠಿಣ ಶಿಕ್ಷೆ ಇರುವ ಕಾರಣ ಅವುಗಳ ಬೇಟೆ ನಿಂತಿದೆ. ಹೀಗಾಗಿಯೇ ಅವುಗಳ ಸಂಖ್ಯೆ ಏರಿಕೆಯಾಗುತ್ತಿದೆ. ಆದರೆ ಇದಕ್ಕಿಂತಲೂ ಗಮನ ಹರಿಸಬೇಕಾದ ವಿಚಾರವೆಂದರೆ, ಈ ಹಿಂದೆ ನವಿಲುಗಳು ಇಲ್ಲದೇ ಇದ್ದ ಪ್ರದೇಶಗಳಲ್ಲೂ ಈಗ ನವಿಲುಗಳು ತಮ್ಮ ಆವಾಸಸ್ಥಾನವನ್ನು ವಿಸ್ತರಿಸಿಕೊಂಡಿವೆ.

ನವಿಲುಗಳು ಅತಿ ಒಣ ಪ್ರದೇಶದಲ್ಲಿ ಮತ್ತು ಅತಿ ಮಳೆಯಾಗುವ ಪ್ರದೇಶದಲ್ಲಿ ಇರುವುದಿಲ್ಲ. ಅವುಗಳ ಜೀವನ ಕ್ರಮ ಮತ್ತು ಆಹಾರ ಕ್ರಮಕ್ಕೆ ಅತಿಒಣ ಮತ್ತು ಅತಿಮಳೆಯ ಪ್ರದೇಶಗಳು ಒಗ್ಗುವುದಿಲ್ಲ. ಆದರೆ, ಈಗ ಇಂತಹ ಪ್ರದೇಶಗಳಲ್ಲೂ ನವಿಲುಗಳು ಆವಾಸಸ್ಥಾನ ರೂಪಿಸಿಕೊಂಡಿವೆ. ಹಲವು ದಶಕಗಳ ಹಿಂದೆ ಕೇರಳದಲ್ಲಿ ನವಿಲುಗಳು ಇಲ್ಲವೇ ಇಲ್ಲ ಎನ್ನುವಂತಿತ್ತು. ಆದರೆ, ಈಗ ಕೇರಳದ ಹಲವು ಭಾಗಗಳಲ್ಲಿ ನವಿಲುಗಳು ಕಾಣುತ್ತಿವೆ. ಕೇರಳದಲ್ಲಿ ಮಳೆ ಪ್ರಮಾಣ ಇಳಿಕೆಯಾಗುತ್ತಿರುವುದು ಇದಕ್ಕೆ ಪ್ರಮುಖ ಕಾರಣ ಎಂದು ಗುರುತಿಸಲಾಗಿದೆ.

ಥಾರ್ ಮರುಭೂಮಿಯಂತಹ ರಣಒಣ ಪ್ರದೇಶದಲ್ಲೂ ಈಗ ನವಿಲುಗಳು ಕಾಣಸಿಗುತ್ತವೆ. ಕಾಲುವೆಗಳ ಮೂಲಕ ನೀರಾವರಿ ಒದಗಿಸುತ್ತಿರುವುದರಿಂದ, ಥಾರ್ ಮರುಭೂಮಿಯ ಹಲವೆಡೆ ಕೃಷಿ ಮಾಡಲಾಗುತ್ತಿದೆ. ಅಂತಹ ಪ್ರದೇಶಗಳಿಗೂ ನವಿಲುಗಳು ತಮ್ಮ ಆವಾಸಸ್ಥಾನವನ್ನು ವಿಸ್ತರಿಸಿಕೊಂಡಿವೆ. ಹೀಗೆ ಅಗತ್ಯ ವಾತಾವರಣ ದೊರೆತಲ್ಲೆಲ್ಲಾ ಆವಾಸಸ್ಥಾನ ವಿಸ್ತರಿಸಿಕೊಳ್ಳುವ ಸಾಮರ್ಥ್ಯವಿರುವ ಕಾರಣದಿಂದಲೇ ನವಿಲುಗಳ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ನವಿಲುಗಳ ಸಂಖ್ಯೆ ಏರಿಕೆಯಾಗುವುದರ ಜತೆಗೆ ಬೆಳೆಗಳನ್ನು ಅವು ಹಾಳು ಮಾಡುವ ಪ್ರಮಾಣವೂ ಏರಿಕೆಯಾಗುತ್ತಿದೆ. ದೇಶದ ಹಲವೆಡೆ ಈ ಸಮಸ್ಯೆ ವಿಪರೀತ ಎನ್ನುವಷ್ಟರಮಟ್ಟಿಗೆ ಬೆಳೆದಿದೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

'ಗುಬ್ಬಚ್ಚಿಗಳ ಸ್ಥಿತಿ ಸ್ಥಿರ'

ಈ ಹಿಂದೆ ಮನೆಗಳ ಬಳಿ ಕಾಣಿಸಿಕೊಳ್ಳುತ್ತಿದ್ದ, ಮನೆಗಳಲ್ಲಿಯೇ ಗೂಡು ಕಟ್ಟಿ ಸಂಸಾರ ನಡೆಸುತ್ತಿದ್ದ ಗುಬ್ಬಚ್ಚಿಗಳು ಈಗ ಕಾಣಸಿಗುವುದೇ ಅಪರೂಪ. ಮೊಬೈಲ್ ಟವರ್‌ಗಳ ರೇಡಿಯೇಷನ್‌ನ ಕಾರಣದಿಂದ ಅವು ನಾಶವಾಗಿವೆ ಎಂಬ ಅಭಿಪ್ರಾಯವಿದೆ. ಆದರೆ, ಅದನ್ನು ದೃಢಪಡಿಸುವ ಯಾವುದೇ ಆಧಾರಗಳು ಇಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ. ಆದರೆ, ನಗರ ಪ್ರದೇಶದಲ್ಲಿ ಗುಬ್ಬಚ್ಚಿಗಳ ಸಂಖ್ಯೆ ಏಕೆ ಕಡಿಮೆಯಾಗಿದೆ ಎಂಬುದನ್ನು ವರದಿಯಲ್ಲಿ ವಿವರಿಸಿಲ್ಲ.

25 ವರ್ಷಗಳ ಅವಧಿಯಲ್ಲಿ ಬೆಂಗಳೂರು, ಮುಂಬೈ, ಚೆನ್ನೈ, ದೆಹಲಿ, ಕೋಲ್ಕತ್ತ ಮತ್ತು ಹೈದರಾಬಾದ್‌ನಂತಹ ಆರು ಮೆಟ್ರೊ ನಗರಗಳಲ್ಲಿ ಗುಬ್ಬಚ್ಚಿಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಇಳಿಕೆ ದಾಖಲಾಗಿದೆ. ಆದರೆ ದೇಶದ ಗ್ರಾಮೀಣ ಪ್ರದೇಶದಲ್ಲಿ ಗುಬ್ಬಚ್ಚಿಗಳ ಸಂಖ್ಯೆ ಸ್ಥಿರವಾಗಿಯೇ ಇದೆ. ಕೀಟಗಳ ಸಂಖ್ಯೆಯಲ್ಲಿ ಇಳಿಕೆಯಾಗುತ್ತಿರುವುದು ಮತ್ತು ಗೂಡು ಕಟ್ಟಲು ಸ್ಥಳದ ಕೊರತೆಯೇ ಇವುಗಳ ಸಂಖ್ಯೆ ಇಳಿಕೆಯಾಗಲು ಪ್ರಮುಖ ಕಾರಣ ಎಂದು ನಂಬಲಾಗಿದೆ. ಆದರೆ, ಈ ಬಗ್ಗೆ ವಿಸ್ತೃತ ಅಧ್ಯಯನ ನಡೆಯಬೇಕಿದೆ. ಒಟ್ಟಾರೆ ದೇಶದುದ್ದಕ್ಕೂ ಇವುಗಳ ಸ್ಥಿತಿಗತಿಯನ್ನು ಪರಿಗಣಿಸಿದರೆ ಮತ್ತು ಅವುಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿದೆ ಎಂಬುದನ್ನು ತೋರಿಸುವ ವೈಜ್ಞಾನಿಕ ದತ್ತಾಂಶ ಲಭ್ಯವಿಲ್ಲದೇ ಇರುವ ಕಾರಣ, ಇವುಗಳ ಉಳಿವಿಗೆ ಹೆಚ್ಚು ಗಮನ ನೀಡುವ ಅಗತ್ಯವಿಲ್ಲ ಎಂದೇ ಪರಿಗಣಿಸಲಾಗುತ್ತಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮೊದಲ ವಿಸ್ತೃತ ವರದಿ

ಭಾರತದಲ್ಲಿನ ಹಕ್ಕಿಗಳ ಸ್ಥಿತಿಗತಿ ಕುರಿತಾದ ವಿಸ್ತೃತವಾದ ವರದಿಯನ್ನು ಇದೇ ಮೊದಲ ಬಾರಿಗೆ ಸಿದ್ಧಪಡಿಸಲಾಗಿದೆ. ವನ್ಯಜೀವಿ ಸಂರಕ್ಷಣೆ ವಿಚಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತದ ಹಲವು ಸ್ವಯಂಸೇವಾ ಸಂಸ್ಥೆಗಳು ಮತ್ತು 15,500ಕ್ಕೂ ಹೆಚ್ಚು ಹಕ್ಕಿ ವೀಕ್ಷಕರ ನೆರವಿನೊಂದಿಗೆ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಭಾರತದಲ್ಲಿನ ಹಕ್ಕಿಗಳ ಕುರಿತಾದ ಸಮಗ್ರ ಮಾಹಿತಿ ಕಲೆಹಾಕುವಂತಹ ಇಂತಹ ಪ್ರಯತ್ನ ಇದೇ ಮೊದಲು ಎಂದು ಹೇಳಿಕೊಳ್ಳಲಾಗಿದೆ. ದೇಶದಲ್ಲಿನ ಹಕ್ಕಿಗಳ ಸಂಖ್ಯೆಯಲ್ಲಿ ಆಗುತ್ತಿರುವ ಕಳವಳಕಾರಿ ಇಳಿಕೆಯ ಬಗ್ಗೆ ಈ ವರದಿ ಬೆಳಕು ಚೆಲ್ಲುತ್ತದೆ ಮತ್ತು ವಿಪರೀತ ಎನ್ನುವಷ್ಟರಮಟ್ಟಿಗೆ ಕೆಲವು ಪ್ರಭೇದದ ಹಕ್ಕಿಗಳ ಸಂಖ್ಯೆಯಲ್ಲಿ ಆಗುತ್ತಿರುವ ಏರಿಕೆಯ ಬಗ್ಗೆಯೂ ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಭಾರತದಲ್ಲಿರುವ 867 ಪ್ರಭೇದದ ಹಕ್ಕಿಗಳ ಬಗ್ಗೆ ಅಧ್ಯಯನ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ. 50 ವರ್ಷಕ್ಕೂ ಹೆಚ್ಚಿನ ಅವಧಿಯ ದತ್ತಾಂಶಗಳು, ದಾಖಲೆಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. 15,500 ಮಂದಿ ಪಕ್ಷಿ ವೀಕ್ಷಕರು ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ ಕಲೆ ಹಾಕಿದ ಮಾಹಿತಿಗಳನ್ನು ಬಳಸಿಕೊಂಡು ಈ ವರದಿ ಸಿದ್ಧಪಡಿಸಲಾಗಿದೆ. ದೇಶದಲ್ಲಿ ಹಕ್ಕಿಗಳ ಆವಾಸಸ್ಥಾನದ ವ್ಯಾಪ್ತಿ, ಅದರ ಸ್ಥಿತಿಗತಿ, ಆವಾಸಸ್ಥಾನದಲ್ಲಿನ ಬದಲಾವಣೆ, ಹಕ್ಕಿಗಳ ಸಂಖ್ಯೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಈ ಅಧ್ಯಯನಕ್ಕಾಗಿ ಕಲೆಹಾಕಲಾಗಿದೆ. ದೇಶದಲ್ಲಿ ಕೆಲವು ದೊಡ್ಡ ಹಕ್ಕಿಗಳ ಸಂಖ್ಯೆಯ ಬಗ್ಗೆ ಹೆಚ್ಚು ಗಮನ ನೀಡಲಾಗಿದೆಯೇ ಹೊರತು, ಹಲವು ಸಣ್ಣ ಹಕ್ಕಿಗಳ ಸಂಖ್ಯೆಯಲ್ಲಿ ಆಗುತ್ತಿರುವ ಇಳಿಕೆಯನ್ನು ಕಡೆಗಣಿಸಲಾಗಿದೆ. ಅಂತಹ ಹಕ್ಕಿಗಳ ಬಗ್ಗೆಯೂ ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಹೆಬ್ಬಕ

ದೇಶದ ಹಕ್ಕಿಗಳ ಸ್ಥಿತಿಗತಿ

ಶೋಲಾ ಕಾಡಿನ ಹಕ್ಕಿಗಳ ಆವಾಸಸ್ಥಾನಕ್ಕೆ ಕುತ್ತು

ಪಶ್ಚಿಮ ಘಟ್ಟಗಳಿಗೆ ಮಕುಟಪ್ರಾಯದಂತಿರುವ ಶೋಲಾ ಅರಣ್ಯಗಳ ಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಯು, ಅಲ್ಲಿಗೇ ವಿಶಿಷ್ಟವಾದ ಹಲವು ಹಕ್ಕಿ ಪ್ರಭೇದಗಳಿಗೆ ಕುತ್ತಾಗಿದೆ ಎಂದು ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

'ಬಿಳಿಹೊಟ್ಟೆಯ ನೀಲಿ ರಾಬಿನ್, ನೊಣಹಿಡುಕಗಳಿಗೆ ಶೋಲಾ ಅರಣ್ಯ ಪ್ರದೇಶವೇ ಪ್ರಧಾನ ಆವಾಸಸ್ಥಾನವಾಗಿದೆ. ಕಾಫಿ ಮತ್ತು ಟೀ ತೋಟಗಳ ವಿಪರೀತ ವಿಸ್ತರಣೆಯಿಂದಾಗಿ ಶೋಲಾ ಅರಣ್ಯದ ಹುಲ್ಲುಗಾವಲಿನ ವಿಸ್ತೀರ್ಣ ಕುಸಿಯುತ್ತಿದೆ. ರಾಜ್ಯದ ಪಶ್ಚಿಮ ಘಟ್ಟದಲ್ಲಿರುವ ಶೋಲಾ ಅರಣ್ಯಗಳ ಸ್ವರೂಪದಲ್ಲಿ ಈ ರೀತಿಯ ಬದಲಾವಣೆಯಾಗಿದೆ. ಜತೆಗೆ ಪಶ್ಚಿಮ ಘಟ್ಟದ ಅಂಚಿನಲ್ಲಿ ರೂಪಿಸಲಾದ ಅಕೇಶಿಯಾ ನೆಡುತೋಪುಗಳು, ಶೋಲಾ ಅರಣ್ಯಗಳಿಗೆ ಮಾರಕವಾಗಿ ಪರಿಣಮಿಸಿವೆ. ಅಕೇಶಿಯಾ ಕಾಡು ಈಗ ನೈಸರ್ಗಿಕವಾಗಿಯೇ ಶೋಲಾ ಹುಲ್ಲುಗಾವಲಿಗೆ ವಿಸ್ತರಿಸುತ್ತಿದೆ. ಇದರಿಂದ ಈ ಹಕ್ಕಿಗಳ ಆವಾಸಸ್ಥಾನದ ವಿಸ್ತೀರ್ಣ ಕ್ಷೀಣಿಸುತ್ತಿದೆ. ಕೆಲವು ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡಿವೆ. ಕೆಲವು ಹಕ್ಕಿಗಳು ಹೊಂದಿಕೊಳ್ಳಲಾಗದೇ, ಕ್ಷೀಣಿಸುತ್ತಿವೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಕರ್ನಾಟಕದಲ್ಲಿ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕಾದ ಹಕ್ಕಿಗಳು

- ರಣಹದ್ದು (Indian Vulture)
- ಬಿಳಿತಲೆಯ ಚೇಕಡಿ (White-naped Tit)
- ಕೆಂಪು ತಲೆಯ ರಣಹದ್ದು (Red-headed Vulture)
- ಹಳದಿ ಕೊರಳಿನ ಪಿಕಳಾರ (Yellow-throated Bulbul)
- ಹೆಬ್ಬಕ (Great Indian Bustard)
- ಚೆಟ್ಟ ನವಿಲಕ್ಕಿ (Lesser Florican)
- ಬಿಳಿ ಬೆನ್ನಿನ ರಣಹದ್ದು (White-rumped Vulture)
- ಚುಕ್ಕಿ ಮರಕುಟಿಗ (Heart-spotted Woodpecker)
- ಬಿಳಿ ಹೊಟ್ಟೆಯ ನೀಲಿ ರಾಬಿನ್ (Nilgiri Sholakili)
- ಅಡವಿ ಸಿಪಿಲೆ (Forest Wagtail)
- ಜೊಂಡು ಉಲಿಯಕ್ಕಿ (Broad-tailed Grassbird)
- ನೀಲಗಿರಿ ಪಾರಿವಾಳ (Nilgiri Wood Pigeon)
- ಕಂದು ಗಿಡುಗ (Tawny Eagle)
- ದೊಡ್ಡ ಚುಕ್ಕಿಯ ಗಿಡುಗ (Greater Spotted Eagle)
- ಚುಕ್ಕೆ ಗಿಡುಗ (Indian Spotted Eagle)
- ಬಿಳಿ ಕತ್ತಿನ ಕೊಕ್ಕರೆ (Woolly-necked Stork)
- ಮರ ಬಾನಾಡಿ (Crested Treeswift)

ಬಿಳಿ ಬೆನ್ನಿನ ರಣಹದ್ದು | ನೀಳಕೊಕ್ಕಿನ ರಣಹದ್ದು | ಕೆಂಪು ತಲೆಯ ರಣಹದ್ದು

ಆಧಾರ: ಭಾರತದ ಹಕ್ಕಿಗಳ ಸ್ಥಿತಿ–ಗತಿ ವರದಿ–2020

ಶಿವರಾಜ್‌ಕುಮಾರ್

ಅ.19ಕ್ಕೆ ಬರ್ತಾನೆ ಘೋಸ್ಟ್

ಸ್ಯಾಂಡಲ್‌ವುಡ್‌ನ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಈ ವರ್ಷದ ಮೊದಲ ಸಿನಿಮಾ ರಿಲೀಸ್‌ಗೆ ಮುಹೂರ್ತ ನಿಗದಿಯಾಗಿದೆ. 'ಘೋಸ್ಟ್' ಸಿನಿಮಾ 2023ರ ಅ.19ರಂದು ಬಿಡುಗಡೆಯಾಗಲಿದೆ. ಶ್ರೀನಿ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಸಿನಿಮಾವಾಗಿ ರಿಲೀಸ್ ಆಗಲಿದೆ. ವರಮಹಾಲಕ್ಷ್ಮಿ ಹಬ್ಬದ ದಿನ ಶ್ರೀನಿ ಸಿನಿಮಾ ಬಿಡುಗಡೆ ದಿನಾಂಕವನ್ನು ಘೋಷಿಸಿದ್ದು, 'ನೆರಳುಗಳು ಪಿಸುಗುಟ್ಟುತ್ತಿವೆ ಎಂದರೆ ಘೋಸ್ಟ್ ಬರುತ್ತಿದ್ದಾನೆ ಎಂದರ್ಥ' ಎಂದಿದ್ದಾರೆ. ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ಎನ್. ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಮಲಯಾಳಂನ ಖ್ಯಾತ ನಟ ಜಯರಾಮ್, ಅನುಪಮ್ ಖೇರ್, ಪ್ರಶಾಂತ್ ನಾರಾಯಣನ್ ಈ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಡುತ್ತಿದ್ದಾರೆ. ಇದು ಶ್ರೀನಿ ನಿರ್ದೇಶನದ ಐದನೇ ಚಿತ್ರ. ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಚಿತ್ರವು ವೆಸ್ಟರ್ನ್ ಸ್ಟೈಲ್‌ನಲ್ಲಿ ಇದ್ದು, ಮೂರ್ನಾಲ್ಕು ಶೇಡ್ಸ್‌ನಲ್ಲಿ ಶಿವರಾಜ್‌ಕುಮಾರ್ ಅವರು ಕಾಣಿಸಿಕೊಳ್ಳಲಿದ್ದಾರೆ. ತೆಲುಗು ಹಾಗೂ ತಮಿಳಿನಲ್ಲಿ ಸ್ವತಃ ಶಿವರಾಜ್‌ಕುಮಾರ್ ಅವರೇ ಡಬ್ಬಿಂಗ್ ಮಾಡಿರುವ ವಿಡಿಯೊವೊಂದನ್ನು ಶ್ರೀನ್ ಅಪ್‌ಲೋಡ್ ಮಾಡಿದ್ದು, ಅಭಿಮಾನಿಗಳನ್ನು ಇದು ಸೆಳೆದಿದೆ. ❖

'ಸೂತ್ರಧಾರಿ' ಟ್ರೆಂಡಿಂಗ್

'ಡ್ಯಾಶ್' ಹಾಡಿನ ಮೂಲಕ ಅಭಿಮಾನಿಗಳನ್ನು ಕುಣಿಸಿದ್ದ ಗಾಯಕ ಚಂದನ್ ಶೆಟ್ಟಿ ಇದೀಗ 'ಟ್ರೆಂಡಿಂಗಲ್ ಬರ್ಬೇಕಂದ್ರೆ ಏನ್ ಮಾಡ್ಬೇಕು' ಎಂದು ನಟಿ ಅಪೂರ್ವ ಅವರನ್ನು ಕೇಳುತ್ತಾ ಮತ್ತೆ ಬಂದಿದ್ದಾರೆ.

ನವರಸನ್ ನಿರ್ಮಾಣದ ಹಾಗೂ ಚಂದನ್ ಶೆಟ್ಟಿ ಅವರು ನಾಯಕನಾಗಿ ಅಭಿನಯಿಸಿರುವ ಚಿತ್ರ 'ಸೂತ್ರಧಾರಿ'ಯ ಎರಡನೇ ಹಾಡು ಬಿಡುಗಡೆಯಾಗಿದೆ. ಚಿತ್ರದ ಮೊದಲ ಹಾಡು 'ಡ್ಯಾಶ್' ಸಾಂಗ್ ಈಗಾಗಲೇ 1.7 ಕೋಟಿ ವ್ಯೂಸ್ ಪಡೆದಿದೆ. ಇದೀಗ 'ಸೂತ್ರಧಾರಿ' ಚಿತ್ರಕ್ಕಾಗಿ ವಿಜಯ್ ಈಶ್ವರ್ ಬರೆದಿರುವ 'ಟ್ರೆಂಡಿಂಗಲ್ ಬರ್ಬೇಕಂದ್ರೆ ಏನ್ ಮಾಡ್ಬೇಕು' ಎಂಬ ಹಾಡು ಕೇಳುಗರನ್ನು ಸೆಳೆಯುತ್ತಿದೆ. ಚಂದನ್ ಶೆಟ್ಟಿ ಈ ಹಾಡಿಗೆ ಸಂಗೀತ ನೀಡಿ, ಹಾಡಿದ್ದಾರೆ. ಮೋಹನ್ ಮಾಸ್ಟರ್ ನೃತ್ಯ ನಿರ್ದೇಶಿಸಿರುವ ಈ ಹಾಡಿನಲ್ಲಿ ಚಂದನ್ ಶೆಟ್ಟಿ ಹಾಗೂ ಅಪೂರ್ವ ಹೆಜ್ಜೆ ಹಾಕಿದ್ದಾರೆ.

'ಇನ್ನೊಂದು ಹಾಡಿನ ಶೂಟಿಂಗ್ ಮುಗಿದರೆ, ಚಿತ್ರೀಕರಣ ಮುಕ್ತಾಯವಾಗುತ್ತದೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುತ್ತೇವೆ' ಎನ್ನುತ್ತಾರೆ ನಿರ್ಮಾಪಕ ನವರಸನ್.

'ಡ್ಯಾಶ್ ಹಾಡು ಭರ್ಜರಿ ಹಿಟ್ ಆಗಿದ್ದ ಹಿನ್ನೆಲೆಯಲ್ಲಿ ಅದನ್ನು ಮೀರಿಸುವ ಮತ್ತೊಂದು ಹಾಡು ಕೊಡುವ ಜವಾಬ್ದಾರಿ ನನ್ನಗಿತ್ತು. ಈ ಹಾಡು ಕೂಡ ಎಲ್ಲರ ಮನ ಗೆಲ್ಲುವ ನಿರೀಕ್ಷೆಯಿದೆ' ಎನ್ನುತ್ತಾರೆ ಚಂದನ್ ಶೆಟ್ಟಿ. ಚಿತ್ರಕ್ಕೆ ಕಿರಣ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದು, ಪ್ರಶಾಂತ್ ನಟನ, ಗಿರೀಶ್, ಗಣೇಶ್ ನಾರಾಯಣ್ ಮುಂತಾದವರಿದ್ದಾರೆ. ❖

ಅಪೂರ್ವ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ಉತ್ತರ ಕನ್ನಡ** ಜಿಲ್ಲಾಧಿಕಾರಿ ಕಾರಿನ ಇಂಧನಕ್ಕೆ ದುಡ್ಡಿಲ್ಲ. ಅನುದಾನದ ಕೊರತೆಯಿಂದ ಶೆಡ್ ಸೇರಿದ ಜಿಲ್ಲಾಧಿಕಾರಿ ವಾಹನ. ಸರ್ಕಾರಿ ಖಜಾನೆಯಲ್ಲಿ ಬರಿದಾದ ಹಣ!' ಎಂದು ಆರೋಪಿಸಿ ಹಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ವೊಂದು ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ಆರೋಪಗಳು ಸುಳ್ಳು ಎಂದು ಉತ್ತರ ಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ಅವರೇ ಸ್ಪಷ್ಟನೆ ನೀಡಿದ್ದಾರೆ. 'ನನ್ನ ವಾಹನಕ್ಕೆ ಇಂಧನದ ಕೊರತೆಯಾಗಿಲ್ಲ. ಚಿತ್ರದಲ್ಲಿ ತೋರಿಸಿರುವ ವಾಹನವು ಜಿಲ್ಲಾಧಿಕಾರಿ ಕಚೇರಿಯ ಡಿ.ವಿ ವಾಹನವಾಗಿದೆ. ಯಾವುದೇ ವಿಐಪಿ ಭೇಟಿಯ ಸಮಯದಲ್ಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ಇದನ್ನು ಬಳಸಲಾಗುತ್ತದೆ. ಈ ವಾಹನವನ್ನು ತೀರಾ ಅಗತ್ಯ ಇದ್ದಾಗ ಮಾತ್ರ ಬಳಸಲಾಗುತ್ತದೆ. ಉಳಿದ ದಿನ ಅದನ್ನು ಶೆಡ್‌ನಲ್ಲಿ ನಿಲ್ಲಿಸಲಾಗುತ್ತದೆ' ಎಂದಿದ್ದಾರೆ. ಆದ್ದರಿಂದ ಸರ್ಕಾರಿ ಖಜಾನೆಯಲ್ಲಿ ಹಣ ಬರಿದಾಗಿದ್ದರಿಂದ ಉತ್ತರ ಕನ್ನಡ ಜಿಲ್ಲಾಧಿಕಾರಿ ವಾಹನಕ್ಕೆ ಇಂಧನದ ಕೊರತೆ ಎದುರಾಗಿದೆ ಎಂಬುದು ಸುಳ್ಳು ಸುದ್ದಿ.

ಗುಂಡಣ್ಣ



ವಿದ್ಯೆ ವಿನಯವನ್ನು ಕಲಿಸಲಿ

ನುಡಿ ಬೆಳಗು

ಪಿ.ಚಂದ್ರಿಕಾ

ತನಗೆ ಎಲ್ಲವೂ ಗೊತ್ತಿದೆ ತಾನು ಓದಿದ್ದೇನೆ ಎನ್ನುವ ಅಹಂನಿಂದ ಹುಡುಗನೊಬ್ಬ ಹಿರಿಯರೆಂದೂ ನೋಡದೆ ನಿಮಗೇನು ಗೊತ್ತು ಎಂದು ಮಾತಾಡುತ್ತಿದ್ದ. ಆ ಮನೆಯಲ್ಲಿ ಒಬ್ಬ ಅಜ್ಜನಿದ್ದ ಅವನು ಓದದೇ ಇರುವವನು. ಆದರೆ ಅವನ ಅನುಭವ ಜ್ಞಾನ ದೊಡ್ಡದಿತ್ತು. ಅವನು ಈ ಹುಡುಗನನ್ನು ಗಮನಿಸುತ್ತಲೇ ಇದ್ದ. ಹುಡುಗನಿಗೆ ಉತ್ಸಾಹ ಜಾಸ್ತಿ. ಒಣ ನೆಲದಲ್ಲಿ ನಾವು ಬತ್ತವನ್ನು ಬೆಳೆಯೋಣ ಎಂದ. ನೀರಿಲ್ಲದ ಭೂಮಿಯಲ್ಲಿ ಬರದ ಧಾನ್ಯವಾದ ನವಣೆ ಬೆಳಿ ಎಂದು ಎಷ್ಟು ಹೇಳಿದರೂ ಕೇಳದೆ 'ನನಗೆ ಹೆಚ್ಚು ಗೊತ್ತೋ ನಿನಗೋ' ಎಂದು ಅಜ್ಜನ ಬಾಯಿ ಮುಚ್ಚಿಸಿದ.

ಹೀಗೇ ಯಾರ ಮಾತನ್ನು ಕೇಳದೆ ನಿಮಗೇನು ಗೊತ್ತು ಎನ್ನುತ್ತಾ ವ್ಯಾಪಾರವನ್ನು ಮಾಡಿ ಕೈ ಸುಟ್ಟುಕೊಂಡ. ಸಾಲ ಅವನ ತಲೆ ಮೇಲೆ ಬಂತು. ಇಷ್ಟು ವರ್ಷಗಳೂ ತನ್ನ ಅಜ್ಜ ಅಪ್ಪ ಎಲ್ಲ ಹೇಗೆ ನಿಭಾಯಿಸಿದರು ಎಂದು ಅರ್ಥವಾಗದೆ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೋದ. ಇವನನ್ನೇ ಗಮನಿಸುತ್ತಿದ್ದ ಅಜ್ಜ ಅವನ ಕೆನ್ನೆಗೆ ಹೊಡೆದ. ಆ ಹುಡುಗನಿಗೆ ಮತ್ತೂ ಅವಮಾನವಾಯಿತು ಆಗ ಅವನಿಗೆ ಅಜ್ಜ ಒಂದು ಕಥೆಯನ್ನು ಹೇಳಿದ:

ಮಳೆಗಾಲ ಎಲ್ಲ ನದಿಗಳೂ ಉಕ್ಕಿ ಹರಿಯುತ್ತಿದ್ದವು. ತಮ್ಮ ಪರಿಧಿಯನ್ನು ಮೀರಿ ಎದುರು ಅಡ್ಡ ಸಿಕ್ಕ ಮರಗಳನ್ನು ಯಾವ ಮುಲಾಜೂ ಇಲ್ಲದೆ ತಮ್ಮೊಂದಿಗೆ ಸೆಳೆದುಕೊಂಡು ಹೋಗುತ್ತಿದ್ದವು. ಹೀಗೆ ಸಮುದ್ರವನ್ನು ಸೇರಲಿಕ್ಕೆ ಬಂದ ನದಿಗಳ ದೇವತೆಯನ್ನು ಸಮುದ್ರರಾಜ ತಡೆದು 'ನನಗೊಂದು ಆಶ್ಚರ್ಯ ಕಾಣುತ್ತಿದೆ. ನೀವು ದಂಡೆಯಲ್ಲಿ ಬೆಳೆದ ಜೊಂಡು ಹುಲ್ಲನ್ನು ಬಿಟ್ಟು ದೊಡ್ಡ ದೊಡ್ಡ ಮರಗಳನ್ನು ಎಳೆದು ತರುತ್ತೀರಲ್ಲಾ ಕಾರಣ ಏನು' ಎಂದು ಕೇಳಿದ.

ಆಗ ಆ ನದೀ ದೇವತೆಯು 'ನಾವು ವೇಗವಾಗಿ ಬರುವಾಗ ಹುಲ್ಲುಗಳು ವಿನಮ್ರವಾಗಿ ತಲೆ ತಗ್ಗಿಸಿ ನಮಗೆ ಹೋಗಲಿಕ್ಕೆ ದಾರಿಯನ್ನು ಬಿಟ್ಟುಕೊಡುತ್ತವೆ. ನಮ್ಮ ರಭಸ ಕಡಿಮೆಯಾದ ಮೇಲೆ ತಾವೇ ತಾವಾಗಿ ಎದ್ದು ನಿಲ್ಲುತ್ತವೆ. ಆದರೆ ಈ ದೊಡ್ಡದೊಡ್ಡ ಮರಗಳು ಹಾಗಲ್ಲ... ನೀವು ನನ್ನನ್ನೇನು ಮಾಡಬಲ್ಲಿರಿ ಎನ್ನುತ್ತ ಎದೆಸೆಟೆಸಿ ನಿಲ್ಲುತ್ತವೆ. ಆದ್ದರಿಂದ ನಾವು ಜೊಂಡು ಹುಲ್ಲನ್ನು ಬಿಟ್ಟು ಮರಗಳನ್ನು ನಮ್ಮೊಂದಿಗೆ ಎಳೆದು ತರುತ್ತೇವೆ' ಎಂದಿತು.

'ನೀನೇನು ಅಂತ ಕೇಳದೆ ಇನ್ನೊಬ್ಬರ ಮಾತನ್ನು ಕೇಳುವ ತಾಳ್ಮೆ ಬೆಳೆಸಿಕೋ, ಅನುಭವ ದೊಡ್ಡದು ಅದು ಇನ್ನೊಬ್ಬರಿಂದ ಅನಾಯಾಸವಾಗಿ ಬರುವಾಗ ಅದನ್ನು ನಿನ್ನದಾಗಿಸಿಕೋ. ನಿನ್ನ ವಿನಯ ನೀನು ಕಲಿತ ವಿದ್ಯೆಗೆ ದೊಡ್ಡ ಘನತೆಯನ್ನು ತಂದುಕೊಡುತ್ತದೆ. ವಿನಯವಿಲ್ಲದ ವಿದ್ಯೆಗೆ ಬೆಲೆಯಾದರೂ ಎಲ್ಲಿಯದು' ಎಂದ.

ತಪ್ಪಿನ ಅರಿವಾದ ಹುಡುಗ ಅಜ್ಜನ ಮಾರ್ಗದರ್ಶನದಲ್ಲಿ ದೊಡ್ಡ ವ್ಯಾಪಾರಿಯಾದ. ಆದರೆ ಮತ್ತೆಂದೂ ಯಾರಿಗೂ ನಿನಗೇನು ಗೊತ್ತು ಎನ್ನಲಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ತ್ರಯೋದಶಿ ಗಂ. 14-48 ನಕ್ಷತ್ರ: ಶ್ರವಣ ಗಂ. 23-50 ಯೋಗ: ಸೌಭಾಗ್ಯ ಗಂ. 06-01 ನಂತರ ಶೋಭನಾ ಗಂ. 25-51 ಕರಣ: ತೈತಿಲ ಗಂ. 14-48, ಸಿಂಹ ಮಾಸದ 11 ನೇ ದಿನ, ಮಳೆನಕ್ಷತ್ರ: ಮಘಾ 4. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-23 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 12 ಸಫರ್
ದಿನ ವಿಶೇಷ : ಓಣಂ ಅಥವಾ ತಿರು ಓಣಂ ದಿನ (ಕೇರಳ), ಋಗ್ ಉಪಾಕರ್ಮ
ಅದೃಷ್ಟ ಸಂಖ್ಯೆ : 8, 6

ಮೇಷ: ಹೆಂಡತಿ ಮಕ್ಕಳ ಕನಸನ್ನು ನನಸು ಮಾಡುವ ಕಾರ್ಯದ ಕಡೆ ಹೆಚ್ಚಿನ ಗಮನವಿರುವುದು. ಸೋಮಾರಿತನ ಇಲ್ಲದೆ ದುಡಿಯಿರಿ, ಆದರೆ ಸಂಪಾದನೆಯ ಮಾರ್ಗ ದೇವರು ಮೆಚ್ಚುವ ರೀತಿಯಲ್ಲಿ ಸತ್ಯವಾಗಿದ್ದಾಗಿರಲಿ.

ವೃಷಭ: ಹೊಸತನ್ನು ಸಾಧಿಸುವಂಥ ಪ್ರಚೋದನೆ ಮತ್ತು ವಿಭಿನ್ನ ವಿಷಯಗಳು ನಿಮ್ಮ ಗಮನ ಸೆಳೆಯಲಿವೆ. ನೀರಿನ ಹತ್ತಿರದಲ್ಲಿ ಅಥವಾ ನೀರಿಗೆ ಸಂಬಂಧಿಸಿದ ಕೆಲಸ ನಡೆಸುವವರಿಗೆ ವೃತ್ತಿಯಲ್ಲಿ ಭೀತಿ ಎದುರಾಗಬಹುದು.

ಮಿಥುನ: ಇಂದು ಕಾರ್ಯ ಸಾಧನೆಗೆ ತೋರಿ ಬರುವ ಅಡ್ಡಿ ಆತಂಕಗಳ ನಿವಾರಣೆಯಾಗಲಿದೆ. ತಂದೆ ಹೇಳುವ ವಿಚಾರಗಳನ್ನು ಸಂಪೂರ್ಣ ಕೇಳಿಸಿಕೊಳ್ಳದೇ ಅಪಾರ್ಥವಾಗಿ ಅರ್ಥೈಸಿಕೊಳ್ಳುವುದರಿಂದ ಘರ್ಷಣೆಗಳಾಗಬಹುದು.

ಕರ್ಕಾಟಕ: ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಶಸ್ತ್ರ ಚಿಕಿತ್ಸೆಯನ್ನು ತಪ್ಪಿಸಲಿದೆ. ಅತಿಯಾದ ಆಲಸ್ಯತನ ಈ ದಿನ ನಿಮ್ಮ ಸರ್ವತೋಮುಖ ಏಳಿಗೆಗೆ ಹಾನಿ ಉಂಟುಮಾಡಲಿದೆ.

ಸಿಂಹ: ದೇವತಾನುಗ್ರದ ಜೊತೆಯಲ್ಲಿ ಹಲವು ದಿನಗಳಿಂದ ಇರುವ ಋಣಭಾದೆಗೆ ಅಂತ್ಯ ಕಾಣಿಸುವ ಕಾಲ ಒದಗಿಬರುವುದು. ನಿಮ್ಮ ನೇರ ನಡೆ-ನುಡಿ ಗೆಳೆತನಕ್ಕೆ ಹುಳಿ ಹಿಂಡಿದಂತಾಗಬಹುದು.

ಕನ್ಯಾ: ಸಂಸಾರದಲ್ಲಿ ಕೆಲವು ಬದಲಾವಣೆಗಳನ್ನು ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯತೆ ಬರುವುದು. ಕಾರ್ಯದಲ್ಲಿ ಕ್ರಿಯಾಶೀಲರಾಗಿ ಮತ್ತು ಮೇಲಧಿಕಾರಿಗಳಲ್ಲಿ ನಡೆನುಡಿ ಉತ್ತಮವಾಗಿದ್ದರೆ ಪ್ರತಿಫಲ ಆಕರ್ಷಕವಾಗಿರುವುದು.

ತುಲಾ: ಸಣ್ಣಪುಟ್ಟ ಸಮಸ್ಯೆಯನ್ನು ಹೊರತುಪಡಿಸಿ ಆರೋಗ್ಯ, ಮಾನಸಿಕ ನೆಮ್ಮದಿ ಉತ್ತಮವಾಗಿರುತ್ತದೆ. ಅಧಿಕ ರೀತಿಯ ಖರ್ಚು-ವೆಚ್ಚ ಬಂದರೂ ಉಳಿತಾಯಕ್ಕೆ ಕೊರತೆ ಕಾಣುವುದಿಲ್ಲ. ವ್ಯಾಸಂಗಕ್ಕಾಗಿ ಹಣದ ವ್ಯವಸ್ಥೆ ಆಗುವುದು.

ವೃಶ್ಚಿಕ: ವೃತ್ತಿರಂಗದಲ್ಲಿ ಸಂದರ್ಭೋಚಿತವಾಗಿ ವರ್ತಿಸುವುದರಿಂದ ಈ ದಿನ ಲಾಭವಾಗಬಹುದು ಆದರೆ, ಈ ದಿನದ ನಿಮ್ಮ ವರ್ತನೆ ನಾಳೆಯ ದಿನ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ತಿಂಡಿ ತಿನಿಸುಗಳ ವ್ಯಾಪಾರದವರಿಗೆ ಲಾಭ.

ಧನು: ನಿರ್ಲಿಪ್ತತೆಯಿಂದಾಗಿ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಹೆಚ್ಚಿನ ಅವಕಾಶಗಳು ಲಭಿಸುವುವು. ನಿಮ್ಮ ಕಾರ್ಯರಂಗದಲ್ಲಿ ಹೊಸತನಕ್ಕೆ ಯೋಜನೆ ರೂಪಿಸಬಹುದು.

ಮಕರ: ಕೆಲವು ಮಾನಸಿಕ ತೊಂದರೆಗಳು ಎದುರಾಗಬಹುದು, ಯಾವುದೇ ರೀತಿಯ ದೊಡ್ಡ ಸಮಸ್ಯೆ ಉಂಟಾಗುವ ಪರಿಸ್ಥಿತಿ ಕಂಡುಬರುವುದಿಲ್ಲ. ಇಂದಿನಿಂದ ಯಾವುದಕ್ಕೂ ಮತ್ತೊಬ್ಬರ ಅವಲಂಬನೆ ಬೇಡವೆನಿಸುವುದು.

ಕುಂಭ: ಮಕ್ಕಳ ಜೊತೆ ಸಂತೋಷದಿಂದ ಸಮಯ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರಗಳನ್ನು ಕೈಗೊಳ್ಳುವಿರಿ. ಕಾರ್ಯಕ್ಷೇತ್ರದಲ್ಲಿ ಸ್ವಯಂ ಪರೀಕ್ಷೆಯ ಆರಂಭ ಹಾಗಾಗಿಯೇ ಎರಡೆರಡು ಬಾರಿ ಪರಿಶೀಲನೆ ಮಾಡುವುದು ಅಗತ್ಯ.

ಮೀನ: ಕಠಿಣ ಪರಿಸ್ಥಿತಿಯಲ್ಲಿಯೂ ವಿಚಲಿತಗೊಳ್ಳದೆ ಕೆಲಸ ನೆರವೇರಿಸಿ. ಬದುಕನ್ನು ಪಾರಮಾರ್ಥಿಕವಾಗಿ ನಡೆಸುವ ಬಗ್ಗೆ ನಿಮ್ಮ ಯೋಚನೆಗಳಿರಲಿ ಶ್ರೀಮಂಜುನಾಥನ ದರ್ಶನ, ಸೇವೆಯು ಭಾಗ್ಯ ಉಂಟುಮಾಡಲಿದೆ.

ಪದಬಂಧ 5425

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಿಳಿಗೇಡಿ ಇಲ್ಲಿದ್ದಾನೆ (3)
3.ಈತ ಹಿರಿಯ ಸಹೋದರ (2)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
6.ನೂರು ವರ್ಷಗಳ ಕಾಲ ಬದುಕುವವನು (4)
8.ತಿರುಗಿಸಿ ನೋಡಿದರೂ ಇದು ಹೊಸತು (3)
11.ಬಣ್ಣದ ದಾರಗಳಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
13.ಹಸುವಿನ ಹತ್ತಿರವಿರುವ ಎಳೆಮಗು (4)
17.ಇದು ಕೊಬ್ಬಿದ ಆನೆ (4)
18.ಹಾಡಿನ ಧಾಟಿಯಿದು (2)
19.ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1.ಸುಲಭವಾಗಿ ಬಿಡಿಸಲಾರದ ಗಂಟು (3)
2.ಮಾವನವರ ಆದಾಯ! (4)
3.ಕಡಿಮೆ ಆಯುಸ್ಸುಳ್ಳವನು (3)
5.ಪರವಶನಾಗಿರುವಾಗ ಅಧೀನತೆ (2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
9.ನಡುವೆಯೇ ಆರಂಭವಾಗಿರುವ ಕಂಪನ (3)
10.ವಿವಾದವಿಲ್ಲದೇ ನಡೆದಿರುವ ಮದುವೆ (3)
12.ಎಳ್ಳು ನೀರು ಬಿಡುವಿಕೆ (4)
14.ಯೋಗವಿದ್ದಾಗಲೇ ಈ ಅದೃಷ್ಟ! (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



5424ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಜಗಜಾಂತರ
4.ಸತ್ಯಾಗ್ರಹಿ 5.ಗಗನ
7.ಕಡಿತ 10.ನೆನಪು
12.ರಿಪೇರಿ 13.ಬಾಲರವಿ
15.ಪ್ರವಾಸಿಮಂದಿರ

ಮೇಲಿಂದ ಕೆಳಕ್ಕೆ:
1.ಅಜಗರ 2.ರಸ
3.ಬಹಿಷ್ಕಾರ 6.ನಡುಮನೆ
7.ಕದಪು 8.ತರಕಾರಿ
9.ಆಜೂಬಾಜು
11.ಹರಿಕಾರ 14.ವಿಪ್ರ

ಸುಡೊಕು 5811

3		2	1		4		6	7
	1			8				
7	9		6		2	5		4
2					3			5
				4		2	9	
			9					1
	4	1	2				8	
9				7	8			
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5810 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಮುಂಬೈ ಧಾರಣೆ

ಶೇಂಗಾ	28–8–2023
ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300
ಕಚ್ಚಾ (ತೆರಿಗೆ ಬಿಟ್ಟು)	1800(1820)
ಶೇಂಗಾ ಎಣ್ಣೆ (10 ಕೆಜಿಗೆ)	
ಒಂದು ವಾರದ ಡೆಲಿವರಿ	1795(1815)
ಸೋಯಾ ಕಚ್ಚಾ	875(872)
ಪಾಮ್ ವಾರದ ಡೆಲಿವರಿ	845(848)
ಸೂರ್ಯಕಾಂತಿ ಎಣ್ಣೆ ಕಚ್ಚಾ	860(870)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	58,450 (58,400)
ಬೆಳ್ಳಿ ಕೆ.ಜಿ	73,600 (73,650)

ಆವರಣದಲ್ಲಿ ಶನಿವಾರದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,266
ಇಂದಿನ ಅಂತ್ಯ	19,306
▲	40
ದಿನದ ಕನಿಷ್ಠ	19,249

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1790(1810)
ಸೋಯಾ (ರಿಫೈನ್ಡ್)	₹930(930)
ಸೂರ್ಯಕಾಂತಿ (ರಿಫೈನ್ಡ್)	₹935(950)
ಪಾಮೋಲಿನ್	₹847(852)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹122

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13250
ಎಸಿ	₹7000
ಆರ್‌ಪಿ	₹10000
ಆರ್‌ಸಿ	₹5830

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2600
ಮಧ್ಯಮ	₹1600-2000
ಸಣ್ಣ	₹1000-1600

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ ಬಾಬು
ಖಾಜಿಹೊಸಹಳ್ಳಿ (ಬಾಲಾಜಿ ಮೆಡಿಕಲ್ಸ್, ಸೂಲಿಬೆಲೆ)
ಜನನ: 13.09.1974 ● ನಿಧನ: 29.08.2020
ನಿನ್ನ ನೆನಪು ನಮ್ಮ ಹೃದಯಗಳಲ್ಲಿ ಸದಾ ಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿನ್ನ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಸದಾ ನಿನ್ನ ಸ್ಮರಿಸುವ
ಇಂತಿ: ದುಃಖತಪ್ತ ಕುಟುಂಬವರ್ಗದವರು

‘3ನೇ ಸ್ಥಾನಕ್ಕೆ ಏರಲಿರುವ ಭಾರತದ ವಾಹನ ಉದ್ಯಮ’

ನವದೆಹಲಿ (ಪಿಟಿಐ): ಭಾರತದ ಆಟೊಮೋಟಿವ್ ಉದ್ಯಮವು 2030ರ ವೇಳೆಗೆ ಜಾಗತಿಕವಾಗಿ ಮೂರನೇ ಸ್ಥಾನಕ್ಕೆ ಏರುವ ನಿರೀಕ್ಷೆ ಇದೆ ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ.

ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ₹25,938 ಕೋಟಿ ನೀಡಿರುವುದು ಹಾಗೂ ವಾಹನ ಬಿಡಿಭಾಗಗಳಿಗೆ ಉತ್ತೇಜನ ನೀಡಿರುವುದು ವಲಯದ ಬೆಳವಣಿಗೆಗೆ ನೆರವಾಗಲಿದೆ ಎಂದು ತಿಳಿಸಿದೆ.

ಪಿಎಲ್‌ಐ ಯೋಜನೆಯ ಕುರಿತು ಬೃಹತ್ ಉದ್ದಿಮೆಗಳ ಸಚಿವಾಲಯವು ಮಂಗಳವಾರ ಪರಿಶೀಲನೆ ನಡೆಸಲಿದೆ. ಬೃಹತ್ ಉದ್ದಿಮೆಗಳ ಸಚಿವ ಮಹೇಂದ್ರನಾಥ್ ಪಾಂಡೆ ಅವರು ಕಂಪನಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಆಟೊಮೋಟಿವ್ ಉದ್ಯಮವು ದೇಶದ ಆರ್ಥಿಕತೆಯ ಪ್ರಮುಖ ಆಧಾರ ಸ್ತಂಭವಾಗಿದೆ. ದೇಶದ ಜಿಡಿಪಿಗೆ ಈ ಉದ್ಯಮದ ಕೊಡುಗೆಯು 1992–93ರಲ್ಲಿ ಶೇ 2.77ರಷ್ಟು ಇದ್ದಿದ್ದು ಸದ್ಯ ಶೇ 7.1ಕ್ಕೆ ಏರಿಕೆ ಕಂಡಿದೆ. 1.9 ಕೋಟಿಗೂ ಅಧಿಕ ಜನರಿಗೆ ನೇರ ಮತ್ತು ಪರೋಕ್ಷವಾಗಿ ಕೆಲಸ ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದ ಆಟೊಮೊಬೈಲ್ ಮಾರುಕಟ್ಟೆಯಲ್ಲಿ ದ್ವಿಚಕ್ರ ವಾಹನ ಮತ್ತು ಪ್ರಯಾಣಿಕ ಕಾರುಗಳ ಪಾಲು 2021–22ರಲ್ಲಿ ಕ್ರಮವಾಗಿ ಶೇ 77 ಮತ್ತು ಶೇ 18ರಷ್ಟು ಇತ್ತು. ಪ್ರಯಾಣಿಕ ಕಾರುಗಳ ಮಾರಾಟದಲ್ಲಿ ಸಣ್ಣ ಮತ್ತು ಮಧ್ಯಮ ಗಾತ್ರದ ಕಾರುಗಳ ಪಾಲು ಹೆಚ್ಚಿನದ್ದಾಗಿದೆ.

ಭಾರತವು 2024ರ ಅಂತ್ಯದ ವೇಳಗೆ ವಾಹನ ಉದ್ಯಮದ ಗಾತ್ರವನ್ನು ₹15 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿಯನ್ನು ಇಟ್ಟುಕೊಂಡಿದೆ. 2000ದ ಏಪ್ರಿಲ್‌ನಿಂದ 2022ರ ಸೆಪ್ಟೆಂಬರ್ ಅವಧಿಯಲ್ಲಿ ₹2.79 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆ ಆಗಿದೆ. ಇದೇ ಅವಧಿಯಲ್ಲಿ ಭಾರತದಲ್ಲಿ ಹೂಡಿಕೆ ಆಗಿರುವ ಒಟ್ಟು ಎಫ್‌ಡಿಐನಲ್ಲಿ ಶೇ 5.48ರಷ್ಟು ಪಾಲನ್ನು ಅದು ಹೊಂದಿದೆ.

ದೇಶದ ಅತಿದೊಡ್ಡ ಉದ್ಯಮದ ಉತ್ತರಾಧಿಕಾರ ಯೋಜನೆಗೆ ಚಾಲನೆ ನೀಡಿದ ಅಂಬಾನಿ

ರಿಲಯನ್ಸ್‌ಗೆ ಇಶಾ, ಅನಂತ್, ಆಕಾಶ್

ಮುಂಬೈ (ಪಿಟಿಐ): ಮಾರುಕಟ್ಟೆ ಬಂಡವಾಳದ ಲೆಕ್ಕದಲ್ಲಿ ದೇಶದ ಅತಿದೊಡ್ಡ ಉದ್ಯಮವಾಗಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಉತ್ತರಾಧಿಕಾರಿಗಳನ್ನು ನೇಮಕ ಮಾಡುವ ಪ್ರಕ್ರಿಯೆಗೆ ಕಂಪನಿಯ ಅಧ್ಯಕ್ಷ ಮುಕೇಶ್ ಅಂಬಾನಿ ಚಾಲನೆ ನೀಡಿದ್ದಾರೆ. ತಮ್ಮ ಮಕ್ಕಳಾದ ಇಶಾ, ಆಕಾಶ್ ಮತ್ತು ಅನಂತ್ ಅವರನ್ನು ಆರ್‌ಐಎಲ್ ಆಡಳಿತ ಮಂಡಳಿಗೆ ನೇಮಕ ಮಾಡಿದ್ದಾರೆ.

ತಾವು ಕಂಪನಿಯ ಅಧ್ಯಕ್ಷ ಸ್ಥಾನದಲ್ಲಿ 2024ರ ಏಪ್ರಿಲ್ ನಂತರ ಮತ್ತೆ ಐದು ವರ್ಷಗಳ ಅವಧಿಗೆ ಮುಂದುವರಿಯುವುದಾಗಿಯೂ ಮುಕೇಶ್ ಅಂಬಾನಿ ಪ್ರಕಟಿಸಿದ್ದಾರೆ. ಆರ್‌ಐಎಲ್ ಈಗ 200 ಬಿಲಿಯನ್ ಡಾಲರ್ (₹16.52 ಲಕ್ಷ ಕೋಟಿ) ಮಾರುಕಟ್ಟೆ ಬಂಡವಾಳ ಮೌಲ್ಯ ಹೊಂದಿದೆ. ಉದ್ಯಮದ ವಹಿವಾಟುಗಳು ಇಂಧನದಿಂದ ತಂತ್ರಜ್ಞಾನ ಜಗತ್ತಿನವರೆಗೆ ವಿಸ್ತರಿಸಿವೆ.

ಆಕಾಶ್ ಅಂಬಾನಿ, ಇಶಾ ಅಂಬಾನಿ ಮತ್ತು ಅನಂತ್ ಅಂಬಾನಿ –ಪಿಟಿಐ ಚಿತ್ರ

ಇಶಾ, ಆಕಾಶ್ ಮತ್ತು ಅನಂತ್ ಅವರನ್ನು ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡುವ ಪ್ರಸ್ತಾವಕ್ಕೆ ಆಡಳಿತ ಮಂಡಳಿಯ ಒಪ್ಪಿಗೆ ದೊರೆತಿದೆ.

ಮುಕೇಶ್ ಅಂಬಾನಿ ಅವರು ತಮ್ಮ 20ನೆಯ ವಯಸ್ಸಿನಲ್ಲಿ ರಿಲಯನ್ಸ್ ಆಡಳಿತ ಮಂಡಳಿ ಸೇರಿದ್ದರು. ‘ಇಶಾ, ಆಕಾಶ್ ಮತ್ತು ಅನಂತ್ ಅವರಲ್ಲಿ ನಾನು ನನ್ನನ್ನು ಹಾಗೂ ನನ್ನ ತಂದೆಯನ್ನು ಕಾಣುತ್ತಿದ್ದೇನೆ. ನಾಯಕತ್ವದ ಸ್ಥಾನಕ್ಕೆ ನಾನು ಅವರಿಗೆ ಮಾರ್ಗದರ್ಶನ ಮಾಡಲಿದ್ದೇನೆ’ ಎಂದು ಮುಕೇಶ್ ಅಂಬಾನಿ ಅವರು ಕಂಪನಿಯ ಷೇರುದಾರರ ವಾರ್ಷಿಕ ಮಹಾಸಭೆಯಲ್ಲಿ ಹೇಳಿದ್ದಾರೆ.

ಮುಕೇಶ್ ಅವರ ಪತ್ನಿ ನೀತಾ ಅಂಬಾನಿ ಅವರು ಆಡಳಿತ ಮಂಡಳಿಯಲ್ಲಿನ ಸ್ಥಾನ ತ್ಯಜಿಸಲಿದ್ದಾರೆ. ಅವರು ರಿಲಯನ್ಸ್ ಪ್ರತಿಷ್ಠಾನದ ಅಧ್ಯಕ್ಷೆಯಾಗಿರಲಿದ್ದಾರೆ.

ಜೆಎಫ್‌ಎಸ್‌ನಿಂದ ವಿಮಾ ಸೇವೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನಿಂದ ಪ್ರತ್ಯೇಕಗೊಂಡಿರುವ ಜಿಯೊ ಫೈನಾನ್ಶಿಯಲ್ ಸರ್ವಿಸಸ್ (ಜೆಎಫ್‌ಎಸ್) ಕಂಪನಿಯು ಜೀವ ವಿಮೆ, ಆರೋಗ್ಯ ವಿಮೆ ಮತ್ತು ಇತರ ಸಾಮಾನ್ಯ ವಿಮಾ ಸೇವೆಗಳನ್ನು ಆರಂಭಿಸಲಿದೆ ಎಂದು ಮುಕೇಶ್ ಅಂಬಾನಿ ಪ್ರಕಟಿಸಿದ್ದಾರೆ.

ಜೆಎಫ್‌ಎಸ್‌ನ ಒಟ್ಟು ನಿವ್ವಳ ಮೌಲ್ಯವು ₹1.2 ಲಕ್ಷ ಕೋಟಿ. ಇದರಿಂದಾಗಿ, ಜನ್ಮತಳೆವ ಸಂದರ್ಭದಲ್ಲಿ ಅತಿಹೆಚ್ಚು ಮೊತ್ತದ ಬಂಡವಾಳ ಹೊಂದಿರುವ ಹಣಕಾಸು ಸೇವಾ ಕಂಪನಿಗಳ ಸಾಲಿಗೆ ಜೆಎಫ್‌ಎಸ್ ಕೂಡ ಸೇರಿದೆ ಎಂದು ಮುಕೇಶ್ ಅಂಬಾನಿ ಹೇಳಿದ್ದಾರೆ.

ಜೆಎಫ್‌ಎಸ್ ಕಂಪನಿಯು ತನ್ನ ಪಾವತಿ ಮೂಲಸೌಕರ್ಯವನ್ನು ಬಲಪಡಿಸಲಿದ್ದು, ಗ್ರಾಹಕರಿಗೆ ಹಾಗೂ ವರ್ತಕರಿಗೆ ಎಲ್ಲೆಡೆ ಸೇವೆಗಳನ್ನು ಒದಗಿಸಲಿದೆ. ಇದು ದೇಶದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಯ ವಿಸ್ತರಣೆಗೆ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ.

‘ಜೆಎಫ್‌ಎಸ್ ಸೇವೆಗಳು ಈಗ ಚಾಲ್ತಿಯಲ್ಲಿರುವ ಮಾನದಂಡಗಳ ಜೊತೆ ಪೈಪೋಟಿಗೆ ಇಳಿಯುವುದಷ್ಟೇ ಅಲ್ಲದೆ, ಬ್ಲಾಕ್‌ಚೈನ್ ಆಧಾರಿತ ಸೇವೆಗಳನ್ನು ಮತ್ತು ಡಿಜಿಟಲ್ ಕರೆನ್ಸಿ ಸೇವೆಗಳತ್ತ ಕೂಡ ಮುಖ ಮಾಡಲಿದೆ’ ಎಂದು ಅಂಬಾನಿ ಹೇಳಿದ್ದಾರೆ. ಮ್ಯೂಚುವಲ್ ಫಂಡ್ ಸೇವೆ ಆರಂಭಿಸಲು ಜೆಎಫ್‌ಎಸ್ ಕಂಪನಿಯು ಬ್ಲ್ಯಾಕ್‌ರಾಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಮೊಬೈಲ್ ಕಂಪನಿಗಳ ಲಾಭ ಹೆಚ್ಚಳ: ಕ್ರಿಸಿಲ್

ಮುಂಬೈ (ಪಿಟಿಐ): ಭಾರತದ ದೂರಸಂಪರ್ಕ ವಲಯದ ಕಂಪನಿಗಳ ಕಾರ್ಯಾಚರಣಾ ಲಾಭವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 15ರಷ್ಟು ಹೆಚ್ಚಾಗಲಿದ್ದು ₹1.2 ಲಕ್ಷ ಕೋಟಿಗೆ ತಲುಪಲಿದೆ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಅಂದಾಜು ಮಾಡಿದೆ.

ಕಂಪನಿಗಳು ಪ್ರತಿ ಗ್ರಾಹಕನಿಂದ ಪಡೆಯುವ ಆದಾಯವು (ಎಆರ್‌ಪಿಯು) ಕೆಲವು ವರ್ಷಗಳಿಂದ ಇಳಿಮುಖವಾಗಿತ್ತು. ಇದು ಈ ಹಣಕಾಸು ವರ್ಷದಲ್ಲಿ ಶೇ 8–10ರವರೆಗೆ ಏರಿಕೆ ಕಾಣಲಿದ್ದು, ₹190ಕ್ಕೆ ತಲುಪಲಿದೆ. ಕಂಪನಿಗಳು ಸದ್ಯ 4ಜಿಯಿಂದ 5ಜಿ ಸೇವೆಗೆ ಗ್ರಾಹಕರನ್ನು ಬದಲಾಯಿಸುವುದರ ಕಡೆಗೆ ಗಮನ ಹರಿಸಿದ್ದು, ಅಲ್ಪಾವಧಿಯಲ್ಲಿ ಶುಲ್ಕ ಹೆಚ್ಚಿಸುವ ಸಾಧ್ಯತೆ ಕಡಿಮೆ. ಹೀಗಿದ್ದರೂ ಎಆರ್‌ಪಿಯು ಬೆಳವಣಿಗೆ ಕಾಣಲಿದೆ ಎಂದು ಸಂಸ್ಥೆಯ ಅಧಿಕಾರಿ ಮನಿಷ್ ಗುಪ್ತಾ ಹೇಳಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಈ ಕಂಪನಿಗಳು ₹1.04 ಲಕ್ಷ ಕೋಟಿಯಷ್ಟು ಕಾರ್ಯಾಚರಣಾ ಲಾಭ ಗಳಿಸಿದ್ದವು ಎಂದು ಅದು ತಿಳಿಸಿದೆ.

ಸಿರಿಧಾನ್ಯ ಮೇಳ– ಬೆಲ್ಲದ ಪರಿಷೆಯಲ್ಲಿ ವಿವಿಧ ಉತ್ಪನ್ನಗಳ ಪ್ರದರ್ಶನ

‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೇಂದ್ರ ಆಹಾರ ಸಂಸ್ಕರಣಾ ಮಂತ್ರಾಲಯ, ರಾಜ್ಯ ಕೃಷಿ ಇಲಾಖೆ ವತಿಯಿಂದ ಸೋಮವಾರ ನಗರದಲ್ಲಿ ನಡೆದ ಸಿರಿಧಾನ್ಯ ಮೇಳ, ಬೆಲ್ಲದ ಪರಿಷೆಯಲ್ಲಿ ‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ಅನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಬಿಡುಗಡೆ ಮಾಡಿದರು.

‘ಮಂಡ್ಯ ಬೆಲ್ಲ ರೈತ ಉತ್ಪಾದಕರ ಕಂಪನಿ ಲಿಮಿಟೆಡ್’ಗೆ ಸಾವಿರಕ್ಕೂ ಹೆಚ್ಚು ಬೆಲ್ಲ ಉತ್ಪಾದಕರು ಹಾಗೂ ಕಬ್ಬು ಬೆಳೆಗಾರರು ಹೆಸರು ನೋಂದಾಯಿಸಿದ್ದಾರೆ. ಅವರು ಉತ್ಪಾದಿಸುವ ಬೆಲ್ಲ ‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ಅಡಿಯಲ್ಲಿ ಮಾರುಕಟ್ಟೆಗೆ ಬರಲಿದೆ. ‘ಆತ್ಮನಿರ್ಭರ ಭಾರತ’ ಯೋಜನೆಯ ಅಡಿ ಕೇಂದ್ರ ಸರ್ಕಾರದಿಂದ ಧನಸಹಾಯ ಪಡೆದಿರುವ ಉತ್ಪಾದಕರು ರಾಸಾಯನಿಕ ಮುಕ್ತ ಬೆಲ್ಲ ಉತ್ಪಾದಿಸಲಿದ್ದಾರೆ.

ಮಂಡ್ಯದ ಡಾ.ರಾಜ್‌ಕುಮಾರ್ ಬಡಾವಣೆ ಮೈದಾನದಲ್ಲಿ ಸೋಮವಾರ ನಡೆದ ಸಿರಿಧಾನ್ಯ ಮೇಳ– ಬೆಲ್ಲದ ಪರಿಷೆಯಲ್ಲಿ ಮಂಡ್ಯ ಬೆಲ್ಲವನ್ನು ಕಲಾತ್ಮಕವಾಗಿ ಜೋಡಿಸಿ ಇಡಲಾಗಿತ್ತು

‘ಪ್ರಧಾನಮಂತ್ರಿ ಕಿರು ಉದ್ಯಮ ಪ್ರೋತ್ಸಾಹ (ಪಿಎಂಎಫ್‌ಎಂಇ) ಯೋಜನೆ ಅಡಿ ಬೆಲ್ಲಕ್ಕೆ ರಾಷ್ಟ್ರದ್ಯಂತ ಮಾರುಕಟ್ಟೆ ದೊರೆಯಲಿದೆ, ರಫ್ತು ಮಾಡುವ ಉದ್ದೇಶವಿದೆ. ಮಾರುಕಟ್ಟೆ ವಿಸ್ತರಣೆಗಾಗಿ ಕಂಪನಿಗೆ ₹37 ಲಕ್ಷ ಸಾಲದ ಮಂಜೂರಾತಿ ಪತ್ರವನ್ನು ಎಸ್‌ಬಿಐ ಬೆಲ್ಲದ ಪರಿಷೆಯಲ್ಲಿ ವಿತರಿಸಿದೆ’ ಎಂದು ಕಂಪನಿಯ ಅಧ್ಯಕ್ಷ ಕಾರಸವಾಡಿ ಮಹದೇವು ತಿಳಿಸಿದರು.

ಮೇಳದಲ್ಲಿ 135 ಮಳಿಗೆ ತೆರೆಯಲಾಗಿತ್ತು. ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಸಿರಿಧಾನ್ಯ ಆಹಾರ ಉತ್ಪಾದಕರು ಉತ್ಪನ್ನಗಳ ಪ್ರದರ್ಶನ–ಮಾರಾಟ ಮಾಡಿದರು. ವಿವಿಧ ಜಿಲ್ಲೆಗಳ ರೈತ ಉತ್ಪಾದಕರು ಸಿರಿಧಾನ್ಯಗಳನ್ನು ಸಂಸ್ಕರಣೆ ಮಾಡಿ ತಯಾರಿಸಿದ್ದ ಸಿರಿಧಾನ್ಯ ಆಹಾರ ಪದಾರ್ಥಗಳನ್ನೂ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಚಾಲಿ	32389-39299	ತಟ್ಟಿಬೆಟ್ಟೆ	40109-43099
ಬಂಟ್ವಾಳ		ಕೋಕ	28899-32989	**ಶಿರಸಿ**	
ಕೋಕ	12500-25000	ಕೆಂಪುಗೋಟು	30199-34199	ಬೆಟ್ಟೆ	41419-44099
ಹೊಸತು	27500-45000	ರಾಶಿ	37299-49599	ಬಿಳಿಗೋಟು	28199-36810
ಹಳತು	46000-48500	ಸಿಪ್ಪೆಗೋಟು	11290-22889	ಚಾಲಿ	36809-43011
ಕಾರ್ಕಳ		**ಶಿವಮೊಗ್ಗ**		ಕೆಂಪುಗೋಟು	
ಹೊಸತು	30000-45000	ರಾಶಿ	41528-48509		35099-35099
ಹಳತು	40000-48500	ಬೆಟ್ಟೆ	46511-51786	ರಾಶಿ	47329-49499
ಕುಮಟಾ		ಸರಕು	50199-78986	**ಯಲ್ಲಾಪುರ**	
ಚಿಪ್ಪು	31599-35009	ಗೊರಬಲು	34999-38069	ಬಿಳಿಗೋಟು	30100-36407
ಕೋಕ	21019-33899	**ಸಿದ್ದಾಪುರ**		ಚಾಲಿ	38099-42760
ಫ್ಯಾಕ್ಟರಿ	14019-24299	ಬಿಳಿಗೋಟು	31019-35800	ಕೋಕ	24118-33299
ಹಳೆಚಾಲಿ	41019-42249	ಚಾಲಿ	36300-42199	ಕೆಂಪುಗೋಟು	
ಹೊಸಚಾಲಿ	37799-41500	ಕೋಕ	30100-34999		30100-36407
ಸಾಗರ		ಕೆಂಪುಗೋಟು	34019-35019	ರಾಶಿ	47299-55149
ಬಿಳಿಗೋಟು	28989-33229	ರಾಶಿ	45269-48888	ತಟ್ಟಿಬೆಟ್ಟೆ	47299-55149

ಟೊಯೋಟ ರೂಮಿಯನ್ ಎಕ್ಸ್ ಷೋರೂಂ ಬೆಲೆ ₹10.29 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೋಟ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಕಂಪನಿಯು ತನ್ನ ಹೊಸ ಕಾರು ‘ರೂಮಿಯನ್’ ಬೆಲೆಯನ್ನು ಘೋಷಿಸಿದ್ದು, ಬುಕಿಂಗ್ ಆರಂಭ ಮಾಡಿದೆ.

ಹೊಸ ಬಿ–ಎಂಪಿವಿಯ ಎಕ್ಸ್ ಷೋರೂಂ ಬೆಲೆ ₹10.29 ಲಕ್ಷದಿಂದ ಆರಂಭ ಆಗುತ್ತದೆ. ₹11 ಸಾವಿರ ಪಾವತಿಸಿ ಬುಕ್ ಮಾಡಬಹುದು ಎಂದು ಕಂಪನಿ ಹೇಳಿದೆ.

7 ಆಸನಗಳ ಎಂಪಿವಿ 1.5 ಲೀಟರ್ ಕೆ–ಸಿರೀಸ್‌ನ ಪೆಟ್ರೋಲ್ ಎಂಜಿನ್ ಹೊಂದಿದ್ದು, ನಿಯೋ ಡ್ರೈವ್ ತಂತ್ರಜ್ಞಾನ ಮತ್ತು ಇ–ಸಿಎನ್‌ಜಿ ತಂತ್ರಜ್ಞಾನ ಒಳಗೊಂಡಿದೆ. ಪೆಟ್ರೋಲ್ ಆವೃತ್ತಿಯು ಪ್ರತಿ ಲೀಟರಿಗೆ 20.51 ಕಿಲೋ ಮೀಟರ್ ಮತ್ತು ಸಿಎನ್‌ಜಿ ಆವೃತ್ತಿಯು ಕೆ.ಜಿಗೆ 26.11 ಕಿಲೋ ಮೀಟರ್ ಇಂಧನ ಕ್ಷಮತೆಯನ್ನು ಹೊಂದಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ತೋಷಾಖಾನ ಪ್ರಕರಣ: ಇಮ್ರಾನ್ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ

ಇಸ್ಲಾಮಾಬಾದ್ (ಪಿಟಿಐ): ತೋಷಾಖಾನ ಭ್ರಷ್ಟಾಚಾರ ಪ್ರಕರಣದಲ್ಲಿ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿರುವುದನ್ನು ಪ್ರಶ್ನಿಸಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಇಸ್ಲಾಮಾಬಾದ್ ಹೈಕೋರ್ಟ್ ಸೋಮವಾರ ಪುನರಾರಂಭಿಸಿತು.

ಇಸ್ಲಾಮಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಮೀರ್ ಫಾರೂಕ್ ಮತ್ತು ನ್ಯಾಯಮೂರ್ತಿ ತಾರಿಕ್ ಮೆಹಮೂದ್ ಜಹಾಂಗಿರಿ ಅವರನ್ನೊಳಗೊಂಡ ವಿಭಾಗೀಯ ಪೀಠವು ವಿಚಾರಣೆ ನಡೆಸುತ್ತಿದ್ದು, ಎರಡೂ ಕಡೆಯ ವಕೀಲರು ಸಹ ನ್ಯಾಯಾಲಯದಲ್ಲಿ ಹಾಜರಿದ್ದಾರೆ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ಪಾಕಿಸ್ತಾನದ ಚುನಾವಣಾ ಆಯೋಗ ಪ್ರತಿನಿಧಿಸುವ ವಕೀಲ ಅಮ್ಜದ್ ಪರ್ವೇಜ್ ಅನಾರೋಗ್ಯದ ಕಾರಣದಿಂದ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ. ಇದರಿಂದ ವಿಭಾಗೀಯ ನ್ಯಾಯಪೀಠವು ವಿಚಾರಣೆಯನ್ನು ಶುಕ್ರವಾರ ಮುಂದೂಡಿತ್ತು. ವಕೀಲರು ಪದೇ ಪದೇ ಗೈರು ಹಾಜರಾಗಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದ ಪೀಠವು ವಿಚಾರಣೆಗೆ ಯಾರೂ ಹಾಜರಾಗದಿದ್ದರೂ ಸೋಮವಾರ ಪ್ರಕರಣ ಇತ್ಯರ್ಥಪಡಿಸುವುದಾಗಿ ಪ್ರಕಟಿಸಿತ್ತು. ಅರ್ಜಿಯ ವಿಚಾರಣೆಯನ್ನು ಆ.22ರಂದು ಪೀಠ ಆರಂಭಿಸಿತ್ತು.

ಈ ಪ್ರಕರಣದಲ್ಲಿ ಇಸ್ಲಾಮಾಬಾದ್ ವಿಚಾರಣಾ ನ್ಯಾಯಾಲಯವು ಪಾಕಿಸ್ತಾನ್ -ಎ- ಇನ್ಸಾಫ್ (ಪಿಟಿಐ) ಅಧ್ಯಕ್ಷರೂ ಆದ ಖಾನ್ ಅವರಿಗೆ ಆಗಸ್ಟ್ 5ರಂದು ಶಿಕ್ಷೆ ವಿಧಿಸಿದ್ದು, ಸದ್ಯ ಖಾನ್ ಅವರು ಅಟಾಕ್ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ.

ಇಮಾನ್, ಅಲಿಗೆ ಜಾಮೀನು: ಪಾಕಿಸ್ತಾನದ ಮಾನವ ಹಕ್ಕುಗಳ ವಕೀಲರಾದ ಇಮಾನ್ ಮಜಾರಿ ಮತ್ತು ಮಾಜಿ ಸಂಸದ ಅಲಿ ವಜೀರ್‌ಗೆ ಸೋಮವಾರ ಇಲ್ಲಿನ ಭಯೋತ್ಪಾದನಾ ನಿಗ್ರಹ ನ್ಯಾಯಾಲಯವು (ಎಟಿಸಿ) ದೇಶದ್ರೋಹ ಪ್ರಕರಣದಲ್ಲಿ ಜಾಮೀನು ಮಂಜೂರು ಮಾಡಿದೆ.

ಇಬ್ಬರಿಗೂ ತಲಾ ₹30 ಸಾವಿರ ರೂಪಾಯಿ ಭದ್ರತಾ ಬಾಂಡ್‌ಗಳನ್ನು ಪಡೆದು, ಬಂಧನ ನಂತರದ ಜಾಮೀನನನ್ನು ಎಟಿಸಿ ನ್ಯಾಯಮೂರ್ತಿ ಅಬ್ದುಲ್ ಹಸ್ನತ್ ಜುಲ್ಕರ್‌ನೈನ್ ಅವರು ಮಂಜೂರು ಮಾಡಿದ್ದಾರೆ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

‘ನೇಪಾಳ: ಭಾರತದ ಸರಕು ವಾಹನ ನಿಷೇಧಿಸಿ’

ಕಠ್ಮಂಡು (ಪಿಟಿಐ): ದೇಶೀಯ ಸರಕು ಸಾಗಣೆ ವ್ಯವಹಾರದಲ್ಲಿ ಅನಾರೋಗ್ಯಕರ ಸ್ಪರ್ಧೆ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ನೇಪಾಳ ಟ್ರಕ್ ಚಾಲಕರು, ಭಾರತೀಯ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿಷೇಧಿಸಬೇಕು ಎಂದು ಸೋಮವಾರ ಒತ್ತಾಯಿಸಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಟ್ರಕ್ ಸಾರಿಗೆ ಉದ್ಯಮಿಗಳ ಒಕ್ಕೂಟದ (ಎಫ್‌ಟಿಟಿಇಎನ್) ಪ್ರಧಾನ ಕಾರ್ಯದರ್ಶಿ ರಾಜೇಂದ್ರ ವಿಕ್ರಮ್ ಬನಿಯಾ ಅವರು, ‘ಭಾರತೀಯ ಟ್ರಕ್‌ಗಳು ಉಚಿತ ಪ್ರವೇಶ ಪಡೆಯುತ್ತಿವೆ. ಆದರೆ ಭಾರತದಲ್ಲಿ ನಮ್ಮ ದೇಶದ ಟ್ರಕ್‌ಗಳು ಹಲವು ಸವಾಲುಗಳನ್ನು ಎದುರಿಸುತ್ತಿವೆ’ ಎಂದು ಹೇಳಿದರು. ಯಾವ ರೀತಿಯ ಸವಾಲು ಎದುರಿಸುತ್ತಿವೆ ಎಂಬ ಬಗ್ಗೆ ವಿವರಣೆ ನೀಡಲಿಲ್ಲ. ಹಲವೆಡೆ ಟ್ರಕ್ ಪಾರ್ಕಿಂಗ್ ವ್ಯವಸ್ಥೆಯನ್ನು ಸುಧಾರಿಸಬೇಕು ಎಂದೂ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

‘ಚೀನಾ ಪ್ರವೇಶ: ಕೋವಿಡ್ ಪರೀಕ್ಷೆ ಬೇಕಿಲ್ಲ’

ಬೀಜಿಂಗ್ (ಎಪಿ): ಚೀನಾಗೆ ಪ್ರವೇಶ ಪಡೆಯಲು ಬಯಸುವ ಪ್ರವಾಸಿಗರು ಇನ್ನು ಮುಂದೆ ಕೋವಿಡ್–19 ಪರೀಕ್ಷೆಗೆ ಒಳಗಾಗಬೇಕಿಲ್ಲ. ಈ ನಿಯಮವು ಬುಧವಾರದಿಂದಲೇ ಜಾರಿಗೆ ಬರಲಿದೆ ಎಂದು ಅಲ್ಲಿಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಅವರು ಸೋಮವಾರ ಹೇಳಿದ್ದಾರೆ.

ಕೋವಿಡ್–19 ಸಾಂಕ್ರಾಮಿಕವನ್ನು ನಿಯಂತ್ರಿಸುವ ಸಲುವಾಗಿ 2020ರ ಆರಂಭದಲ್ಲಿ ಹೇರಲಾಗಿದ್ದ ನಿರ್ಬಂಧಗಳನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಈ ಕ್ರಮವನ್ನು ಮಹತ್ತರ ಮೈಲಿಗಲ್ಲು ಎನ್ನಲಾಗಿದೆ.

ಅಮೆರಿಕ ವಿರುದ್ಧ ರಷ್ಯಾ ಆರೋಪ

ಮಾಸ್ಕೊ (ಎಪಿ): ವ್ಲಾಡಿವೋಸ್ಟಾಕ್‌ನಲ್ಲಿರುವ ಅಮೆರಿಕ ಕಾನ್ಸುಲೇಟ್ ಕಚೇರಿಯ ಮಾಜಿ ಉದ್ಯೋಗಿಯೊಬ್ಬ ಅಮೆರಿಕದ ರಾಜತಾಂತ್ರಿಕ ಅಧಿಕಾರಿಗಳಿಗಾಗಿ ಗೋಪ್ಯ ಮಾಹಿತಿ ಸಂಗ್ರಹಿಸುತ್ತಿದ್ದ ಎಂದು ರಷ್ಯಾದ ಉನ್ನತ ಭದ್ರತಾ ಸಂಸ್ಥೆ ಫೆಡರಲ್ ಸೆಕ್ಯುರಿಟಿ ಸರ್ವೀಸ್ (ಎಫ್‌ಎಸ್‌ಬಿ) ಆರೋಪಿಸಿದೆ.

ರಾಬರ್ಟ್ ಶೋನೊವ್ ಎಂಬಾತನನ್ನುಬಂಧಿಸಿದ್ದು, ಈತ ಉಕ್ರೇನ್‌ನಲ್ಲಿ ರಷ್ಯಾ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆಗೆ ಹಾಗೂ ಇತರ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸುತ್ತಿದ್ದ ಎಂದು ಎಫ್‌ಎಸ್‌ಬಿ ಹೇಳಿದೆ.

ಅಕ್ರಮ ವಲಸೆ ತಡೆಗೆ ಎಲೆಕ್ಟ್ರಾನಿಕ್ ಟ್ಯಾಗ್

ಲಂಡನ್ (ಪಿಟಿಐ): ಬ್ರಿಟನ್‌ಗೆ ಅಕ್ರಮವಾಗಿ ವಲಸೆ ಬರುವವರ ಬಂಧನ ಪ್ರಕ್ರಿಯೆಯ ಭಾಗವಾಗಿ ಅವರಿಗೆ ‘ಎಲೆಕ್ಟ್ರಾನಿಕ್ ಟ್ಯಾಗ್’ ಅಳವಡಿಸುವ ಆಯ್ಕೆಯನ್ನು ಸರ್ಕಾರ ಪರಿಶೀಲಿಸುತ್ತಿರುವುದಾಗಿ ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರೇವರ್ಮನ್ ಸೋಮವಾರ ತಿಳಿಸಿದ್ದಾರೆ.

ಅಕ್ರಮ ವಲಸೆಗೆ ಸಂಬಂಧಿಸಿದ ಹೊಸ ಕಾಯಿದೆಯ ಅಡಿಯಲ್ಲಿ ವಲಸಿಗರಿಗೆ ಜಿಪಿಎಸ್ ಟ್ರ್ಯಾಕರ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು 'ದಿ ಟೈಮ್ಸ್' ಪತ್ರಿಕೆ ವರದಿ ಪ್ರಕಟಿಸಿತ್ತು. ಬಂಧನಕೇಂದ್ರಗಳಲ್ಲಿಇರಿಸಲಾಗದವಲಸಿಗರುಪರಾರಿಯಾಗುವುದನ್ನು ತಡೆಯುವ ಮಾರ್ಗವಾಗಿ ಎಲೆಕ್ಟ್ರಾನಿಕ್ ಟ್ಯಾಗ್‌ಗಳನ್ನು ಹಾಕಲಾಗುತ್ತಿದೆ. ನಂತರ ಅವರನ್ನು ಜಿಪಿಎಸ್ ಟ್ರ್ಯಾಕ್ ಮಾಡಲಾಗುತ್ತದೆ. ದಿನದಲ್ಲಿ ಹಲವು ಬಾರಿ ವೈಯಕ್ತಿಯವಾಗಿ ಅಧಿಕಾರಿಗಳ ಎದುರು ಹಾಜರಾಗಬೇಕಾಗುತ್ತದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಸುಯೆಲ್ಲಾ ಬ್ರೇವರ್ಮನ್, ‘ಅಕ್ರಮ ವಲಸೆ ತಡೆಯಲು ಪ್ರಮುಖ ಶಾಸನವೊಂದನ್ನು ಜಾರಿಗೆ ತಂದಿದ್ದೇವೆ. ಅಕ್ರಮವಾಗಿ ಇಲ್ಲಿಗೆ ಬರುವವರನ್ನು ಬಂಧಿಸಲು ಮತ್ತು ನಂತರ ಅವರನ್ನು ರವಾಂಡದಂಥ ದೇಶಗಳಿಗೆ ತ್ವರಿತವಾಗಿ ಹಿಂದೆ ಕಳುಹಿಸಲು ಈ ಶಾಸನ ನಮಗೆ ಅಧಿಕಾರ ನೀಡುತ್ತದೆ’ ಎಂದು ಬ್ರೇವರ್ಮನ್ ಅವರು ಸುದ್ದಿ ಮಾಧ್ಯಮ 'ಸ್ಕೈ ನ್ಯೂಸ್'ಗೆ ತಿಳಿಸಿದ್ದಾರೆ.

‘ಅಕ್ರಮ ವಲಸಿಗರನ್ನು ಬಂಧಿಸಲು ಮತ್ತು ನಿಯಂತ್ರಿಸಲು ನಮಗೆ ಅಧಿಕಾರ ಬೇಕು. ನಾವು ಅವರನ್ನು ಬ್ರಿಟನ್‌ನಿಂದ ಹೊರಗೆ ಕಳುಹಿಸಬೇಕಿದ್ದರೆ ಕಾರ್ಯವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಅದಕ್ಕಾಗಿ ನಮ್ಮ ಮುಂದಿರುವ ಆಯ್ಕೆಗಳನ್ನು ಪರಿಶೀಲಿಸುತ್ತಿದ್ದೇವೆ. ವಲಸಿಗರನ್ನು ಬಂಧಿಸಿಡಲು ನಮ್ಮ ಬಳಿ ಸೀಮಿತ ಸ್ಥಳಾವಕಾಶವಿದೆ. ಅದನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ, ಪರ್ಯಾಯ ಮಾರ್ಗಗಳು ಸರ್ಕಾರದ ಪರಿಶೀಲನೆಯಲ್ಲಿವೆ’ ಎಂದು ಅವರು ಹೇಳಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಉದ್ಯೋಗಾವಕಾಶ
Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 6366430266, 6366430366
Domestic Helpers / Housekeeping
URGENTLY REQUIRE
Kannada Brahmin Cook for Senior Living Community
Interested candidates call 9205851568
General
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
Wanted
ಬೇಕಾಗಿದ್ದಾರೆ : SSLC, PUC, DEGREE ಯುವಕ ಯುವತಿಯರು 15,500/- to 35,000/-. 8861041526, 7022622706

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕ ಪ್ರಕಟಣೆ
ಎಲ್ಲಾ ಬ್ಯಾಂಕುಗಳ ಗ್ರಾಹಕರ ಗಮನಕ್ಕೆ: Canara Bank
ಮಾನ್ಯರೇ,
ಭಾರತ ಘನ ಸರ್ಕಾರದ ಹಾಗೂ ರಾಜ್ಯ ಮಟ್ಟದ ಬ್ಯಾಂಕುಗಳ ಸಮಿತಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಮಾರ್ಗದರ್ಶಿ ಬ್ಯಾಂಕಿನ ಮುಂದಾಳತ್ವದಲ್ಲಿ ಜಿಲ್ಲೆಯ ಎಲ್ಲಾ ಬ್ಯಾಂಕುಗಳ ಸಹಯೋಗದೊಂದಿಗೆ ಗ್ರಾಹಕರಿಗೆ “ಸಾಲ ಸಂಪರ್ಕ (ಕೆಡಿಟ್ ಔಟ್ ರೀಚ್) ಕಾರ್ಯಕ್ರಮವನ್ನು ದಿನಾಂಕ: 30.08.2023ರಂದು ಜ್ಞಾನ ಜ್ಯೋತಿ ಸಭಾಂಗಣ, ಸೆಂಟಲ್ ಕಾಲೇಜು ಆವರಣ, ಡಾ.ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿ, ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆವಿಗೂ ಏರ್ಪಡಿಸಲು ನಿರ್ಧರಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಡಿಸಿಸಿಬಿ, ನಬಾರ್ಡ್, ಕೆವಿಐಸಿ, ಕೆವಿಐಬಿ, ಡಿಐಸಿ, ಕೃಷಿ, ತೋಟಗಾರಿಕೆ, ಮೀನುಗಾರಿಕೆ ಇಲಾಖೆ ಹಾಗೂ ಇತರೆ ಸರ್ಕಾರಿ ಇಲಾಖೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ. ಬ್ಯಾಂಕುಗಳಲ್ಲಿ ಲಭ್ಯವಿರುವ ವಿವಿಧ ಸಾಲ ಸೌಲಭ್ಯಗಳ ಕುರಿತು ಗ್ರಾಹಕರಲ್ಲಿ ವಿಸ್ತೃತ ಅರಿವು ಮೂಡಿಸಲು, ಸಾಲದ ಅರ್ಜಿಗಳನ್ನು ಸ್ವೀಕರಿಸಲು, ಸಾಲ ಮಂಜೂರಾತಿ ಮತ್ತು ಸಂಭಾವ್ಯ ಮಂಜೂರಾತಿ ಆದೇಶ ಪತ್ರಗಳನ್ನು ವಿತರಿಸುವ ಸಲುವಾಗಿ ಈ ಸಾಲ ಸಂಪರ್ಕ (ಕ್ರೆಡಿಟ್ ಔಟ್ ರೀಚ್) ಸಭೆಯನ್ನು ಏರ್ಪಡಿಸಲಾಗಿದೆ.
ಸಾಲ ಸಂಪರ್ಕ (ಕ್ರೆಡಿಟ್ ಔಟ್ ರೀಚ್) ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಮಹತ್ವಾಕಾಂಕ್ಷಿ, ಆತ್ಮ ನಿರ್ಭರ ಯೋಜನೆಗಳಡಿಯಲ್ಲಿ ಬರುವ ಪಿಎಂಸ್ವನಿಧಿ, ಕೃಷಿ ಮೂಲಸೌಕರ್ಯ ನಿಧಿ ಯೋಜನೆ (ಎಐಎಫ್), ಪಶು ಸಂಗೋಪನ ಮೂಲಸೌಕರ್ಯ ನಿಧಿ ಯೋಜನೆ (ಎಎಚ್‌ಐಡಿಎಫ್) ಮತ್ತು ಪಿಎಂಎಂವೈ, (ಮುದ್ರಾ) ಸ್ಟ್ಯಾಂಡ್ ಅಪ್ ಇಂಡಿಯ, ಪಿಎಂಇಜಿಪಿ, ಕೃಷಿ ಮತ್ತು ಕೃಷಿಯೇತರ, ಎಂಎಸ್‌ಎಂಇ, ರಿಟೈಲ್, ಶಿಕ್ಷಣ ಮತ್ತು ವಸತಿ ಸಾಲಗಳಲ್ಲದೆ ಸಾಮಾಜಿಕ ಭದ್ರತಾ ಯೋಜನೆಗಳಾದ ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆ ಬಗ್ಗೆ ಜನ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ. ಈ ವಿಶೇಷ ಜಾಗೃತಿ ಅಭಿಯಾನವನ್ನು ನಡೆಸಲು ಎಲ್ಲಾ ಬ್ಯಾಂಕ್‌ಗಳಿಂದ ಸಕಲ ಪ್ರಯತ್ನಗಳನ್ನು ಮಾಡಲಾಗುವುದು. ಗ್ರಾಹಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸರ್ಕಾರದ ಮತ್ತು ಬ್ಯಾಂಕ್‌ಗಳ ವಿವಿಧ ಯೋಜನೆಗಳ ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿನಂತಿ.
ಮಾರ್ಗದರ್ಶಿ ಜಿಲ್ಲಾ ಪ್ರಬಂಧಕರು
ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ (ಕೆನರಾ ಬ್ಯಾಂಕ್) ಬೆಂಗಳೂರು ನಗರ ಜಿಲ್ಲೆ
ಸ್ಪೆನ್ಸರ್ಸ್ ಟವರ್ಸ್, 86, ಎಂ.ಜಿ ರಸ್ತೆ, ಬೆಂಗಳೂರು
Ph: 25310038, 25310037,
Email: lboblrurban@canarabank.com

ASTRO YATRA
ಶ್ರೀ ಜ್ಯೋತಿಷ್ಯಾಲಯ

ಉಚಿತ ಭವಿಷ್ಯ ಖಚಿತ ಪರಿಹಾರ
ಫೋನಿನ ಮೂಲಕ ಪರಿಹಾರ
ಸುಖ ಜೀವನಕ್ಕೆ ಶಾಶ್ವತ ಪರಿಹಾರ
ನಿಮ್ಮ ಕೌಟುಂಬಿಕ ಸಮಸ್ಯೆಗಳಾದ
ಸ್ತ್ರೀ ಪುರುಷ ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ–ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ, ಅತ್ತೆ–ಸೊಸೆ ಕಿರಿಕಿರಿ, ಡೈವೋರ್ಸ್ ಪ್ರಾಬ್ಲಂ, ಮಾಟ–ಮಂತ್ರ, ಸಿನಿಮಾ ರಂಗ, ರಾಜಕೀಯ, ಉದ್ಯೋಗ, ಹಣಕಾಸಿನ ಸಮಸ್ಯೆ ಹಾಗೂ ಇನ್ನೂ ನಿಮ್ಮ ಯಾವುದೇ ಗುಪ್ತ, ಕಠಿಣ ಸಮಸ್ಯೆಗಳಿದ್ದರೂ ಕೇರಳ ಹಾಗೂ ಕೊಳ್ಳೇಗಾಲದ ರುಂಡಮಾಲಿನಿ ಪೂಜಾ ಶಕ್ತಿಯಿಂದ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುತ್ತದೆ.
ಪಂಡಿತ್ ಸುರೇಶ್ ಭಟ್
ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ.
ಸಂಪರ್ಕಿಸಿ : 9686330981

ಪ್ರವಾಸ
Travel
10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ಧಗಯಾ ಅಯೋಧ್ಯ ಅಲಹಾಬಾದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/9 ನೇಪಾಳ ಮುಕ್ತಿನಾಥ್, ಪಶುಪತಿನಾಥ. 7/9 ರಾಮೇಶ್ವರ, ಕನ್ಯಾಕುಮಾರಿ .11/9 ಪುರಿ ಜಗನ್ನಾಥ್, ಭುನೇಶ್ವರ.9964527782, 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

DH Classifieds
More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು ಪ್ರಶ್ನಿಸಿ ವಾದ ಮಂಡನೆ

ಬೋಧಕನ ಅಮಾನತು ಏಕೆ: ‘ಸುಪ್ರೀಂ’

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವ ಕ್ರಮವನ್ನು ಪ್ರಶ್ನಿಸಿ, ವಾದ ಮಂಡಿಸಿದ್ದ ಅದೇ ರಾಜ್ಯದ ಬೋಧಕರೊಬ್ಬರನ್ನು ಉದ್ಯೋಗದಿಂದ ಏಕೆ ಅಮಾನತು-ಗೊಳಿಸಲಾಗಿದೆ ಎಂದು ಸೋಮವಾರ ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ಈ ಕುರಿತು ಪರಿಶೀಲನೆ ನಡೆಸಬೇಕು ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನೊಳ-ಗೊಂಡ ನ್ಯಾಯಪೀಠವು, ವೈಯಕ್ತಿಕ ಅರ್ಜಿದಾರರಾಗಿ ಸುಪ್ರೀಂ ಕೋರ್ಟ್ ಮುಂದೆ ಇದೇ 24ರಂದು ವಾದ ಮಂಡಿಸಿದ್ದ ಬೋಧಕ ಜಹೂರ್ ಅಹ್ಮದ್ ಭಟ್ ಅವರ ಅಮಾನತು ಕ್ರಮವನ್ನು ಗಮನಿಸಿ ಈ ಸೂಚನೆ ನೀಡಿದೆ.

ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಗುಂಪು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದ್ದು, ವಿಚಾರಣೆಗೆ ಅಹ್ಮದ್ ಭಟ್ ಅವರು ಖುದ್ದಾಗಿ ಹಾಜರಾಗಿದ್ದರು. ಅಹ್ಮದ್ ಭಟ್ ರಾಜ್ಯ-ಶಾಸ್ತ್ರದ ಪದವಿಯ ಜತೆಗೆ ಕಾನೂನು ಪದವಿಯನ್ನೂ ಪಡೆದಿದ್ದಾರೆ.

‘ಅಹ್ಮದ್ ಭಟ್ ಅವರು ತಮ್ಮ ಇಲಾಖೆಯಿಂದ ಎರಡು ದಿನ ರಜೆ ಪಡೆದು, ಕೋರ್ಟ್‌ಗೆ ಹಾಜರಾಗಿ ವಾದ ಮಂಡಿಸಿದ್ದರು. ಅವರು ವಾಪಸ್ ಹಿಂತಿರುಗಿದ ಬಳಿಕ ಅವರನ್ನು ಉದ್ಯೋಗದಿಂದ ಅಮಾನತು-ಗೊಳಿಸಲಾಗಿದೆ’ ಎಂದು ಭಟ್ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ರಾಜೀವ್ ಧವನ್ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಅವರೊಂದಿಗೆ ಮಾತನಾಡಿ, ಸಮಸ್ಯೆಯನ್ನು ಪರಿಶೀಲಿಸುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂಚಿಸಿತು.

ನ್ಯಾಯಪೀಠಕ್ಕೆ ಪ್ರತಿಕ್ರಿಯಿಸಿದ ಆರ್. ವೆಂಕಟರಮಣಿ ಅವರು, ಈ ಪ್ರಕರಣ-ವನ್ನು ಪರಿಶೀಲಿಸುವುದಾಗಿ ತಿಳಿಸಿದರು.

‘ಭಟ್ ಅವರನ್ನು ಅಮಾನತು-ಗೊಳಿಸಿರುವುದನ್ನು ದಿನಪತ್ರಿಕೆಯಲ್ಲಿ ನೋಡಿದೆ. ಈ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದೆ. ಈ ವೇಳೆ ಭಟ್ ಅವರ ಅಮಾನತಿನ ಹಿಂದೆ ಹಲವು ಕಾರಣ-ಗಳಿರುವುದು ತಿಳಿದುಬಂದಿದೆ. ಭಟ್ ನಿರಂತರವಾಗಿ ವಿವಿಧ ನ್ಯಾಯಾಲಯಗ-ಳಿಗೆ ಹಲವು ಅರ್ಜಿಗಳನ್ನು ಸಲ್ಲಿಸಿದ್ದಾರೆ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಪಿಲ್ ಸಿಬಲ್ ಅವರು, ‘ಹಾಗಿದ್ದರೆ ಭಟ್ ಅವರನ್ನು ಈ ಹಿಂದೆಯೇ ಅಮಾನತುಗೊಳಿಸಬಹುದಿತ್ತು. ಈಗೇಕೆ ಮಾಡಿದರು? ನನ್ನ ಬಳಿ ಭಟ್ ಅವರ ಅಮಾನತು ಆದೇಶದ ಪ್ರತಿ ಇದೆ. ಅವರು ಈ ನ್ಯಾಯಾಲಯದ ಮುಂದೆ ವಾದ ಮಂಡಿಸಿದ್ದಾರೆ. ಹಾಗಾಗಿ, ಅವರನ್ನು ಅಮಾನತುಗೊಳಿಸಲಾಗಿದೆ. ಇದು ನ್ಯಾಯಸಮ್ಮತವಲ್ಲ’ ಎಂದರು.

‘ಅರ್ಜಿದಾರರ ವಿರುದ್ಧ ಇತರ ಕಾರಣಗಳಿದ್ದರೆ ಸರಿ. ಆದರೆ, ನ್ಯಾಯಾಲಯದ ಮುಂದೆ ವಾದ ಮಂಡಿಸಿದ್ದಾರೆ ಎಂಬ ಕಾರಣಕ್ಕಾಗಿ ಅಮಾನತುಗೊಳಿಸಿರು-ವುದು ಸರಿಯಾದ ಕ್ರಮವಲ್ಲ’ ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿತು.

‘ಈ ಬಗ್ಗೆ ಸತ್ಯಾಸತ್ಯತೆಯನ್ನು ಪರಿಶೀಲಿಸುವುದಾಗಿ’ ತುಷಾರ್ ಮೆಹ್ತಾ ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಅಹ್ಮದ್ ಭಟ್ ಅವರು ಶ್ರೀನಗರದ ಜವಾಹರ್ ನಗರದಲ್ಲಿರುವ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ರಾಜ್ಯಶಾಸ್ತ್ರ ಬೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಭಟ್ ಅವರನ್ನು ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಲೋಕ್ ಕುಮಾರ್ ಶುಕ್ರವಾರ ಆದೇಶ ಹೊರಡಿಸಿದ್ದರು.

‘ವಕೀಲರ ಎದುರು ನಡೆಯುವ ವಿವಾಹಕ್ಕೂ ಮನ್ನಣೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ವಕೀಲರ ಕೊಠಡಿಯಲ್ಲಿಯೇ ಗಂಡು ಮತ್ತು ಹೆಣ್ಣು ಪರಸ್ಪರ ಹೂವಿನ ಹಾರಗಳನ್ನು ಬದಲಾಯಿಸಿಕೊಂಡು ಅಥವಾ ಬೆರಳಿಗೆ ಉಂಗುರ ತೊಡಿಸುವ ಮೂಲಕ ಸರಳವಾಗಿ ಮದುವೆಯಾಗಬಹುದು. ಇದಕ್ಕೂ ಹಿಂದೂ ವಿವಾಹ ಕಾಯ್ದೆಯಡಿ ಮನ್ನಣೆ ಸಿಗಲಿದೆ ಎಂದು ಸುಪ್ರೀಂ ಕೋರ್ಟ್, ಸೋಮವಾರ ಪ್ರತಿಪಾದಿಸಿದೆ.

ಅಪರಿಚಿತರ ಸಮ್ಮುಖದಲ್ಲಿ ರಹಸ್ಯವಾಗಿ ನಡೆಯುವ ವಿವಾಹವನ್ನು ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 7 ಮತ್ತು 7(ಎ) ಅಡಿ ಕಾನೂನುಬದ್ಧಗೊಳಿಸಲು ಸಾಧ್ಯವಿಲ್ಲ ಎಂದು ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ವಜಾಗೊಳಿಸಿತು.

ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಹಾಗೂ ಅರವಿಂದ ಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ನ್ಯಾಯಾಲಯದಲ್ಲಿ ಕೆಲಸ ನಿರ್ವಹಿಸುವುದಕ್ಕಷ್ಟೇ ವಕೀಲರ ಸಾಮರ್ಥ್ಯ ಸೀಮಿತಗೊಂಡಿಲ್ಲ. ಸ್ನೇಹಿತ, ಸಂಬಂಧಿ ಹಾಗೂ ಸಾಮಾಜಿಕ ಕಾರ್ಯಕರ್ತನ ಸ್ಥಾನದಲ್ಲಿ ನಿಂತುಕೊಂಡು ಮದುವೆ ಮಾಡಿಸಬಹುದು ಎಂದು ಕಾಯ್ದೆಯ ಸೆಕ್ಷನ್ 7(ಎ) ಅಡಿ ಸ್ಪಷ್ಟಪಡಿಸಲಾಗಿದೆ (ತಮಿಳುನಾಡು ಸರ್ಕಾರದ ತಿದ್ದುಪಡಿ ಕಾಯ್ದೆ) ಎಂದು ಹೇಳಿತು.

ಸಂಬಂಧಿಕರು, ಸ್ನೇಹಿತರು ಅಥವಾ ಇತರೆ ವ್ಯಕ್ತಿಗಳ ಸಮ್ಮುಖದಲ್ಲಿ ಹಿಂದೂ ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ನಡೆಯುವ ಮದುವೆಗೆ ಸೆಕ್ಷನ್ 7(ಎ) ಅನ್ವಯಿ-ಸುತ್ತದೆ. ಅರ್ಚಕರ ಉಪಸ್ಥಿತಿ ಇಲ್ಲದೆಯೇ ನಡೆಯುವ ವಿವಾಹಕ್ಕೂ ಕಾನೂನಿನ ಮನ್ನಣೆ ನೀಡುವುದಕ್ಕೆ ಈ ಸೆಕ್ಷನ್ ಅವಕಾಶ ಕಲ್ಪಿಸಿದೆ’ ಎಂದು ಹೇಳಿತು.

ಪತ್ನಿಗೆ ಕಿರುಕುಳ ನೀಡುವ ಯಾವುದೇ ಹಕ್ಕು ನೀಡಿಲ್ಲ: ಹೈಕೋರ್ಟ್

ನವದೆಹಲಿ (ಪಿಟಿಐ): ‘ಪತಿಗೆ ತನ್ನ ಪತ್ನಿಯನ್ನು ಹೊಡೆಯುವ ಹಾಗೂ ಹಿಂಸಿಸುವ ಹಕ್ಕನ್ನು ಯಾವುದೇ ಕಾನೂನು ನೀಡುವುದಿಲ್ಲ’ ಎಂದು ಪತ್ನಿಯನ್ನು ತೊರೆದ ಹಾಗೂ ಆಕೆಯನ್ನು ಕ್ರೂರವಾಗಿ ಹಿಂಸಿಸಿದ ಪ್ರಕರಣ-ವೊಂದರಲ್ಲಿ ದೆಹಲಿ ಹೈಕೋರ್ಟ್ ಹೇಳಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯ-ಮೂರ್ತಿಗಳಾದ ಸುರೇಶ್ ಕುಮಾರ್ ಕೈಟ್ ಹಾಗೂ ನೀನಾ ಬನ್ಸಲ್ ಕೃಷ್ಣ ಅವರನ್ನೊಳಗೊಂಡ ನ್ಯಾಯಪೀಠವು,‘ಈ ಪ್ರಕರಣದಲ್ಲಿ ಪತಿಯಾದವನು ತನ್ನ ಹೆಂಡತಿಯೊಂದಿಗೆ ಒಡನಾಟವನ್ನು ಪುನರಾರಂಭಿಸುವಲ್ಲಿ ವಿಫಲನಾಗಿದ್ದಾನೆ. ದೈಹಿಕವಾಗಿ ಇಬ್ಬರೂ ಬೇರ್ಪಟ್ಟಿರುವುದು ಸಾಬೀತಾಗಿದೆ.

ಅಷ್ಟೇ ಅಲ್ಲ, ಪತಿಗೆ ಪತ್ನಿಯನ್ನು ಮನೆಗೆ ವಾಪಸ್ ಕರೆತರುವ ಉದ್ದೇಶವೂ ಇಲ್ಲದಿರುವುದು ಕಂಡುಬಂದಿದೆ. ಹಾಗಾಗಿ, ಅರ್ಜಿದಾರರು (ಪತ್ನಿ) ವಿಚ್ಛೇದನಕ್ಕೆ ಅರ್ಹರಿದ್ದಾರೆ’ ಎಂದೂ ಹೇಳಿದೆ.

‘ಕೇವಲ ವಿವಾಹವಾದ ಮಾತ್ರಕ್ಕೆ ಹಾಗೂ ಆತನು ಗಂಡನಾದ ಮಾತ್ರಕ್ಕೆ ತನ್ನ ಹೆಂಡತಿಯನ್ನು ಹೊಡೆಯುವ ಹಾಗೂ ಹಿಂಸೆ ಮಾಡುವ ಹಕ್ಕನ್ನು ಯಾವುದೇ ಕಾನೂನು ನೀಡುವುದಿಲ್ಲ. ಇಂಥ ಪತಿಯ ಈ ರೀತಿಯ ನಡವಳಿಕೆಯು ಹಿಂದೂ ವಿವಾಹ ಕಾಯಿದೆ (ಎಚ್‌ಎಂಎ) 1955ರ ಸೆಕ್ಷನ್ 13 (1) (IA) ಅಡಿಯಲ್ಲಿ ಅರ್ಜಿದಾರರಿಗೆ (ಪತ್ನಿಗೆ) ವಿಚ್ಛೇದನಕ್ಕೆ ಅವಕಾಶವಿದೆ’ ಎಂದು ಹೇಳಿದೆ.

ತೇಜಸ್ವಿ ಯಾದವ್‌ಗೆ ಸಮನ್ಸ್

ಅಹಮದಾಬಾದ್ (ಪಿಟಿಐ): ಮಾನಹಾನಿ ಪ್ರಕರಣದಲ್ಲಿ ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ಇಲ್ಲಿನ ಮೆಟ್ರೊಪಾಲಿಟನ್ ಕೋರ್ಟ್ ಸೋಮವಾರ ಸಮನ್ಸ್ ಜಾರಿ ಮಾಡಿದೆ.

ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಡಿ.ಜೆ.ಪಾರ್ಮರ್ ಅವರು, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 499 ಮತ್ತು 500ರ ಅಡಿಯಲ್ಲಿ ದಾಖಲಾಗಿರುವ ಮಾನಹಾನಿ ಪ್ರಕರಣದ ವಿಚಾರಣೆಗೆ ಸೆ.22ರಂದು ನ್ಯಾಯಾಲಯದ ಎದುರು ಹಾಜರಾಗುವಂತೆ ಸೂಚಿಸಿದ್ದಾರೆ.

ತೇಜಸ್ವಿ ಯಾದವ್ ಅವರು ಮಾರ್ಚ್ 21ರಂದು ಪಟ್ನಾದಲ್ಲಿ ಮಾಧ್ಯಮಗಳ ಎದುರು, ‘ಸದ್ಯದ ಸನ್ನಿವೇಶದಲ್ಲಿ ಗುಜರಾತಿಗಳು ಮಾತ್ರ ವಂಚಕರು’ ಎಂದಿದ್ದಾರೆ. ಈ ಮೂಲಕ ಗುಜರಾತ್ ಜನರನ್ನು ಅವಮಾನಿಸಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಹರೇಶ್ ಮೆಹ್ತಾ ಎಂಬವರು ದೂರು ದಾಖಲಿಸಿದ್ದರು.

ಅಕ್ರಮ ಕಟ್ಟಡ ತೆರವಿಗೆ ತಡೆ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿರುವ ಮಥುರಾದ ಶ್ರೀಕೃಷ್ಣ ಜನ್ಮಭೂಮಿ ಸಮೀಪ ರೈಲ್ವೆ ಇಲಾಖೆ ಕೈಗೆತ್ತಿಕೊಂಡಿರುವ ಅನಧಿಕೃತ ಕಟ್ಟಡಗಳ ತೆರವು ಕಾರ್ಯಾಚರಣೆಯ ಸ್ಥಗಿತಕ್ಕೆ ತಡೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್, ಸೋಮವಾರ ವಜಾಗೊಳಿಸಿದೆ.

ಸಿವಿಲ್ ಕೋರ್ಟ್‌ನಲ್ಲಿ ಈ ವ್ಯಾಜ್ಯವು ವಿಚಾರಣೆ ಹಂತದಲ್ಲಿದೆ. ಹಾಗಾಗಿ, ಅಲ್ಲಿಯೇ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ನ್ಯಾಯಮೂರ್ತಿಗ-ಳಾದ ಅನಿರುದ್ಧ ಬೋಸ್, ಸಂಜಯ್ ಕುಮಾರ್ ಹಾಗೂ ಎಸ್.ವಿ.ಎನ್. ಭಟ್ಟಿ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು ಅರ್ಜಿದಾರರಿಗೆ ಸೂಚಿಸಿತು.

ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಲು ನ್ಯಾಯಪೀಠವು ನಿರಾಕರಿಸಿತು.

ಕೋಟಾ: ಜೆಇಇ, ನೀಟ್ ಆಕಾಂಕ್ಷಿಗಳ ಆತ್ಮಹತ್ಯೆ ತಡೆಗೆ ಜಿಲ್ಲಾಡಳಿತ ಕ್ರಮ

‘2 ತಿಂಗಳು ಕಿರುಪರೀಕ್ಷೆ ನಡೆಸದಿರಿ’

ಕೋಟಾ (ರಾಜಸ್ಥಾನ) (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳ ತಾಣವೆನಿಸಿರುವ ಕೋಟಾದಲ್ಲಿ ನೀಟ್, ಜೆಇಇ ಪರೀಕ್ಷಾ ಆಕಾಂಕ್ಷಿಗಳ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ಎರಡು ತಿಂಗಳವರೆಗೆ ವಿದ್ಯಾರ್ಥಿಗಳಿಗೆ ನಿಯಮಿತ ಕಿರು ಪರೀಕ್ಷೆಗಳನ್ನು ನಡೆಸದಂತೆ ಜಿಲ್ಲಾಡಳಿತ ತರಬೇತಿ ಸಂಸ್ಥೆಗಳಿಗೆ ಸೂಚನೆ ನೀಡಿದೆ.

ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯಲು ಜಿಲ್ಲಾಡಳಿತವು ಪರೀಕ್ಷಾ ತರಬೇತಿ ಕೇಂದ್ರಗಳಿಗೆ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಸೂಚಿಸಿತ್ತು. ಆದಾಗ್ಯೂ ಭಾನುವಾರ ನಾಲ್ಕು ಗಂಟೆಗಳ ಅವಧಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರು. ಇದರಿಂದಾಗಿ ಕೋಟಾ ಜಿಲ್ಲಾಧಿಕಾರಿ ಒ.ಪಿ. ಬುನಕರ್ ಅವರು ಮುಂದಿನ ಎರಡು ತಿಂಗಳವರೆಗೆ ನಿಯಮಿತ ಕಿರು ಪರೀಕ್ಷೆಗಳನ್ನು ನಡೆಸದಂತೆ ತರಬೇತಿ ಸಂಸ್ಥೆಗಳಿಗೆ ಸೂಚಿಸಿ, ಭಾನುವಾರ ರಾತ್ರಿ ಆದೇಶ ಹೊರಡಿಸಿದ್ದಾರೆ.

ಶೀಘ್ರ ಅಧಿಕಾರಿಗಳ ತಂಡ: ಸರ್ಕಾರದ ಉನ್ನತ ಮತ್ತು ತಾಂತ್ರಿಕ ಶಿಕ್ಷಣದ ಪ್ರಧಾನ ಕಾರ್ಯದರ್ಶಿ ಭವಾನಿ ಸಿಂಗ್ ದೇತಾ ಅವರು ಕೋಟಾ ಜಿಲ್ಲಾಧಿಕಾರಿ ಹಾಗೂ ಇತರ ಅಧಿಕಾರಿಗಳೊಂದಿಗೆ ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು.

ಆತ್ಮಹತ್ಯೆಗಳ ಬಗ್ಗೆ ಪರಿಶೀಲಿಸಲು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ನಿರ್ದೇಶನದ ಮೇರೆಗೆ ರಚಿಸಿರುವ ಸಮಿತಿಗೆ ಭವಾನಿ ಸಿಂಗ್ ಅಧ್ಯಕ್ಷರೂ ಆಗಿದ್ದಾರೆ. ಸಮಿತಿಯು ಶೀಘ್ರದಲ್ಲೇ ಕೋಟಾಕ್ಕೆ ಭೇಟಿ ನೀಡಲಿದ್ದು, 15 ದಿನಗಳಲ್ಲಿ ವರದಿ ಸಲ್ಲಿಸಲಿದೆ.

ಎಂಜಿನಿಯರಿಂಗ್‌ಗಾಗಿ ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮತ್ತು ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಂಥ (ಎನ್‌ಇಇಟಿ) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಅಂದಾಜು ಎರಡು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿ ವರ್ಷ ಕೋಟಾಕ್ಕೆ ತೆರಳುತ್ತಾರೆ.

ಆತ್ಮಹತ್ಯೆ ಮಾಡಿಕೊಂಡ ಮಹಾರಾಷ್ಟ್ರದ ಲಾಥೂರ್‌ನ ವಿದ್ಯಾರ್ಥಿ, ಓದಿನಲ್ಲಿ ಬುದ್ಧಿವಂತನಾಗಿದ್ದ ಆತನ ಸ್ನೇಹಿತರು ತಿಳಿಸಿದ್ದಾರೆ. ತರಬೇತಿ ಪಡೆಯುತ್ತಿದ್ದ ಸೆಂಟರ್‌ನಲ್ಲಿ ‘ನೀಟ್’ ಅಣಕು ಪರೀಕ್ಷೆಯನ್ನೂ ವಿದ್ಯಾರ್ಥಿ ಬರೆದಿದ್ದ. ಇದಾದ ಕೆಲವೇ ನಿಮಿಷಗಳಲ್ಲಿ ಆತ ಕೋಚಿಂಗ್ ಸೆಂಟರ್‌ನ 6ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಕೋಚಿಂಗ್ ಕೈಬಿಟ್ಟ ಸಹೋದರಿ, ಸಂಬಂಧಿ: ಆತ್ಮಹತ್ಯೆ ಮಾಡಿಕೊಂಡ ಜೈಪುರದ ಮತ್ತೊಬ್ಬ ವಿದ್ಯಾರ್ಥಿಯ ಸಹೋದರಿ ಹಾಗೂ ಸಂಬಂಧಿ ಕೂಡಾ ಇದೇ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿದ್ದರು. ಸಹೋದರನ ಆತ್ಮಹತ್ಯೆ ಬಳಿಕ ಇಬ್ಬರೂ ಕೋಚಿಂಗ್ ಸೆಂಟರ್ ಅನ್ನು ತೊರೆದು ಮನೆಗೆ ಹಿಂತಿರುಗಲು ನಿರ್ಧರಿಸಿದ್ದಾರೆ.

‘ಜಾತಿಗಣತಿ: ಕೇಂದ್ರಕ್ಕಷ್ಟೇ ಅಧಿಕಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಜನಗಣತಿ ಕಾಯ್ದೆ 1948ರ ಅನ್ವಯ ಜಾತಿಗಣತಿ ಸೇರಿದಂತೆ ಈ ಮಾದರಿಯ ಇತರೆ ಯಾವುದೇ ಗಣತಿ ಪ್ರಕ್ರಿಯೆ ಕೈಗೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕಷ್ಟೇ ಇದೆ ಎಂದು ಸುಪ್ರೀಂ ಕೋರ್ಟ್‌ಗೆ ಸೋಮವಾರ ಪ್ರಮಾಣ ಪತ್ರ ಸಲ್ಲಿಸಲಾಗಿದೆ.

ಬಿಹಾರ ಸರ್ಕಾರ ಕೈಗೊಂಡಿದ್ದ ಜಾತಿಗಣತಿ ಪ್ರಶ್ನಿಸಿ ಕೇಂದ್ರವು ಈ ಪ್ರಮಾಣ ಪತ್ರ ಸಲ್ಲಿಸಿದೆ. ಬೆಳಿಗ್ಗೆ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ವಾಪಸ್ ಪಡೆದು ಕೇಂದ್ರವು, ಸಂಜೆ ಹೊಸದಾಗಿ ಪ್ರಮಾಣ ಪತ್ರ ಸಲ್ಲಿಸಿತು. ಇದರಲ್ಲಿಯೂ ಕಾಯ್ದೆಯಡಿ ಕೇಂದ್ರಕ್ಕೆ ಇರುವ ಅಧಿಕಾರದ ಬಗ್ಗೆ ಪ್ರಸ್ತಾಪಿಸಲಾಗಿದೆ.

ಅತ್ಯಾಚಾರ ಪ್ರಕರಣ: ವಿಚಾರಣೆ ಕೈಗೆತ್ತಿಕೊಂಡ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಸೋಮವಾರ ಸ್ವಯಂಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದೆ.

ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮಾ ಹಾಗೂ ಸಂಜೀವ್ ನರುಲಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ಎಲ್ಲಿಯೂ ಬಾಲಕಿಯ ಗುರುತು ಬಹಿರಂಗಗೊ-ಳ್ಳದಂತೆ ಜಾಗ್ರತೆ ವಹಿಸಬೇಕು. ಆಕೆಗೆ ಸೂಕ್ತ ಭದ್ರತೆ ಹಾಗೂ ಪರಿಹಾರ ಒದಗಿಸಬೇಕು’ ಎಂದು ದೆಹಲಿ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿತು.

‘ಸರ್ಕಾರಿ ಆಸ್ಪತ್ರೆಯಲ್ಲಿ ಬಾಲಕಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆಕೆಯ ಸ್ಥಿತಿ ಚಿಂತಾಜನಕವಾಗಿದೆ’ ಎಂದು ದೆಹಲಿ ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಪರ ಹಾಜರಿದ್ದ ವಕೀಲರು, ನ್ಯಾಯಪೀಠದ ಗಮನಕ್ಕೆ ತಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠವು, ಸೆಪ್ಟೆಂಬರ್ 14ಕ್ಕೆ ವಿಚಾರಣೆಯನ್ನು ಮುಂದೂಡಿತು.

ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಹೊತ್ತಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರೇಮೋದಯ್ ಖಾಖಾ ಹಾಗೂ ಪತಿಯ ಕೃತ್ಯಕ್ಕೆ ನೆರವಾದ ಪತ್ನಿಯನ್ನು ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ವಶದಲ್ಲಿದ್ದಾರೆ.

‘ಇಂಡಿಯಾ’ ಸಂಚಾಲಕನಾಗುವ ಆಸೆ ಇಲ್ಲ: ನಿತೀಶ್

ಪಟ್ನಾ (ಪಿಟಿಐ): ‘ನಾನು ಮಹತ್ವಾಕಾಂಕ್ಷಿಯಲ್ಲ. ವೈಯಕ್ತಿಕವಾಗಿ ನನಗೆ ಯಾವ ಆಕಾಂಕ್ಷೆಯೂ ಇಲ್ಲ. ಯಾವುದೇ ಹುದ್ದೆ (ಸಂಚಾಲಕ) ಮೇಲೂ ನಾನು ಕಣ್ಣಿಟ್ಟಿಲ್ಲ.

ಮೈತ್ರಿ ಕೂಟ ರಚನೆಯ ಆರಂಭದಿಂದಲೂ ಇದೇ ಮನಸ್ಥಿತಿಯಲ್ಲಿದ್ದೇನೆ. ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಗರಿಷ್ಠ ಸಂಖ್ಯೆಯಲ್ಲಿ ಪಕ್ಷಗಳನ್ನು ಒಗ್ಗೂಡಿಸುವುದಷ್ಟೇ (ಬಿಜೆಪಿ ವಿರುದ್ಧ) ನನ್ನ ಆಸೆಯಾಗಿದೆ.’

–ಹೀಗೆಂದು ಪುನರುಚ್ಚರಿಸಿದ್ದು, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್.

ಮುಂಬೈನಲ್ಲಿ ನಡೆಯಲಿರುವ ಮೈತ್ರಿಕೂಟದ ಸಭೆಯಲ್ಲಿ ‘ಇಂಡಿಯಾ’ದ ಸಂಚಾಲಕರಾಗಿ ನಿತೀಶ್ ಅವರನ್ನು ನೇಮಿಸಲಾಗುತ್ತದೆ ಎಂಬ ಸುದ್ದಿ ಹರಿದಾಡುತ್ತಿರುವ ಬೆನ್ನಲ್ಲೇ ಅವರು ಸೋಮವಾರ ಈ ಪ್ರತಿಕ್ರಿಯೆ ನೀಡಿದ್ದಾರೆ.

ಕುದುರೆ ಗಾಡಿ ಓಟ

ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ಶ್ರಾವಣ ಮಾಸದ ಅಂಗವಾಗಿ ಸೋಮವಾರ ವಾರ್ಷಿಕ ಕುದುರೆ ಗಾಡಿ ಓಟದ ಸ್ಪರ್ಧೆ ನಡೆಯಿತು –ಪಿಟಿಐ ಚಿತ್ರ

ಮುಂಬೈ–ದೆಹಲಿ ಎಕ್ಸ್‌ಪ್ರೆಸ್ ವೇ: ಸುರಕ್ಷತೆ ಅಧ್ಯಯನಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬೈ–ದೆಹಲಿ ಎಕ್ಸ್‌ಪ್ರೆಸ್ ವೇನ ಸೋಹ್ನಾ-ದೌಸಾ ನಡುವಿನ 246 ಕಿ.ಮೀ ಉದ್ದದ ಮಾರ್ಗದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ. ಪ್ರಯಾಣಿಕರ ಹಿತದೃಷ್ಟಿಯಿಂದ ಸುರಕ್ಷತೆ ಕುರಿತು ಅಧ್ಯಯನ ನಡೆಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಧರಿಸಿದೆ.

ಆರು ತಿಂಗಳ ಅವಧಿಯಲ್ಲಿ 150 ಅಪಘಾತಗಳಿಗೆ ಈ ಮಾರ್ಗ ಸಾಕ್ಷಿಯಾಗಿದೆ. ಭಾನುವಾರ ರೋಲ್ಸ್ ರಾಯ್ಸ್ ಹಾಗೂ ತೈಲ ಟ್ಯಾಂಕರ್ ನಡುವೆ ಸಂಭವಿಸಿದ ಅಪಘಾತ ದೊಡ್ಡ ಸುದ್ದಿಯಾಗಿತ್ತು.

ಹೆದ್ದಾರಿ ನಿರ್ಮಾಣದ ಸ್ವರೂಪ, ಪ್ರವೇಶ ಮತ್ತು ನಿರ್ಗಮನ ಸ್ಥಳ, ದ್ವಿಮುಖ ಮಾರ್ಗ, ನಿಲುಗಡೆ ಸ್ಥಳಗಳು ಸೇರಿದಂತೆ ಇತರೇ ಮೂಲ ಸೌಕರ್ಯ ಆಧರಿಸಿ ಐಐಟಿ ಮೂಲಕ ಅಧ್ಯಯನ ನಡೆಸಲು ಚಿಂತನೆ ನಡೆಸಲಾಗಿದೆ

ಫೆಬ್ರುವರಿ 15ರಂದು ಸಾರ್ವಜನಿಕರ ಬಳಕೆಗೆ ಈ ಮಾರ್ಗವನ್ನು ಲೋಕಾರ್ಪಣೆಗೊಳಿಸಲಾಗಿತ್ತು.

ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ

ಬಾಹ್ಯ ವಿಷಯಗಳಿಗೆ ತಲೆಕೆಡಿಸುವುದಿಲ್ಲ

ನವದೆಹಲಿ (ಪಿಟಿಐ): ತವರಿನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಉಂಟುಮಾಡಿರುವ ತೀವ್ರ ಒತ್ತಡದ ಅರಿವು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ಇದೆ.

ರೋಹಿತ್ ಶರ್ಮಾ

ಆದರೆ ಅವರು ಹೊರಗಿನ ಚರ್ಚೆಗಳಿಂದ ವಿಮುಖರಾಗಿ, ವಿಶ್ವಕಪ್ ಅಭಿಯಾನದ ಸವಾಲಿನ ಹಾದಿಯಲ್ಲಿ ನಡೆಯಲು ಸಜ್ಜಾಗುತ್ತಿದ್ದಾರೆ.

ಅಕ್ಟೋಬರ್ 5ರಂದು ವಿಶ್ವಕಪ್ ಆರಂಭವಾಗಲಿದೆ. 2011ರ ನಂತರ ಭಾರತ ಒಮ್ಮೆಯೂ ಐಸಿಸಿ ಟ್ರೋಫಿ ಗೆದ್ದುಕೊಂಡಿಲ್ಲ. ‘ಹೊರಗೆ ಚರ್ಚೆಯಾಗುವ ವಿಷಯಗಳನ್ನು ಹಚ್ಚಿಕೊಳ್ಳದೇ, ಅವುಗಳಿಂದ ಒತ್ತಡ ತಂದುಕೊಳ್ಳದೇ ಸಮಾಧಾನಚಿತ್ತದಿಂದ ಇರುವುದು ನನಗೆ ಮುಖ್ಯವಾಗಿದೆ’ ಎಂದು 36 ವರ್ಷದ ಆಟಗಾರ ಹೇಳಿದರು. ಬೆಂಗಳೂರಿನಿಂದ ಅವರು ಸುದ್ದಿಸಂಸ್ಥೆಗೆ ಸಂದರ್ಶನ ನೀಡಿದರು.

2019ರ ವಿಶ್ವಕಪ್‌ಗೆ ಮುನ್ನ ನಾನು ಯಾವ ಹಂತದ ಮನಃಸ್ಥಿತಿಯಲ್ಲಿದ್ದೆ-ನೊ, ಅಂಥ ಮನಃಸ್ಥಿತಿಗೆ ಹಿಂತಿರುಗಲು ಬಯಸುತ್ತೇನೆ’ ಎಂದು ರೋಹಿತ್ ಹೇಳಿದರು. ‘ಆಗ ನನ್ನ ಮನಸ್ಸು ಸಂಯಮದಿಂದ ಇತ್ತು. ನಾನು ಐದು ಶತಕಗಳ ಸಹಿತ 648 ರನ್ ಗಳಿಸಿ ಟೂರ್ನಿಯಲ್ಲಿ ಅತ್ಯಧಿಕ ರನ್‌ಗಳಿಕೆದಾ-ರನಾಗಿದ್ದೆ’ ಎಂದರು.

‘ಮುಂದಿನ ಎರಡು ತಿಂಗಳ ಕಾಲ ನನ್ನ ಹಾಗೂ ತಂಡದ ಮುಂದಿರುವ ಗುರಿಗಳನ್ನು ಹೇಗೆ ಸಾಧಿಸಬೇಕು ಎಂಬ ಕಡೆಯಷ್ಟೇ ನನ್ನ ಗಮನ ಇರಲಿದೆ’ ಎಂದರು.

‘ಸವಾಲನ್ನು ಖುಷಿಯಿಂದ ಎದುರಿಸುವೆ’

ವಿರಾಟ್ ಕೊಹ್ಲಿ

ಬೆಂಗಳೂರು (ಪಿಟಿಐ): ಒಂದೂವರೆ ದಶಕಗಳ ಕಾಲ ಉನ್ನತ ಮಟ್ಟದ ಕ್ರಿಕೆಟ್ ಜೀವನದಲ್ಲಿ ವಿರಾಟ್ ಕೊಹ್ಲಿ ಅವರು ಹಲವು ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಮುಂಬರುವ ಐಸಿಸಿ ವಿಶ್ವಕಪ್ ತಮ್ಮ ಮುಂದೆ ಹೊಸ ಸವಾಲು ತೆರೆದಿಟ್ಟಿದೆ ಎಂದು ಅವರು ಸೋಮವಾರ ತಿಳಿಸಿದ್ದಾರೆ.

ತವರಿನಲ್ಲಿ ವಿಶ್ವಕಪ್ ಆಡುವ ಸವಾಲಿಗೆ ತಯಾರಾಗುತ್ತಿರುವುದಾಗಿ ವಿರಾಟ್ ಹೇಳಿದ್ದಾರೆ. ‘ನಿಮ್ಮ ಮುಂದೆ ಎದುರಾಗುವ ಯಾವುದೇ ಸವಾಲಿಗೆ ಎದೆಯೊಡ್ಡಬೇಕು. ಅವುಗಳಿಗೆ ಅಂಜಬಾರದು. 15 ವರ್ಷಗಳ ನಂತರವೂ ನಾನು ಸವಾಲುಗಳನ್ನು ಇಷ್ಟಪಡುತ್ತೇನೆ. ಕಷ್ಟದ ಸಂದರ್ಭಗಳು ನಮ್ಮನ್ನು ಮತ್ತೊಂದು ಮಜಲಿಗೆ ಏರಲು ಅಣಿಗೊಳಿಸುತ್ತವೆ’ ಎಂದು ಹೇಳಿದರು.

ತಮ್ಮ ಮತ್ತು ತಂಡದ ಮೇಲೆ ನಿರೀಕ್ಷೆಯ ಭಾರ ಇರುವುದನ್ನು ಒಪ್ಪಿಕೊಂಡ ಅವರು, ವಿಶ್ವಕಪ್ ಗೆಲ್ಲುವುದನ್ನು ಆಟಗಾರರಿಗಿಂತ ಇನ್ಯಾರು ಹೆಚ್ಚು ಇಷ್ಟಪಡಲು ಸಾಧ್ಯ ಎಂದು ಕೇಳಿದರು.

‘ನನ್ನ ಬದುಕಿನ ಸ್ಮರಣೀಯ ವಿಷಯಗಳಲ್ಲಿ 2011ರ ವಿಶ್ವಕಪ್ ಗೆಲುವು ಪ್ರಮುಖವಾದುದು. ನನಗೆ ಆಗ 23 ವರ್ಷ. ಅದರ ಆಗಾಧತೆ ಆಗ ನನಗೆ ಅರ್ಥವಾಗಿರಲಿಲ್ಲ. ಈಗ 34 ವರ್ಷವಾಗಿದ್ದು, ಹಲವು ವಿಶ್ವಕಪ್‌ಗಳನ್ನು ಆಡಿದ್ದೇವೆ. ಅವುಗಳಲ್ಲಿ ಗೆಲ್ಲಲು ಆಗಿಲ್ಲ. ಹೀಗಾಗಿ ಹಿರಿಯ ಆಟಗಾರರ ಭಾವನೆಗಳು ನನಗೆ ಅರ್ಥವಾಗುತ್ತವೆ’ ಎಂದರು.

ಡಿಸೆಂಬರ್‌ನಲ್ಲೇ ಲೋಕಸಭೆ ಚುನಾವಣೆ ಸಾಧ್ಯತೆ: ಮಮತಾ

ಕೋಲ್ಕತ್ತ (ಪಿಟಿಐ): ‘ಬಿಜೆಪಿಯು ಲೋಕಸಭೆ ಚುನಾವಣೆಯನ್ನು ಡಿಸೆಂಬರ್‌ನಲ್ಲಿ ನಡೆಸಬಹುದು. ಕೇಸರಿ ಪಕ್ಷವು ಚುನಾವಣಾ ಪ್ರಚಾರಕ್ಕಾಗಿ ಎಲ್ಲ ಹೆಲಿಕಾಪ್ಟರ್‌ಗಳನ್ನು ಕಾಯ್ದಿರಿಸಿದೆ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಹೇಳಿದ್ದಾರೆ.

ಟಿಎಂಸಿ ಯುವ ಘಟಕದ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯು ಈ ವರ್ಷದ ಡಿಸೆಂಬರ್‌ನಲ್ಲಿ ಲೋಕಸಭಾ ಚುನಾವಣೆ ನಡೆಸಬಹುದು. ಈಗಾಗಲೇ ಆ ಪಕ್ಷವು ಲೋಕಸಭೆ ಚುನಾವಣಾ ಪ್ರಚಾರಕ್ಕೆ ಎಲ್ಲ ಹೆಲಿಕಾಪ್ಟರ್‌ಗಳನ್ನು ಕಾಯ್ದಿರಿಸಿದೆ. ಬೇರೆ ಯಾವುದೇ ರಾಜಕೀಯ ಪಕ್ಷಗಳಿಗೆ ಚುನಾವಣಾ ಪ್ರಚಾರಕ್ಕೆ ಹೋಗಲು ಹೆಲಿಕಾಪ್ಟರ್‌ಗಳು ಸಿಗಬಾರದೆನ್ನುವುದು ಅದರ ಉದ್ದೇಶ’ ಎಂದು ಆರೋಪಿಸಿದರು.

‘ಬಿಜೆಪಿಯು ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದರೆ, ರಾಷ್ಟ್ರವು ನಿರಂಕುಶ ಆಡಳಿತ ಎದುರಿಸಬೇಕಾಗುತ್ತದೆ. ಕೇಸರಿ ಪಕ್ಷವು ಈಗಾಗಲೇ ದೇಶವನ್ನು ಸಮುದಾಯಗಳ ನಡುವಿನ ವೈರತ್ವದ ರಾಷ್ಟ್ರವಾಗಿ ಪರಿವರ್ತಿಸಿದೆ. ಅವರು ಮತ್ತೆ ಅಧಿಕಾರಕ್ಕೆ ಬಂದರೆ, ದೇಶವನ್ನು ದ್ವೇಷದ ರಾಷ್ಟ್ರವನ್ನಾಗಿ ಮಾಡುತ್ತಾರೆ’ ಎಂದರು.

ಬಂಗಾಳದಲ್ಲಿ ಮೂರು ದಶಕ ಆಡಳಿತ ನಡೆಸಿದ್ದ ಸಿಪಿಎಂ ಅನ್ನು ಟಿಎಂಸಿ ಮಣಿಸಿದೆ. ಈಗ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುತ್ತದೆ ಎಂದು ಮಮತಾ ವಿಶ್ವಾಸ ವ್ಯಕ್ತಪಡಿಸಿದರು.

ತಿರುಮಲದಲ್ಲಿ 4ನೇ ಚಿರತೆ ಸೆರೆ

ತಿರುಪತಿ (ಪಿಟಿಐ): ಈಚೆಗೆ ತಿರುಪತಿ ತಿರುಮಲದ ಪಾದಯಾತ್ರೆ ವೇಳೆ ಚಿರತೆಯೊಂದು ದಾಳಿ ಮಾಡಿ ಬಾಲಕಿಯನ್ನು ಕೊಂದ ಬಳಿಕ ಎಚ್ಚೆತ್ತುಕೊಂಡಿರುವ ಅರಣ್ಯ ಇಲಾಖೆ ಸೋಮವಾರ ಮತ್ತೊಂದು ಚಿರತೆಯನ್ನು ಸೆರೆ ಹಿಡಿದಿದೆ. ಇದುವರೆಗೆ ನಾಲ್ಕು ಚಿರತೆಗಳನ್ನು ಸೆರೆ ಹಿಡಿದಿದ್ದು, ಬಾಲಕಿಯನ್ನು ಕೊಂದಿದ್ದ ಚಿರತೆ ಕೊನೆಗೂ ಸೆರೆ ಸಿಕ್ಕಿದೆ.

ಸುಮಾರು 5 ವರ್ಷ ಪ್ರಾಯದ ಗಂಡು ಚಿರತೆಯನ್ನು ಆಂಜನೇಯ ಸ್ವಾಮಿ ವಿಗ್ರಹವಿರುವ ಏಳನೇ ಮೈಲಿ ಬಳಿ ನಸುಕಿನ 4 ಗಂಟೆ ಸುಮಾರಿಗೆ ಸೆರೆ ಹಿಡಿಯಲಾಯಿತು. ನಂತರ ಚಿರತೆಯನ್ನು ವೆಂಕಟೇಶ್ವರ ಮೃಗಾಲಯಕ್ಕೆ (ತಿರುಪತಿ ಮೃಗಾಲಯ) ಸ್ಥಳಾಂತರಿಸಲಾಯಿ-ತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಈ ಚಿರತೆಯನ್ನು ಆಗಸ್ಟ್ 17ರಿಂದ ಸೆರೆಹಿಡಿಯಲು ಪ್ರಯತ್ನಿಸುತ್ತಿದ್ದೆವು. ಆಗಿನಿಂದಲೂ ತಪ್ಪಿಸಿಕೊಳ್ಳುತ್ತಿತ್ತು. ಬೋನಿನ ಬಳಿಗೆ ಬರುತ್ತಿದ್ದ ಚಿರತೆ ನಂತರ ಓಡಿಹೋ-ಗುತ್ತಿತ್ತು. ಹಾಗಾಗಿ, ಬೇರೆ ಮಾರ್ಗಗಳನ್ನು ಅನುಸರಿಸಿದೆವು. ಕ್ಯಾಮೆರಾಗಳ ಫ್ಲ್ಯಾಶ್‌ಗಳನ್ನು ನಿಷ್ಕ್ರಿಯಗೊಳಿಸಿ, ಬೋನಿನ ಬಳಿ ಮನುಷ್ಯರ ಸುಳಿದಾಟದ ವಾಸನೆ ಬರದಂತೆ, ಪ್ರಾಣಿಗಳ ಓಡಾಟದ ವಾಸನೆ ಬರುವಂತಹ ದ್ರಾವಣ ಸಿಂಪಡಿಸಲಾಗಿತ್ತು’ ಎಂದು ತಿರುಪತಿ ಜಿಲ್ಲಾ ಅರಣ್ಯಾಧಿಕಾರಿ (ಡಿಎಫ್‌ಒ) ಎ. ಶ್ರೀನಿವಾಸುಲು ತಿಳಿಸಿದರು.

‘ಈ ಹಿಂದೆ ಸೆರೆ ಹಿಡಿದ ಮೂರೂ ಚಿರತೆಗಳು ಒಂದೇ ವಯೋಮಾನದವು. ಇವು ಒಂದೇ ಚಿರತೆಯ ಮರಿಗಳಾಗಿರುವ ಸಾಧ್ಯತೆ ಇದೆ. ಇತ್ತೀಚೆಗೆ ತಿರುಮಲದಲ್ಲಿ ಬಾಲಕಿಯನ್ನು ಕೊಂದಿದ್ದು ಇದೇ ಚಿರತೆ’ ಎಂದು ಶ್ರೀನಿವಾಸಲು ಖಚಿತಪಡಿಸಿದ್ದಾರೆ.

ಆಟೊಮೊಬೈಲ್, ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ: ಮೋದಿ

‘ಬೆಳವಣಿಗೆ ಹಾದಿಯಲ್ಲಿ ದೇಶದ ಆರ್ಥಿಕತೆ’

ನವದೆಹಲಿ (ಪಿಟಿಐ): ‘ಭಾರತದ ಆರ್ಥಿಕತೆಯು ವೇಗವಾಗಿ ಬೆಳವಣಿಗೆ ಕಾಣುತ್ತಿದ್ದು, 2030ರ ವೇಳೆಗೆ ಪ್ರವಾಸೋದ್ಯಮ ಕ್ಷೇತ್ರವೊಂದೇ ₹ 20 ಸಾವಿರ ಕೋಟಿಗೂ ಹೆಚ್ಚಿನ ಕೊಡುಗೆ ನೀಡಲಿದೆ. ಈ ಕ್ಷೇತ್ರದಿಂದ ಸುಮಾರು 13–14 ಕೋಟಿಗಳಷ್ಟು ಹೊಸ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.



ರೋಜ್‌ಗಾರ್ ಮೇಳದಲ್ಲಿ 51 ಸಾವಿರ ಯುವಜನರಿಗೆ ಉದ್ಯೋಗದ ನೇಮಕಾತಿ ಪತ್ರಗಳನ್ನು ವಿತರಿಸಿದ ಬಳಿಕ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಆಟೊಮೊಬೈಲ್, ಫಾರ್ಮಾ, ಪ್ರವಾಸೋದ್ಯಮ ಹಾಗೂ ಆಹಾರ ಸಂಸ್ಕರಣಾ ವಲಯಗಳ ಉದ್ಯಮಗಳು ವೇಗವಾಗಿ ಬೆಳವಣಿಗೆ ಸಾಧಿಸುತ್ತಿದ್ದು, ಯುವಜನರಿಗೆ ಉದ್ಯೋಗಾವಕಾಶದ ಬಾಗಿಲನ್ನು ತೆರೆದಿವೆ’ ಎಂದರು.

‘ಅಮೃತಕಾಲದ ಈ ಘಟ್ಟದಲ್ಲಿ ಉದ್ಯೋಗ ಪಡೆದವರು ‘ಅಮೃತ ರಕ್ಷಕರು’ ಎಂದೂ ಮೋದಿ ಬಣ್ಣಿಸಿದರು.

‘ಕಳೆದ 9 ವರ್ಷಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದು, ಜಾಗತಿಕ ಮಟ್ಟದಲ್ಲಿ ಭಾರತ ತಯಾರಿಸಿರುವ ಉತ್ಪನ್ನಗಳಿಗೆ ಬೇಡಿಕೆ ಸೃಷ್ಟಿಯಾಗಿದೆ. ಉತ್ಪಾದನೆಯು ಹೆಚ್ಚಿದಂತೆ ಉದ್ಯೋಗದ ಅವಕಾಶವು ಹೆಚ್ಚುತ್ತದೆ. ಇದರಿಂದ ಕುಟುಂಬದ ಆದಾಯವೂ ಹೆಚ್ಚಳವಾಗುತ್ತದೆ’ ಎಂದು ತಿಳಿಸಿದರು.

‘ಭಾರತವು ಆರ್ಥಿಕ ಕ್ಷೇತ್ರದಲ್ಲಿ ಅತಿವೇಗವಾಗಿ ಬೆಳವಣಿಗೆ ಸಾಧಿಸುತ್ತಿದ್ದು, ಈ ದಶಕದಲ್ಲಿ ಜಗತ್ತಿನ ಮೂರು ಮುಂಚೂಣಿ ರಾಷ್ಟ್ರಗಳಲ್ಲಿ ಒಂದಾಗಲಿದೆ. ಇದು ಜನಸಾಮಾನ್ಯರಿಗೆ ಲಾಭದಾಯಕವಾಗಿ ಪರಿಣಮಿಸಲಿದೆ. ಫಾರ್ಮಾಸುಟಿಕಲ್ ವಲಯದ ಪ್ರಸ್ತುತ ಸುಮಾರು ₹ 4 ಲಕ್ಷ ಕೋಟಿಗಳಷ್ಟು ಲಾಭ ಸಾಧಿಸಿದ್ದು, 2030ರ ವೇಳೆಗೆ ಇದು ₹ 10 ಲಕ್ಷ ಕೋಟಿಗಳಷ್ಟು ತಲುಪುವ ನಿರೀಕ್ಷೆ ಇದೆ. ಇದು ಫಾರ್ಮಾ ಉದ್ಯಮದಲ್ಲಿ ಯುವಜನರ ಅಗತ್ಯವನ್ನು ಮನಗಾಣಿಸುವ ಜತೆಗೆ ಉದ್ಯೋಗವಕಾಶವನ್ನು ಕಲ್ಪಿಸಲಿದೆ. ಆಹಾರ ಸಂಸ್ಕರಣಾ ಉದ್ಯಮವು ಕಳೆದ ವರ್ಷ ₹ 26 ಲಕ್ಷ ಕೋಟಿ ವಹಿವಾಟು ನಡೆಸಿದ್ದು, ಮುಂದಿನ ಮೂರೂವರೆ ವರ್ಷಗಳಲ್ಲಿ ಇದು ₹ 35 ಲಕ್ಷ ಕೋಟಿಯಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ’ ಎಂದರು.

‘ಆದರೆ, ಅಪರಾಧ ಕೃತ್ಯಗಳ ಸಂಖ್ಯೆ ಹೆಚ್ಚಿರುವ ರಾಜ್ಯಗಳಲ್ಲಿ ಬಂಡವಾಳ ಹೂಡುವ ಪ್ರಮಾಣ ಕಡಿಮೆ. ಇದು ಉದ್ಯೋಗಾವಕಾಶಗಳ ಮೇಲೂ ಪರಿಣಾಮ ಬೀರುತ್ತದೆ’ ಎಂದೂ ಹೇಳಿದರು.

‘ಮೊಬೈಲ್ ತಯಾರಿಕಾ ಕ್ಷೇತ್ರದಲ್ಲಿ ಭಾರತವು ವಿಶ್ವದಲ್ಲೇ ಎರಡನೇ ಅತಿದೊಡ್ಡ ದೇಶವಾಗಿದೆ. ಇದೀಗ ದೇಶವು ಇತರ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳತ್ತ ಚಿತ್ತ ಹರಿಸಿದೆ. ಮೇಡ್ ಇನ್ ಇಂಡಿಯಾ ನಿರ್ಮಿತ ಲ್ಯಾಪ್‌ಟ್ಯಾಪ್ ಮತ್ತು ಕಂಪ್ಯೂಟರ್‌ಗಳು ನಮಗೆ ಹೆಮ್ಮೆ ತರುವ ದಿನಗಳು ದೂರವಿಲ್ಲ’ ಎಂದೂ ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

ಯೋಗಾಭ್ಯಾಸ ಮಾಡಿ: ಕೇಂದ್ರ ಮೀಸಲು ಪಡೆಗಳಿಗೆ ನೇಮಕವಾದ ಯುವಕರಿಗೆ ಸದೃಢ ಕಾಯಕ್ಕಾಗಿ ನಿತ್ಯವೂ ಯೋಗಾಭ್ಯಾಸ ಮಾಡುವಂತೆ ಮೋದಿ ಅವರು ಸಲಹೆ ನೀಡಿದರು.

ರೋಜ್‌ಗಾರ್ ಮೇಳ ಗಿಮಿಕ್: ಕಾಂಗ್ರೆಸ್

‘ಎರಡು ಕೋಟಿ ಉದ್ಯೋಗ ಸೃಷ್ಟಿಸುವಲ್ಲಿ ವಿಫಲರಾಗಿರುವ ಪ್ರಧಾನಿ ನರೇಂದ್ರ ಮೋದಿ, ಈ ವರ್ಷ ಚುನಾವಣೆ ಇರುವುದರಿಂದ ತಮ್ಮ ಮಾತು ಉಳಿಸಿಕೊಳ್ಳಲು ರೋಜ್‌ಗಾರ್ ಮೇಳದ ಮೊರೆ ಹೊಕ್ಕಿದ್ದಾರೆ. ಈ ಮೇಳವು ಒಂದು ರೀತಿಯ ಗಿಮಿಕ್ ಇದ್ದಂತೆ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ದೂರಿದ್ದಾರೆ.

‘ರೋಜ್‌ಗಾರ್ ಮೇಳ ಎನ್ನುವುದೇ ದೊಡ್ಡ ಸುಳ್ಳು. ನೋಟು ಅಮಾನ್ಯೀಕರಣವಾದ ಬಳಿಕ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ವಲಯವೇ ನಾಶವಾಯಿತು. ತಪ್ಪಾಗಿ ರೂಪಿಸಿರುವ ಜಿಎಸ್‌ಟಿ ಹಾಗೂ ಯಾವುದೇ ಪೂರ್ವಯೋಜನೆಯಿಲ್ಲದೆ ಮಾಡಿದ ಲಾಕ್‌ಡೌನ್‌ನಿಂದಾಗಿ ದೇಶದ ಆರ್ಥಿಕತೆಗೆ ಹೊಡೆತ ಬಿದ್ದಿತು’ ಎಂದೂ ಅವರು ‘ಎಕ್ಸ್’ ವೇದಿಕೆಯಲ್ಲಿ ದೂರಿದ್ದಾರೆ.

ಸಿಬಿಎಸ್‌ಸಿಇ ಪ್ರಾದೇಶಿಕ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದ ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನ ಕರುಂಬಯ್ಯ ಅಕಾಡೆಮಿ ಫಾರ್ ಲರ್ನಿಂಗ್ ಅಂಡ್ ಸ್ಪೋರ್ಟ್ಸ್ ತಂಡ

ಅಥ್ಲೆಟಿಕ್ಸ್: ಕೆಎಎಲ್‌ಎಸ್‌ಗೆ ಸಮಗ್ರ ಪ್ರಶಸ್ತಿ

ಬೆಂಗಳೂರು: ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನ ಕರುಂಬಯ್ಯ ಅಕಾಡೆಮಿ ಫಾರ್ ಲರ್ನಿಂಗ್ ಅಂಡ್ ಸ್ಪೋರ್ಟ್ಸ್ (ಕೆಎಎಲ್‌ಎಸ್) ತಂಡವು ಬೆಂಗಳೂರಿನ ವಿದ್ಯಾನಗರದಲ್ಲಿ ಭಾನುವಾರ ಮುಕ್ತಾಯಗೊಂಡ ಸಿಬಿಎಸ್‌ಸಿಇ ಪ್ರಾದೇಶಿಕ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಮುಡಿಗೇರಿ-ಸಿಕೊಂಡಿದೆ.

ಮೂರು ದಿನ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಐಸಿಎಸ್‌ಇ ಶಾಲೆಗಳ 2000ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿ-ಸಿದ್ದರು. ಕೆಎಎಲ್‌ಎಸ್‌ನ 17 ಮತ್ತು 19 ವರ್ಷದೊಳಗಿನ ಬಾಲಕರು ಮತ್ತು 14 ಮತ್ತು 19 ವರ್ಷದೊಳಗಿನ ಬಾಲಕಿಯರ ತಂಡವು 20 ಚಿನ್ನ, 15 ಬೆಳ್ಳಿ, 7 ಕಂಚಿನ ಪದಕಗಳನ್ನು ಗೆದ್ದು ಚಾಂಪಿಯನ್ ಆಗಿ ಹೊರಹೊಮ್ಮಿತು.

ಕ್ರೀಡಾಕೂಟದಲ್ಲಿ ಮೂರು ವೈಯಕ್ತಿಕ ಪ್ರಶಸ್ತಿಗಳು ಕೆಎಎಲ್‌ಎಸ್ ಪಾಲಾದವು. ಎಂ.ಕೆ. ನೀಲಮ್ಮ (14 ವರ್ಷದೊಳಗಿನ ಬಾಲಕಿಯರು), ದೀಪ್ ಮೇದಪ್ಪ (17 ವರ್ಷದೊಳಗಿನ ಬಾಲಕರು) ಮತ್ತು ಭವೇಶ್ (19 ವರ್ಷದೊಳಗಿನ ಬಾಲಕರು) ಪ್ರಶಸ್ತಿ ಪಡೆದರು.

ಕೆಎಎಲ್‌ಎಸ್‌ನ 23 ಕ್ರೀಡಾಪಟುಗಳು ಈ ವರ್ಷಾಂತ್ಯದ-ಲ್ಲಿ ನಡೆಯಲಿರುವ ಅಖಿಲ ಭಾರತ ಸಿಬಿಎಸ್‌ಸಿಇ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ ಎಂದು ಕೆಎಎಲ್‌ಎಸ್‌ನ ಮ್ಯಾನೇಜಿಂಗ್ ಟ್ರಸ್ಟಿ ಅಶ್ವಿನಿ ನಾಚಪ್ಪ ತಿಳಿಸಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಗೆದ್ದು ಹೊಸ ಎತ್ತರಕ್ಕೇರಿದ ಭಾರತದ ಅಥ್ಲೀಟ್ • ರಿಲೇ ತಂಡಕ್ಕೆ ಐದನೇ ಸ್ಥಾನ

ಜಾವೆಲಿನ್ ಧ್ರುವತಾರೆ ನೀರಜ್

ನವದೆಹಲಿ (ಪಿಟಿಐ): ನೀರಜ್ ಚೋಪ್ರಾ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಹೊಸ ಎತ್ತರಕ್ಕೆ ಏರಿದ್ದಾರೆ. ಅಥ್ಲೆಟಿಕ್ಸ್‌ನ ಎಲ್ಲ ಪ್ರಮುಖ ಅಂತರರಾಷ್ಟ್ರೀಯ ಕೂಟಗಳಲ್ಲಿ ಸ್ವರ್ಣ ಪದಕ ಜಯಿಸಿದ ಹೆಗ್ಗಳಿಕೆ ಅವರದ್ದು.

ಒಲಿಂಪಿಕ್ಸ್, ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಜಯಿಸಿದ್ದ ಅವರು ಡೈಮಂಡ್ ಲೀಗ್‌ನಲ್ಲೂ ಚಾಂಪಿಯನ್ ಆಗಿದ್ದರು. ಅವರಿಗೆ ಏಕೈಕ ಕೊರತೆ ಎನಿಸಿದ್ದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಪಟ್ಟವೂ ಭಾನುವಾರ ರಾತ್ರಿ ಲಭಿಸಿತು.

ಬುಡಾಪೆಸ್ಟ್‌ನಲ್ಲಿ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಅಂತಿಮ ದಿನ ಅವರು 88.17 ಮೀ. ಸಾಧನೆಯೊಂದಿಗೆ ಜಾವೆಲಿನ್ ಥ್ರೋ ಸ್ಪರ್ಧೆಯ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ಈ ಕೂಟದ ಇತಿಹಾಸದಲ್ಲಿ ಭಾರತಕ್ಕೆ ದೊರೆತ ಮೂರನೇ ಪದಕ ಇದಾಗಿದೆ. ಅದರಲ್ಲಿ ಎರಡು ನೀರಜ್ ತಂದಿತ್ತಿದ್ದಾರೆ. ಕಳೆದ ಕೂಟದಲ್ಲಿ ಅವರು ಬೆಳ್ಳಿ ಗೆದ್ದಿದ್ದರು. ಇನ್ನೊಂದು ಪದಕವನ್ನು (ಕಂಚು) 2003ರ ಕೂಟದಲ್ಲಿ ಲಾಂಗ್‌ಜಂಪ್ ಸ್ಪರ್ಧಿ ಅಂಜು ಬಾಬಿ ಜಾರ್ಜ್ ಗೆದ್ದುಕೊಟ್ಟಿದ್ದರು.

ನೀರಜ್‌ಗೆ ಪ್ರಬಲ ಪೈಪೋಟಿ ನೀಡಿದ ಪಾಕಿಸ್ತಾನದ ಅರ್ಷದ್ ನದೀಮ್ (87.82 ಮೀ.) ಬೆಳ್ಳಿ ಗೆದ್ದರೆ, ಕಂಚಿನ ಪದಕ ಜೆಕ್ ರಿಪಬ್ಲಿಕ್‌ನ ಯಾಕುಬ್ ವಾದ್ಲೇಚ್ (86.67 ಮೀ.) ಅವರಿಗೆ ಒಲಿಯಿತು.

ನೀರಜ್ ಅವರು ಚಿನ್ನದ ಪದಕದ ಜತೆ ₹ 58 ಲಕ್ಷ ನಗದು ಬಹುಮಾನ ತಮ್ಮದಾಗಿಸಿಕೊಂಡರು.

ಅಗ್ರ ಆರರಲ್ಲಿ ಮೂವರಿಗೆ ಸ್ಥಾನ: ಜಾವೆಲಿನ್ ಥ್ರೋ ಸ್ಪರ್ಧೆಯ ಫೈನಲ್‌ನಲ್ಲಿ ಕಣದಲ್ಲಿದ್ದ ಭಾರತದ ಮೂವರು ಅಥ್ಲೀಟ್‌ಗಳು ಅಗ್ರ ಆರರೊಳಗೆ ಸ್ಥಾನ ಪಡೆದದ್ದು ವಿಶೇಷ. ನೀರಜ್ ಅಲ್ಲದೆ ಕರ್ನಾಟಕದ ಡಿ.ಪಿ.ಮನು ಮತ್ತು ಒಡಿಶಾದ ಕಿಶೋರ್ ಜೇನಾ ಅವರೂ ಫೈನಲ್‌ನಲ್ಲಿ ಸ್ಪರ್ಧಿಸಿದ್ದರು. ಜೇನಾ (84.77ಮೀ.) ಐದನೇ ಹಾಗೂ ಮನು (84.14 ಮೀ.) ಆರನೇ ಸ್ಥಾನ ಗಳಿಸಿದರು. ಮನು ಮತ್ತು ಜೇನಾ ಅವರಿಗೆ ಇದು ಮೊದಲ ವಿಶ್ವ ಚಾಂಪಿಯನ್‌ಷಿಪ್ ಆಗಿತ್ತು.

1983 ರಲ್ಲಿ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಆರಂಭವಾದಾಗಿನಿಂದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಒಂದೇ ದೇಶದ ಮೂವರು ಸ್ಪರ್ಧಿಗಳು ಅಗ್ರ ಆರರಲ್ಲಿ ಕಾಣಿಸಿಕೊಂಡದ್ದು ಇದೇ ಮೊದಲು.

ಜೇನಾಗೆ ₹ 25 ಲಕ್ಷ ನಗದು ಬಹುಮಾನ

ಭುವನೇಶ್ವರ: ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 5ನೇ ಸ್ಥಾನ ಪಡೆದ ಕಿಶೋರ್ ಜೇನಾ ಅವರಿಗೆ ಒಡಿಶಾ ಸಿಎಂ ನವೀನ್ ಪಟ್ನಾಯಕ್ ₹ 25 ಲಕ್ಷ ನಗದು ಬಹುಮಾನ ಪ್ರಕಟಿಸಿದ್ದಾರೆ.

‘ಕಿಶೋರ್ ಅವರ ಅಸಾಧಾರಣ ಪ್ರದರ್ಶನವು ಒಡಿಶಾ ರಾಜ್ಯ ಮತ್ತು ನಮ್ಮ ದೇಶಕ್ಕೆ ಹೆಮ್ಮೆ ತಂದಿತ್ತಿದೆ. ಮಾತ್ರವಲ್ಲ, ಮುಂಬರುವ ವರ್ಷಗಳಲ್ಲಿ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿ ನೀಡಲಿದೆ’ ಎಂದು ಹೇಳಿದರು.

‘ಜಾವೆಲಿನ್ ಥ್ರೋ ಶಕ್ತಿಕೇಂದ್ರ’ ಎನಿಸಿರುವ ಜರ್ಮನಿ ದೇಶ ಕೂಡಾ ಇಂತಹ ಸಾಧನೆ ಮಾಡಿಲ್ಲ. ಒಂದೇ ಚಾಂಪಿಯನ್‌ಷಿಪ್‌ನಲ್ಲಿ ಜರ್ಮನಿಯ ಮೂವರು ಅಥ್ಲೀಟ್‌ಗಳು ಅಗ್ರ ಎಂಟರೊಳಗೆ ನಾಲ್ಕು ಸಲ ಸ್ಥಾನ ಪಡೆದಿದ್ದರು. 1995, 2003, 2015 ಮತ್ತು 2017 ರಲ್ಲಿ ಈ ಸಾಧನೆ ಮಾಡಿತ್ತು. ಆದರೆ ಜರ್ಮನಿಯ ಮೂವರು ಅಥ್ಲೀಟ್‌ಗಳು ಅಗ್ರ ಆರರಲ್ಲಿ ಒಮ್ಮೆಯೂ ಕಾಣಿಸಿಕೊಂಡಿಲ್ಲ.

ರಿಲೇ ತಂಡಕ್ಕೆ ಐದನೇ ಸ್ಥಾನ: ಮೊಹಮ್ಮದ್ ಅನೀಸ್ ಯಾಹ್ಯಾ, ಅಮೋಜ್ ಜೇಕಬ್, ಮೊಹಮ್ಮದ್ ಅಜ್ಮಲ್ ಮತ್ತು ರಾಜೇಶ್ ರಮೇಶ್ ಅವರನ್ನೊಳಗೊಂಡ ಭಾರತ 4X400 ಮೀ. ರಿಲೇ ತಂಡ (2 ನಿ.59.92 ಸೆ.) ಅಲ್ಪ ಅಂತರದಿಂದ ಪದಕದ ಅವಕಾಶ ಕಳೆದುಕೊಂಡು ಐದನೇ ಸ್ಥಾನ ಗಳಿಸಿತು.

ಭಾರತ ತಂಡದವರು ಹೀಟ್‌ನಲ್ಲಿ 2 ನಿ. 59.05 ಸೆ.ಗಳಲ್ಲಿ ಓಟ ಪೂರೈಸಿ ಏಷ್ಯನ್ ದಾಖಲೆಯೊಂದಿಗೆ ಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದರು.

₹ 58 ಲಕ್ಷ
ನಗದು ಬಹುಮಾನ

ನಿಮ್ಮ ಸಾಧನೆ ಭಾರತದ ಕ್ರೀಡೆಯಲ್ಲಿ ಐತಿಹಾಸಿಕ ಮೈಲಿಗಲ್ಲು. ನೀವು ಪ್ರತಿನಿಧಿಸುವ ಪ್ರತಿಯೊಂದು ಕ್ರೀಡಾಕೂಟದಲ್ಲೂ ಪರಿಶ್ರಮ ಹೊಳೆಯುತ್ತಿರಲಿ.
ಸಚಿನ್ ತೆಂಡೂಲ್ಕರ್
ದಿಗ್ಗಜ ಕ್ರಿಕೆಟಿಗ

ಮಹಿಳೆಯರ 3000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಪಾರುಲ್ ಚೌಧರಿ, 11ನೇ ಸ್ಥಾನ ಗಳಿಸಿದರು. 9 ನಿ.15.31 ಸೆ.ಗಳಲ್ಲಿ ಗುರಿ ತಲುಪಿದ ಅವರು ರಾಷ್ಟ್ರೀಯ ದಾಖಲೆ ಸ್ಥಾಪಿಸಿದರಲ್ಲದೆ, ಪ್ಯಾರಿಸ್ ಒಲಿಂಪಿಕ್ಸ್‌ಗೂ (ಅರ್ಹತಾ ಸಮಯ: 9 ನಿ. 23 ಸೆ.) ಅರ್ಹತೆ ಗಳಿಸಿದರು. ಈ ವಿಭಾಗದ ರಾಷ್ಟ್ರೀಯ ದಾಖಲೆ ಲಲಿತಾ ಬಾಬರ್ (9 ನಿ. 19.76 ಸೆ.; 2015) ಹೆಸರಿನಲ್ಲಿತ್ತು.

ನೀರಜ್ ಚೋಪ್ರಾ —ಎಪಿ/ಪಿಟಿಐ ಚಿತ್ರ

‘ಯುರೋಪಿಯನ್ನರ ಪಾರಮ್ಯದ ಸ್ಪರ್ಧೆನಲ್ಲಿ ನೀರಜ್, ನನ್ನ ಮೇಲುಗೈ’

ಕರಾಚಿ (ಪಿಟಿಐ): ಪ್ಯಾರಿಸ್‌ನಲ್ಲಿ ಮುಂದಿನ ವರ್ಷ ನಡೆಯುವ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಅವರಿಗೆ ಪಾಕಿಸ್ತಾನದ ಅರ್ಷದ್ ನದೀಮ್ ಅವರಿಂದ ಪ್ರಬಲ ಪೈಪೋಟಿ ಎದುರಾಗಬಹುದು. ಆದರೆ ನದೀಮ್ ಆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಒಂದು ಕಾಲದಲ್ಲಿ ಯುರೋಪಿಯನ್ನರು ಪಾರಮ್ಯ ವಹಿಸಿದ್ದ ಕ್ರೀಡೆಯಲ್ಲಿ ತಾವಿಬ್ಬರು ಮೇಲುಗೈ ಸಾಧಿಸುತ್ತಿರುವುರಿಂದ ತುಂಬ ಸಂಸತವಾಗುತ್ತಿದೆ ಎಂದು ಹೇಳಿದ್ದಾರೆ.

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಮೊದಲ ಅಥ್ಲೀಟ್ ಎನಿಸಿರುವುದರಿಂದ ನದೀಮ್ ಈಗ ಕ್ರಿಕೆಟ್ ಆಕರ್ಷಣೆಯ ಪಾಕಿಸ್ತಾನದಲ್ಲಿ ಮನೆಮಾತಾಗಿದ್ದಾರೆ.

‘ನೀರಜ್ ಮತ್ತು ನನ್ನ ನಡುವೆ ಆರೋಗ್ಯಕರ ಪೈಪೋಟಿಯಿದೆ. ಪರಸ್ಪರರನ್ನು ಗೌರವಿಸುತ್ತೇವೆ. ಇದು ಪಾಕ್–ಭಾರತ ನಡುವಣ ನಕಾರಾತ್ಮಕ ಪೈಪೋಟಿಯಲ್ಲ’ ಎಂದರು.

ಅರ್ಷದ್ ನದೀಮ್

‘ಇತ್ತೀಚಿನ ವರ್ಷಗಳಲ್ಲಿ ಶ್ರೇಷ್ಠ ಪ್ರದರ್ಶನ ನೀಡುತ್ತಿರುವ ಚೋಪ್ರಾ ಎದುರು ವಿಶ್ವ ಕೂಟದಲ್ಲಿ ಸ್ಪರ್ಧಿಸಿ ಬೆಳ್ಳಿಯ ಪದಕ ಗೆದ್ದಿರುವುದು ತುಂಬಾ ತೃಪ್ತಿತಂದಿದೆ’ ಎಂದೂ ಹೇಳಿದರು. ನದೀಮ್‌ಗೆ ಕಳೆದ ವರ್ಷ ಮೊಣಕೈ ಶಸ್ತ್ರಚಿಕಿತ್ಸೆಯಾಗಿತ್ತು.

ಗೆಲುವಿನ ಸಂಭ್ರಮದಲ್ಲಿ ಟ್ರ್ಯಾಕ್ ಸುತ್ತ ಓಡುವ ಮೊದಲು ಚೋಪ್ರಾ, ಪಾಕ್ ಸ್ಪರ್ಧಿಯನ್ನು ಆಹ್ವಾನಿಸಲು ಮರೆಯಲಿಲ್ಲ.

ಸಾರ್ವಕಾಲಿಕ ಶ್ರೇಷ್ಠ ಅಥ್ಲೀಟ್ ಎನಬೇಡಿ: ಚೋಪ್ರಾ ಮನವಿ

ಬುಡಾಪೆಸ್ಟ್ (ಪಿಟಿಐ): ಜಾವೆಲಿನ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್ ಗೆದ್ದ ನಂತರ ನೀರಜ್ ಚೋಪ್ರಾ ಅವರು ಭಾರತದ ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟು ಎನಿಸಿದ್ದಾರೆ. ಆದರೆ ಇದನ್ನು ಒಪ್ಪಿಕೊಳ್ಳಲು ಚೋಪ್ರಾ ತಯಾರಿಲ್ಲ.

ಭಾನುವಾರ ರಾತ್ರಿ ಬುಡಾಪೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಚೋಪ್ರಾ 88.17 ಮೀ. ದೂರಕ್ಕೆ ಜಾವೆಲಿನ್ ಎಸೆದಿದ್ದರು. ಅಥ್ಲೆಟಿಕ್ಸ್‌ನಲ್ಲಿ ಒಲಿಂಪಿಕ್ಸ್ ಚಿನ್ನ ಗೆದ್ದ ಮೊದಲ ಅಥ್ಲೀಟ್ ಕೂಡ ಅವರು. ಅವರು ವಿಶ್ವದ ಪ್ರಮುಖ ಪ್ರಶಸ್ತಿಗಳನ್ನೆಲ್ಲಾ ಜಯಿಸಿದ್ದು ನಿಸ್ಸಂದೇಹವಾಗಿ ಭಾರತದ ಶ್ರೇಷ್ಠ ಅಥ್ಲೀಟ್ ಎನಿಸಿದ್ದಾರೆ.

ಆದರೆ ವಿನಮ್ರತೆಗೆ ಹೆಸರಾಗಿರುವ ಅವರು ಭಾರತದ ಸಾರ್ವಕಾಲಿಕ ಶ್ರೇಷ್ಠ ಅಥ್ಲೀಟ್ ಎಂಬ ಚರ್ಚೆಯಲ್ಲಿ ಒಳಗೊಳ್ಳಲು ಇಷ್ಟಪಟ್ಟಿಲ್ಲ.

‘ನಾನು ಸಾರ್ವಕಾಲಿಕ ಶ್ರೇಷ್ಠ ಅಥ್ಲೀಟ್ ಎಂಬ ಮಾತನ್ನು ಒಪ್ಪಲಾರೆ. ನನಗೆ ಕೇವಲ ವಿಶ್ವ ಚಾಂಪಿಯನ್ ಚಿನ್ನ ಅಷ್ಟೇ ಗೆಲ್ಲಲು ಬಾಕಿ ಉಳಿದಿದೆ ಎಂದು ಜನರು ಹೇಳುತ್ತಿದ್ದರು. ಅದನ್ನು ನಾನು ಗೆದ್ದಾಯಿತು. ಆದರೆ ಸಾಧಿಸಲು ನನ್ನ ಎದುರು ಹಲವು ಗುರಿಗಳಿವೆ. ಅದರ ಕಡೆ ನನ್ನ ಲಕ್ಷ್ಯವಿರಲಿದೆ. ನಾನು ಇದನ್ನು (ಸಾರ್ವಕಾಲಿಕ ಶ್ರೇಷ್ಠ) ಹೇಳಿಕೊಳ್ಳಲು ಬಯಸುವುದಿಲ್ಲ’ ಎಂದು ಚೋಪ್ರಾ ಪ್ರತಿಕ್ರಿಯಿಸಿದರು.

‘ಹಾಗೇ ಶ್ರೇಷ್ಠ ಅಥ್ಲೀಟ್ ಎನಿಸಿಕೊಳ್ಳಬೇಕಾದರೆ, ಅದು ಜಾನ್ ಜೆಲೆಸ್ನಿ ರೀತಿ ಇರಬೇಕು’ ಎಂದು ಚೋಪ್ರಾ ಅವರು, ಜೆಕೊಸ್ಲಾವಾಕಿಯಾದ ವಿಶ್ವದಾಖಲೆವೀರನ ಹೆಸರು ಪ್ರಸ್ತಾಪಿಸಿದರು. ಜೆಲೆನ್‌ಸ್ಕಿ, ಜಾವೆಲಿನ್‌ನಲ್ಲಿ ದಂತಕತೆಯಾಗಿದ್ದು, ಹಲವು ವರ್ಷಗಳಿಂದ ವಿಶ್ವದಾಖಲೆ (98.48 ಮೀ.)ಯನ್ನು ತಮ್ಮ ಹೆಸರಿನಲ್ಲೇ ಹೊಂದಿದ್ದಾರೆ. ಮೂರು ಬಾರಿ ಒಲಿಂಪಿಕ್ ಮತ್ತು ಮೂರು ಬಾರಿ ವಿಶ್ವ ಚಾಂಪಿಯನ್ ಕೂಡ. ಚೋಪ್ರಾ ಅವರಿಗೆ ಜೆಲೆನ್‌ಸ್ಕಿ ಮಾದರಿಯಾಗಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಕಠಿಣ: ಒಲಿಂಪಿಕ್ಸ್‌ಗಿಂತ ವಿಶ್ವ ಚಾಂಪಿಯನ್‌ಷಿಪ್ ಹೆಚ್ಚು ಕಠಿಣ ಎನ್ನುತ್ತಾರೆ 25 ವರ್ಷದ ಚೋಪ್ರಾ. ‘ಒಲಿಂಪಿಕ್ಸ್ ವಿಶೇಷವಾದ ಕ್ರೀಡಾಕೂಟ. ವಿಶ್ವ ಚಾಂಪಿಯನ್‌ಷಿಪ್ ದೊಡ್ಡ ಮಟ್ಟದ್ದು. ಸ್ಪರ್ಧೆಯ ಮಟ್ಟ ಗಣನೆಗೆ ತೆಗೆದುಕೊಂಡರೆ, ಒಲಿಂಪಿಕ್ಸ್‌ಗಿಂತ ವಿಶ್ವ ಚಾಂಪಿಯನ್‌ಷಿಪ್‌ನಲ್ಲೇ ಹೆಚ್ಚು ಪೈಪೋಟಿ ಇರುತ್ತದೆ. ಎಲ್ಲರೂ ಇದಕ್ಕೆ ಸಿದ್ಧರಾಗಿಯೇ ಬರುತ್ತಾರೆ’ ಎಂದು ವಿಶ್ಲೇಷಿಸುತ್ತಾರೆ.

‘ಭಾರತದಿಂದ ಸಾಕಷ್ಟು ಮಂದಿ ಇಲ್ಲಿಗೆ ಬಂದಿದ್ದರು. ಸ್ಥಳೀಯರ ಬೆಂಬಲವೂ ದೊಡ್ಡ ಪ್ರಮಾಣದಲ್ಲೇ ಇತ್ತು. ಹೀಗಾಗಿ ಈ ಗೆಲುವು ವಿಶೇಷವಾದುದು’ ಎಂದರು.


ಕರ್ನಾಟಕದ ಡಿ.ಪಿ. ಮನು

ಭಾರತದ ಜಾವೆಲಿನ್ ಪಟುಗಳಾದ ಕಿಶೋರ್ ಜೇನಾ ಮತ್ತು ಡಿ.ಪಿ.ಮನು ಅವರನ್ನೂ ಚೋಪ್ರಾ ಶ್ಲಾಘಿಸಿದರು. ಈ ಇಬ್ಬರೂ ಮೊದಲ ಆರರೊಳಗೆ ಸ್ಥಾನ ಪಡೆದಿದ್ದರು.

‘ಕಿಶೋರ್ ಜೇನಾ ಮತ್ತು ಮನು ಅತ್ಯುತ್ತಮ (ಕ್ರಮವಾಗಿ 5 ಮತ್ತು 6ನೇ ಸ್ಥಾನ) ಪ್ರದರ್ಶನ ನೀಡಿದರು. ದೇಶದಲ್ಲಿ ಅಥ್ಲೆಟಿಕ್ಸ್ ಬೆಳವಣಿಗೆ ಕಾಣುತ್ತಿದೆ. ಇದರ ಜೊತೆಗೆ ನಾವೂ ಹೆಚ್ಚು ಶ್ರಮ ಹಾಕಬೇಕು. ಇಲ್ಲಿನ (ಬುಡಾಪೆಸ್ಟ್) ಮಾಂಡೊ ಟ್ರ್ಯಾಕ್ ರೀತಿಯಲ್ಲಿ ನಮ್ಮಲ್ಲೂ ಟ್ರ್ಯಾಕ್ ಇರಬೇಕು. ಈ ಬಗ್ಗೆ ಅದಿಲ್ ಸುಮರಿವಾಲಾ (ಎಎಫ್‌ಐ ಅಧ್ಯಕ್ಷ) ಜೊತೆ ಮಾತನಾಡಿದ್ದೇನೆ. ಆಗ ನಾವು ಇನ್ನೂ ಉತ್ತಮ ನಿರ್ವಹಣೆ ನೀಡಬಹುದು’ ಎಂದು ಹೇಳಿದರು.

ಇಗಾ ಶ್ವಾಂಟೆಕ್ —ಎಪಿ ಚಿತ್ರ

ಅಮೆರಿಕ ಓಪನ್: ಇಗಾ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ): ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಅವರು ಸೋಮವಾರ ಆರಂಭಗೊಂಡ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನ ಪಂದ್ಯದಲ್ಲಿ 6–0, 6–1ರಿಂದ ಸ್ವೀಡನ್‌ನ ರೆಬೆಕಾ ಪೀಟರ್ಸನ್ ಅವರನ್ನು ಸುಲಭವಾಗಿ ಮಣಿಸಿ, ಎರಡನೇ ಸುತ್ತು ಪ್ರವೇಶಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ್ತಿಯೂ ಆಗಿರುವ ಇಗಾ, 58 ನಿಮಿಷಗಳಲ್ಲಿ 86ನೇ ರ‍್ಯಾಂಕ್‌ನ ರೆಬೆಕಾ ವಿರುದ್ಧ ಗೆಲುವು ಸಾಧಿಸಿದರು.

ಐದನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಪೋಲೆಂಡ್‌ನ ಆಟಗಾರ್ತಿ, ಮುಂದಿನ ಸುತ್ತಿನಲ್ಲಿ ಆಸ್ಟ್ರೇಲಿಯಾದ ಡೇರಿಯಾ ಸವಿಲ್ಲೆ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ 81ನೇ ಕ್ರಮಾಂಕದ ಡೊಮಿನಿಕ್ ಥೀಮ್ (ಆಸ್ಟ್ರೇಲಿಯಾ) ಅವರು 6-3, 6-2, 6-4 ರಿಂದ 25ನೇ ರ‍್ಯಾಂಕ್‌ನ ಅಲೆಕ್ಸಾಂಡರ್ ಬುಬ್ಲಿಕ್ (ಕಜಕಸ್ತಾನ) ಅವರಿಗೆ ಆಘಾತ ನೀಡಿದರು.

ಪ್ರಶಸ್ತಿಗೆ ಮೈಸೂರು– ಹುಬ್ಬಳ್ಳಿ ಸೆಣಸು

ಮಹಾರಾಜ ಟ್ರೋಫಿ ಕ್ರಿಕೆಟ್: ಕರುಣ್ ನಾಯರ್ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಾರಿಯರ್ಸ್ ಮತ್ತು ಹುಬ್ಬಳ್ಳಿ ಟೈಗರ್ಸ್ ತಂಡಗಳು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಂಗಳವಾರ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಹುಬ್ಬಳ್ಳಿ ತಂಡ 8 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿದರೆ, ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ವಾರಿಯರ್ಸ್ ತಂಡ, 36 ರನ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಗೆದ್ದಿತು.

ಕರುಣ್ ಅಬ್ಬರದ ಶತಕ: ಸಂಜೆ ನಡೆದ ಪಂದ್ಯದಲ್ಲಿ ಭರ್ಜರಿ ಶತಕ ಗಳಿಸಿದ ನಾಯಕ ಕರುಣ್ ನಾಯರ್ (ಔಟಾಗದೆ 107; 42 ಎ., 4X7, 6X9) ಅವರು ಮೈಸೂರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಾರಿಯರ್ಸ್ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 248 ರನ್ ಕಲೆಹಾಕಿತು. ಕರುಣ್‌ಗೆ ಉತ್ತಮ ಸಾಥ್ ನೀಡಿದ ಆರ್.ಸಮರ್ಥ್ 80 ರನ್ ಗಳಿಸಿದರು. ಇವರಿಬ್ಬರು 2ನೇ ವಿಕೆಟ್‌ಗೆ 148 ರನ್ ಸೇರಿದರು. ಈ ಗುರಿ ಬೆನ್ನಟ್ಟಿದ ಗುಲ್ಬರ್ಗ 8 ವಿಕೆಟ್‌ಗಳಿಗೆ 212 ರನ್ ಪೇರಿಸಿತು.

ಇನ್ನೊಂದು ಸೆಮಿ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ 7 ವಿಕೆಟ್‌ಗಳಿಗೆ 149 ರನ್ ಗಳಿಸಿದರೆ, ಟೈಗರ್ಸ್ ತಂಡ 2 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. ಅರ್ಧ ಶತಕ ಗಳಿಸಿದ ಮೊಹಮ್ಮದ್ ತಾಹಾ (69; 38 ಎ., 4X1, 6X8) ಮತ್ತು ಕೆ.ಶ್ರೀಜಿತ್ (ಔಟಾಗದೆ 61; 39 ಎ., 4X7, 6X2) ಹುಬ್ಬಳ್ಳಿ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 149 (ರೋಹನ್ ಕದಂ 54, ಎಚ್.ಎಸ್. ಶರತ್ 18, ಲವೀಶ್ ಕೌಶಲ್ 32ಕ್ಕೆ 2, ಮನ್ವಂತ್ ಕುಮಾರ್ 29ಕ್ಕೆ 2) **ಹುಬ್ಬಳ್ಳಿ ಟೈಗರ್ಸ್** 14 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 153 (ಮೊಹಮ್ಮದ್ ತಾಹಾ 69, ಕೆ.ಶ್ರೀಜಿತ್ ಔಟಾಗದೆ 61, ವಾಸುಕಿ ಕೌಶಿಕ್ 17ಕ್ಕೆ 1) **ಫಲಿತಾಂಶ:** ಟೈಗರ್ಸ್‌ಗೆ 8 ವಿಕೆಟ್ ಗೆಲುವು

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 248 (ಎಸ್.ಯು.ಕಾರ್ತಿಕ್ 41, ಆರ್.ಸಮರ್ಥ್ 80, ಕರುಣ್ ನಾಯರ್ ಔಟಾಗದೆ 107, ಮನೋಜ್ ಭಾಂಡಗೆ ಔಟಾಗದೆ 18) **ಗುಲ್ಬರ್ಗ ಮಿಸ್ಟಿಕ್ಸ್** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 212 (ಮೆಕ್‌ನೀಲ್ ನೊರೋನಾ 61, ಅಬುಲ್ ಹಸನ್ ಖಾಲಿದ್ 54, ಜೆ.ಸುಚಿತ್ 26ಕ್ಕೆ 2, ಮೋನಿಶ್ ರೆಡ್ಡಿ 42ಕ್ಕೆ 2) **ಫಲಿತಾಂಶ:** ವಾರಿಯರ್ಸ್‌ಗೆ 36 ರನ್ ಜಯ

ಫೈನಲ್ ಪಂದ್ಯ: ಹುಬ್ಬಳ್ಳಿ ಟೈಗರ್ಸ್– ಮೈಸೂರು ವಾರಿಯರ್ಸ್ (ಆರಂಭ: ಸಂಜೆ 5.30) **ನೇರ ಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್ ಕನ್ನಡ

ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಶತಕ ಗಳಿಸಿದ ಮೈಸೂರು ವಾರಿಯರ್ಸ್ ತಂಡದ ಕರುಣ್ ನಾಯರ್ ಅವರ ಬ್ಯಾಟಿಂಗ್ —ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಸ್ಪೋರ್ಟಿಂಗ್ ಕ್ಲಬ್‌ಗೆ ಜಯ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0 ಯಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ತಂಡದ ಥಾಮಿಯೋಲ್ ಶಿಮ್ರೆ (35 ಮತ್ತು 67ನೇ ನಿ) ಎರಡು ಗೋಲು ಗಳಿಸಿದರೆ, ಪಿ. ಅಪ್ಪು ಆರೋಗ್ಯಸ್ವಾಮಿ (64ನೇ), ಮುಸ್ತಫಾ ಶೇಖ್ (69ನೇ) ತಲಾ ಒಂದು ಗೋಲು ದಾಖಲಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವು 3–2ರಿಂದ ಬೆಂಗಳೂರು ಯುನೈಟೆಡ್ ತಂಡವನ್ನು ಪರಾಭವಗೊಳಿಸಿತು. ಚಿಕ್ಕಮಗಳೂರು ತಂಡದ ಅಲೋಕ್ ಸಿಂಗ್ (45 ಮತ್ತು 71ನೇ) ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರೆ, ವೀರೇಂದ್ರ ಸಿಂಗ್ ಥಾಪಾ (83) ಒಂದು ಗೋಲು ತಂದಿತ್ತರು. ಯುನೈಟೆಡ್ ತಂಡದ ಅಕ್ಷುನ್ನ ತ್ಯಾಗಿ (75ನೇ) ಮತ್ತು ಎಂ. ಸುನಿಲ್ ಕುಮಾರ್ (88ನೇ) ತಲಾ ಒಂದು ಗೋಲು ಗಳಿಸಿದರು.

ಪ್ರಜ್ಞಾನಂದ ಪೋಷಕರಿಗೆ ಕಾರು ಉಡುಗೊರೆ: ಆನಂದ್ ಮಹೀಂದ್ರಾ

ಮುಂಬೈ: ಫಿಡೆ ಚೆಸ್ ವಿಶ್ವಕಪ್‌ನಲ್ಲಿ ರನ್ನರ್ ಅಪ್ ಆಗಿ, ಭಾರತೀಯರ ಹೃದಯ ಗೆದ್ದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಪೋಷಕರಿಗೆ ಉದ್ಯಮಿ ಆನಂದ ಮಹೀಂದ್ರಾ ಅವರು ಉಡುಗೊರೆಯಾಗಿ ಎಲೆಕ್ಟ್ರಿಕ್ ಕಾರು ನೀಡುವುದಾಗಿ ಘೋಷಿಸಿದ್ದಾರೆ.

ಎಕ್ಸ್ ಖಾತೆಯಲ್ಲಿ ಈ ಮಾಹಿತಿಯನ್ನು ಆನಂದ್ ಹಂಚಿಕೊಂಡಿದ್ದಾರೆ.

ಪ್ರಜ್ಞಾನಂದ ಅವರನ್ನು ಪ್ರಶಂಸಿಸಲು ಥಾರ್ ವಾಹನವನ್ನು ಉಡುಗೊರೆಯಾಗಿ ನೀಡುವಂತೆ ಹಲವರು ಸಲಹೆ ನೀಡಿದ್ದಾರೆ. ಆದರೆ, ನನ್ನ ಬಳಿ ಅದಕ್ಕಿಂತ ಉತ್ತಮ ಯೋಚನೆ ಇದೆ. ಪ್ರಜ್ಞಾನಂದ ಅವರ ಪೋಷಕರಾದ ನಾಗಲಕ್ಷ್ಮಿ ಹಾಗೂ ರಮೇಶ್‌ಬಾಬು ಅವರಿಗೆ ಎಲೆಕ್ಟ್ರಿಕ್ ಕಾರು ಅನ್ನು ಉಡುಗೊರೆಯಾಗಿ ನೀಡಬಹುದು. ಪ್ರಜ್ಞಾನಂದ ಅವರ ಸಾಧನೆಗೆ ಸಂಪೂರ್ಣ ಪ್ರೋತ್ಸಾಹ ಅವರಿಂದ ದೊರಕಿದೆ’ ಎಂದು ಅವರು ಬರೆದುಕೊಂಡಿದ್ದಾರೆ.

ಪ್ರಜ್ಞಾನಂದ

ಮಹೀಂದ್ರಾ ಕಂಪನಿಯ ಸಿಇಒ ಆಗಿರುವ ರಾಜೇಶ್ ಜಿಜುರಿಕರ್ ಅವರನ್ನು ‘ಉಡುಗೊರೆ ನೀಡೋಣವೇ’ ಎಂದು ಪ್ರಶ್ನಿಸಿ ಟ್ಯಾಗ್ ಮಾಡಿದ್ದಾರೆ.

ಅದಕ್ಕೆ ಪ್ರತಿಕ್ರಿಯಿಸಿರುವ ರಾಜೇಶ್, ಈ ಆಲೋಚನೆಗಾಗಿ ಆನಂದ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ.



ಹಾಕಿ ಫೈವ್ಸ್ ವಿಶ್ವಕಪ್‌ಗೆ ಭಾರತ ಅರ್ಹತೆ

ಸಲಾಲ, ಒಮಾನ್ (ಪಿಟಿಐ): ಫೈನಲ್ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು 7–2 ಗೋಲುಗಳಿಂದ ಮಣಿಸಿದ ಭಾರತ ತಂಡ ಏಷ್ಯನ್ ಹಾಕಿ ಫೈವ್ಸ್ ವಿಶ್ವಕಪ್ ಅರ್ಹತಾ ಟೂರ್ನಿ ಗೆದ್ದುಕೊಂಡಿತಲ್ಲದೆ, 2024ರ ಹಾಕಿ ಫೈವ್ಸ್ ವಿಶ್ವಕಪ್‌ಗೆ ಅರ್ಹತೆ ಗಳಿಸಿತು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಮರಿಯಾನ ಕುಜೂರ್ (2 ಮತ್ತು 8ನೇ ನಿ.) ಹಾಗೂ ಜ್ಯೋತಿ (10 ಮತ್ತು 27) ತಲಾ ಎರಡು ಗೋಲುಗಳನ್ನು ಗಳಿಸಿದರು. ಇತರ ಗೋಲುಗಳನ್ನು ಮೋನಿಕಾ ದೀಪಿ ಟೊಪ್ಪೊ (7), ನಾಯಕಿ ನವಜೋತ್ ಕೌರ್ (23) ಹಾಗೂ ಮಹಿಮಾ ಚೌಧರಿ (29) ತಂದಿತ್ತರು.

ಚೊಚ್ಚಲ ಹಾಕಿ ಫೈವ್ಸ್ ವಿಶ್ವಕಪ್ ಟೂರ್ನಿ ಮುಂದಿನ ವರ್ಷ ಜ. 24 ರಿಂದ 27ರ ವರೆಗೆ ಮಸ್ಕತ್‌ನಲ್ಲಿ ನಡೆಯಲಿದೆ.

ಬೆಳಿಗ್ಗೆ ನಡೆದಿದ್ದ ಸೆಮಿಫೈನಲ್‌ನಲ್ಲಿ ಭಾರತ ತಂಡ 9–5 ರಿಂದ ಮಲೇಷ್ಯಾ ವಿರುದ್ಧ ಜಯಿಸಿತ್ತು. ನವಜೋತ್ (7, 10 ಮತ್ತು 17ನೇ ನಿ.) ಹ್ಯಾಟ್ರಿಕ್ ಗೋಲು ಗಳಿಸಿ ಮಿಂಚಿದ್ದರು. ಕುಜೂರ್ (9 ಮತ್ತು 12) ಹಾಗೂ ಜ್ಯೋತಿ (21 ಮತ್ತು 26) ತಲಾ ಎರಡು ಗೋಲು ತಂದಿತ್ತಿದ್ದರು. ಇತರ ಗೋಲುಗಳನ್ನು ಮೋನಿಕಾ ದೀಪಿ (22) ಹಾಗೂ ಮಹಿಮಾ (14) ಗಳಿಸಿದ್ದರು.

ಹಾಕಿ: ಕರ್ನಾಟಕ ತಂಡಕ್ಕೆ ನಿರಾಸೆ

ಚೆನ್ನೈ (ಪಿಟಿಐ): ಕರ್ನಾಟಕ ತಂಡದವರು ಇಲ್ಲಿ ನಡೆಯುತ್ತಿರುವ ಎಂಸಿಸಿ ಮುರುಗಪ್ಪ ಗೋಲ್ಡ್ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 3–4 ಗೋಲುಗಳಿಂದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿಎಲ್) ಎದುರು ಪರಾಭವಗೊಂಡರು.

ಗುರ್ಜಿಂದರ್ ಸಿಂಗ್ (15 ಮತ್ತು 56ನೇ ನಿ.), ಅರ್ಮಾನ್ ಖುರೇಷಿ (33) ಹಾಗೂ ತಲ್ವಿಂದರ್ ಸಿಂಗ್ (37) ಅವರು ಐಒಸಿಎಲ್ ಪರ ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಎದುರಾಳಿಗಳಿಗೆ ಪ್ರಬಲ ಪೈಪೋಟಿ ನೀಡಿದ ಕರ್ನಾಟಕ ತಂಡದ ಮೂರೂ ಗೋಲುಗಳನ್ನು ಗಣೇಶ್ ಮಜಿಜಿ ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ತಂಡ 1–0 ಗೋಲಿನಿಂದ ಇಂಡಿಯನ್ ಏರ್ ಫೋರ್ಸ್ ತಂಡವನ್ನು ಸೋಲಿಸಿತು.

ಗಾಲ್ಫ್: ಸುನಿಲ್ ಚಾಂಪಿಯನ್

ಬೆಂಗಳೂರು: ಎಸ್.ಸುನಿಲ್ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆದ ಕರ್ನಾಟಕ ಓಪನ್ ಅಮೆಚೂರ್ ಗಾಲ್ಫ್ ಟೂರ್ನಿಯ ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆದರು.

ಎರಡು ಸುತ್ತುಗಳ ಸ್ಪರ್ಧೆಯನ್ನು ಅವರು 130 ಸ್ಟ್ರೋಕ್‌ಗಳೊಂದಿಗೆ (62 + 68) ಕೊನೆಗೊಳಿಸಿದರು. ಎಂ.ದಿಲೀಪ್ (131 ಸ್ಟ್ರೋಕ್) ರನ್ನರ್ ಅಪ್ ಆದರು.

ಮಹಿಳೆಯರ ವಿಭಾಗದಲ್ಲಿ ಪ್ರೇಮಾ ಪ್ರಸಾದ್ (122) ಅವರು ‘ನೆಟ್ ವಿನ್ನರ್’ ಎನಿಸಿಕೊಂಡರೆ, ಲತಾ ಶಿವಣ್ಣ (147) ಅವರು ‘ಗ್ರಾಸ್ ವಿನ್ನರ್’ ಆದರು.

ಇತರ ಫಲಿತಾಂಶ: ಹ್ಯಾಂಡಿಕ್ಯಾಪ್ 0-9: ನವೀನ್ ವಾಹ್ಲೆ (118)–1, ರಮೇಶ್ ಮೌಳಿ (126)–2; **10-18:** ಆರ್. ನಿರಂಜನ್ (123)–1, ಎಂ.ವಿ.ಜಗನ್ನಾಥ್ (124)–2; **19-24:** ಆಕಾಶ್ ಮಿತ್ತಲ್ (124)–1, ಕೆ.ಶ್ರೀನಿವಾಸನ್ (126) –2